" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕರ್ನಾಟಕ ವಿಧಾನ ಪರಿಷತ್ತು**

11ನೇ ಮಾರ್ಚ್ 2020
ಬುಧವಾರ

## ವಿಷಯಾನುಕ್ರಮಣಿಕೆ

**01. ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ.**

ಶ್ರೀ ಕೆ.ಟಿ.ಶ್ರೀಕಂಠೇಗೌಡ

ಶ್ರೀ ಸಿ.ಟಿ.ರವಿ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು)

ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)

ಡಾ॥ ತೇಜಸ್ವಿನಿ ಗೌಡ

ಶ್ರೀ ಸಿ.ಎಂ.ಇಬ್ರಾಹಿಂ

ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

ಶ್ರೀ ಸಿ.ಎಂ.ಲಿಂಗಪ್ಪ

ಶ್ರೀ ಎಸ್.ಎಲ್.ಭೋಜೇಗೌಡ

ಡಾ॥ ವೈ.ಎ.ನಾರಾಯಣಸ್ವಾಮಿ

ಶ್ರೀ ಆರ್.ಧರ್ಮಸೇನ

**02. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**840 – ಕೊಳಚೆ ಅಭಿವೃದ್ಧಿ ಮಂಡಳಿ ಕ್ರಿಯಾಯೋಜನೆ ಅನುಷ್ಠಾನದ ಬಗ್ಗೆ.**
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ವಿ.ಸೋಮಣ್ಣ (ವಸತಿ ಸಚಿವರು)

**793 – ದೇವರಾಜ ಅರಸು ವಸತಿ ಯೋಜನೆಯಲ್ಲಿ ವಿಶೇಷ ವರ್ಗದ ಫಲಾನುಭವಿಗಳ ಕುರಿತು.**
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ವಿ.ಸೋಮಣ್ಣ (ವಸತಿ ಸಚಿವರು)

**800 – ದಾಖಲೆಗಳ ಸಂರಕ್ಷಣೆಗೆ ಕೈಗೊಂಡಿರುವ ಕ್ರಮದ ಬಗ್ಗೆ**
– ಶ್ರೀ ಎಸ್.ರವಿ.
– ಶ್ರೀ ಆರ್.ಅಶೋಕ (ಕಂದಾಯ ಸಚಿವರು)

**(ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅನುಮತಿಸಲಾಯಿತು)**

**823 – ಪೋಡಿಗಾಗಿ ಸಲ್ಲಿಕೆ ಮಾಡಿರುವ ಅರ್ಜಿಗಳ ವಿಲೇವಾರಿ ಕುರಿತು.**
– ಶ್ರೀ ಎಂ.ಎ.ಗೋಪಾಲಸ್ವಾಮಿ
– ಶ್ರೀ ಆರ್.ಅಶೋಕ(ಕಂದಾಯ ಸಚಿವರು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**446 – ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಠಾಣ ಗಡಿ ವಿಸ್ತರಣೆಯಾಗಿರುವ ಪ್ರದೇಶಗಳನ್ನು ಹೊಸದಾಗಿ ಸರ್ವೇ ಮಾಡಿ ಪುನರ್ ನಿಗದಿಪಡಿಸುವ ಬಗ್ಗೆ.**
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಆರ್.ಅಶೋಕ(ಕಂದಾಯ ಸಚಿವರು)

**635 – SCP/TSP – ಯೋಜನೆಗಳ ಅಡಿಯಲ್ಲಿ ಅನುದಾನ ಕುರಿತು.**
– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)

**868 – ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯಲ್ಲಿ ನಡೆಯುವ ಅಪಘಾತಗಳ ಬಗ್ಗೆ.**
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)

**844– ಜಲಾನಯನ ಅಭಿವೃದ್ಧಿ ಯೋಜನೆಗಳ ಬಗ್ಗೆ.**
– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್ (ಕೃಷಿ ಸಚಿವರು)

**624– ಹೊಸ ತಾಲ್ಲೂಕುಗಳ ಅಭಿವೃದ್ಧಿ ಬಗ್ಗೆ.**
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಆರ್.ಅಶೋಕ(ಕಂದಾಯ ಸಚಿವರು)

**828– SCP/TSP – ಯೋಜನೆಯ ಅನುದಾನ ಬಳಕೆಯಲ್ಲಿ ಕಳಪೆ ಪ್ರಗತಿಯ ಬಗ್ಗೆ.**
– ಶ್ರೀ ಟಿ.ಎ.ಶರವಣ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)

**857 – ಕೊಡವ ಕುಲಶಾಸ್ತ್ರೀಯ ಅಧ್ಯಯನ ಬಗ್ಗೆ.**
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)

**812– ಬೆಂಗಳೂರು ನಗರದಲ್ಲಿ ಸರ್ಕಾರಿ ನಿವೇಶನದಲ್ಲಿ ಗುತ್ತಿಗೆ ಪಡೆದು ರಿಕ್ರಿಯೇಷನ್ ಕ್ಲಬ್‌ಗಳನ್ನು ನಡೆಸುತ್ತಿರುವ ಬಗ್ಗೆ.**
– ಶ್ರೀ ಹೆಚ್.ಎಂ.ರೇವಣ್ಣ
– ಶ್ರೀ ಎಸ್.ಟಿ.ಸೋಮಶೇಖರ್(ಸಹಕಾರ ಸಚಿವರು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**850 – ಸದಾಶಿವ ಆಯೋಗದ ವರದಿ ಜಾರಿಗೊಳಿಸುವ ಬಗ್ಗೆ.**
– ಶ್ರೀ ಆರ್.ಧರ್ಮಸೇನ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ)

**611 – ಮುಜರಾಯಿ ಇಲಾಖೆ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ.**
– ಶ್ರೀ ಕಾಂತರಾಜ್ (ಬಿಎಂಎಲ್)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು ಹಾಗೂ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಸಚಿವರು)

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. ಪ್ರಕಟಣೆ**

**4. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ಪದವಿ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಬೈಹಿಕ ಉಪನ್ಯಾಸಕರ ನೇಮಕಾತಿ ಬಗ್ಗೆ.**
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ರೈತರ ಜಮೀನಿನಲ್ಲಿ ಸಸಿಗಳನ್ನು ಬೆಳೆಸುವ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಸಸಿಗಳನ್ನು ಬೆಳೆಸಿದ ರೈತರಿಗೆ ಪ್ರೋತ್ಸಾಹಧನ ನೀಡದಿರುವ ಬಗ್ಗೆ.**
ಡಾ॥ ವೈ.ಎ.ನಾರಾಯಣಸ್ವಾಮಿ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ವಿಜಯಪುರ ಜಿಲ್ಲೆಯ ರಾಜೇಶ್ವರಿ ಗಾಯಕವಾಡರವರ ವಿಶ್ವಕಪ್ ಸಾಧನೆ ಬಗ್ಗೆ 25.00ಲಕ್ಷ ರೂಪಾಯಿ ಬಹುಮಾನ ಮತ್ತು ವಿಜಯಪುರ ಮಹಾನಗರ ಪಾಲಿಕೆಯಿಂದ ಸೂಕ್ತ ನಿವೇಶನವನ್ನು ನೀಡುವುದಾಗಿ ಘೋಷಣೆ ಮಾಡಿ ಮೂರು ವರ್ಷಗಳಾದರೂ ಇನ್ನೂ ಬಹುಮಾನವನ್ನು ನೀಡದಿರುವ ಬಗ್ಗೆ.**
ಶ್ರೀ ಪ್ರಕಾಶ್ ಕೆ.ರಾಥೋಡ್
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**5. <u>ನಿಯಮ 330ಎ ವಿಶೇಷ ಪ್ರಸ್ತಾವಗಳ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ.</u>**

**ಅ) ಉಕ್ಕಿ ಹರಿದ ನೆರೆಗೆ ಬದುಕು ಕಳೆದುಕೊಂಡ ನೆರೆ ಸಂತ್ರಸ್ತರಿಗೆ ದಾನಿಗಳು ಕೊಟ್ಟಿದ್ದನ್ನು ತಲುಪಿಸುವಲ್ಲಿ ಧಾರವಾಡ ಜಿಲ್ಲಾಡಳಿತ ವಿಫಲವಾಗಿರುವ ಬಗ್ಗೆ.**
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಂದಾಯ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಆ) ಕಲ್ಬುರ್ಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ ಅಡಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ.**

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ)

**6. ಹಕ್ಕುಚ್ಯುತಿ ಪ್ರಸ್ತಾವ**

**ಅ) ಭರವಸೆಗಳ ಸಮಿತಿಯು ಕಾಕ್ಸ್ ಟೌನ್‌ನಲ್ಲಿರುವ ಇಂಡಿಯನ್ ಜಿಮ್ಖಾನಾ (Jimkhana) ಕ್ಲಬ್‌ನ ಸ್ಥಳ ಪರಿಶೀಲನೆಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಗೈರು ಹಾಜರಾದ ಶ್ರೀ ಮಂಜುನಾಥ್, ಅಪರ ನಿರ್ದೇಶಕರು, ಟೌನ್ ಪ್ಲಾನಿಂಗ್, ಬಿಬಿಎಂಪಿ, ಬೆಂಗಳೂರು ಇವರ ವಿರುದ್ಧ ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯನವರು ಮಂಡಿಸಿದ ಹಕ್ಕುಚ್ಯುತಿ ಪ್ರಸ್ತಾವದ ಬಗ್ಗೆ.**

**ಶ್ರೀ ಕೆ.ಸಿ.ಕೊಂಡಯ್ಯ**

**(ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಯಿತು)**

**ಆ) ದಿನಾಂಕ 22-2-2020 ರಿಂದ 25-2-2020ರವರೆಗೆ ಧಾರವಾಡ ಜಿಲ್ಲಾ ಕೇಂದ್ರದಲ್ಲಿ ಜರುಗಿದ "ಕರ್ನಾಟಕ ಕುಸ್ತಿ ಹಬ್ಬ" ಕಾರ್ಯಕ್ರಮದ ಸಂಘಟನಾ ಸಮಿತಿ ರಚಿಸಲಾಗಿದ್ದು ಇದರ ಸಭೆಗೆ ಜಿಲ್ಲಾ ಆಡಳಿತ ಮತ್ತು ಸಂಬಂಧಪಟ್ಟ ಇಲಾಖೆ ಒಂದು ಬಾರಿಯೂ ಆಹ್ವಾನ ನೀಡದಿರುವ ಬಗ್ಗೆ ಕರ್ತವ್ಯಲೋಪವೆಸಗಿದ ಅಧಿಕಾರಿಯ ವಿರುದ್ಧ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಮಂಡಿಸಿದ ಹಕ್ಕುಚ್ಯುತಿ ಪ್ರಸ್ತಾವದ ಬಗ್ಗೆ.**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**

ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)

ಶ್ರೀ ಎಸ್.ಎಲ್.ಭೋಜೇಗೌಡ

ಶ್ರೀ ಪ್ರಕಾಶ್ ಕೆ.ರಾಥೋಡ್

ಶ್ರೀ ಆಯನೂರು ಮಂಜುನಾಥ್

**(ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಯಿತು)**

~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು
~~~~~

(295) 11.03.2020 11.10 ಎಸ್‌ವಿ–ಎಕೆ

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 11ನೇ ಮಾರ್ಚ್ 2020**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಯವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**1. <u>ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ.</u>**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಡೀ ಜಗತ್ತಿಗೆ ಮಾದರಿಯಾದ ಅತ್ಯಂತ ಬೃಹತ್ತಾದ ಸಂವಿಧಾನವಾದ್ದ ಭಾರತದ ಸಂವಿಧಾನದ ಘನತೆ ಮತ್ತು ಗೌರವವನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನ ಮಂಡಲವು ಸಂವಿಧಾನದ ಕುರಿತು ಚರ್ಚೆಯನ್ನು ಕೈಗೆತ್ತಿಕೊಂಡಿರುವುದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಈ ಕುರಿತ ಚರ್ಚೆಯನ್ನು ತಾವು ಮೊದಲು ಪ್ರಾರಂಭ ಮಾಡಿರುತ್ತೀರಿ. 16 ಪುಟಗಳ ಒಂದು ಸುದೀರ್ಘ ವಿಶ್ಲೇಷಣೆಯನ್ನೊಳಗೊಂಡು ನಮ್ಮ ಸಂವಿಧಾನದ ಕುರಿತು ಮಾತನಾಡುವುದರ ಮೂಲಕ ಈ ಚರ್ಚೆಗೆ ಅಡಿಪಾಯವನ್ನು ಹಾಕಿದ್ದೀರಿ. ಅನಂತರ ಸಚಿವರಾದ ಶ್ರೀ ಮಾಧುಸ್ವಾಮಿಯವರು ಮುನ್ನುಡಿಯನ್ನು ಬರೆದಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರು ಮತ್ತು ಡಾ:ಜಯಮಾಲ ಅವರು ಮಾತನಾಡಿದ್ದಾರೆ. ಇಂದು ಅವಕಾಶ ನನ್ನದಾಗಿದೆ.

ನಾನು ರಾಜ್ಯಶಾಸ್ತ್ರದ ವಿದ್ಯಾರ್ಥಿ. ರಾಜ್ಯದ ಆಡಳಿತ ಮತ್ತು ಅದರ ವ್ಯವಸ್ಥೆಯ ಬಗ್ಗೆ ಅಧ್ಯಯನವನ್ನು ಮಾಡಿದವನು.

**(ಮುಂದು)**

(296) 11.20 11.3.2020 KG RN

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು)**

ಒಂದು ರಾಜ್ಯದ ಆಡಳಿತದ ಬಗೆಗೆ ನಿಜಕ್ಕೂ ವೈಜ್ಞಾನಿಕ ಆಲೋಚನೆ ಆರಂಭವಾಗಿದ್ದು ಗ್ರೀಕ್‌ನವರಿಂದ. ಅದು ಕ್ರಿಸ್ತ ಪೂರ್ವದಲ್ಲಿ. ಅದು ವಿಶೇಷವಾಗಿ Aristotle and Plato ರವರಿಂದ. Aristotle ತನ್ನ ಕಾಲಕ್ಕೆ ಕ್ರಿಸ್ತ ಪೂರ್ವದಲ್ಲಿ 158 ರಾಷ್ಟ್ರಗಳ ಆಡಳಿತವನ್ನು ಅಧ್ಯಯನ ಮಾಡಿ 'Politics' ಎಂಬ ಉದ್ಗ್ರಂಥವನ್ನು ಈ ಜಗತ್ತಿಗೆ ಕೊಡುತ್ತಾರೆ. ರಾಜ್ಯ ಆಡಳಿತದ ಪರಿಸ್ಥಿತಿಗಳು ಹೇಗೆ ಇರಬೇಕು ಅದರ ರೂಪ ಸ್ವರೂಪಗಳು ಹೇಗೆ ಇರಬೇಕು ಎನ್ನುವಂಥ ಆಳವಾದ ವಿಶೇಷಣೆಯ ಕೃತಿ ಅದಾಗುತ್ತದೆ. ಆ ಕಾರಣಕ್ಕೆ Aristotle ರವರನ್ನು ರಾಜ್ಯಶಾಸ್ತ್ರದ ಪಿತಾಮಹ ಎಂದು ಕರೆಯುತ್ತಾರೆ. ಒಂದು ಕಡೆ ರಾಜಕೀಯ ವಿಜ್ಞಾನವನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅಧ್ಯಯನ ಮಾಡುವಂತಹ ಅದಕ್ಕೂ ಒಂದು ಹೊಸ ಆಯಾಮವನ್ನು ಕೊಡುವಂತಹ ಕಾರ್ಯವನ್ನು Aristotle ರವರು ಮಾಡುತ್ತಾರೆ. Aristotle ರವರ ಗುರು Plato. ಅವರ 'Utopia' ಎನ್ನುವಂತಹ ಕೃತಿಯಲ್ಲಿ ಒಂದು ಆದರ್ಶ ರಾಜ್ಯವನ್ನು ಕಟ್ಟುವುದಕ್ಕೆ ಎಂತಹ ಜನರು ತಯಾರಾಗಬೇಕು, ಎಂತಹ ತರಬೇತಿ ಬೇಕು ಎಂತಹ Philosophers ಅವರಿಗೆ ತರಬೇತಿಯನ್ನು ನೀಡಬೇಕು ಎನ್ನುವಂತಹ ಆಲೋಚನೆಯನ್ನು ಬಹಳ ವಿಷದವಾಗಿ ಹೇಳುತ್ತಾನೆ. ಅವರ ಗುರು Socrates ಸಹ ಹೇಳುತ್ತಾನೆ. ಆದರೆ, Aristotle ರವರ ಪಾತ್ರ ಇವತ್ತಿಗೂ ಸಹ ದಾಖಲೆಯಾಗಿ ನಿಲ್ಲುತ್ತದೆ. ಆನಂತರ England's 'Magna Carta' ಅಲ್ಲಿ ಆದಂತಹ ರಕ್ತರಹಿತ ಕ್ರಾಂತಿ ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವಕ್ಕೆ ಅಧಿಕಾರದ ಹಸ್ತಾಂತರ ಇದೆಯೆಲ್ಲ, ಅದು ಬಹುದೊಡ್ಡ ಇತಿಹಾಸ, ನಮ್ಮ ಆಧುನಿಕ ಜಗತ್ತಿನಲ್ಲಿ. England ಪ್ರಜಾಪ್ರಭುತ್ವದ ತವರು. ಆ ಸಂವಿಧಾನವನ್ನು 'Mother of Constitution' ಎಂದು ಕರೆಯುತ್ತೇವೆ. ಇಡೀ ಜಗತ್ತಿನ ಎಲ್ಲಾ ಸಂವಿಧಾನಗಳ ತಾಯಿ ತವರು ಇದ್ದರೆ ಅದು England.

ಮಾನ್ಯ ಸಭಾಪತಿಯವರೇ, ಬಹಳ ಆಶ್ಚರ್ಯವೆಂದರೆ, it is unwritten Constitution. ಅದು ಅಲಿಖಿತ ಸಂವಿಧಾನ. ಅದು ಕೇವಲ ಇವತ್ತಿಗೂ ರೂಢಿ ಸಂಪ್ರದಾಯಗಳಿಂದ, ಪರಂಪರೆಯಿಂದ ತನ್ನ ಮೌಲ್ಯಗಳನ್ನು ತನ್ನ ಘನತೆಯನ್ನು ನಿರಂತರವಾಗಿ ಕಾಪಾಡಿಕೊಂಡು ಬರುತ್ತಿರುವಂತಹ ರಾಷ್ಟ್ರ ಮತ್ತು ಅಷ್ಟೇ ಮೌಲ್ಯಯುತವಾದ ಸಂವಿಧಾನವನ್ನು ಹೊಂದಿರುವಂತಹ ರಾಷ್ಟ್ರ. ಆನಂತರ ಅಮೇರಿಕಾ ಮತ್ತು ಫ್ರಾನ್ಸ್‌ನ ಕ್ರಾಂತಿಗಳು ಆದವು. ಸಮಾನಾಂತರವಾಗಿ 12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಆದಂತಹ ಶ್ರೀ ಬಸವ ಚಳುವಳಿ ಇದೆಯೆಲ್ಲ, ಬಹುಶಃ ಅದು ಇವತ್ತಿನ ಸಂವಿಧಾನದ ಮೇಲೆ ಬಹಳ ದೊಡ್ಡ ಪರಿಣಾಮ ಬೀರಿದೆ. ನಮ್ಮ 1955 Indian Act ಅನ್ನು ನಾವು ಮರೆಯುವಂತಿಲ್ಲ. ಶೇಕಡಾ 60, 65% ಕ್ಕೂ ಹೆಚ್ಚು ಭಾಗ ಇವತ್ತು ಸಂವಿಧಾನದ ಮೇಲೆ ಪರಿಣಾಮವನ್ನುಂಟು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡಿದೆ ಎಂದರೆ, ಶ್ರೀ ಬಸವಾದಿ ನೇತೃತ್ವದ ಸಮಾಜವನ್ನು ನಿರ್ಮಾಣ ಮಾಡುವಂತಹ ಬಹು ದೊಡ್ಡ ಚಳುವಳಿ. 900 ವರ್ಷಗಳ ಹಿಂದೆ ಬಸವಣ್ಣನವರು ಸಮಾಜದ ಎಲ್ಲಾ ವರ್ಗದವರನ್ನು ಕಟ್ಟಿಕೊಂಡು ಶ್ರೀಮತಿ ಅಕ್ಕಮಹಾದೇವಿಯವರು ಸೇರಿದಂತೆ, ಮಾದಿಗರ ಚೆನ್ನಯ್ಯನು ಸೇರಿದಂತೆ ಒಂದು ರೀತಿಯ ಸಾಮಾಜಿಕ ಕ್ರಾಂತಿಗೆ ನಾಂದಿಯನ್ನು ಆಡುತ್ತಾರೆ. ಇವತ್ತಿನ ನಮ್ಮ ವಿಧಾನ ಮಂಡಲದ ಸಂಸತ್ತು ಇದೆಯೆಲ್ಲ, ಅದಕ್ಕೆ ಮಾದರಿಯಾಗುವಂತಹ ಅನುಭವ ಮಂಟಪವನ್ನು ಕಟ್ಟುತ್ತಾರೆ. ಒಂದು ಹೊಸ ರೀತಿಯ ಸಮಾಜದ ನಿರ್ಮಾಣಕ್ಕೆ ಒಂದು ಸುಧೀರ್ಘವಾದ ಆಲೋಚನೆ ಮಾಡುವಂತಹ ಕೆಲಸವನ್ನು ಅವರು ಮಾಡುತ್ತಾರೆ. ಬಹುಶಃ ಹೇಗೆ ಅವತ್ತಿನ ಗ್ರೀಕ್‌ರವರ ಕೊಡುಗೆ, ಫ್ರಾನ್ಸ್‌ರವರ ಕೊಡುಗೆ, England ರವರ ಕೊಡುಗೆ, ಅಮೇರಿಕದವರ ಕೊಡುಗೆ ಇದೆಯೋ, ಅಂತಹ ದೊಡ್ಡ ಕೊಡುಗೆ 12ನೇ ಶತಮಾನದಲ್ಲಿ ಹೊಸ ರಾಜಕೀಯ ವ್ಯವಸ್ಥೆಗೆ ನಾಂದಿ ಆಡುವಂತಹ ಕೆಲಸ ನಮ್ಮ ನೆಲದಲ್ಲೂ ಆಗುತ್ತದೆ ಎನ್ನುವುದು ನಾವು ಮೆಚ್ಚಿ ಕೊಳ್ಳುವಂತಹ ಕೆಲಸ.

ಮಾನ್ಯ ಸಭಾಪತಿಯವರೇ, ಇವತ್ತು 395 ವಿಧಿಗಳ, ಪ್ರಸ್ತಾಪಿತ 124 ಅದರಲ್ಲೂ 104 ಅಧಿಕೃತ ತಿದ್ದುಪಡಿಗಳ 25 ಅಧ್ಯಾಯಗಳ ಅತ್ಯಂತ ಸುಧೀಘವಾದಂತಹ ಸಂವಿಧಾನ ನಮ್ಮದಾಗಿದೆ. ಈ ಸಂವಿಧಾನಕ್ಕೆ ರಾಜ್ಯಾಂಗ ಸಮಿತಿಯ ಅಧ್ಯಕ್ಷರಾದ ಶ್ರೀ ರಾಜೇಂದ್ರ ಪ್ರಸಾದ್‌ರವರು ಕೆಲಸ ಮಾಡಿದ್ದರೆ, ಬಹುಶಃ ಅದರ ಆತ್ಮ ಹೃದಯದ ರೀತಿಯಲ್ಲಿ ಕರಡು ಸಮಿತಿಯ ಅಧ್ಯಕ್ಷರಾಗಿ ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ವರು ಕೆಲಸ ಮಾಡುತ್ತಾರೆ. ಆ ಕಾಲಕ್ಕೆ ಅವರು ಪ್ರಖಂಡ ಪಂಡಿತರು. ಅಗಾದವಾದಂತಹ ಅಧ್ಯಯನವನ್ನು ಕಾನೂನು ಬಗ್ಗೆ ಉಳ್ಳಂತಹವರು ಆಗಿದ್ದರು. ಹಾಗಾಗಿ, ಅವರ ಸಂವಿಧಾನದ ರಚನೆಯಲ್ಲಿ ಅವರ ಪಾತ್ರ ಬಹಳ ದೊಡ್ಡದು ಎಂದು ನಾನು ಹೇಳಲೇಬೇಕಾಗಿದೆ. ಸಂವಿಧಾನದ ರಚನಾ ಸಭೆಯಲ್ಲಿದ್ದ ಸದಸ್ಯರ ಸಂಖ್ಯೆ 389. ಈ 389 Constituent Assembly ಸದಸ್ಯರಲ್ಲಿ ಕರ್ನಾಟಕದವರ ಪಾಲು ಇದೆ. ಮುಖ್ಯ ಮಂತ್ರಿಗಳಾಗಿದ್ದ ಎಸ್.ನಿಜಲಿಂಗಪ್ಪನವರು, ದಿವಾನ್ ಶ್ರೀ ಎಸ್.ಮಾಧವರಾವ್, ಶ್ರೀ ಗುರುದೇವ್‌ರೆಡ್ಡಿ, ಶ್ರೀ ಕೆ.ಟಿ.ಚಾಕ್ಯಂ, ಶ್ರೀ ಹೆಚ್.ಎಂ.ಕೃಷ್ಣಮ್ಮಾಚಾರಿ, ಶ್ರೀ ಆರ್.ಆರ್.ದಿವಾಕರ್, ಶ್ರೀ ಸಿದ್ದವೀರಪ್ಪ, ಶ್ರೀ ಚನ್ನಯ್ಯ, ಶ್ರೀ ಬಿ.ಸುಬ್ರಹ್ಮಣ್ಯಂ, ಶ್ರೀ ಡಿ.ಪಿ.ಕರ್ಮಾಕರ್ ಮತ್ತು ಶ್ರೀ ಟಿ.ಸಿದ್ದಲಿಂಗಯ್ಯ ಇವರುಗಳು ಕರ್ನಾಟಕದ ರಚನಾ ಸಮಿತಿಗೆ ಸದಸ್ಯರಾಗಿ ಚುನಾವಣೆಯ ಮೂಲಕ ಆಯ್ಕೆಯಾಗಿ ಕ್ರೀಯಾಶೀಲವಾದ ಪಾತ್ರವನ್ನು ನಿರ್ವಹಣೆ ಮಾಡಿ ಕರ್ನಾಟಕದ ಪಾಲು ಸಹ ಸಂವಿಧಾನದ ರಚನಾ ಸಮಿತಿಯಲ್ಲಿ ಇದೆ ಎನ್ನುವುದನ್ನು ಸಾಬೀತು ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ತಾವೆಲ್ಲ ನಮಗೆ ಸಂವಿಧಾನ ರಚನಾ ಸಭೆಯ ಎಲ್ಲಾ ನಡವಳಿಯ ಪುಸ್ತಕಗಳನ್ನು ಕೊಡಿಸಿದ್ದೀರಿ. 11 ಸಂಪುಟಗಳಲ್ಲಿ ಆ ಪುಸ್ತಕ ಬಂದಿದೆ. ಪ್ರತಿ ಸಂಪುಟದಲ್ಲಿ 1000 ಹೆಚ್ಚಿನ ಪುಟಗಳು ಇದೆ. I mean to say, 11 ಸಾವಿರಕ್ಕೂ ಹೆಚ್ಚಿನ ಪುಟಗಳ ಸುಧೀರ್ಘವಾದಂತಹ ಸಮಾಲೋಚನೆ 2 ವರ್ಷ, 11 ತಿಂಗಳ 18 ದಿವಸಗಳ ಕಾಲದಲ್ಲಿ ನಡೆದಿದೆ. ಅಂದರೆ, 12 ದಿವಸಗಳು ಕಡಿಮೆ ಮೂರು ವರ್ಷಗಳ ಸುಧೀರ್ಘ ಕಾಲ ಸಂವಿಧಾನ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಚನಾ ಸಮಿತಿಯು ಎಲ್ಲಾ ಚರ್ಚೆಯನ್ನು ಆಳವಾದ ಹಿನ್ನೆಲೆಯಲ್ಲಿ ಈ ಜಗತ್ತಿನ ಆ ಕಾಲದ ಎಲ್ಲಾ ಸಂವಿಧಾನಗಳನ್ನು ತೌಲನಿಕ ಅಧ್ಯಯನ ಮಾಡುವುದರ ಮೂಲಕ ಭಾರತದ ದೇಶಿಯ ಹಿನ್ನೆಲೆಯಲ್ಲಿ ನಮಗೆ ಬೇಕಾದಂತಹ ಸಮರ್ಥವಾದಂತಹ ಸಂವಿಧಾನವನ್ನು ಕೊಡುವಲ್ಲಿ ಯಶಸ್ಸನ್ನು ಕಂಡಿದೆ. ಹಾಗಾಗಿ, ಡಾ॥ಬಿ.ಆರ್.ಅಂಬೇಡ್ಕರ್‌ರವರ ಕೊಡುಗೆ ಆತಂಕಕ್ಕೆ, ಅನುಮಾನಕ್ಕೆ ಚರ್ಚೆಗೆ ಇಲ್ಲದಂತಹ ಒಂದು ಶ್ರೇಷ್ಠವಾದಂತಹ ಕೊಡುಗೆ ಎನ್ನುವಂತಹ ಮಾತನ್ನು ನಾನು ಹೇಳಲೇಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಡಾ॥ಬಿ.ಆರ್.ಅಂಬೇಡ್ಕರ್‌ರವರ ವಿಚಾರದ ಬಗೆಗೆ ನಮ್ಮವರೆ ಆದಂತಹ ಮದ್ರಾಸ್‌ನ ಶ್ರೀ ಕೃಷ್ಣಮ್ಮಾಚಾರಿರವರು ಒಂದು ಮಾತನ್ನು ಹೇಳುತ್ತಾರೆ. ನಾನು ಅವರು ನಮ್ಮ ಸಂವಿಧಾನದ ಸಭೆಯನ್ನು ಉದ್ದೇಶಿಸಿ ಕುರಿತು ಮಾತನಾಡುವಂತಹ ಸಂದರ್ಭದಲ್ಲಿ ಬಹಳ ಎತ್ತರವಾದಂತಹ ಅಭಿಪ್ರಾಯಗಳನ್ನು ಕೊಡುವಂತಹ ಕೆಲಸಗಳನ್ನು ಮಾಡುತ್ತಾರೆ ಬಹುಶಃ ಅದು ಡಾ॥ಬಿ.ಆರ್.ಅಂಬೇಡ್ಕರ್‌ರವರ ಪಾತ್ರ ಭಾರತ ಸಂವಿಧಾನದ ರಚನೆಯ ಚರ್ಚೆಗಳ ಸಂಪುಟ–3 ರಲ್ಲಿ ಈ ಮಾತು ಉಲ್ಲೇಖವಾಗಿದೆ. ಶ್ರೀ ಟಿ.ಟಿ.ಕೃಷ್ಣಮ್ಮಾಚಾರಿ ಮದ್ರಾಸ್‌ನ ಪ್ರತಿನಿಧಿ. ಅವರು ಇಡೀ ರಾಜ್ಯಾಂಗ ಸಮಿತಿಯನ್ನು ಉದ್ದೇಶಿಸಿ ಆಡಿದಂತಹ ಮಾತುಗಳು.

ಮಾನ್ಯ ಸಭಾಪತಿಯವರೇ, ಡಾ॥ಬಿ.ಆರ್.ಅಂಬೇಡ್ಕರ್‌ರವರ ಮಾತುಗಳನ್ನು ಎಚ್ಚರಿಕೆಯಿಂದ ಆಲಿಸಿದ ಸದನದಲ್ಲಿದ್ದವರಲ್ಲಿ ನಾನು ಒಬ್ಬನು. ಈ ಸಂವಿಧಾನವನ್ನು ರೂಪಿಸುವಲ್ಲಿ ಅವರು ಎಷ್ಟೊಂದು ಶ್ರಮ ಪಟ್ಟಿದ್ದಾರೆ ಹಾಗೂ ಮುತವರ್ಜಿ ವಹಿಸಿದ್ದಾರೆ ಎಂಬುದರ ಬಗ್ಗೆ ನನಗೆ ಅರಿವು ಇದೆ. ಅದೇ ಸಮಯದಲ್ಲಿ ನಮಗೆ ಬಹಳ ಮುಖ್ಯವಾಗಿರುವಂತಹ ಈ ಸಂವಿಧಾನದ ಕರಡನ್ನು ರೂಪಿಸುವಲ್ಲಿ ಎಷ್ಟರ ಮಟ್ಟಿಗೆ ಗಮನ ನೀಡುವುದು ಅಗತ್ಯವಾಗಿತ್ತೋ, ಅಷ್ಟು ಗಮನವನ್ನು ಕರಡು ರಚನಾ ಸಮಿತಿಯು ನೀಡಿಲ್ಲ ಎಂಬುದು ನನಗೆ ಗೊತ್ತು. ನೀವು ನಾಮನಿರ್ದೇಶನ ಮಾಡಿದ 7 ಮಂದಿಯಲ್ಲಿ ಒಬ್ಬ ಸದಸ್ಯರು ಸದನಕ್ಕೆ ರಾಜಿನಾಮೆ ನೀಡಿದ್ದು, ಅವರ ಬದಲಿಗೆ ಮತ್ತೊಬ್ಬರನ್ನು ನೇಮಕ ಮಾಡಲಾಗಿದೆ ಎಂಬುದು ಬಹುಶಃ ಸದನಕ್ಕೆ ತಿಳಿದಿರಬಹುದು. ಒಬ್ಬ ಸದಸ್ಯರು ಮೃತಪಟ್ಟರು, ಆದರೆ, ಅವರ ಬದಲಿಗೆ ಮತ್ತೊಬ್ಬರನ್ನು ನೇಮಿಸಲು ಆಗಲೇ ಇಲ್ಲ. ಒಬ್ಬ ಸದಸ್ಯರು ಅಮೇರಿಕಾದಲ್ಲಿದ್ದರು, ಅವರ ಸ್ಥಾನಕ್ಕೆ ಬದಲಿಯವರನ್ನು ನೇಮಿಸಲೇ ಇಲ್ಲ. ಇನ್ನೊಬ್ಬರು ರಾಜ್ಯದ ವ್ಯವಹಾರಗಳಲ್ಲಿ ತೊಡಗಿದ್ದರು, ಅಷ್ಟರ ಮಟ್ಟಿಗೆ ಅವರ ಸ್ಥಾನದಲ್ಲಿ ಶೂನ್ಯ ಉಂಟಾಯಿತು. ಒಬ್ಬರೋ, ಇಬ್ಬರೂ ಬಹಳ ದೂರದ ದೆಹಲಿಯಲ್ಲಿದ್ದರು. ಬಹುಶಃ ಅವರು ಆರೋಗ್ಯದ ಕಾರಣವಾಗಿ ಭಾಗವಹಿಸಲು ಆಗಲಿಲ್ಲ. ಹೀಗಾಗಿ, ಈ ಸಂವಿಧಾನದ ಕರಡು ಸಿದ್ದಪಡಿಸುವಂತಹ ಕೆಲಸ ಸಂಪೂರ್ಣವಾಗಿ ಡಾ॥ಬಿ.ಆರ್.ಅಂಬೇಡ್ಕರ್‌ರವರ ಮೇಲೆ ಬಿದ್ದಿತ್ತು. ಅವರು ನಿಸ್ಸಂದೇಹವಾಗಿ ಮತ್ತು ಅತ್ಯಂತ ಶ್ಲಾಘನೀಯವಾಗಿ ಈ ಕಾರ್ಯವನ್ನು ಅವರು ಸಾಧಿಸಿದ್ದಾರೆ. ಇದಕ್ಕಾಗಿ ನಾವೆಲ್ಲರೂ ಅವರಿಗೆ ಅಭಾರಿ ಎನ್ನುವಂತಹ ಮಾತನ್ನು ಶ್ರೀ ಟಿ.ಟಿ.ಕೃಷ್ಣಮಾಚಾರಿಯವರು ಹೇಳಿದ್ದಾರೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮಾನ್ಯ ಸಭಾಪತಿಯವರೇ, ಏಕೆ ಈ ಉದೃತ ಭಾಗವನ್ನು ಉಲ್ಲೇಖ ಮಾಡಿದೆ ಎಂದರೆ, ನಿಜಕ್ಕೂ ಕರಡು ಸಮಿತಿಯಲ್ಲಿ ನಿರ್ಣಾಯಕ ಪಾತ್ರವನ್ನು ಮಾಡಿದಂತಹವರು, ಅದ್ವಿತೀಯ ಪಾತ್ರವನ್ನು ಮಾಡಿದಂತಹವರು ಡಾ॥ಬಿ.ಆರ್.ಅಂಬೇಡ್ಕರ್‌ರವರು ಎನ್ನುವಂಥದ್ದು, ಎನ್ನೆಲ್ಲಾ ಸಣ್ಣ ಪುಟ್ಟ ಕೊಂಕು ಮಾತುಗಳು ಇದ್ದಾವೆ, ಆ ಮಾತುಗಳಿಗೆ ಉತ್ತರವನ್ನು ನೀಡುವ ಕಾರಣಕ್ಕಾಗಿ ನಾನು ಮಾತನ್ನು quote ಮಾಡಿದ್ದೇನೆ.

ಮಾನ್ಯ ಸಭಾಪತಿಯವರೇ, ನಮ್ಮ ಜಗತ್ತಿನ 195 ಸ್ವತಂತ್ರ ರಾಷ್ಟ್ರಗಳಲ್ಲಿ ಎಲ್ಲಾ ರಾಷ್ಟ್ರಗಳಲ್ಲಿ ಸಂವಿಧಾನ ಇಲ್ಲ. ಸಂವಿಧಾನ ಇರುವುದು ಕೇವಲ 176 ದೇಶಗಳಲ್ಲಿ ಮಾತ್ರ. ಆದರೆ, ಆ ಸ್ವತಂತ್ರ ದೇಶಗಳಲ್ಲಿ ತಮ್ಮದೇ ಆದಂತಹ ಆಡಳಿತ ಇದೆ. ಆದರೆ, ಸಂವಿಧಾನ ಬದ್ಧವಾದ ಆಡಳಿತ ಇಲ್ಲ. ಸಂವಿಧಾನದ ಹೊರತಾದ ಸುಮಾರು 29 ರಾಷ್ಟ್ರಗಳು ಇವೆ. ಹಾಗಾದರೆ, ಸಂವಿಧಾನ ಎಂದರೆ ಏನು? What do you mean by Constitution? Constitution is nothing but bundle of laws. ಈ ಸಂವಿಧಾನವನ್ನು ಏಕೆ ಕಾನೂನುಗಳ ಕೋಶ ಎಂದು ಹೇಳುತ್ತೇವೆ, ಅವು ಎಂತಹ ಕಾನೂನುಗಳು, ಒಂದು ರಾಷ್ಟ್ರ ಯಾವ ಮಾದರಿಯ ಸರ್ಕಾರವನ್ನು ಹೊಂದಿರಬೇಕು, ಯಾವ ಸ್ವರೂಪದ ಸರ್ಕಾರವನ್ನು ಹೊಂದಿರಬೇಕು, ಆ ಸರ್ಕಾರ ಹೇಗೆ ರಚನೆಯಾಗಬೇಕು. ಆ ಸರ್ಕಾರ ಹೇಗೆ ಕಾರ್ಯನಿರ್ವಹಣೆ ಮಾಡಬೇಕು ಎಂಬ ಸವಿಸ್ತಾರವಾದಂತಹ ಮಾಹಿತಿಗಳನ್ನು ಕೊಡುವಂತಹ ಕಾನೂನುಗಳ ಕೋಶವೆಂದು ಕರೆಯುತ್ತೇವೆ. ಬಹುಶಃ ಇವತ್ತು Federal System ನ ಸಂಯುಕ್ತ ಮಾದರಿಯ ಸರ್ಕಾರವನ್ನು ನಾವು ಒಪ್ಪಿಕೊಂಡಿದ್ದೇವೆ. (ಮುಂದು)

(297)11–03–2020(11–30)ಎಂಪಿ-ಆರ್‌ಎನ್
**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು...)**

ಅಮೆರಿಕಾ ದೇಶ ಅಧ್ಯಕ್ಷೀಯ ಮಾದರಿಯಾದರೆ, ನಮ್ಮದು Federal System Government. ಬಹುಶಃ ಜಗತ್ತಿನಲ್ಲಿ ಸಂಸದೀಯ ಮಾದರಿಯ ಅತ್ಯಂತ ಬೃಹತ್ ಪ್ರಜಾಪ್ರಭುತ್ವ ಇರುವುದು ನಮ್ಮ ರಾಷ್ಟ್ರದಲ್ಲೆ. ಹಾಗಾಗಿ ಪ್ರಜಾಪ್ರಭುತ್ವದ ಸಾಲಿನ ಪಟ್ಟಿಯಲ್ಲಿ, ಭಾರತ ಅತ್ಯಂತ ಅಗ್ರ ಪಂಕ್ತಿಯಲ್ಲಿ ನಿಲ್ಲುವಂಥದ್ದನ್ನು ನಾವೆಲ್ಲರೂ ಸಹ ಮನಗಾಣಬೇಕಾಗಿದೆ. ಆ ಮೂಲಕ ಜಗತ್ತಿನ ಸಂವಿಧಾನ ರಾಷ್ಟ್ರಗಳ ವಿಚಾರದಲ್ಲಿ ನಮ್ಮದು ಅತ್ಯಂತ ಹಿರಿಮೆ ಮತ್ತು ಘನತೆಗೆ ಪಾತ್ರವಾದಂತಹ ಸಂವಿಧಾನ ರಾಷ್ಟ್ರ ಎಂದು ಹೇಳುವುದಕ್ಕೆ ನಾನು ಹೆಮ್ಮೆಪಡುತ್ತೇನೆ. ನಮ್ಮ ಸಂವಿಧಾನ ಹತ್ತಾರು ರಾಷ್ಟ್ರಗಳ ತೌಲನಿಕ ಅಧ್ಯಯನದ ಅನಂತರ ಆಗಿದ್ದರೂ ಕೂಡ, ನಮ್ಮ ಸಂವಿಧಾನವನ್ನು ಕೂಡ ಅದೆಷ್ಟೋ ರಾಷ್ಟ್ರಗಳು ಮನಃಪೂರ್ವಕವಾಗಿ ಒಪ್ಪಿಕೊಂಡಿದ್ದಾರೆ. ಅದರಲ್ಲಿ ವಿಶೇಷವಾಗಿ ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷರಾದ ದಿವಂಗತ ನೆಲ್ಸನ್ ಮಂಡೇಲಾರವರು, ಭಾರತದ ಸಂವಿಧಾನವೇ ನಮ್ಮ ದೇಶದ ಸಂವಿಧಾನಕ್ಕೆ ಸ್ಫೂರ್ತಿ ಎನ್ನುವಂತಹ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾತನ್ನು ಕೂಡ ಹೇಳುತ್ತಾರೆ. ದಕ್ಷಿಣ ಆಫ್ರೀಕಾದ ಸಂವಿಧಾನ ಬಹುಪಾಲು ಇಡಿಯಾಗಿ, ಭಾರತದ ಸಂವಿಧಾನದ ಪಡಿಯಚ್ಚು ಎನ್ನುವಂತಹ ಮಾತನ್ನು, ಅಕ್ಷರ ಮಟ್ಟಿಗೆ ಭಾರತದ ಸಂವಿಧಾನ ಈ ಜಗತ್ತಿನಲ್ಲಿ ಪರಿಣಾಮವನ್ನುಂಟು ಮಾಡಿದೆ ಎನ್ನುವಂತಹ ಹೆಮ್ಮೆಯ ಮಾತನ್ನು ಇವತ್ತು ಹಂಚಿಕೊಳ್ಳಬೇಕಾಗಿದೆ. ಬ್ರಿಟಿಷರು ಈಸ್ಟ್ ಇಂಡಿಯಾ ಕಂಪನಿಯ ಮೂಲಕ ನಮ್ಮ ಭಾರತ ದೇಶಕ್ಕೆ ಬಂದರು. ಆ ಮೂಲಕ ಭಾರತದ ಆಡಳಿತದ ಚುಕ್ಕಾಣಿಯನ್ನು ತಮ್ಮ ಕೈಗೆತ್ತಿಕೊಂಡರು. ಅಂತಹ ಬ್ರಿಟಿಷರನ್ನು ಓಡಿಸುವಂತಹ ದಿಶೆಯಲ್ಲಿ, ಆ ವೇಳೆಗೆ ಇಂಗ್ಲೆಂಡ್‌ನ ಐ.ಸಿ.ಎಸ್. ಅಧಿಕಾರಿಯಾದ ಮಾನ್ಯ ಎ.ಓ.ಹ್ಯೂಮ್‌ರವರ ನೇತೃತ್ವದಲ್ಲಿ ಒಂದು ಸಂಘಟನೆ ಪ್ರಾರಂಭವಾಗಿತ್ತು. ಅವರು ಒಂದು ಸಾಮಾನ್ಯ ಸೌಹಾರ್ದಕ್ಕಾಗಿ ಮಾಡಿಕೊಂಡಂತಹ ಕಾಂಗ್ರೆಸ್ ಎಂಬ ಸಂಸ್ಥೆ, ಅದು ಕಾಲಾನಂತರದಲ್ಲಿ ಒಂದು ಸಂಘಟನೆಯಾಗಿ, ಅನಂತರ ಜನಪ್ರಿಯ ಚಳುವಳಿಯ ನೆಲೆಯಲ್ಲಿ ನಿಂತು, ಒಂದು ಹೋರಾಟವನ್ನು ರೂಪಿಸುವಂತಹ ದಿಶೆಯಲ್ಲಿ, ದೃಢವಾದ ಹೆಜ್ಜೆಗಳನ್ನು ಇಡುವುದಕ್ಕೆ ಪ್ರಾರಂಭ ಮಾಡುತ್ತದೆ. ಅದು ಅನಂತರ ಸ್ವಾತಂತ್ರ್ಯ ಹೋರಾಟದ ರೂಪುರೇಷೆಗೆ ನಾಂದಿ ಹಾಡುವಂತಹ ಒಂದು ಸಂಘಟನೆಯಾಗಿ ರೂಪುಗೊಳ್ಳುತ್ತದೆ. ಅದರ ಸಾರಥ್ಯದ ನೇತೃತ್ವವನ್ನು ಮಹಾತ್ಮ ಗಾಂಧೀಜಿಯವರು ವಹಿಸಿಕೊಳ್ಳುತ್ತಾರೆ. ಭಾರತದ ಇತಿಹಾಸದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಅನಂತರದಲ್ಲಿ ಎರಡು ದೊಡ್ಡ ಹೆಸರುಗಳನ್ನು ನಾವು ಮರೆಯುವಂತಿಲ್ಲ ಮತ್ತು ಯಾವೊತ್ತಿಗೂ ಸಹ ಅವುಗಳನ್ನು ಅಳಿಸಿ ಹಾಕುವಂತಿಲ್ಲ, ಆ ಹೆಸರುಗಳೆಂದರೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಡಾ|| ಬಾಬಾ ಸಾಹೇಬ್ ಅಂಬೇಡ್ಕರ್. ನಮಗೆ 1947ರಲ್ಲಿ ಸ್ವಾತಂತ್ರ್ಯ ಬಂತು. ನಮಗೆ ಸ್ವಾತಂತ್ರ್ಯ ಕೊಡುವಂತಹ ಸಮಯದಲ್ಲಿ, ಅತ್ಯಂತ ಸಹನೆಯಿಂದ, 24 ತಾಸುಗಳ ಕಾಲ ನಿರಂತರವಾದ ಉಪವಾಸದ ಮೂಲಕ ಸ್ವಾತಂತ್ರ್ಯವನ್ನು ಸ್ವೀಕಾರ ಮಾಡುವುದಕ್ಕೆ ಮಹಾತ್ಮ ಗಾಂಧೀಜಿಯವರು ಮನಸ್ಸು ಮಾಡುತ್ತಾರೆ. ಅವರು ಸ್ವಾತಂತ್ರ್ಯವನ್ನು ಏಕಾಏಕಿಯಾಗಿ ಸ್ವೀಕಾರ ಮಾಡಲಿಲ್ಲ. ಮಹಾತ್ಮ ಗಾಂಧೀಜಿಯವರು ಶ್ರದ್ಧೆ ಮತ್ತು ವಿನಯದಿಂದ ಸ್ವಾತಂತ್ರ್ಯವನ್ನು ಸ್ವೀಕಾರ ಮಾಡಬೇಕೆಂದು ಸತತವಾಗಿ 24 ತಾಸುಗಳ ಕಾಲ ಉಪವಾಸಕ್ಕೆ ಕೂರುತ್ತಾರೆ. ಈ ದೇಶಕ್ಕೆ ಒಂದು ದೊಡ್ಡ ಸಂದೇಶ ಹೋಗಬೇಕು ಎನ್ನುವಂತಹ ಕಾರಣಕ್ಕಾಗಿ, ಆ ರೀತಿಯ ವ್ರತದ ಮೂಲಕ ಸ್ವಾತಂತ್ರ್ಯವನ್ನು ಸ್ವೀಕಾರ ಮಾಡುವಂತಹ ಕೆಲಸಕ್ಕೆ ಮಹಾತ್ಮ ಗಾಂಧೀಜಿಯವರು ಮುಂದಾಗುತ್ತಾರೆ. ಅನಂತರ ನಮಗೆ ಡಾ|| ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನವನ್ನು ಕೊಡುತ್ತಾರೆ. ನಮ್ಮ ಭಾರತ ಸಂವಿಧಾನದ 25 ಅಧ್ಯಯನಗಳು ಈ ದೇಶದ ಬಹು ದೊಡ್ಡ ಬದಲಾವಣೆಗೆ ನಾಂದಿಯಾಗುತ್ತದೆ. ಬಹಳ ಜನ ಕ್ರಾಂತಿಗಳ ಮೂಲಕ ಮತ್ತು ಹೋರಾಟದ ಮೂಲಕ ಬದಲಾವಣೆಯನ್ನು ತರಬೇಕೆಂದು ಹೇಳುತ್ತಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ನಾನು ಒಂದು ಸತ್ಯವನ್ನು ಹೇಳುತ್ತೇನೆ. ಸಂವಿಧಾನ ಎನ್ನುವಂತಹ ಒಂದು ಅಸ್ತ್ರದ ಮೂಲಕ ಡಾ||ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಭಾರತದ ಸಮಗ್ರವಾದ ಚಿತ್ರಣವನ್ನೇ ಬದಲಾಯಿಸಿದರು. ಇದು ಸಾಧ್ಯವಾಗಿದ್ದು ಭಾರತದಲ್ಲಿ ಮಾತ್ರ. ಈ ಸಂವಿಧಾನ ಎಂಬ ಒಂದು ಅಸ್ತ್ರದ ಮೂಲಕ ಸಮಗ್ರವಾದ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಮಾಜದ ಎಲ್ಲಾ ಸ್ತರಗಳ ಬದಲಾವಣೆಯನ್ನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು

ನಮ್ಮ ಸಂವಿಧಾನ ನಿರೂಪಿಸಿಕೊಟ್ಟಿದೆ. ಅಂತಹ ಒಂದು ರಕ್ತರಹಿತವಾದ ಕ್ರಾಂತಿಯನ್ನು ಮತ್ತು ಒಂದು ಬಹು ದೊಡ್ಡ ಬದಲಾವಣೆಯನ್ನು ಭಾರತ ದೇಶದಲ್ಲಿ ಮಾಡಿದ್ದು, ಭಾರತ ಸಂವಿಧಾನ ಎನ್ನುವುದನ್ನು ನಾನು ಅತ್ಯಂತ ಗೌರವಯುತವಾಗಿ ಹೇಳಬೇಕಾಗಿದೆ. ಅಂತಹ ಸಂವಿಧಾನದ ಬಗ್ಗೆ, ಸುಮಾರು 70 ವರ್ಷಗಳ ನಂತರ ಇದರ ಚರ್ಚೆ ಅರಂಭವಾಗಿದೆ. ನನ್ನ ಪ್ರಕಾರ ಪ್ರತಿ ಹತ್ತು ವರ್ಷಕ್ಕೊಮ್ಮೆ ಲೋಕಸಭೆ ಸೇರಿದಂತೆ ಈ ದೇಶದ ಎಲ್ಲಾ ರಾಜ್ಯಗಳ ವಿಧಾನ ಮಂಡಲಗಳು ಪರಾಮರ್ಶನ ಕೆಲಸವನ್ನು ಮಾಡಬೇಕಾಗಿತ್ತು. After lapse of seventy years, ಸುಮಾರು ಏಳು ದಶಕಗಳ ಅನಂತರ, ನಮ್ಮ ಸಂವಿಧಾನ ಎಲ್ಲಿದೆ, ಅದು ಹೇಗಿದೆ, ಅದು ಏನಾಯಿತು? ಅದಕ್ಕೆ ನಾವು ಏನು ಮಾಡಬೇಕಾಗಿತ್ತು ಮತ್ತು ನಾವು ಎಲ್ಲಿ ಎಡವಿದ್ದೇವೆ? ಎಂದು ಅದನ್ನು ಹುಡುಕುವಂತಹ ಪರಾಮರ್ಶನ ಕೆಲಸಕ್ಕೆ ನಿಂತಿದ್ದೇವೆ. ನಾವು ಬಹಳ ತಡವಾಗಿ ಪರಾಮರ್ಶನ ಕೆಲಸಕ್ಕೆ ನಿಂತಿದ್ದೇವೆ. ಹಾಗಾಗಿ ಸಂವಿಧಾನ ಅನುಷ್ಠಾನಕ್ಕೆ ಬರುವ ದಿಶೆಯಲ್ಲಿ, ಏನ್ನೆಲ್ಲಾ ವ್ಯತ್ಯಯ, ಅನ್ಯಾಯ ಮತ್ತು ಲೋಪಗಳಾದವು ಎಂಬುದರ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ಆದರೆ, ಭಾರತ ಸ್ವಾತಂತ್ರ್ಯ ನಂತರ ನಮ್ಮ ಸಂವಿಧಾನ ಅಸ್ತಿತ್ವಕ್ಕೆ ಬಂದ ಮೇಲೆ, ಏನೂ ಸುಧಾರಣೆ ಮತ್ತು ಬದಲಾವಣೆಗಳು ಆಗಿಲ್ಲವೆ? ಹೌದು, ಬಹಳ ದೊಡ್ಡ ಪ್ರಮಾಣದಲ್ಲಿ ಈ ದೇಶದಲ್ಲಿ ಬದಲಾವಣೆಗಳಾಗಿವೆ ಮತ್ತು ಪ್ರಗತಿಯಾಗಿದೆ. ನಾನು ನಮ್ಮ ಏರಿಯಾದಲ್ಲಿ ಪ್ರತಿನಿತ್ಯ ವಾಕಿಂಗ್ ಮಾಡುವುದಕ್ಕೆ ಒಂದು ಪಾರ್ಕ್ ಅನ್ನು ದತ್ತು ತೆಗೆದುಕೊಂಡಿದ್ದೇನೆ. ಅಲ್ಲಿ ನಾನು ವಾಕಿಂಗ್‌ಗೆ ಹೋಗುತ್ತೇನೆ. ಬೆಳಗಿನ ಸಮಯದಲ್ಲಿ ನಮ್ಮ ಪೌರಕಾರ್ಮಿಕರು ತಮ್ಮ ಕರ್ತವ್ಯಕ್ಕೆ ಹೋಗುತ್ತಿರುತ್ತಾರೆ. ಅವರು ಕರ್ತವ್ಯಕ್ಕೆ ಬರುವಾಗ ದೂರವಾಣಿಯಲ್ಲಿ ಮಾತನಾಡುತ್ತಾರೆ. ಅಂದರೆ ಬೇರೊಬ್ಬರಿಗೆ ದೂರವಾಣಿ ಮಾಡಿ, ನಾನು ಕಚೇರಿಗೆ ಬಂದಿದ್ದೇನೆ ನೀನು ಎಲ್ಲಿದ್ದೀಯಾ ಬಾ ಎಂದು ಹೇಳುತ್ತಾರೆ. ಅಂದರೆ, ಪೌರ ಕಾರ್ಮಿಕರ ಕೈಯಲ್ಲಿ ಒಂದು ದೂರವಾಣಿ ಇದೆ. ಅವರು ಆ ದೂರವಾಣಿಯಲ್ಲಿ ಮಾತನಾಡುತ್ತಿದ್ದಾರೆಂದರೆ, ಎಲ್ಲಿಯವರೆಗೆ ನಮ್ಮ ದೇಶದ ಬೆಳವಣಿಗೆ ಆಗಿದೆ ನೋಡಿ. ಈಗ ಸಾಕಷ್ಟು ಬೆಳವಣಿಗೆ ಮತ್ತು ಅಭಿವೃದ್ಧಿಯಾಗಿದೆ. ಆದರೆ, ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಎಲ್ಲಾ ಜನರಿಗೆ ಸಮಾಜದ ಕೆಳಸ್ತರದವರಿಗೆ, ನೊಂದವರಿಗೆ, ಮಹಿಳೆಯರಿಗೆ, ಕಾರ್ಮಿಕರಿಗೆ ಬಹುದೊಡ್ಡ ಶಕ್ತಿ ತುಂಬುವಂತಹ ಕೆಲಸವನ್ನು ಈ ಸಂವಿಧಾನದಲ್ಲಿ ಮಾಡಿದ್ದಾರೆ. ಸಂವಿಧಾನ ಬರುವ ಮುನ್ನ ಮಹಿಳೆಯರ ಸ್ಥಿತಿಯ ಬಗ್ಗೆ ಹೇಳುವುದಕ್ಕೆ ಅಸದಳ. ಆ ಮಹಿಳೆ ಕ್ರೂರ ಮೃಗಗಳಿಗಿಂತಲೂ ಕಳಪೆಯಾಗಿ ಸಮಾಜದ ವ್ಯವಸ್ಥೆಯ ಒಳಗೆ ಇದ್ದಳು. ಆಗ ಪುರುಷ ಪ್ರಧಾನ ಸಮಾಜ ವ್ಯವಸ್ಥೆ ನಿರ್ಮಾಣವಾಗಿ ಹೋಗಿತ್ತು. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮಹಿಳೆಯರಿಗೆ ಕೊಟ್ಟಂತಹ ಆಸ್ತಿಯ ಹಕ್ಕು, ಮದುವೆಯ ಹಕ್ಕು, ವಿಚ್ಛೇದನದ ಹಕ್ಕು ಮತ್ತು ಸಾಮಾಜಿಕ ಸ್ಥಾನಮಾನ ಇದೆಯಲ್ಲಾ ಅದನ್ನು ವರ್ಣಿಸಲು ಅಸದಳ. ಆ ಮೂಲಕ ಮಹಿಳೆ ಸಾಮಾಜಿಕ ಮುಖ್ಯವಾಹಿನಿಗೆ ಬರುವುದಕ್ಕೆ ಸಾಧ್ಯವಾಗಿದೆ ಎಂದರೆ, ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮಹಿಳೆಯರಿಗೆ ಕೊಟ್ಟಂತಹ ವಿಶೇಷ ಅವಕಾಶಗಳು ಎಂಬ ಮಾತನು ನಾನು ಹೇಳಬೇಕಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಇನ್ನು ಸಾಮಾಜಿಕ ತುಳಿತಕ್ಕೆ ಒಳಗಾದವರಿಗೆ ಮತ್ತು ನೋವಿಗೆ ಒಳಗಾದವರಿಗೆ ಮೀಸಲಾತಿ ಕೊಟ್ಟಿರುವುದು ಇದೆಯಲ್ಲಾ. ಅದನ್ನು ಯಾರೂ ಮಾಡುವುದಕ್ಕೆ ಸಾಧ್ಯವಾಗದಿರುವಂತಹ ಒಂದು ದೊಡ್ಡ ಕೆಲಸ ಎಂದು ಹೇಳಬೇಕಾಗಿದೆ. ಶತಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದಂತಹ ಜನರು ಸಮಾಜದ ಮುಖ್ಯವಾಹಿನಿಗೆ ಬರಬೇಕು. ನಮ್ಮ ಸ್ನೇಹಿತರು ಮತ್ತು ಸದಸ್ಯರಾದ ಮಾನ್ಯ ಸಿ.ಎಂ.ಇಬ್ರಾಹಿಂರವರು ಹೇಳುತ್ತಿದ್ದರು, ನಾವು ಯಾವುದೇ ಜಾತಿಯಲ್ಲಿ ಹುಟ್ಟಬೇಕಾದರೆ, ಅರ್ಜಿ ಹಾಕಿ ಹುಟ್ಟಿಕೊಂಡು ಬರುವುದಿಲ್ಲ ಎಂದರು. ಸಮಾಜದ ಕಟ್ಟ ಕಡೆಯವರಿಗೂ ಸಹ ನ್ಯಾಯ ಸಿಗಬೇಕು ಎನ್ನುವಂತಹ ದಿಶೆಯಲ್ಲಿ, ಸಾಮಾಜಿಕ ಮೀಸಲಾತಿಯನ್ನು ಕೊಡುವುದರ ಮೂಲಕ, ಅದರ ಬಗ್ಗೆ ಬಹು ದೊಡ್ಡ ಚರ್ಚೆಯಾಗುತ್ತದೆ.

ಮಾನ್ಯ ಸಭಾಪತಿಯವರೇ, ರಾಜಕೀಯ ಮೀಸಲಾತಿ ಏಕೆ ಬೇಕು? ಮತ್ತು ಉದ್ಯೋಗದ ಮೀಸಲಾತಿ ಏಕೆ ಬೇಕು? ಎಂದು ಅವೆಲ್ಲವನ್ನು ಮೇಳೈಸಿ, ಒಂದು ಮೀಸಲಾತಿಯ ಅವಕಾಶವನ್ನು ಮಾಡಿಕೊಡುವುದರ ಮೂಲಕ, ನೊಂದ ಜನರನ್ನು ಎಲ್ಲಾ ರೀತಿಯಲ್ಲಿ ಮೇಲಕ್ಕೆ ಎತ್ತುವಂತಹ ಒಂದು ದೊಡ್ಡ ಕೆಲಸಕ್ಕೆ ಈ ಸಂವಿಧಾನದಲ್ಲಿ ಅವಕಾಶ ಮಾಡಿಕೊಡುವಂತಹ ಶ್ರೇಷ್ಠ ಕೆಲಸವನ್ನು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಮಾಡಿದ್ದಾರೆ. ಈ ಅವಕಾಶಗಳು ಎಲ್ಲಿಯವರೆಗೆ ಹೋಗಿದೆ ಎಂದರೆ, ಚಪ್ಪಲಿ ಹೊಲೆಯುವ ಮತ್ತು ಕೊಳಗೇರಿಯ ಜನ, ಈ ದೇಶದಲ್ಲಿ ವಿಪುಲವಾದ ಅವಕಾಶಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರ ಲೋಕಸಭಾ ಕ್ಷೇತ್ರವಾದ ವಾರಣಾಸಿ ಅದು ನಮ್ಮೆಲ್ಲರಿಗೂ ಸಹ ಗೊತ್ತಿದೆ. ಆ ವಾರಣಾಸಿಯ ಒಂದು ಕೋಳಗೇರಿಯಲ್ಲಿ ಇರುವ ಒಬ್ಬ ಹುಡುಗನ ತಂದೆ ಜೈಸ್ವಾಲ್ ಎಂಬುವವರು ಪ್ರತಿನಿತ್ಯ ಸೈಕಲ್ ರಿಕ್ಷಾವನ್ನು ತೊಳೆದು ಅದನ್ನು ತುಳಿದುಕೊಂಡು ಹೋಗಿ, ರೈಲ್ವೆ ಸ್ಟೇಷನ್‌ನಿಂದ ಬರುವವರನ್ನು ದೇವಸ್ಥಾನಕ್ಕೆ ಬಿಡುವುದು, ದೇವಸ್ಥಾನದಿಂದ ಹೋಗುವವರನ್ನು ರೈಲ್ವೆ ಸ್ಟೇಷನ್ ಬಿಡುವುದು. ಬೇರೆ ಬೇರೆಯವರು ಬಂದರೆ ಅವರನ್ನು ಬಸ್ ಸ್ಟ್ಯಾಂಡ್‌ಗಳಿಗೆ ತಲುಪಿಸುವ ಕೆಲಸವನ್ನು ಮಾಡುತ್ತಾನೆ. ಸಾಮಾನ್ಯವಾಗಿ ಈ ಸೈಕಲ್‌ರಿಕ್ಷಾ ತುಳಿಯವವರಿಗೆ ಅಥವಾ ಸಣ್ಣಪುಟ್ಟ ಕೆಲಸ ಮಾಡುವವರಿಗೆ ಕೆಟ್ಟ ಅಭ್ಯಾಸಗಳಿರುತ್ತವೆ. ಆದರೆ, ಈ ಜೈಸ್ವಾಲ್‌ಗೆ ಇದ್ದದ್ದು ಒಳ್ಳೆಯ ಅಭ್ಯಾಸ, ಅದು ಏನೆಂದರೆ, ಬೆಳಿಗ್ಗೆಯಿಂದ ದುಡಿದು, ಸಂಜೆ ಮನೆಗೆ ಹೋಗುವ ಹೊತ್ತಿನಲ್ಲಿ, ಒಂದಿಷ್ಟು ಹಣ್ಣು ಮತ್ತು ಹೂವುಗಳನ್ನು ತೆಗೆದುಕೊಂಡು ಹೋಗಿ, ಹೆಂಡತಿ ಮತ್ತು ಮಕ್ಕಳಿಗೆ ಕೊಟ್ಟು, ನೀವು ಚೆನ್ನಾಗಿರಬೇಕು ಮತ್ತು ಮಕ್ಕಳು ನೀವು ಚೆನ್ನಾಗಿ ಓದಬೇಕು ಎಂದು ಪ್ರತಿನಿತ್ಯ ಹಿತವನ್ನು ಹೇಳುತ್ತಿದ್ದ. ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನಿರುತ್ತಾನೆ. ಆ ಮಕ್ಕಳು ತಮ್ಮ ಚಿಕ್ಕ ವಯಸ್ಸಿಗೆ ತಮ್ಮ ತಾಯಿಯನ್ನು ಕಳೆದುಕೊಂಡು ಬಿಡುತ್ತಾರೆ. ಒಬ್ಬ ಗೋವಿಂದ ಜೈಸ್ವಾಲ್ ಮತ್ತು ಇಬ್ಬರು ಹೆಣ್ಣು ಮಕ್ಕಳು. ಆ ಗೋವಿಂದ ಜೈಸ್ವಾಲ್ ಬಹಳ ಚೆನ್ನಾಗಿ ಓದುತ್ತಾನೆ. ಅವನು High First Class ನಲ್ಲಿ ಡಿಗ್ರಿ ಮಾಡುತ್ತಾನೆ. ಅವನ ಸ್ನೇಹಿತರು ಹೇಳುತ್ತಾರೆ, ಎಷ್ಟು ದಿವಸ ನಿಮ್ಮ ಅಪ್ಪನ ಕೈಯಲ್ಲಿ ಸೈಕಲ್ ರಿಕ್ಷಾ ತುಳಿಸುತ್ತೀಯಾ? ಎಷ್ಟು ದಿನ ನಿನ್ನ ತಂಗಿಯರಿಗೆ ಮದುವೆ ಮಾಡದೆ ಇರುತ್ತೀಯಾ? ಅದಕ್ಕೆ ನೀನು ಯಾವುದಾದರೂ ಕೆಲಸಕ್ಕೆ ಅರ್ಜಿ ಹಾಕು ಎಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತಾರೆ. ಆಗ ಅವನು ಬಹಳ ಕಡೆ ಕೆಲಸಕ್ಕೆ ಅರ್ಜಿ ಹಾಕುತ್ತಾನೆ. ಆದರೆ, ಅವನಿಗೆ ಕೆಲಸ ಸಿಗುವುದಿಲ್ಲ. ಆಗ ಅವನು ತನ್ನ ಸ್ನೇಹಿತರನ್ನು ಕರೆದು ಹೇಳುತ್ತಾನೆ. ನೋಡಿ ನೀವುಗಳೆಲ್ಲರೂ ಹೇಳಿದ್ದೀರಿ ಎಂದು ನಾನು ಕೆಲಸಕ್ಕೆ ಅರ್ಜಿ ಹಾಕಿದೆ, ನನಗೆ ಇನ್ನು ಕೆಲಸ ಸಿಕ್ಕಿಲ್ಲ. ನನಗೆ ಇಷ್ಟು merit ಇರುವುದರಿಂದ ನನಗೆ ಸಂದರ್ಶನಕ್ಕೆ ಕರೆ ಬರುತ್ತದೆ. ಆದರೆ, ನನಗೆ ಶಿಫಾರಸು ಮತ್ತು ಹಣವಿಲ್ಲ ಅದಕ್ಕೆ ಕೆಲಸ ಸಿಗುತ್ತಿಲ್ಲ. ಅದಕ್ಕೆ ನಾನು ಏನು ಮಾಡುವುದು ಎನ್ನುತ್ತಾನೆ. ಅದಕ್ಕೆ ಅವನ ಎಲ್ಲಾ ಸ್ನೇಹಿತರು ಕೂಡಿಕೊಂಡು ಅವನ ಉಪನ್ಯಾಸಕರ ಬಗ್ಗೆ ಹೋಗಿ ಅವರನ್ನು ಕೇಳುತ್ತಾರೆ. ನಾವು ಬಹಳ ಕಡೆ ಅರ್ಜಿ ಹಾಕಿಸಿದ್ದೇವೆ. ಆದರೆ, ಕೆಲಸ ಸಿಕ್ಕಿಲ್ಲ. ಎಲ್ಲಿ ಕೇಳಿದರೂ ಹಣ ಮತ್ತು ಶಿಫಾರಸ್ಸು ಕೇಳುತ್ತಾರೆ, ಅದಕ್ಕೆ ಏನು ಮಾಡುವುದು? ಈಗ ಶಿಫಾರಸ್ಸು ಮತ್ತು ಹಣವಿಲ್ಲದೆ ಯಾವುದಾದರು ಕೆಲಸ ಸಿಗುತ್ತದೆಯೆ ಎಂದು ಕೇಳುತ್ತಾರೆ. ಆಗ ಆ ಉಪನ್ಯಾಸಕರು ಜಿಲ್ಲಾಧಿಕಾರಿಯ ಹುದ್ದೆ ಸಿಗುತ್ತದೆಂದು ಹೇಳುತ್ತಾರೆ. ಹಾಗಾದರೆ, ಅದಕ್ಕೆ ಏನು ಮಾಡಬೇಕು ಎಂದು ಕೇಳುತ್ತಾರೆ. ಅದಕ್ಕೆ ಅವರು ಐ.ಎ.ಎಸ್. ಪರೀಕ್ಷೆ ಬರೆದು ಪಾಸು ಮಾಡಬೇಕು ಎನ್ನುತ್ತಾರೆ.

**(ಮುಂದು)**

(298) 11.03.2020 11.40 LL-VK
ಶ್ರೀ ಕೆ.ಟಿ. ಶ್ರೀಕಂಠೇಗೌಡ(ಮುಂದು)

ಅದಕ್ಕೆ ಶ್ರೀ ಗೋವಿಂದ್ ಜೈಸ್ವಾಲ್ ಅವರು, "ನನಗೆ ಐ.ಎ.ಎಸ್. ಪರೀಕ್ಷೆ ಬರೆಯುವ ಸಾಮರ್ಥ್ಯ ಇದೆಯೇ" ಎಂದು ಕೇಳುತ್ತಾರೆ. ಆಗ ಅವರ ಗುರುಗಳು, "ನೀನು ಕೊಳಗೇರಿ ಪ್ರದೇಶದಿಂದ ಬಂದಿದ್ದರೂ ಸಹ ನಿನಗೆ ಆ ಸಾಮರ್ಥ್ಯ ಇದೆ" ಎಂದು ಹೇಳುತ್ತಾರೆ. 2007ರಲ್ಲಿ ಆತ ದೆಹಲಿಗೆ ಹೋಗುವುದಕ್ಕೆ ನಿರ್ಧಾರ ಮಾಡುತ್ತಾನೆ. ನಂತರ ಮನೆಗೆ ಬಂದು ತನ್ನ ಅಪ್ಪನಿಗೆ, "ನಾನು ದೆಹಲಿಗೆ ಹೋಗಬೇಕೆಂದು" ಹೇಳುತ್ತಾನೆ. ಅದರಿಂದ, ಅವನ ತಂದೆಗೆ ಸಿಟ್ಟು ಬರುತ್ತದೆ. ಆತನ ತಂದೆ, "ದೆಹಲಿಗೆ ಏತಕ್ಕೆ ಹೋಗಬೇಕು" ಎಂದು ಕೇಳುತ್ತಾನೆ. ಅದಕ್ಕೆ ಆತ, "ನಾನು ಜಿಲ್ಲಾಧಿಕಾರಿಯಾಗಬೇಕೆಂದು" ಹೇಳುತ್ತಾನೆ. ಆತನ ತಂದೆ ಆ ಮಾತುಗಳಿಗೆ ನಕ್ಕು, "ನೀನು ಎಂತಹ ಜಿಲ್ಲಾಧಿಕಾರಿಯಾಗುತ್ತೀಯಾ, ಏನು ಆಟ ಆಡುತ್ತಿದ್ದೀಯಾ" ಎಂದು ಹೇಳುತ್ತಾರೆ. ಆದರೆ, ಆತ "ನಮ್ಮ ಮಾಸ್ಟರ್ ಹೇಳಿದ್ದಾರೆ, ನಾನು ಐ.ಎ.ಎಸ್. ಪರೀಕ್ಷೆ ಬರೆಯಬೇಕು, ಅದಕ್ಕಾಗಿ ದೆಹಲಿಗೆ ಹೋಗಬೇಕೆಂದು" ಹೇಳುತ್ತಾನೆ. ಆಗ ಆತನ ತಂದೆ ಕೂಡಿಟ್ಟಿರುವಂತಹ ಅಷ್ಟೋ-ಇಷ್ಟೋ ಹಣವನ್ನು ಆತನಿಗೆ ಕೊಟ್ಟು, ದೆಹಲಿಗೆ ಕಳುಹಿಸಿಕೊಡುತ್ತಾನೆ. ಶ್ರೀ ಗೋವಿಂದ್ ಜೈಸ್ವಾಲ್‌ಗೆ ಹಿಂದಿ ಭಾಷೆ ಮಾತ್ರ ಗೊತ್ತಿದ್ದು, ಇಂಗ್ಲೀಷ್ ಭಾಷೆ ಗೊತ್ತಿರಲಿಲ್ಲ. ಐ.ಎ.ಎಸ್. ಪರೀಕ್ಷೆಗೆ ಕೇವಲ ಒಂದೂವರೆ ವರ್ಷ ಬಾಕಿ ಉಳಿದಿರುತ್ತದೆ. ಅದಕ್ಕಾಗಿ, ಶ್ರೀ ಗೋವಿಂದ್ ಜೈಸ್ವಾಲ್ ಐ.ಎ.ಎಸ್. ಕೋಚಿಂಗ್‌ಗೆ ಸೇರಿಕೊಳ್ಳುತ್ತಾನೆ. ಮನೆಯಿಂದ ತಂದಿರುವಂತಹ ಹಣವೆಲ್ಲಾ ಖಾಲಿಯಾಗಿ, ಆತನ ಬಳಿ ಹಣ ಇರುವುದಿಲ್ಲ. ಮನೆ ಪಾಠ ಹೇಳುವುದಕ್ಕೆ ಶುರು ಮಾಡುತ್ತಾನೆ. ಮನೆ ಪಾಠ ಹೇಳುವುದು, ನಂತರ ಐ.ಎ.ಎಸ್. ಕೋಚಿಂಗ್‌ಗೆ ಹೋಗಿ ಪಾಠ ಕೇಳುತ್ತಾನೆ. ನಂತರ 2009ರಲ್ಲಿ ಐ.ಎ.ಎಸ್. ಪರೀಕ್ಷೆ ಬರೆದು, ಇಡೀ ದೇಶದಲ್ಲಿಯೇ 24 ನೇ ರ್‍ಯಾಂಕ್ ಪಡೆಯುತ್ತಾನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪೋಸ್ಟ್‌ಮ್ಯಾನ್ ಶ್ರೀ ಗೋವಿಂದ್ ಜೈಸ್ವಾಲ್‌ಗೆ ಬಂದಿರುವ ಪೋಸ್ಟ್ ತೆಗೆದುಕೊಂಡು ಬರುತ್ತಾನೆ. ಆದರೆ, ಅವನಿಗೆ ಕೊಳಗೇರಿಯಲ್ಲಿ ಶ್ರೀ ಗೋವಿಂದ್ ಜೈಸ್ವಾಲ್‌ನ ವಿಳಾಸ ಸಿಗುವುದಿಲ್ಲ. ಆ ಪೋಸ್ಟ್‌ಮ್ಯಾನ್ ಆತನಿಗೆ ಬಂದಂತಹ ಪೋಸ್ಟ್ ವಾಪಸ್ಸು ತೆಗೆದುಕೊಂಡು ಹೋಗುತ್ತಾನೆ. ಪೋಸ್ಟ್ ಮಾಸ್ಟರ್, "ಏತಕ್ಕೆ ಈ ಪೋಸ್ಟ್ serve ಮಾಡಲಿಲ್ಲವೆಂದು" ಕೇಳುತ್ತಾನೆ. ಅದಕ್ಕೆ ಆತ, "ವಿಳಾಸ ಸಿಕ್ಕಿರುವುದಿಲ್ಲವೆಂದು" ಉತ್ತರ ನೀಡುತ್ತಾನೆ. ಅದಕ್ಕೆ ಪೋಸ್ಟ್ ಮಾಸ್ಟರ್, "ಆತನ ಫೋಟೋ ದಿನಪತ್ರಿಕೆಯಲ್ಲಿ ಹಾಗೂ ಮಾಧ್ಯಮಗಳಲ್ಲಿ ಬಂದಿದೆ. ಐ.ಎ.ಎಸ್. ಪರೀಕ್ಷೆಯಲ್ಲಿ ಇಡೀ ದೇಶದಲ್ಲಿಯೇ ಅವನ ಫಲಿತಾಂಶ 24 ನೇ ರ್‍ಯಾಂಕ್‌ನಲ್ಲಿ ಬಂದಿದೆ. ಆತನಿಗೆ ಪೋಸ್ಟ್ serve ಮಾಡಿಲ್ಲವೆಂದರೆ ನಾನು ನೀನು ಇಬ್ಬರೂ ಕೆಲಸದಲ್ಲಿ ಉಳಿಯುತ್ತೇವೆಯೇ" ಎಂದು ಹೇಳುತ್ತಾನೆ. ನಂತರ, ಪೋಸ್ಟ್‌ಮ್ಯಾನ್ ವಾಪಸ್ಸು ಹೋಗಿ, ಅಲ್ಲಿ ಎಲ್ಲರನ್ನೂ ಗೋವಿಂದ ಜೈಸ್ವಾಲ್ ಬಗ್ಗೆ ಕೇಳುತ್ತಾನೆ. ಕೊನೆಯದಾಗಿ, ಕೊಳಗೇರಿಯ ಕಡೆಯಲ್ಲಿ ಒಂದು ಹತ್ತಿ ಕಾರ್ಖಾನೆ ಇದೆ, ಆ ಕಾರ್ಖಾನೆಯ ಕಾಂಪೌಂಡ್‌ಗೆ ಒಂದು ಶೆಡ್ ಹಾಕಿರುತ್ತಾರೆ. ಆ ಶೆಡ್‌ನೊಳಗೆ ಪೋಸ್ಟ್‌ಮ್ಯಾನ್ ಹೋಗಿ ಗೋವಿಂದ ಎಂದು ಕೂಗುತ್ತಾನೆ. ಆಗ ಗೋವಿಂದ ಜೈಸ್ವಾಲ್ ಕಣ್ಣು ಉಜ್ಜಿಕೊಂಡು ಹೊರಗೆ ಬರುತ್ತಾನೆ. ಆಗ ಪೋಸ್ಟ್‌ಮ್ಯಾನ್ ಕೈಮುಗಿದು, "ಅಯ್ಯಾ, ಐ.ಎ.ಎಸ್. ಪರೀಕ್ಷೆಯಲ್ಲಿ ಈ ದೇಶದಲ್ಲಿಯೇ 24 ನೇ ರ್‍ಯಾಂಕ್ ಪಡೆದಿದ್ದೀಯಾ, ನೀನು ಇರುವುದು ಕೊಳಗೇರಿಯ ಶೆಡ್‌ನಲ್ಲಿ, ಪಕ್ಕದಲ್ಲಿ ಹತ್ತಿ ಕಾರ್ಖಾನೆಯ ಗಲಾಟೆ ಬೇರೆ, ಐ.ಎ.ಎಸ್. ಪರೀಕ್ಷೆಗೆ ಯಾವ ರೀತಿ ಓದಿದೆ, ಐ.ಎ.ಎಸ್. ಪರೀಕ್ಷೆ ಯಾವ ರೀತಿ ಪಾಸ್ ಮಾಡಿದೆ" ಎಂದು ಕೇಳುತ್ತಾನೆ. ಆಗ ಶ್ರೀ ಗೋವಿಂದ ಜೈಸ್ವಾಲ್ ಆ ಶೆಡ್‌ನ ಎದುರಿಗೆ ಇರುವ ಬೀದಿ ದೀಪದ ಕಂಬವನ್ನು ತೋರಿಸಿ, "ಆ ಲೈಟ್ ಪೋಲ್ ಕೆಳಗೆ ಕುಳಿತುಕೊಂಡು ಓದಿದೆ" ಎಂದು ಹೇಳುತ್ತಾನೆ. ನಂತರ, ಪೋಸ್ಟ್‌ಮ್ಯಾನ್, "ಈ ಹತ್ತಿ ಕಾರ್ಖಾನೆಯ ಗಲಾಟೆಗೆ ಏನು ಮಾಡಿದೆ" ಎಂದು ಕೇಳುತ್ತಾನೆ. ಅದಕ್ಕೆ, ಆತ "ಎರಡೂ ಕಿವಿಗಳಿಗೆ ಹತ್ತಿಯನ್ನು ಹಾಕಿಕೊಂಡು ಓದಿದೆ" ಎಂದು ಹೇಳುತ್ತಾನೆ. ಇವೊತ್ತಿನ ದಿವಸ ಶ್ರೀ ಗೋವಿಂದ ಜೈಸ್ವಾಲ್ ಉತ್ತರ ಪ್ರದೇಶದ ಅತ್ಯಂತ ಜನಪ್ರಿಯ ಜಿಲ್ಲಾಧಿಕಾರಿ. ತನ್ನ ಇಬ್ಬರೂ ಸಹೋದರಿಯರಿಗೆ ಮದುವೆ ಮಾಡಿದ್ದಾನೆ. ಅಪ್ಪನನ್ನು ತನ್ನ ಜೊತೆಯಲ್ಲಿಯೇ ಇಟ್ಟುಕೊಂಡಿದ್ದಾನೆ. ಕಡುಬಡವರ ಹೆಣ್ಣುಮಗಳನ್ನೇ ಮದುವೆಯಾಗಿದ್ದಾನೆ. ಒಬ್ಬ ಕೊಳಗೇರಿ ನಿವಾಸಿ ಐ.ಎ.ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಜಿಲ್ಲಾಧಿಕಾರಿಯಾಗಿದ್ದಾನೆಂದರೆ, ಅದಕ್ಕೆ ಡಾ॥ ಬಿ.ಆರ್. ಅಂಬೇಡ್ಕರ್‌ರವರು ಕೊಟ್ಟಂತಹ ಸಂವಿಧಾನವೇ ಕಾರಣ. ಇಂತಹ ಸಾವಿರಾರು ಉದಾಹರಣೆಗಳಿವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಒಂದು ಶ್ರೇಷ್ಠವಾದ ಕೆಲಸ ಮಾಡಿದ್ದಾರೆ. ಅದೇನೆಂದರೆ; ನೆರೆಯ ರಾಜ್ಯವಾದ ತಮಿಳುನಾಡಿನ ರಾಮೇಶ್ವರ ದಂಡೆಯ ಮೇಲೆ ಕುಳಿತು ಹಕ್ಕಿಗಳು ಹಾರುವುದನ್ನು ಕಂಡು, ತಾನು ಹಕ್ಕಿಗಳ ರೀತಿಯಲ್ಲಿಯೇ ಹಾರಬೇಕೆಂದುಕೊಂಡ ಹುಡುಗ; ದಿನಪತ್ರಿಕೆಗಳನ್ನು ಹಂಚುತ್ತಿದ್ದ ಹುಡುಗ; ಹುಣಸೇಬೀಜವನ್ನು ಆರಿಸುತ್ತಿದ್ದ ಹುಡುಗ ಯಾರೆಂದರೆ, ಅವರೇ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ. ಆತ ಬಹಳ ಚೆನ್ನಾಗಿ ಓದಿದ. ಅವರಿವರಿಂದ ಕಾಡಿ–ಬೇಡಿ, ಹೆತ್ತವರ, ಅಕ್ಕ–ತಂಗಿಯವರ ಒಡವೆಗಳನ್ನು ಅಡಮಾನ ಇಟ್ಟು ವಿದ್ಯಾಭ್ಯಾಸದ ಶುಲ್ಕ

ಕಟ್ಟಿದ. ಕೊನೆಯದಾಗಿ, ಹಾರುವ ತಟ್ಟೆಯ ಶೋಧನೆಗಳಲ್ಲಿ ದೊಡ್ಡ ಪ್ರಯೋಗವನ್ನು ಬೆಂಗಳೂರಿನಲ್ಲಿ, ಅದರಲ್ಲಿಯೂ ಈ ವಿಧಾನ ಮಂಡಲದ ಮೇಲೆಯೇ ಮೊದಲು ಪ್ರಯೋಗ ಮಾಡಿ, ಈ ದೇಶದ ಹಾಗೂ ಜಗತ್ತಿನ ಶ್ರೇಷ್ಠ ವಿಜ್ಞಾನಿಯಾದ.

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೇ ಇನ್ನೂ 5 ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸುತ್ತೀರಾ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಭಾಷಣದ ಕಾಲು ಭಾಗದಷ್ಟು ಭಾಷಣವನ್ನು ಮುಗಿಸಿರುವುದಿಲ್ಲ.

**ಸಭಾಪತಿಯವರು:–** ಈಗಾಗಲೇ ತಾವು ಮಾತನಾಡಲು ಶುರು ಮಾಡಿ 30 ನಿಮಿಷ ಆಯಿತು ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತಿಳಿಸುತ್ತಿದ್ದೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಾನು ರಾಜ್ಯಶಾಸ್ತ್ರದ ವಿದ್ಯಾರ್ಥಿ... ಕೊನೆಯದಾಗಿ, ಶ್ರೀ ವಾಜಪೇಯಿಯವರು ಆ ಶ್ರೇಷ್ಠ ವಿಜ್ಞಾನಿಯನ್ನು ಕರೆತಂದು ಅವರಿಗೆ ಈ ರಾಷ್ಟ್ರದ ರಾಷ್ಟ್ರಪತಿ ಹುದ್ದೆ ವಹಿಸುತ್ತಾರೆ. ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರು ಕೊನೆಯುಸಿರೆಳೆದಾಗ ಅವರ ಬಳಿ ಇದ್ದದ್ದು, 4 ಪ್ಯಾಂಟು ಮತ್ತು 4 ಕೋಟು. ಅವರು ತನ್ನ ಇಡೀ ಬದುಕನ್ನು ಈ ನಾಡಿನ ಯುವ ಜನರಿಗಾಗಿ, ಈ ದೇಶಕ್ಕಾಗಿ ಸಮರ್ಪಣೆ ಮಾಡಿಕೊಂಡ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂರವರು ಈ ದೇಶದ ಶ್ರೇಷ್ಠ ಕೊಡುಗೆ. ಅಂತಹದ್ದು ಸಾಧ್ಯ ಎನ್ನುವುದನ್ನು ಅವರು ನಮಗೆ ಇವೊತ್ತಿನ ದಿವಸ ತೋರಿಸಿಕೊಟ್ಟಿದ್ದಾರೆ. ಹೌದು, ಇವೊತ್ತಿನ ದಿವಸ ಸ್ವಾತಂತ್ರ್ಯ ಬಂದು 70 ವರ್ಷಗಳು ಸಾಗಿ ಹೋಗಿವೆ. ನಾವು ಬಹಳ ದೂರ ಸಾಗಿ ಬಂದಿದ್ದೇವೆ. ಆದರೆ, ನಾವು ಒಮ್ಮೆ ಹಿಂದೆ ತಿರುಗಿ ನಮ್ಮ ಸಾಧನೆಯ ಹಾದಿಯನ್ನು ನೋಡಬೇಕಲ್ಲವೇ? ಏನೆಲ್ಲಾ ಸಾಧನೆಗಳನ್ನು ಮಾಡಿದ್ದೇವೆ ಎನ್ನುವುದನ್ನು ನಾವು ಮೆಲುಕು ಹಾಕಬೇಕಲ್ಲವೇ; ಒಂದು ಪಕ್ಷಿ ನೋಟ "bird's-eye view" ಆಗಬೇಕಲ್ಲವೇ?

ಚೀನಾ ದೇಶ ನಮ್ಮ ದೇಶ ಸ್ವತಂತ್ರಗೊಂಡ 4 ವರ್ಷಗಳ ನಂತರ ಸ್ವಾತಂತ್ರ್ಯ ಪಡೆದಿರುತ್ತದೆ. ನಾವು 1947 ರಲ್ಲಿ ಸ್ವಾತಂತ್ರ್ಯಗೊಂಡರೆ, ಅವರು 1961 ರಲ್ಲಿ ಸ್ವಾತಂತ್ರ್ಯ ಪಡೆದಿರುತ್ತಾರೆ. ಇವೊತ್ತಿನ ದಿವಸ ಆ ದೇಶದ ಸಾಧನೆ ಎಲ್ಲಿದೆ? ಅವರು ಜಗತ್ತಿನ ರಾಷ್ಟ್ರಗಳಲ್ಲಿ ಯಾವ ಅಗ್ರಪಂಕ್ತಿಯಲ್ಲಿದ್ದಾರೆ? ನಾವು ಚಿಕ್ಕವರಿದ್ದಾಗ ಅಂದರೆ, ಸುಮಾರು 60 ರ ದಶಕದಲ್ಲಿ ಚೀನಾ ದೇಶದವರಿಗೆ ಊಟ ಮಾಡುವುದಕ್ಕೆ ಊಟ ಇಲ್ಲವಂತೆ, ಅವರು ಕಪ್ಪೆ, ಹಲ್ಲಿ ಮತ್ತು ಹಾವುಗಳನ್ನು ತಿನ್ನುತ್ತಾರೆಂದು ಹೇಳುತ್ತಿದ್ದರು. **(ಗೊಂದಲ)** ಆದರೆ, ಇವೊತ್ತಿನ ದಿವಸ ಚೀನಾ ಜಗತ್ತಿನ ಬಲಿಷ್ಠ ರಾಷ್ಟ್ರಗಳಲ್ಲಿ ಒಂದಾದ ಅಮೇರಿಕಾವನ್ನು ಹಿಂದಿಕ್ಕಿ ಮುಂದೆ ಹೋಗಿದೆ. ಅದು ಏಷ್ಯಾ ಖಂಡದ ನೆರೆಯ ಒಂದು ರಾಷ್ಟ್ರವಾಗಿದ್ದು, ಕೃಷಿ ಪ್ರಧಾನ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಷ್ಟ್ರ; ಕೃಷಿ ಅವಲಂಬಿತ ರಾಷ್ಟ್ರ, ಅದರ ಸಾಧನೆ ಇವೊತ್ತಿನ ದಿವಸ ಯಾವ ಮಟ್ಟಕ್ಕೆ ಹೋಗಿದೆ? ನಮ್ಮ ದೇಶ ಏತಕ್ಕೆ ಆ ಸಾಧನೆ ಮಾಡುವುದಕ್ಕೆ ಆಗಲಿಲ್ಲ, ಎಲ್ಲಿ ಲೋಪವಾಗಿದೆ? ಏತಕ್ಕೆ ಈ ವ್ಯತ್ಯಯಗಳು? ನಿರಂತರವಾದ ಆಹಾರದ ಹಾಹಾಕಾರದಲ್ಲಿದ್ದಂತಹ ನೆರೆಯ ಚೀನಾ ದೇಶ ಇವೊತ್ತಿನ ದಿವಸ ಜಗತ್ತಿನ ಶ್ರೇಷ್ಠವಾದ ಸಾಧನೆ ಮಾಡಿದೆಯೆಂದರೆ, Why not India? ಈ ಬಗ್ಗೆ ನಾನು ಸಾಕಷ್ಟು ಮಾಹಿತಿಗಳನ್ನು ಕಲೆ ಹಾಕಿದ್ದೇನೆ. ಜಗತ್ತಿನ ಅಗ್ರಪಂಕ್ತಿಯಲ್ಲಿರುವ ರಾಷ್ಟ್ರಗಳಲ್ಲಿ ಒಂದಾದ ಭಾರತದ ಪರಿಸ್ಥಿತಿಯನ್ನು ನಾವು ಲೆಕ್ಕ ಹಾಕಬೇಕಾಗಿದೆ. ನಮ್ಮ ದೇಶದಲ್ಲಿ ಎಷ್ಟು ಬಡತನ ಇದೆ ಅಂದರೆ, ಕರ್ನಾಟಕದಲ್ಲಿ ಶೇಕಡ 20.91 ಅಂದರೆ ಸರಿಸುಮಾರು ಶೇಕಡ 21 ರಷ್ಟು ಮತ್ತು ಭಾರತ ದೇಶದಲ್ಲಿ ಶೇಕಡ 21.92 ಅಂದರೆ ಸರಿಸುಮಾರು ಶೇಕಡ 22 ರಷ್ಟು; ಅಂದರೆ, ಈ ದೇಶದಲ್ಲಿ ಸುಮಾರು 29 ರಿಂದ 30 ಕೋಟಿ ಜನ ಕಡುಬಡವರಿದ್ದಾರೆ. ಈ ದೇಶದಲ್ಲಿ ಆಹಾರದ ಹಾಹಾಕಾರದಿಂದ ಪರದಾಡುತ್ತಿದ್ದಾರೆ. ಮೈಸೂರಿನಲ್ಲಿ 'ಅಕ್ಷಯ ಫೌಂಡೇಷನ್' ಎಂಬ ಒಂದು ಸಂಸ್ಥೆ ಇದೆ. ಆ ಸಂಸ್ಥೆಯ ನಿರ್ಮಾಪಕರ ಹೆಂಡತಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು, ನಂತರ ಕೆಲಸ ಬಿಟ್ಟು ಬಂದು ಆ ಸಂಸ್ಥೆ ನಡೆಸುತ್ತಿದ್ದಾರೆ. ಆ ಸಂಸ್ಥೆಯ ಕೆಲಸ ಏನೆಂದರೆ, ಮದುವೆ, ನಾಮಕರಣ ಕಾರ್ಯಕ್ರಮ ಅಥವಾ ಸಭೆ-ಸಮಾರಂಭಗಳಲ್ಲಿ ಉಳಿಯುವಂತಹ ಆಹಾರವನ್ನು ತಮ್ಮ ವ್ಯಾನ್‌ನಲ್ಲಿ ತೆಗೆದುಕೊಂಡು ಹೋಗಿ ಆಹಾರದ ಹಾಹಾಕಾರದಿಂದ ಬಳಲುತ್ತಿರುವ ಕೊಳಗೇರಿಯ ಜನತೆಗೆ ಸಂಜೆ ವೇಳೆ ಅದನ್ನು ತಲುಪಿಸುವಂತಹ ಕೆಲಸ ಮಾಡುತ್ತಾರೆ. ಆ ವ್ಯಾನ್ ಬರುತ್ತದೆಯೆಂದು ಸಾವಿರಾರು ಜನ ಈಗಲೂ ಕಾಯುತ್ತಿದ್ದಾರೆ. ಅಂತಹ ಅಕ್ಷಯ ಫೌಂಡೇಷನ್‌ಗೆ ಒಂದು ವಾಹನ ಕೊಡಬೇಕೆಂಬ ಬೇಡಿಕೆಯ ಅರ್ಜಿಯನ್ನು ಜಿಲ್ಲಾಧಿಕಾರಿಗಳು reject ಮಾಡುತ್ತಾರೆ. 'ಖಾಸಗಿ ಸಂಘ-ಸಂಸ್ಥೆಗಳಿಗೆ ವಾಹನ ಕೊಡುವುದಕ್ಕೆ ಬರುವುದಿಲ್ಲ, ಯಾವುದಾದರೂ ಇಲಾಖೆಗಳಿಗೆ ವಾಹನ ಕೊಡುವ ಬಗ್ಗೆ ನೋಡೋಣ' ಎಂದು ಉತ್ತರ ನೀಡುತ್ತಾರೆ. ಹಸಿದವನಿಗೆ ಅನ್ನ ಕೊಡುವ ಕೆಲಸ ಮಾಡುವ; ಅದರಲ್ಲೂ ಮುಖ್ಯವಾಗಿ ಸಭೆ-ಸಮಾರಂಭಗಳಲ್ಲಿ ಭಾಗವಹಿಸಿದವರೆಲ್ಲರ ಊಟೋಪಚಾರದ ನಂತರ ಉಳಿದ ಆಹಾರವನ್ನು ನಿರ್ದಾಕ್ಷಿಣ್ಯವಾಗಿ ಕಸದ ರಾಶಿಗೆ ಸುರಿಯುವಂತಹ ಅನ್ನವನ್ನು ತಂದು ಅಗತ್ಯವಿರುವವರೆಗೆ ಹಂಚುವ ಶ್ರೇಷ್ಠ ಕೆಲಸ ಮಾಡುವಂತಹ ಒಂದು ಸಂಸ್ಥೆಗೆ ಈ ವ್ಯವಸ್ಥೆಯೊಳಗೆ ಒಂದು ವಾಹನ ಕೊಡುವುದಕ್ಕೆ ಅನುಮತಿ ಇರುವುದಿಲ್ಲ.

ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ 1 ಕೋಟಿ 20 ಲಕ್ಷಕ್ಕೂ ಹೆಚ್ಚಿನ ಕಡು ಬಡವರಿದ್ದಾರೆ, ಈ ದೇಶದಲ್ಲಿ 29 ರಿಂದ 30 ಕೋಟಿ ಬಡವರಿದ್ದಾರೆ. ಏತಕ್ಕೆ ಇವರನ್ನು ನಮ್ಮೊಟ್ಟಿಗೆ ಸಮಾಜದ ಮುಖ್ಯವಾಹಿನಿಗೆ ತರುವುದಕ್ಕೆ ಸಾಧ್ಯವಾಗಲಿಲ್ಲ; ಏತಕ್ಕೆ ಅವರಿಗೆ ಅನ್ನ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಪೂರಕವೆಂಬಂತೆ ನಿರುದ್ಯೋಗ ಸಮಸ್ಯೆ ಈ ದೇಶದಲ್ಲಿ ಎಲ್ಲಿಗೆ ಹೋಗಿ ನಿಂತಿದೆ ಎನ್ನುವುದರ ಮಾಹಿತಿಯನ್ನು ಸಂಪೂರ್ಣವಾಗಿ ಸಂಗ್ರಹ ಮಾಡಿದ್ದೇನೆ. ಇವೊತ್ತಿನ ದಿವಸ ಡಿಪ್ಲೋಮಾ ಪದವೀಧರರಲ್ಲಿ ಶೇಕಡ 37ರಷ್ಟು ನಿರುದ್ಯೋಗಿಗಳು; ಪದವೀಧರರಲ್ಲಿ ಶೇಕಡ 36 ರಷ್ಟು ನಿರುದ್ಯೋಗಿಗಳು, ಸ್ನಾತಕೋತ್ತರ ಪದವೀಧರರಲ್ಲಿ ಶೇಕಡ 36 ರಷ್ಟು ನಿರುದ್ಯೋಗಿಗಳಿದ್ದಾರೆ. ಬಹುಶಃ ನಮ್ಮ ದೇಶದಲ್ಲಿ ಲಕ್ಷಾಂತರ, ಕೋಟ್ಯಂತರ ಜನಕ್ಕೆ ಉದ್ಯೋಗವೇ ಇಲ್ಲ. ನಮ್ಮ ಭಾರತದ ಸಂವಿಧಾನದ 39, 40 ಮತ್ತು 42 right-

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

to-work ಎಂದು ಹೇಳುತ್ತದೆ. ಅದರಂತೆ, ನಾವು ನಮ್ಮ ದೇಶದ ಜನರಿಗೆ ಉದ್ಯೋಗದ ಹಕ್ಕನ್ನು ಎಲ್ಲಿ ಕೊಟ್ಟಿದ್ದೇವೆ? ಸ್ವಾಮಿ ವಿವೇಕಾನಂದರು, "ನನಗೆ 100 ಜನ ಯುವಕರನ್ನು ಕೊಡಿ, ನಾನು ಈ ದೇಶವನ್ನು ಬಲಿಷ್ಠವಾಗಿ, ಸಮರ್ಥವಾಗಿ ಕಟ್ಟುತ್ತೇನೆ" ಎಂದು ಹೇಳುತ್ತಾರೆ. ಈ ದೇಶದ ಅಥವಾ ನಾಡಿನ ಯುವಕರ ಕೈಗಳಿಗೆ ನಾವು ಎಲ್ಲಿ ಕೆಲಸ ಕೊಟ್ಟಿದ್ದೇವೆ? ನಾನು ಕೇವಲ ಒಂದು ಪಕ್ಷದ ಸರ್ಕಾರದ ಮೇಲೆ ಆರೋಪ ಮಾಡುವುದಿಲ್ಲ. ಈ ದೇಶವನ್ನು 70 ವರ್ಷಗಳ ಕಾಲ ಆಳಿದಂತಹ ನಾಗರಿಕ ಸರ್ಕಾರಗಳ ಮೇಲೆ ನಾನು ಈ ಆರೋಪವನ್ನು ಮಾಡುತ್ತೇನೆ. ಇವೊತ್ತಿನ ದಿವಸ ಸುಮಾರು 40 ರಿಂದ 50 ಕೋಟಿ ಯುವಕರು ಈ ದೇಶದಲ್ಲಿದ್ದಾರೆ, ಆ ದುಡಿಯುವ ಕೈಗಳಿಗೆ ತಾವು ಎಲ್ಲಿ ಕೆಲಸ ಕೊಟ್ಟಿದ್ದೀರಿ? ನಾನು ಅವರಿಗೆ ಸರ್ಕಾರಿ ಕೆಲಸವೇ ಕೊಡಬೇಕೆಂದು ಹೇಳುತ್ತಿಲ್ಲ. ದುಡಿಯುವ ಕೈಗಳಿಗೆ ಕೆಲಸ ಕೊಡುವಂತಹ ಕೆಲಸ ನಾಗರಿಕ ಸರ್ಕಾರದಿಂದ ಆಗಲಿಲ್ಲವೆಂದರೆ, ಅದಕ್ಕಿಂತಲೂ ದೊಡ್ಡ ಅಪಮಾನದ ಕೆಲಸ ಎಲ್ಲಿದೆ? ಈ ರೀತಿಯಾದರೆ, ದೇಶವನ್ನು ಇವರು ಹೇಗೆ ಮುಂದೆ ತರುತ್ತಾರೆ; ಬಡತನ ಹೇಗೆ ನಿರ್ಮೂಲನೆ ಆಗುತ್ತದೆ; ಬಡವರ ಹಸಿವನ್ನು ಹೇಗೆ ನೀಗಿಸುತ್ತಾರೆ: ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಯಾವಾಗ ಕಂಡುಕೊಳ್ಳುತ್ತಾರೆ; ಅದಕ್ಕೆ ಇನ್ನೂ ಎಷ್ಟು ವರ್ಷಗಳು ಅಥವಾ ದಶಕಗಳು ಬೇಕು?

ನಮ್ಮ ಚುನಾವಣಾ ವ್ಯವಸ್ಥೆ ಮತ್ತು ರಾಜಕೀಯ ಪಕ್ಷಗಳ ಬಗ್ಗೆ ನಾನು ಮಾತನಾಡಬೇಕಾಗಿದೆ. ನಮ್ಮ ಸಂವಿಧಾನದಲ್ಲಿ 'ರಾಜಕೀಯ ಪಕ್ಷ' ಮಾಡಿಕೊಳ್ಳಿ ಎಂದು ಯಾವ ಅಧ್ಯಾಯ ಅಥವಾ ಯಾವ ವಿಧಿ ಕೂಡ ಹೇಳುವುದಿಲ್ಲ. ಆದರೂ ಮಾಡಿಕೊಳ್ಳುತ್ತಾರೆ. ಯಾವ ವಿಧಿಯಲ್ಲಿ ಎಂದರೆ, ರಾಜನೀತಿ ನಿರ್ದೇಶಕ ತತ್ವಗಳಲ್ಲಿ ಅಧ್ಯಾಯ 5 ರಲ್ಲಿ ಒಂದು provision ಇದೆ. ಅದರಲ್ಲಿ ಸಂಘ-ಸಂಸ್ಥೆಗಳನ್ನು ಮಾಡಿಕೊಳ್ಳಬಹುದೆಂದು ಇದೆ. ಆ ಸಂಘ-ಸಂಸ್ಥೆಗಳನ್ನು ಕಟ್ಟಿಕೊಳ್ಳುವ ಹಕ್ಕಿನಲ್ಲಿ ರಾಜಕೀಯ ಪಕ್ಷಗಳು ನೊಂದಾವಣೆ ಮಾಡಿಕೊಳ್ಳುವ ವ್ಯವಸ್ಥೆ ಇದೆಯೇ ಪರಂತು, ಸಂವಿಧಾನದಲ್ಲಿ ರಾಜಕೀಯ ಪಕ್ಷಗಳಿಗೆ ಮಾನ್ಯತೆ ಕೊಡುವಂತಹ ವ್ಯವಸ್ಥೆ ಅಥವಾ ಅವಕಾಶಗಳನ್ನು ಡಾ॥ ಬಿ.ಆರ್. ಅಂಬೇಡ್ಕರ್‌ರವರು ಮಾಡಲೇ ಇಲ್ಲ. ಇಲ್ಲಿಯವರೆಗೆ, ಈ ದೇಶದಲ್ಲಿನ ನೊಂದಾಯಿತ ರಾಜಕೀಯ ಪಕ್ಷಗಳ ಸಂಖ್ಯೆ 2599. ಹೌದು, ನಮ್ಮದು ಬಹು ಪಕ್ಷೀಯ ಪದ್ಧತಿ. ಇವೊತ್ತಿನ ದಿವಸ ಅಮೇರಿಕಾ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ದ್ವಿಪಕ್ಷ ಪದ್ಧತಿ ಇದೆ. ಬಹುಶಃ ನಮ್ಮ ದೇಶದಲ್ಲಿ ಪ್ರತಿದಿನ ರಾಜಕೀಯ ಪಕ್ಷಗಳು ಹುಟ್ಟುತ್ತವೆ ಮತ್ತು ಪ್ರತಿದಿನ ಸಾಯುತ್ತವೆ. ನಮ್ಮ ದೇಶದಲ್ಲಿ ಅಧಿಕೃತವಾಗಿ 8 ರಾಷ್ಟ್ರೀಯ ಪಕ್ಷಗಳು ಮತ್ತು 53 ಪ್ರಾದೇಶಿಕ ಪಕ್ಷಗಳು ಇವೆ. ಅದನ್ನು ಹೊರತುಪಡಿಸಿ, 2538 ನೊಂದಣಿಯಾದ ರಾಜಕೀಯ ಪಕ್ಷಗಳಿವೆ. ಆದರೆ, ಚುನಾವಣಾ ಆಯೋಗದ ಮಾನ್ಯತೆಯನ್ನು ಪಡೆದಿರುವುದಿಲ್ಲ. ಇದರಿಂದಾಗಿ, ಬಲಯುತವಾದಂತಹ ಒಂದು ಪ್ರಜಾಪ್ರಭುತ್ವ ಸರ್ಕಾರವನ್ನು ಕಟ್ಟುವುದಕ್ಕೆ ಸಾಧ್ಯವಿದೆಯೇ? ಈ ಕುರಿತು ಒಂದು ಗಂಭೀರವಾದ ಆಲೋಚನೆ ನಮ್ಮ ದೇಶದಲ್ಲಿ ಆಗಬೇಕಲ್ಲವೇ? 1, 2 ಅಥವಾ ಕನಿಷ್ಠ ರಾಷ್ಟ್ರೀಯ ತ್ರಿಪಕ್ಷೀಯ ವ್ಯವಸ್ಥೆಗೆ ತಾವು ನಾಂದಿ ಹಾಡಬೇಕು. ರಾಷ್ಟ್ರ ಮಟ್ಟದಲ್ಲಿ ಕನಿಷ್ಠ 3 ಪಕ್ಷಗಳು ಸಾಕು. ಪ್ರಾದೇಶಿಕ ಪಕ್ಷಗಳೇ 3 ಪಕ್ಷಗಳಾಗುವ ಅವಕಾಶ ಕೊಡಬೇಕು. ನಮ್ಮ ದೇಶದಲ್ಲಿ ಪ್ರಾದೇಶಿಕತೆ ಇದೆ, ವಿವಿಧ ಭಾಷೆ, ಸಂಸ್ಕೃತಿ, ಸಂಸ್ಕಾರದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಜನರಿದ್ದಾರೆ. ಅವರ ಬದುಕು ಬೇರೆ ಇದೆ. 3 ಪ್ರಾದೇಶಿಕ ಪಕ್ಷಗಳಿಗೆ 3 ರಾಷ್ಟ್ರೀಯ ಪಕ್ಷಗಳಾಗುವ ಅವಕಾಶ ಮಾಡಿಕೊಡುವಂತಹ ಸಂವಿಧಾನದ ತಿದ್ದುಪಡಿಯನ್ನು ಅಗತ್ಯವಾಗಿ ತರಬೇಕಾದಂತಹ ಅವಶ್ಯಕತೆ ಇದೆ. ಆ ಬಗ್ಗೆ ನಾವು ಈ ಸದನದಲ್ಲಿ ನಿರ್ಣಯ ಮಾಡಬೇಕಾಗಿದೆ. ಬಹುಪಕ್ಷ ಪದ್ಧತಿಗೆ ದೊಡ್ಡ ತಿಲಾಂಜಲಿಯನ್ನು ಇಡಬೇಕಾಗಿದೆ.

(ಮುಂದು)

(299)11.03.2020/11.50/ವೈಎಲ್-ವಿಕೆ

**ಡಾ॥ ವೈ.ಎ.ನಾರಾಯಣಸ್ವಾಮಿ:-** ಬಿಜೆಪಿ, ಕಾಂಗ್ರೆಸ್ ಎರಡೇ ಪಕ್ಷಗಳು ಸಾಕೇ, ಜೆಡಿಎಸ್ ಪಕ್ಷ ಬೇಡವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಅಲ್ಲ, ತ್ರಿಪಕ್ಷ ಪದ್ಧತಿಗೆ ತ್ರಿಲಾಂಜಲಿಯನ್ನು ಇಡಬೇಕಾಗಿದೆ. Leftist and rightist ಇದ್ದಾರೆ, ಈ ನಡುವೆ ಎಲ್ಲ ಪಕ್ಷಗಳ ಜೊತೆ ನಮ್ಮ ಪ್ರಾದೇಶಿಕ ಪಕ್ಷವು ಇದೆ. ಹಾಗಾಗಿ ಬಹುಶಃ ತ್ರಿಪಕ್ಷ ಪದ್ಧತಿ ಈ ದೇಶಕ್ಕೆ,...

**ಶ್ರೀಹೆಚ್.ಎಂ.ರೇವಣ್ಣ(ವಿಧಾನಸಭಾಕ್ಷೇತ್ರ):-** ಮಾನ್ಯ ವೈ.ಎ.ನಾರಾಯಣಸ್ವಾಮಿ ಯವರೇ, ತಮ್ಮ ಬಾಯಿಯಲ್ಲಿ ಆ ಮಾತು ಬಂದಿರುವುದು ಬಹಳ ಅವಶ್ಯಕತೆ ಇದೆ. ಏಕೆಂದರೆ, ರಾಷ್ಟ್ರೀಯ ಪಕ್ಷಗಳ ಜೊತೆಯಲ್ಲಿ ಮೂರನೇ ಪಕ್ಷವು ಇರಬೇಕೆನ್ನುವ ದೃಷ್ಟಿಯಿಂದ ಯಾವ ಪಕ್ಷದ ಕಡೆ ಹೋಗಬೇಕೆಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ನನಗೆ ಅದೊಂದು ಚಿಂತನೆಯಾಗಿದೆ. ಏಕೆಂದರೆ, ಒಳ್ಳೆಯ ಸಲಹೆಯನ್ನು ನೀಡಿದ್ದಾರೆ ಸರಿ. ರಾಷ್ಟ್ರಾದ್ಯಂತ ಮೂರೆ ಪಕ್ಷ ಎಂದು ಹೇಳಿರುವುದರಿಂದ ಅದರ ಪರಿಸ್ಥಿತಿ ಏನೆಂಬುದನ್ನು ಸ್ವಲ್ಪ ಚಿಂತನೆ ಮಾಡಬೇಕಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗ ರಾಜಕೀಯ ಪಕ್ಷಗಳ ಗೊಂದಲವನ್ನು ನಿವಾರಣೆ ಮಾಡುವಂಥ ದಿಸೆಯಲ್ಲಿ ನಾವು ದೊಡ್ಡ ಹೆಜ್ಜೆಯನ್ನಿಡಬೇಕಾಗಿದೆ. 'ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಯ ಬಹುದೊಡ್ಡ ವ್ಯಕ್ತಿತ್ವವನ್ನು ಕೊಡುವಂಥ ಭಾಗ ಮತ್ತು ಅಸ್ತ್ರ' ಎನ್ನುವ ಮಾತನ್ನು ಹೇಳುತ್ತೇವೆ. ಶಿಕ್ಷಣ ಅಷ್ಟೇ ವ್ಯಕ್ತಿಗೆ ವ್ಯಕ್ತಿತ್ವ, ಬದುಕು ಮತ್ತು ಭವಿಷ್ಯವನ್ನು ನೀಡುವುದು. ಆದರೆ, ನಾವು ಶಿಕ್ಷಣವನ್ನು ವ್ಯವಸ್ಥಿತವಾದ ರೂಪದಲ್ಲಿ ನೀಡುವುದರಲ್ಲಿ ಯಶಸ್ಸನ್ನು ಕಂಡಿದ್ದೇವೆಯೇ? 6ನೇ ತರಗತಿಯಿಂದ 14ನೇ ತರಗತಿಯವರೆಗೂ ಕಡ್ಡಾಯ ಶಿಕ್ಷಣ ಎಂದು ಮಾಡಲಾಗಿದೆ. ಶಿಕ್ಷಣ ಒದಗಿಸುವ ವಿಚಾರದಲ್ಲಿ ಎಲ್ಲಿ ಹೋಗಿ ನಿಂತಿದ್ದೇವೆ, ಎಷ್ಟು ವೈವಿಧ್ಯಮಯ ಶಿಕ್ಷಣ ವ್ಯವಸ್ಥೆ ಇದೆ, ಈ ದೇಶದ ಎಲ್ಲಾ ಜನರಿಗೂ ಸಮಾನವಾದಂಥ ಗುಣಮಟ್ಟ ಶಿಕ್ಷಣವನ್ನು ನೀಡುವಲ್ಲಿ ಯಶಸ್ಸನ್ನು ಕಾಣುವುದಕ್ಕೆ ಏತಕ್ಕೆ ಸಾಧ್ಯವಾಗಿಲ್ಲ. ಇವತ್ತಿನ ದಿವಸ ಹಲವಾರು ಮಾದರಿಯ ಶಿಕ್ಷಣಗಳಾದ CBSE, ICSE, *Jawahar Navodaya* Vidyalaya, *Morarji* Desai *Residential Schools* ಸರ್ಕಾರಿ ಶಾಲೆ, ಖಾಸಗಿ ಶಾಲೆಗಳೆಂದು ಬೇರೆ-

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೇರೆ ರೀತಿಯಲ್ಲಿ ಶಾಲೆಗಳನ್ನು ತೆರೆಯಲಾಗಿದೆ. ಯಾವ ಬೋರ್ಡ್ ನೋಡಿದರೂ International School, Oxford School ಎಂದು ನಮೂದಿಸಲಾಗಿರುತ್ತದೆ. ಹಣ ಉಳ್ಳವರು ಸುಮಾರು 2 ರಿಂದ 3 ಲಕ್ಷದವರೆಗೂ ಶುಲ್ಕವನ್ನು ಭರಿಸುತ್ತಾರೆ, ಹಣ ಉಳ್ಳದವರು ಸಣ್ಣ ಸರ್ಕಾರಿ ಶಾಲೆಗೆ ಹೋಗುತ್ತಾರೆ. ಹಾಗಾಗಿ ಈ ಶಿಕ್ಷಣ ನೀಡುವುದರಲ್ಲಿ ಏಕರೂಪತೆ ಏಕೆ ಇಲ್ಲ? ಉನ್ನತ ಶಿಕ್ಷಣದ ಬಗ್ಗೆ ಮಾತನಾಡುವುದು ಬೇಡ. ಏಕೆಂದರೆ, ಆ ವ್ಯಕ್ತಿಯ ಜ್ಞಾನ, ಶಕ್ತಿ, ಅಭಿರುಚಿ, ಪ್ರತಿಭೆಗೆ ಪೂರಕವಾಗಿ ಉನ್ನತ ಶಿಕ್ಷಣವನ್ನು ಪಡೆದುಕೊಳ್ಳುತ್ತಾರೆ. ಆದರೆ, ಈ ದೇಶದ ಹಾಗೂ ರಾಜ್ಯದ ಎಲ್ಲಾ ಜನರಿಗೂ ಕನಿಷ್ಠ ಪ್ರಾಥಮಿಕ ಶಿಕ್ಷಣವಾದ ನರ್ಸರಿಯಿಂದ ಎಸ್.ಎಸ್.ಎಲ್.ಸಿ. ವರೆಗೂ ಏಕರೂಪ ಶಿಕ್ಷಣ ನೀಡುವಂಥ ವ್ಯವಸ್ಥೆಗೆ ಎಲ್ಲರೂ ಏತಕ್ಕೆ ಇಲ್ಲಿಯವರೆಗೂ ನಾಂದಿ ಹಾಡಲಿಲ್ಲ. ಹಣ ಉಳ್ಳವರು ಕಾನ್ವೆಂಟ್‌ಗೆ ಹೋಗುತ್ತಾರೆ, ಹಣ ಉಳ್ಳದವರು ಸರ್ಕಾರಿ ಶಾಲೆಗೆ ಹೋಗುತ್ತಾರೆ. ಹಣ ಉಳ್ಳವರು kindergarten ಸೇರಿಕೊಳ್ಳುತ್ತಾರೆ, ಹಣ ಉಳ್ಳದವರು ಅಂಗನವಾಡಿಗೆ ಕಳುಹಿಸುತ್ತಾರೆ. ಇದು ಸಮಾಜದ ವೈಪರಿತ್ಯವೇ, ಪ್ರಜಾಪ್ರಭುತ್ವದ ವಿಳಂಬವೇ? ಈ ದೇಶದ ಪ್ರತಿಯೊಂದು ಮಗುವಿಗೆ ಸಮಾನವಾದ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದರಲ್ಲಿ ಸಂಪೂರ್ಣವಾಗಿ ಎಡವಿದ್ದೇವೆ. ನಾವು ಹಣ ಉಳ್ಳವನಿಗೆ ಒಳ್ಳೆಯ ಶಿಕ್ಷಣ, ಹಣ ಉಳ್ಳದವನಿಗೆ ಕನಿಷ್ಠ ಶಿಕ್ಷಣ ಎನ್ನುವಂಥ ವ್ಯವಸ್ಥೆಯನ್ನು ತೊಡೆದು ಹಾಕುವುದರಲ್ಲಿಯು ಯಶಸ್ಸನ್ನು ಕಾಣುವುದಕ್ಕೆ ಸಾಧ್ಯವಾಗಲಿಲ್ಲ.

ನಿನ್ನೆ ದಿವಸ ಸಚಿವರಾದ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ನ್ಯಾಯಾಂಗದ ವಿಚಾರವಾಗಿ ಮಾತನಾಡಿದ್ದರು. ಬೃಹತ್ ಭಾರತದ ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ವ್ಯವಸ್ಥೆ ಎಲ್ಲಿಯೋ ಹೋಗಿ ನಿಂತಿದೆ. Man-power, Muscle-power, Money-power ಎಂಬುದೆಲ್ಲಾ ಆರಂಭದ ದಿನಗಳಲ್ಲಿ ಇತ್ತು. ಹಿಂದೆ ಯಾರು ಸಮಾಜಕ್ಕೆ ಒಳ್ಳೆಯ ಸೇವೆ ಮತ್ತು ಹೋರಾಟ ಮಾಡುತ್ತಾರೆಯೋ, ನ್ಯಾಯವನ್ನು ಒದಗಿಸುತ್ತಾರೆಯೋ ಆತನನ್ನು ಜಾತಿ, ಧರ್ಮ, ಪಕ್ಷ ಎಂಬುದೆಲ್ಲಾವನ್ನು ಹೊರತುಪಡಿಸಿ ಆಯ್ಕೆ ಮಾಡುತ್ತಿದ್ದರು. ಆದರೆ, ಇವತ್ತು ಹಣ ಇರುವವರಿಗೆ, ಜಾತಿ ಬಲ ಇರುವವರಿಗೆ ಮಣೆ ಹಾಕುವಂಥ ಸಂದರ್ಭ ಚುನಾವಣೆಯಲ್ಲಿ ಆಗುತ್ತಿದೆ. ಎಲ್ಲಿಯವರೆಗೆ ಈ ಭ್ರಷ್ಟಾಚಾರ ಜಾತಿಯತೆ ಹೋಗಿದೆ ಎಂದರೆ, ಪ್ರಜಾಪ್ರಭುತ್ವದ ತಳಮಟ್ಟದವರೆಗೂ ಹೋಗಿದೆ. ಮೊನ್ನೆ ಕೆ.ಆರ್.ಪೇಟೆಯಲ್ಲಿ ಚುನಾವಣೆ ನಡೆಯಿತ್ತು. ಹೇಗೆ ಗೆದ್ದಿದ್ದಾರೆ ಎಂದು ನಾನು ಹೇಳುತ್ತೇನೆ. ಒಂದು ಮನೆಯಲ್ಲಿ 10 ಮತಗಳಿದ್ದು, ರೂ.10,000–00 ಗಳನ್ನು ನೀಡಲಾಗಿತ್ತು. 5 ಮತಗಳನ್ನು ಎತ್ತು ಇಟ್ಟರು. ಯಾರೋ ರೂ.500.00 ಗಳಿಗೆ,...

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅನ್ಯಾಯದ ಆರೋಪವನ್ನು ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅವರು ನನ್ನ ಮಾತನ್ನು ಪೂರ್ತಿಯಾಗಿ ಕೇಳಿಸಿಕೊಳ್ಳಲಿ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಾವು ಮಂಡ್ಯದಲ್ಲಿ ಗೆದ್ದಿರುವುದರಿಂದ ಅವರಿಗೆ ಸಹನೆ ಇಲ್ಲ ಒಪ್ಪಿಕೊಳ್ಳುತ್ತೇವೆ. ಆದರೆ, ಮಾನ್ಯ ಸದಸ್ಯರು ಅನ್ಯಾಯದ ಆರೋಪವನ್ನು ಮಾಡುತ್ತಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೆಸರನ್ನು ಹೇಳಲಿಲ್ಲ. ಆದರೆ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಹೇಳಿದ ಹಾಗೆ ನಡೆಯುತ್ತಿರುವುದು ಸತ್ಯವಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಅವರು ಹಣವನ್ನು ನೀಡಿದ್ದಾರೆಯೇ? ಈಗ ನನಗೆ ಅನುಮಾನ ಶುರುವಾಗುತ್ತಿದೆ, ಅವರೇ ಹಣವನ್ನು ನೀಡಿರಬಹುದೆಂದು.

**ಶ್ರೀ ಟಿ.ಎ.ಶರವಣ:–** ಕುಂಬಳಕಾಯಿ ಕಳ್ಳ ಎಂದರೆ, ಹೆಗಲು ಮುಟ್ಟಿಕೊಂಡ ಹಾಗೆ ನಾವು ಅವರ ಹೆಸರನ್ನೇ ಹೇಳಲಿಲ್ಲ. ಏತಕ್ಕೆ ಎದ್ದು ಉತ್ತರ ನೀಡುತ್ತಾರೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಂಡ್ಯದಲ್ಲಿ ಎಂ.ಪಿ. ಚುನಾವಣೆಯಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂಬುದನ್ನು ಹೇಳಲಿ.

**ಶ್ರೀ ಟಿ.ಎ.ಶರವಣ:–** ಕುಂಬಳಕಾಯಿ ಕಳ್ಳ ಎಂದರೆ, ಹೆಗಲು ಮುಟ್ಟಿಕೊಂಡು ಬಂದರಂತೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಹಣ ಖರ್ಚು ಮಾಡಿದ್ದಾರೆ ಎಂದು ನಾನು ಹೇಳಲಿಲ್ಲ.

(ಗೊಂದಲ)

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಅವರು ಹಣವನ್ನು ನೀಡಿದ್ದಾರೆ ಎಂದು ಹೇಳುತ್ತಿದ್ದೆವೆಯೇ? ಹಾಗಾದರೆ ಈಗ ಅವರು ಹಣವನ್ನು ಖರ್ಚು ಮಾಡಿದ್ದಾರೆ ಎಂಬುದು ಗೊತ್ತಾಗುತ್ತಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಂಡ್ಯ ಜಿಲ್ಲೆಯ ಚುನಾವಣೆಯಲ್ಲಿ ಮಾತ್ರವಲ್ಲ, ಇಂಡಿಯಾದ ಚುನಾವಣೆಯಲ್ಲಿಯು ನಡೆಯುತ್ತಿದೆ ಎಂದು ಹೇಳಬಹುದು.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಯಾವ ರಾಜಕೀಯ ಪಕ್ಷ ಎಷ್ಟು ಹಣವನ್ನು ನೀಡಿದೆ ಎಂಬುದನ್ನು ಹೇಳುತ್ತಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಡೀ ಭಾರತ ದೇಶದಲ್ಲಿ ಮಂಡ್ಯ ಚುನಾವಣೆಯಲ್ಲಿ ಹಣ ಖರ್ಚು ಮಾಡಿದಷ್ಟು ಎಲ್ಲಿಯು ಹಣವನ್ನು ಖರ್ಚು ಮಾಡಿರುವುದಕ್ಕೆ ಸಾಧ್ಯವಾಗಲಿಲ್ಲ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಅದರ ಬಗ್ಗೆ ಹೇಳಬೇಕು.

**ಶ್ರೀ ಹೆಚ್.ಎಂ.ರಮೇಶಗೌಡ:–** ಮಾನ್ಯ ಸಭಾಪತಿಯವರೇ, (ಗೊಂದಲ) ಕರೆದುಕೊಂಡು ಹೋಗಿರುವುದಕ್ಕೆ ಎಷ್ಟು ಖರ್ಚು ಮಾಡಿದ್ದಾರೆ ಎಂಬುದನ್ನು ಮೊದಲು ಹೇಳಲಿ. ಅವರು ಪ್ರಜಾಪ್ರಭುತ್ವಕ್ಕೆ ಬರಬೇಕಾದರೆ ಕಗ್ಗೊಲೆ ಮಾಡಿ ಬಂದಿರುವವರು. ನಾಚಿಕೆ ಆಗಬೇಕು. ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿರುವವರು ಯಾರ್ಯಾದರೂ ಇದ್ದರೆ ಅದು ಭಾರತೀಯ ಜನತಾ ಪಾರ್ಟಿಯವರು.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಹೌದು. ಅವರು ನ್ಯಾಯಾಲಯದ ಮುಂದೆ ಹೋಗಬಹುದು. ಮಂಡ್ಯ ಚುನಾವಣೆಯ ಫಲಿತಾಂಶ ಸರಿಯಿಲ್ಲವೆಂದು ನ್ಯಾಯಾಲಯದ ಮುಂದೆ ಹೋಗಬಹುದು.

(ಗೊಂದಲ)

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, (ಗೊಂದಲ) ಅವತ್ತು ಅವರು ಅದೇ ಕೆಲಸವನ್ನು ಮಾಡಿದ್ದು, ಅದನ್ನು ತಿಳಿದುಕೊಳ್ಳಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಯಾರ ಮೇಲೆಯು ಆರೋಪ ಮಾಡುತ್ತಿಲ್ಲ. ಏತಕ್ಕೆ ಹೆಗಲು ಮುಟ್ಟಿಕೊಂಡು ನೋಡಿಕೊಳ್ಳುತ್ತಾರೆ.

**ಶ್ರೀ ಸಿ.ಟಿ.ರವಿ(ಪ್ರವಾಸೋಧ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಅವರು ಹೇಳುವುದು ಸರಿಯಾಗಿದೆ. ವಸ್ತುನಿಷ್ಠೆ ಹೆಸರಿನಲ್ಲಿ ಚುನಾವಣೆ ಹೇಗೆ ನಡೆಯುತ್ತಿದೆ ಎಂಬುದನ್ನು ಹೇಳುವುದು ಸರಿ. ಆದರೆ, ಕೆ.ಆರ್.ಪೇಟೆಗೆ ತಲಾ ಒಂದು ಎಂದು ಹೇಳಿರುವ ವಿಷಯದಲ್ಲಿ ಎಲ್ಲಾ ಪಕ್ಷದವರು ಬೆತ್ತಲಾಗಿಯೇ ನಿಂತಿರುವುದು. ಯಾವ ರೀತಿ ಪರಿಸ್ಥಿತಿ ಇದೆ ಎಂದರೆ, 'ಮಹಾಭಾರತ ಕುರುಕ್ಷೇತ್ರ ಯುದ್ಧದಲ್ಲಿ ಕರ್ಣನ ರಥ ಹೂತಿಕೊಳ್ಳುತ್ತದೆ, ಆಗ ಕೃಷ್ಣ ಅರ್ಜುನನಿಗೆ ಬಾಣ ಬಿಡು ಎಂದು ಹೇಳುತ್ತಾನೆ.'

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅದಕ್ಕೆ ಕರ್ಣ 'ರಥ ಹೂತಿ ‍್ಕೊಂಡಿದೆ, ಈ ಸಂದರ್ಭದಲ್ಲಿ ಬಾಣ ಬಿಡುವುದು ಸರಿಯಲ್ಲ, ಧರ್ಮವಲ್ಲ' ಎಂದು ಹೇಳುತ್ತಾನೆ. ಆಗ ಕೃಷ್ಣ 'ಅಭಿಮನ್ಯುವನ್ನು ಕೊಲ್ಲಬೇಕಾದರೆ ಧರ್ಮ ನೆನಪಾಗಲಿಲ್ಲ, ಈಗ ಧರ್ಮ ನೆನಪಾಗುತ್ತದೆಯೇ? ಇದು ಯುದ್ಧ ನೀತಿ' ಎಂದು ಹೇಳುತ್ತಾನೆ. ಅದೇ ರೀತಿ ಸಾಮರ್ಥ್ಯವು ಒಂದು ಪಕ್ಷಕ್ಕೆ ಇದ್ದಾಗ ಅವರಿಗೆ ಬೇಕಾದ ರೀತಿ ಮಾಡಿದ್ದರು. ಇನ್ನೊಂದು ಪಕ್ಷಕ್ಕೆ ಸಾಮರ್ಥ್ಯ ಬಂತು, ಅವರು ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ 1952ನೇ ಸಾಲಿನಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಗೆ ಪ್ರತಿನಿಧಿಯನ್ನು ಎಳೆದುಕೊಂಡು ಬಂದು ಚುನಾವಣೆಗೆ ನಿಲ್ಲಿಸಬೇಕಾಗಿತ್ತು. ನಾವು ಸಣ್ಣ ಹುಡುಗರಾಗಿದ್ದಾಗ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ನಿರ್ದಿಷ್ಟವಾದ ಪ್ರದೇಶಕ್ಕೆ ಪ್ಯಾಕೆಟ್ ಹಂಚಿದರೆ ಅದು ಚುನಾವಣೆ ಖರ್ಚಾಗುತ್ತಿತ್ತು. Quarter ಅಲ್ಲ, ಬಾಟಲ್ ಅಲ್ಲ. ಯಾವುದಾದರೂ ನಿರ್ದಿಷ್ಟವಾಗಿರುವ ಬಡ ಜನರು ವಾಸ ಮಾಡುವ ಪ್ರದೇಶದಕ್ಕೆ ಪ್ಯಾಕೆಟ್ ಹಂಚುತ್ತಿದ್ದರು. ಪ್ಯಾಕೆಟ್ ಹಂಚುವಂಥ ಸಂದರ್ಭದಲ್ಲಿ ನಾವೆಲ್ಲರೂ ಅಸಹಾಯಕರಾಗಿ ನೋಡುತ್ತಿದ್ದೆವು. ನಮಗೆ ಆ ಪ್ಯಾಕೆಟ್ ಹಂಚುವುದಕ್ಕೂ ತಾಕತ್ತು ಇರಲಿಲ್ಲ, ಚುನಾವಣಾ pamphlet ಹಂಚುವುದರೊಳಗೆ ಸುಸ್ತಾಗುತ್ತಿದ್ದೆವು.

(ಗೊಂದಲ)

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, 1996ನೇ ಸಾಲಿನ ಚುನಾವಣೆಯಲ್ಲಿ,...

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಏನು ಇಲ್ಲ. ಎಲ್ಲವೂ ಗಾಳಿಗೆ ತೂರಿಕೊಂಡು ಹೋಗಿದೆ.

**ಶ್ರೀ ಟಿ.ಎ.ಶರವಣ:–** 1996ನೇ ಸಾಲಿನ ಚುನಾವಣೆಗೆ ಸಂಬಂಧಿಸಿರುವುದು ಬೇಡ. ಈಗಿನ ಚುನಾವಣೆಯಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಹೇಳಲಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, (ಗೊಂದಲ) ಎಲ್ಲಿಗೆ ತಂದಿದ್ದಾರೆ ಎಂಬುದನ್ನು ಹೇಳಲಿ.

**ಶ್ರೀ ಸಿ.ಟಿ.ರವಿ:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನಾನು ಯಾರನ್ನು ಸಮರ್ಥನೆ ಮಾಡುತ್ತಿಲ್ಲ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಒಳ್ಳೆಯ ವಿಷಯವನ್ನೇ ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ವಿಧಾನಸಭೆ ಚುನಾವಣೆಯಲ್ಲಿ ರೂ.100.00 ಕೋಟಿಗಳಷ್ಟು ಹೊಳೆ ಹರಿಸಿದ್ದಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರು 1996ನೇ ಸಾಲಿನ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯ ಪರವಾಗಿ ಪ್ರಭಾರವನ್ನು ವಹಿಸಿಕೊಂಡಿದ್ದರು. ಆಗ ಯಾವುದೋ ಒಂದು ಹೊಸ ಬ್ರ್ಯಾಂಡ್, ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ Master brand ಎಂಬ ಹೆಸರನ್ನು ನಾವು ಆ ಸಂದರ್ಭದಲ್ಲಿಯೇ ಕೇಳಿದ್ದು. ಚುನಾವಣಾ ದೃಷ್ಟಿಯಿಂದಲೇ ಆ ಬ್ರ್ಯಾಂಡ್ ತಯಾರಾಗಿದ್ದು. ಅದೇ ರೀತಿ ಬರುತ್ತಾ, ಬರುತ್ತಾ ಎಲ್ಲರೂ ಕೂಡ ಚುನಾವಣೆ ವ್ಯವಸ್ಥೆಯನ್ನು ಭ್ರಷ್ಟಗೊಳಿಸಿದ್ದೇವೆ. ಆಕಸ್ಮಾತ್ ಪ್ರಾಮಾಣಿಕ ವ್ಯಕ್ತಿ ಯಾರಾದರೂ ಚುನಾವಣೆಗೆ ನಿಂತುಕೊಂಡರೆ, 'ಒಂದು ವೇಳೆ ನಾಳೆ ಬೆಳಗ್ಗೆ ಮಹಾತ್ಮ ಗಾಂಧಿಜೀಯವರೇ ಬಂದು ಚುನಾವಣೆಗೆ ನಿಂತುಕೊಂಡರೆ,' 'ನೀನು ಬೇಡ, ಗಾಂಧಿ ಚಿತ್ರ ಇರುವ ನೋಟ್ ಕೊಡು' ಎಂದು ಹೇಳುತ್ತಾರೆ.

**ಶ್ರೀ ಟಿ.ಎ.ಶರವಣ:–** ದೇವರು ಬಂದು ನಿಂತರು ಆಗುವುದಿಲ್ಲ.

**ಶ್ರೀ ಹೆಚ್.ಎಂ.ರಮೇಶಗೌಡ:–** ಮಾನ್ಯ ಸಭಾಪತಿಯವರೇ, (ಗೊಂದಲ) ಅವರ ಮೈ ಮೇಲೆ ಎಣ್ಣೆ ಸುರಿದುಕೊಂಡು ಬಂದು ನಿಲ್ಲುತ್ತಾರೆ. ಆ ವಿಚಾರ ಬೇಡ. ಈ ಉಪ ಚುನಾವಣೆಯಲ್ಲಿ ಯಾವ ರೀತಿ ಗೆದ್ದು ಬಂದಿದ್ದಾರೆ ಎಂಬುದನ್ನು ಸಚಿವರು ಹೇಳಬೇಕು.

(ಗೊಂದಲ)

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಅವರನ್ನು ಸೋಲಿಸುವಷ್ಟು ಸಾಮಾರ್ಥ್ಯದಲ್ಲಿ ನಡೆಯಿತು. ಯಾವ್ಯಾವ ವಿದ್ಯಾಭ್ಯಾಸದಲ್ಲಿ ಬಹಳ ವರ್ಷಗಳಿಂದ ಚೆನ್ನಾಗಿ ಅಭ್ಯಾಸ ಮಾಡಿರುತ್ತೇವೆಯೋ, ಅಂದರೆ ಅಸ್ತ್ರಕ್ಕೆ ಅಸ್ತ್ರ ಇದ್ದ ಹಾಗೆ. ಬ್ರಹ್ಮಾಸ್ತ್ರಕ್ಕೆ ಬ್ರಹ್ಮಾಸ್ತ್ರ; ನಾಗಾಸ್ತ್ರಕ್ಕೆ ನಾಗಾಸ್ತ್ರ; ಅಗ್ನಿ ಅಸ್ತ್ರಕ್ಕೆ ಅಗ್ನಿ ಅಸ್ತ್ರ; ಪಾಶುಪತಾಸ್ತ್ರಕ್ಕೆ ಪಾಶುಪತಾಸ್ತ್ರ; ಎಲ್ಲಾ ಸಾಮರ್ಥ್ಯವನ್ನು ಗಳಿಸಿಕೊಂಡು ಬಂದಿದ್ದೇವೆ. ಇನ್ನು ಅವರ ಗೆಲುವನ್ನು ಗೆಲಿಸಿಕೊಳ್ಳಲಿ.

(ಗೊಂದಲ)

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಇಲ್ಲಿ ಬಂದು ಕೂರಬೇಕಾದರೆ(ಗೊಂದಲ) ಮಾಡಬೇಕು ಎಂಬುದನ್ನು ಚುನಾವಣೆಯಲ್ಲಿ ಸ್ಪಷ್ಟವಾಗಲಿಲ್ಲ. ಆದರೂ ಹೇಗೆ ಬಂದಿದ್ದಾರೆ?

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಈಗ ನಡೆಯುತ್ತಿರುವುದು ಆಪರೇಷನ್ ಕಮಲಾಸ್ತ್ರ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ. ರಮೇಶಗೌಡರು ಮತ್ತು ಮಾನ್ಯ ಟಿ.ಎ.ಶರವಣರವರು ಇಲ್ಲಿಗೆ ಬರಬೇಕಾದರೆ ಎಷ್ಟು ಹಣವನ್ನು ಕೊಟ್ಟು ಬಂದಿದ್ದಾರೆ. ಅವರಿಬ್ಬರೂ, ...

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಗೊಂದಲ)

**ಸಭಾಪತಿಯವರು:-** ಆಯಿತು. ಮಾನ್ಯ ಶ್ರೀಕಂಠೇಗೌಡರೇ, ತಮ್ಮ ಮಾತು ಮುಗಿಯಿತೇ?

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು next ಮಾತನಾಡುವುದಕ್ಕೆ ಕುಳಿತಿದ್ದೇನೆ. ಸಮಯ ಹಾಳು ಮಾಡುತ್ತಾರೆ ಎಂದು ಸುಮ್ಮನೆ ಇದ್ದೇನೆ.

(ಮುಂದು)

(300)/11.03.2020/12.00/ಎಸ್‌ಕೆ-ಬಿಎನ್‌ಎಸ್

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚುನಾವಣೆ ಯಾವ ರೀತಿ ಆಯಿತು ಎಂದು ಮಾನ್ಯ ಸಚಿವರು ಚೆನ್ನಾಗಿ ಹೇಳುತ್ತಿದ್ದರು. ನಮ್ಮ ಕರ್ನಾಟಕ ರಾಜ್ಯದಲ್ಲಿ ಚುನಾವಣೆಗಳು ಬಹಳ ಸುಸೂತ್ರವಾಗಿ ನಡೆದುಕೊಂಡು ಬರುತ್ತಿತ್ತು. ಯಾವ ಬಿ.ಜೆ.ಪಿ. ಪಕ್ಷವನ್ನಾ ... ಅವತ್ತಿನಿಂದ ಚುನಾವಣೆ ಬಹಳ ಕಲುಷಿತವಾಯಿತು. ಈಗ ನಡೆದಂತಹ by-election ಗಳಿವೆ, ಈ ಚುನಾವಣೆಗಳಿಗೆ ಸರ್ಕಾರಿ missionary ಗಳನ್ನು ಯಾವ ರೀತಿ ಉಪಯೋಗ ಮಾಡಿಕೊಂಡಿರಿ? ಒಂದೊಂದು ವಿಧಾನಸಭಾ ಚುನಾವಣೆಗೆ ಸುಮಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ.

**ಸಭಾಪತಿಯವರು:-** ಮಾನ್ಯ ಶ್ರೀಕಂಠೇಗೌಡರೇ ಮಾತನಾಡಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ. ನಾನು ಯಾವ ಪಕ್ಷದ ಹೆಸರನ್ನು ಹೇಳಲಿಲ್ಲ. ಈಗ ಇರುವಂತಹ ವ್ಯವಸ್ಥೆಯ ಉದಾಹರಣೆಗಳನ್ನು ಹೇಳುತ್ತಿದ್ದೇನೆ. ತಲಾ ಒಂದು ಸಾವಿರ ರೂಪಾಯಿಗಳಂತೆ ಹತ್ತು ಸಾವಿರ ಕೊಟ್ಟವರಿಗೆ, ಹತ್ತರಲ್ಲಿ ಐದು ಓಟು ಹೋಗುತ್ತವೆ. ತಲಾ ಒಂದು ಓಟಿಗೆ ಐದನೂರ ರೂಪಾಯಿಗಳಂತೆ, ...

**ಸಭಾಪತಿಯವರು:-** ಇನ್ನೊಂದು ಬಾರಿ ಚುನಾವಣೆ ಬಗ್ಗೆ ಚರ್ಚೆ ಮಾಡೋಣ. ಈಗ ಸಂವಿಧಾನದ ಬಗ್ಗೆ ಮಾತನಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಆ ವಿಷಯವನ್ನು ಮುಗಿಸಿಬಿಡುತ್ತೇನೆ. ಐದು ನೂರು ರೂಪಾಯಿಗಳಂತೆ, ಐದು ಸಾವಿರ ರೂಪಾಯಿಗಳನ್ನು ಕೊಟ್ಟವರಿಗೆ ಮೂರು ಓಟು. ಇನ್ನೂರು ರೂಪಾಯಿಗಳಂತೆ ಕೊಟ್ಟವರಿಗೆ, ಎರಡು ಓಟು.

**ಸಭಾಪತಿಯವರು:–** ಎಲ್ಲರಿಗೂ ಅದು ಗೊತ್ತಿದೆ. ಪದೇ ಪದೇ ಹೇಳುತ್ತೀರಿ.

**ಶ್ರೀ ಸಿ.ಟಿ. ರವಿ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವರು):–** ಮೊನ್ನೆ ಶಿಕ್ಷಕರ ಕ್ಷೇತ್ರದ ಚುನಾವಣೆ ಯಾವ ರೀತಿ ಆಯಿತು ಎಂಬುದನ್ನು ಹೇಳಿ. ಇದಕ್ಕೆ ನಾನು incharge ಇದ್ದೆ. ಇದನ್ನು ತಾವು ಹೇಳುವುದಕ್ಕಾಗದೇ ಹೋದರೆ, ಇದರ ಮೇಲೆ ನಾನು ಬೆಳಕು ಚೆಲ್ಲುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ. ರವಿಯವರ ಅಭಿಪ್ರಾಯವನ್ನು ಒಪ್ಪುತ್ತೇನೆ. ನಾನು ಹೇಳುತ್ತಿರುವುದೇನೆಂದರೆ, ಭಾರತದ ಪ್ರಜಾಪ್ರಭುತ್ವದ ವ್ಯವಸ್ಥೆಯ ಚುನಾವಣೆಯ ಭ್ರಷ್ಟಾಚಾರ ಬೇರಿನ ಮಟ್ಟಿಗೆ ಇಳಿದಿದೆ. ಹಾಗಾಗಿ ನಾವು ಇನ್ನು ಮೇಲೆ ಶುದ್ಧ ರಾಜಕಾರಣ, ತತ್ವಾಧಾರಿತ ರಾಜಕಾರಣ, ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ಸಾಧ್ಯವೇ? ಒಂದು ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾನ್ಯ ಎಸ್.ಎಂ. ಕೃಷ್ಣಾರವರು ಒಂದು ಮಾತನ್ನು ಹೇಳಿದರು. ಇಲ್ಲಿ ಬಹಳ ಜನ ನೊಂದ ಯುವಕರಿದ್ದೀರಿ. ನಾನು ವಿಧಾನಸಭೆಯ ಸದಸ್ಯನಾಗಿ, ಉಪ ಸಭಾಪತಿಯಾಗಿ, ಸಭಾಪತಿಯಾಗಿ ಕೆಲಸ ಮಾಡಿದ್ದೇನೆ. ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ರಾಜ್ಯದ ಸಚಿವನಾಗಿದ್ದಲ್ಲದೇ, ಉಪ ಮುಖ್ಯಮಂತ್ರಿ ಹಾಗೂ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ ಹಾಗೂ ರಾಜ್ಯಪಾಲನಾಗಿ ಕೆಲಸ ಮಾಡಿದ್ದೇನೆ. ಕೇಂದ್ರ ಸಚಿವನಾಗಿ ಕೆಲಸ ಮಾಡಿದ್ದೇನೆ. ಸುಮಾರು 60 ವರ್ಷಗಳ ಕಾಲ ರಾಜಕಾರಣವನ್ನು ಮಾಡಿದ್ದೇನೆ. ಇವತ್ತು ರಾಷ್ಟ್ರದ ಪ್ರಜಾಪ್ರಭುತ್ವ ಅತ್ಯಂತ ಅಪಾಯಕಾರಿ ಹಂತದಲ್ಲಿದೆ. ಬೇರಿನ ಮಟ್ಟಕ್ಕೆ ಭ್ರಷ್ಟಾಚಾರ ಇಳಿದಿದೆ. ಇದು ಯುವಕರಿಗೆ ಅತ್ಯಂತ ಸವಾಲಿನ ವಿಚಾರ. ಇದನ್ನು ಗಂಭೀರವಾಗಿ ತೆಗೆದುಕೊಳ್ಳದೇ ಹೋದರೆ, ಇಲ್ಲಿಗೆ ಯಾರೋ ಬಂದು ಈ ದೇಶದ ಆಡಳಿತ ನಡೆಸುತ್ತಾರೆಂಬುದನ್ನು ನಾವು ಊಹಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಮಾತನ್ನು ಹೇಳಿದರು. ನಾನು ಈ ಮಾತನ್ನು ಏಕೆ ಹೇಳಿದೆ ಎಂದರೆ, ಭ್ರಷ್ಟಾಚಾರರಹಿತ ಚುನಾವಣೆಯನ್ನು ಕೊಡಬೇಕಲ್ಲಾ. ಸೇವೆಯನ್ನು ಮೂಲ ಮಂತ್ರವನ್ನಾಗಿಟ್ಟುಕೊಂಡು, ಸೇವೆ ಮಾಡುವಂತಹ ಜನ ಪ್ರತಿನಿಧಿಗಳು ಬರಬೇಕಲ್ಲಾ. ನಾವು ಎಂತಹವರನ್ನು ಕಂಡಿದ್ದೇವೆ. ಇನ್ನು ಮುಂದೆ ಅವರನ್ನು ಕಾಣುವುದಕ್ಕೆ ಸಾಧ್ಯವೇ? ಅವರು ಹೇಳಿದ ಹಾಗೆ ಶ್ರೀ ಮಹಾತ್ಮ ಗಾಂಧಿ ಮತ್ತು ಡಾ. ಅಂಬೇಡ್ಕರ್ ಇದ್ದಿದ್ದರೆ, ಅವರು ನಿಲ್ಲುವುದಿಲ್ಲ, ಓಡಿ ಬಿಡುತ್ತಾರೆ ಇದು ಸತ್ಯ. ಚುನಾವಣೆಯಲ್ಲಿ ಯಾರೂ ಅರ್ಜಿ ಹಾಕುವುದಕ್ಕೆ ಸಾಧ್ಯವಿಲ್ಲ. ಈ ಹಿಂದೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಮ್ಮಲ್ಲಿ ಯಾರಾದರೂ ಚುನಾವಣೆಗೆ ನಿಂತುಕೊಳ್ಳಿ ಎಂದು ಕೇಳಿದರೆ, ನಾನು ಹತ್ತು ಎಕರೆಗೆ ಗದ್ದೆಯನ್ನು ನಾಟಿ ಮಾಡಿಸಬೇಕು. ನಾನು ಚುನಾವಣೆಗೆ ನಿಲ್ಲುವುದಿಲ್ಲ ಎಂದು ಹೇಳಿತ್ತಿದ್ದರು. ಇನ್ನೊಬ್ಬರನ್ನು ಚುನಾವಣೆಗೆ ನಿಂತುಕೊಳ್ಳಿ ಎಂದು ಕೇಳಿದರೆ, ಮರಿ ಕಟ್ಟುವ ಕೆಲಸವಿದೆ. ನಾನು ಚುನಾವಣೆಗೆ ನಿಲ್ಲುವುದಿಲ್ಲವೆಂದು ಹೇಳುತ್ತಿದ್ದರು. ಯಾರಾದರೂ ಚುನಾವಣೆಗೆ ಕಷ್ಟಪಟ್ಟು ನಿಂತುಕೊಂಡರೆ, ಊರಿನವರೆಲ್ಲಾ ಒಂದು ಸಾವಿರ ರೂಪಾಯಿಗಳಿಂದ ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು. ಚುನಾವಣೆ ಆಗಿ ಹಣ ಉಳಿಯುತ್ತಿತ್ತು. ಈ ತರಹ ವ್ಯವಸ್ಥೆ ಎಲ್ಲಿ ಹೋಗಿದೆ? ಮಾನ್ಯ ಸಭಾಪತಿಯವರೇ. B-Form ಗೆ ಎಷ್ಟು ಕೋಟಿ ರೂಪಾಯಿಗಳು ಬೇಕು? ಚುನಾವಣೆಗೆ ಎಷ್ಟು ಕೋಟಿ ರೂಪಾಯಿಗಳು ಬೇಕು? ನಮ್ಮ voters ನಮಗಿಂತೇನೂ ಕಡಿಮೆ ಇಲ್ಲ. ನಾವು ಚುನಾವಣೆಗೆ ನಿಂತುಕೊಂಡವರು ಭ್ರಷ್ಟರು ಮತದಾರರು ಭ್ರಷ್ಟರು. ಹಣವಿಲ್ಲದಿದ್ದರೆ ಚುನಾವಣೆಗೆ ಏತಕ್ಕೆ ಬಂದೆ ಎಂದು ಕೇಳುತ್ತಾರೆ. ಈ ಹಿಂದೆ ಇದ್ದಂತಹ ಕಾಲದಲ್ಲಿ ಯಾರಾದರೂ ಚುನಾವಣೆಗೆ ನಿಂತರೆ, ಹಳ್ಳಿಯ ಜನರು ನಿಮಗೇನೂ ಕೆಲಸವಿಲ್ಲವೇ ಚುನಾವಣೆಗೆ ಏಕೆ ಬಂದಿರಿ, ಹೋಗಿ ಎಂದು ಹೇಳುತ್ತಿದ್ದರು. ಈಗ ಚುನಾವಣೆ ಬಂದರೆ ಸಾಕು ಬೇಗ ಬನ್ನಿ ಎಂದು ಹೇಳುತ್ತಾರೆ. ಎಂತಹ ವಿಪರ್ಯಾಸ! ಪ್ರಜಾಪ್ರಭುತ್ವದಲ್ಲಿ ಸುಮಾರು 77 ವರ್ಷಗಳು ಕಳೆದು ಆನಂತರ ಈ ವಿಪರ್ಯಾಸಕ್ಕೆ ಬಂದು ಮುಟ್ಟಿದ್ದೇವೆ. ಇದನ್ನು ನಾವು ಯಾವಾಗ ಸರಿಪಡಿಸುವುದು? ಇದನ್ನು ರಿಪೇರಿ ಮಾಡುವುದು ಹೇಗೆ? ಬಲಿಷ್ಠ ಪ್ರಜಾಪ್ರಭುತ್ವವನ್ನು ಕಟ್ಟಬೇಕಲ್ಲಾ ಮತ್ತು ಸಮರ್ಥ ಸರ್ಕಾರಗಳು ಬರಬೇಕಲ್ಲಾ. ಇದನ್ನು ಸರಿಪಡಿಸಬೇಕಾಗಿರುವುದು ಹೇಗೆ? Irrepairable ಹಂತಕ್ಕೆ ಹೋಗಿ ನಾವು ಕುಳಿತಿರುವಾಗ, ನ್ಯಾಯಾಂಗ ಇರಲಿ, bureaucracy ಇರಲಿ, ಇಡೀ ವ್ಯವಸ್ಥೆ ಹಾಳಾಗಿ ಕುಳಿತುಕೊಂಡಿದೆ. ಡಾ॥ ರಾಧಾಕೃಷ್ಣಾರವರು ಸ್ವಾತಂತ್ರ್ಯವನ್ನು ಹಸ್ತಾಂತರ ಮಾಡುವ ಸಂದರ್ಭದಲ್ಲಿ, ಈ ಹಸ್ತಾಂತರವು ಮನುಕುಲದ ಇತಿಹಾಸದಲ್ಲಿ ಎಲ್ಲಾ ಹಸ್ತಾಂತರಗಳಲ್ಲಿ ಅತ್ಯಂತ ದೊಡ್ಡ ಮತ್ತು ಅತ್ಯಂತ ಕನಿಷ್ಠ ರಕ್ತಸಿಕ್ತ ಹಸ್ತಾಂತರವಾಗಿದೆ ಎಂಬ ಒಂದು ಮಾತನ್ನು ಹೇಳಿದರು. ನಾವು ಯಾವ ಮಟ್ಟಿಗೆ ಹೋಗಿ ನಿಂತಿದ್ದೇವೆ. ಯಾವ ಕ್ಷೇತ್ರಗಳಲ್ಲಿ ಯಶಸ್ಸನ್ನು ಕಾಣುವುದಕ್ಕೆ ಸಾಧ್ಯವಾಗಿದೆ. ದುಡಿಯುವ ಕೈಗಳಿಗೆ ಕೆಲಸಗಳಿಲ್ಲ. ಹಸಿದ ಹೊಟ್ಟೆಗೆ ಅನ್ನವಿಲ್ಲ. ನೊಂದ ಮಹಿಳೆಯರಿಗೆ ಬದುಕನ್ನು ಕಟ್ಟಿ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಮಹಿಳೆ ಒಂಟಿಯಾಗಿ ತಿರುಗಾಡುವ ಆಗಿಲ್ಲ. ಒಬ್ಬ ಸಮರ್ಥ ನಾಯಕನನ್ನು ಚುನಾವಣೆಯಲ್ಲಿ ಆಯ್ಕೆ ಮಾಡಿಕೊಳ್ಳುವುದಕ್ಕಾಗುತ್ತಿಲ್ಲ. ಇವತ್ತು ಇಡೀ ವ್ಯವಸ್ಥೆಯೂ ಪ್ರಕ್ಷುಬ್ಧಗೊಂಡು, pollute ಆಗಿದೆ. ಎಪ್ಪತ್ತು ವರ್ಷಗಳ ಆನಂತರದ ಸಾಧನೆ ಇದಾಗಿದೆ. ಮಾನ್ಯ ಸಭಾಪತಿಯವರೇ, ನಾವು ಗಂಭೀರವಾಗಿ ಮತ್ತೆ ವಾಪಸ್ಸು ಹೋಗುವಂತಹ ಚಿಂತನೆಯನ್ನು ಮಾಡದೇ ಹೋದರೆ, ಭಾರತದ ಭವಿಷ್ಯ ಎಲ್ಲಿಗೆ ಹೋಗಿ ನಿಲ್ಲುತ್ತದೆ. ಈ ದೇಶ ಮತ್ತು ರಾಜ್ಯದ ಅಭಿವೃದ್ಧಿ ಯಾವ ಮಟ್ಟಿಗೆ ಹೋಗುತ್ತದೆ. ಬಾಂಗ್ಲಾದೇಶ ಮತ್ತು ಪಾಕಿಸ್ತಾನ ದೇಶಗಳ ಅಭಿವೃದ್ಧಿಗಿಂತ ನಮ್ಮ ದೇಶದ ಅಭಿವೃದ್ಧಿ ದರ ಕಳಪೆಯಿದೆ. ಇದನ್ನು ಯಾರಿಗೆ ಹೇಳೋಣ. ಆ ದೇಶಗಳ ಬಡತನಕ್ಕಿಂತ ನಾವು ಕಡಿಮೆಯಿದ್ದೇವೆ. ನಾವು ಯಾವುದರಲ್ಲಿ ಸಾಧನೆ ಮಾಡುವುದಕ್ಕೆ ಸಾಧ್ಯವಾಗಿದೆ. ನಾನು ಒಬ್ಬರಿಗೊಬ್ಬರಿಗೆ ಲೋಪ ಕೊಡುವುದಿಲ್ಲ. ನಾನು ಇಡೀ ವ್ಯವಸ್ಥೆಗೆ ಹಾಗೂ ಎಲ್ಲಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರಗಳಿಗೂ ಈ ಲೋಪ ಕೊಡುತ್ತೇನೆ. ಹಾಗಾಗಿ ಎಲ್ಲೋ ಒಂದು ಕಡೆ ಭಾರತ ದೇಶವು ಮುಟ್ಟಬೇಕಾದ ಗುರಿ ಮತ್ತು ಸವಾಲನ್ನು ಮುಟ್ಟುವುದಕ್ಕೆ ಸಾಧ್ಯವಾಗಲಿ.

**ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಅತ್ಯಂತ ಕಳಕಳಿ ಹಾಗೂ ಕಾಳಜಿ, ಅನುಭವದಿಂದ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆಡಳಿತ ಎಲ್ಲಿಗೆ ಬಂದು ನಿಂತಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಶ್ರೀಕಂಠೇಗೌಡರೇ ಮಾನ್ಯ ಜವಾಹರ್‌ಲಾಲ್ ನೆಹರು ಅವರು ತೀರಿಕೊಂಡಿರುವ ದಿನ ನಿಮಗೆ ಗೊತ್ತಿರಲಿಕ್ಕಿಲ್ಲ. ತಾವು ಆಗ ಚಿಕ್ಕವರು. ದಿನಾಂಕ 27ನೇ ಮೇ 1964 ರಲ್ಲಿ ಮಾನ್ಯ ಜವಾಹರ್‌ಲಾಲ್ ನೆಹರುವರು ನಿಧನರಾದಾಗ, ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದೆ. ನಾನು ಹುಟ್ಟಿದ ಊರಿನಲ್ಲಿ ನಮ್ಮ ಜನರು ದೊಡ್ಡ ದೊಡ್ಡ ರುಮಾಲು ಸುತ್ತಿಕೊಂಡು ದೋತ್ರದ ಜನರು ಚಿಲ್ಲಿ ಸೇದುತ್ತಿದ್ದರು. ನೂರಾರು ಜನರು ಛಾವಡಿ ಕಟ್ಟಿಗೆ ಬಂದು ಸೇರುತ್ತಿದ್ದರು. ಆಗ ದೂರದರ್ಶನ, ರೇಡಿಯೋ ಯಾರ ಮನೆಯಲ್ಲಿಯೂ ಇರಲಿಲ್ಲ. ಪಂಚಾಯಿತಿಯಲ್ಲೊಂದು ರೆಡಿಯೋವಿತ್ತು. ಆ ರೇಡಿಯೋ ಕೊರ ಕೊರ ಎಂಬ ಶಬ್ಧ ಮಾಡುತ್ತಿತ್ತು. ಜನರು ನಿಧನ ವಾರ್ತೆಯ ಸಲುವಾಗಿ ಬಂದು ಕುಳಿತುಕೊಂಡಿದ್ದರು. ಅಲ್ಲಿ ಕುಳಿತವರು ಅಳುತ್ತಿದ್ದರು. ಯಾಕೆ ಆಳುತ್ತಿದ್ದೀರೆಂದರೆ, ಇಂತಹ ದೊಡ್ಡ ದೇಶಕ್ಕೆ ಇನ್ಯಾರು ಪ್ರಧಾನಿ ಮಂತ್ರಿಯಾಗುತ್ತಾರೆ ಮತ್ತು ಈ ದೇಶವನ್ನು ಯಾರು ಮುಂದೆ ನಡೆಸುತ್ತಾರೆ? ಅವರೆಲ್ಲಾ illiterates ಆಗಿದ್ದರು. ನಮ್ಮ ಹಿರಿಯರೆಲ್ಲಾ ಅಳುತ್ತಿದ್ದರು. ಮಾನ್ಯ ಪಂಡಿತ್ ಜವಾಹರ್‌ಲಾಲ್‌ರವರಂತಹ ಒಬ್ಬ ಬುದ್ಧಿಜೀವಿ ನಿಧನರಾದಾಗ ಈ ದೇಶವನ್ನು ಯಾರು ಮುಂದೆ ನಡೆಸುತ್ತಾರೆ ಮತ್ತು ಈ ದೇಶವನ್ನು ಮುಂದೆ ನಡೆಸುವುದಕ್ಕೆ ಯಾರು ಸಮರ್ಥರಿದ್ದಾರೆಂಬ ಮಾತನ್ನು ಹೇಳಿ, ಒಬ್ಬರಿಗೊಬ್ಬರು ಮಾತನಾಡಿಕೊಂಡು ಅಳುತ್ತಿದ್ದರು. ನಾನು ಅಳುವಂತಹ ಸಂದರ್ಭದಲ್ಲಿ ಮುಂದೆ ಇದ್ದೆ. ಆ ದಿನ ಅಕ್ಷರಸ್ಥ ಜನರು ಬಹುಶಃ ಶೇಕಡ ಹತ್ತು ಅಥವಾ ಹನ್ನೆರಡು ಇರಬೇಕು. ಅವತ್ತಿನ ದಿನ ನೂರಕ್ಕೆ ತೊಂಭತ್ತರಷ್ಟು ಜನ ಅನಕ್ಷರಸ್ಥರಾಗಿದ್ದರು. 1964 ಮೇ 27 ರವಿವಾರದಿಂದ ಹಿಡಿದು ಇಲ್ಲಿಯ ತನಕ ನಾವು ಲೆಕ್ಕ ಹಾಕಿದರೆ, ಮಾನ್ಯ ಶ್ರೀಕಂಠೇಗೌಡರೇ, ದೇಶ ಅಭಿವೃದ್ಧಿಯಾಗಿಲ್ಲವೆ? ದೇಶ ಮುಂದೆ ಹೋಗಿಲ್ಲವೆ?. ದೇಶದಲ್ಲಿ ಬಡತನ ಕಡಿಮೆಯಾಗಿಲ್ಲವೆ?

ಮಾನ್ಯ ಸಭಾಪತಿಯವರೇ, 1964 ರಲ್ಲಿ ಮಾನ್ಯ ಜವಾಹರ್‌ಲಾಲ್ ನೆಹರು ಅವರು ನಿಧನರಾದ ಮೇಲೆ ಮಾನ್ಯ ಲಾಲ್‌ಬಹುದ್ದೂರ್ ಶಾಸ್ತ್ರಿಯವರು ಈ ದೇಶದ ಪ್ರಧಾನಿ ಮಂತ್ರಿಯಾದರು. ಅವರು ಪ್ರಧಾನಿಮಂತ್ರಿಯಾದ ಮೇಲೆ ದೇಶದಲ್ಲಿ ಆಹಾರ ಧಾನ್ಯದ ಕೊರತೆಯಿತ್ತು. ಅವರು ಸೋಮವಾರ ಉಪವಾಸ ಮಾಡಬೇಕೆಂದು ಹೇಳಿದರು. ಈ ಸದನದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಎಸ್.ಆರ್. ಪಾಟೀಲ್ ಮತ್ತು ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿದ್ದಾರೆ. ಸೋಮವಾರ ಉಪವಾಸ ಏತಕ್ಕಾಗಿ ಮಾಡಬೇಕಾಯಿತೆಂದರೆ, ಆಹಾರಧಾನ್ಯಗಳ ಕೊರತೆ ಇತ್ತು. ಅಂದಿನ ದಿನ ಆಹಾರ ಧಾನ್ಯವನ್ನು ಅಮೆರಿಕಾ ದೇಶದವರು ದಾನವಾಗಿ ರವೆ, ಮೈದಾಹಿಟ್ಟು, ಹಾಲಿನ ಪುಡಿ, ದಪ್ಪ ಗೋಧಿ ಇವುಗಳನ್ನು ಕೊಡುತ್ತಿದ್ದರು. ಅಮೆರಿಕಾ ದೇಶದಲ್ಲಿ ಇದನ್ನು ಯಾರೂ ತಿನ್ನುವುದಿಲ್ಲ. ಅದನ್ನು ಅಲ್ಲಿನ ಹಂದಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಾಕುತ್ತಾರೆ. ಇದನ್ನು ನಮಗೆ ಕೊಟ್ಟಿದ್ದಾರೆಂದು ನಮ್ಮ ಹಳ್ಳಿಯ ಜನರು ಮಾತನಾಡುತ್ತಿದ್ದರು. ಒಂದು ಕಿಲೋ, ಅರ್ಧ ಕಿಲೋ ರೇಷನ್‌ನಲ್ಲಿ ಕೊಡುತ್ತಿದ್ದರು. ಅವೊತ್ತಿನ ದಿವಸ ಆ ತರಹ ಪರಿಸ್ಥಿತಿ ಇತ್ತು. ಆದರೆ ಇವತ್ತು ನಮ್ಮ ದೇಶ ಅಭಿವೃದ್ಧಿಯಾಗಿಲ್ಲವೇ? ನೀರಾವರಿ ಮಾಡಲಿಲ್ಲವೇ? ತಂತ್ರಜ್ಞಾನದಲ್ಲಿ ಮುಂದೆ ಹೋಗಲಿಲ್ಲವೇ? ಐಟಿ–ಬಿಟಿಯಲ್ಲಿ ಜಗತ್ತನ್ನು ಕಣ್ಣು ತೆರೆಸುವಂತಹ ಕೆಲಸವನ್ನು ಮಾಡಲಿಲ್ಲವೇ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಹೇಳಿದ್ದೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರೇ ನನ್ನ ಮಾತನ್ನು ಸ್ವಲ್ಪ ಕೇಳಿ. ಸಾಕಷ್ಟು ಅಭಿವೃದ್ಧಿಯಾಗಿದೆ. ಅದಕ್ಕೆ ತಕ್ಕಂತೆ ಜನಸಂಖ್ಯೆಯೂ ಕೂಡ ಹೆಚ್ಚಾಗಿದೆ. ಎಲ್ಲಿ ಜನಸಂಖ್ಯೆ ಹೆಚ್ಚಾಗುತ್ತದೆಯೋ, ಅಲ್ಲಿ ಸಮಸ್ಯೆಗಳು ಹೆಚ್ಚಾಗುತ್ತದೆ. ನಮ್ಮೂರಿನಲ್ಲಿ ಏಕೆ ಸಮಸ್ಯೆಯಿಲ್ಲ,

(ಮುಂದು)

(301)11.03.2020 12.10 ಟಿಸಿಹೆಚ್–ಬಿಎನ್‌ಎಸ್
**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು)**

ನಮ್ಮೂರಿನಲ್ಲಿ ಚೈನ್ ಕಿತ್ತುಕೊಂಡು ಹೋಗುವುದು, ಚಾಕು, ಚೂರಿ ಹಾಕುವುದು ಇಲ್ಲ. ನಮ್ಮೂರಿನಲ್ಲಿ ಅದು ಏಕೆ ಇಲ್ಲವೆಂದರೆ, ನಮ್ಮದು ಸಣ್ಣ ಹಳ್ಳಿ, ಅಲ್ಲಿ ಜನಸಂಖ್ಯೆ ಬಹಳ ಕಡಿಮೆ ಇದೆ. ಆದರೆ ಬೆಂಗಳೂರಿನಲ್ಲಿ ಚೈನ್ ಕಳ್ಳತನ ಮಾಡುವುದು, ಚಾಕು, ಚೂರಿ ಹಾಕುವುದು ಮಾಡುತ್ತಾರೆ. ಏಕೆಂದರೆ ಇಲ್ಲಿ ಸುಮಾರು 1 ಕೋಟಿ ಜನಸಂಖ್ಯೆ ಇರುವುದರಿಂದ, ಇಲ್ಲಿ ಸಮಸ್ಯೆ ಹೆಚ್ಚು ಇದೆ. ಅದಕ್ಕೆ ನಾನು ಹೇಳುವುದೇನೆಂದರೆ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದರು, ನಾನು ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದೆನು. ಅವರು ಹೇಳಬೇಕಾಗಿರುವುದು ಇಷ್ಟೆ, ನಮ್ಮ ದೇಶಕ್ಕೆ ಸಂವಿಧಾನವನ್ನು ನಮ್ಮ ಪೂರ್ವಜರಾದ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ರವರ ನೇತೃತ್ವದಲ್ಲಿ ಕೊಟ್ಟಿರುತ್ತಾರೆ. ಅವರು ಕೊಟ್ಟಂತಹ ಸಂದರ್ಭದಲ್ಲಿ ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ನಾವು 70 ವರ್ಷ ಆಡಳಿತ ಮಾಡಿದ್ದೇವೆಯೇ? ಹಾಗಾದರೆ, ಸಂವಿಧಾನಕ್ಕೆ ತಿದ್ದುಪಡಿಯನ್ನು ಏಕೆ ಮಾಡಿದರು? ಸಂವಿಧಾನಕ್ಕೆ ಮೊದಲನೇ ತಿದ್ದುಪಡಿ ಮಾಡಿದಾಗ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಏಕೆ ಕಣ್ಣೀರು ಹಾಕಿದರು. ಅದಕ್ಕಾಗಿ ನಾವು ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಆಡಳಿತವನ್ನು ಮಾಡದೇ ಇದ್ದಾಗ ಇಂತಹ ವಿಪರ್ಯಾಸವಾಗುತ್ತಿದೆ. ಈ ದೇಶದಲ್ಲಿ ಅಭಿವೃದ್ಧಿ ಆಗಿಲ್ಲವೆಂದು ಹೇಳುವುದನ್ನು ನಾವು ಒಪ್ಪುವುದಿಲ್ಲ.

**ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಐದು ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆಯಿತು ಐದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಮಾನ್ಯ ಗೋವಿಂದ ಎಂ.ಕಾರಜೋಳರವರು ಸದನಕ್ಕೆ ತಡವಾಗಿ ಬಂದಂತೆ ಕಾಣಿಸುತ್ತಿದೆ. ನಾನು ಆರಂಭದಲ್ಲೇ ಭಾರತ ಎಷ್ಟೊಂದು ಸಾಧನೆ ಮಾಡಿದೆಯೆಂದು ಹೇಳಿದೆನು. ಇವತ್ತು ಪೌರಕಾರ್ಮಿಕರು ಯಾವ ರೀತಿ ದೂರವಾಣಿಯಲ್ಲಿ ಮಾತನಾಡಿಕೊಂಡು ಕೆಲಸ ನಿರ್ವಹಿಸುತ್ತಾರೆ. ಎಷ್ಟರಮಟ್ಟಿಗೆ ನಮ್ಮ ದೇಶ ಅಭಿವೃದ್ಧಿ ಹೊಂದಿದೆಯೆಂದು ವಿವರವಾಗಿ ಹೇಳಿದ್ದೇನೆ. ನಮ್ಮ ದೇಶದಲ್ಲಿ ಬಹಳ ದೊಡ್ಡ ಸಾಧನೆ ಮಾಡಲಾಗಿದೆ. ಆದರೆ, ಸಾಧಿಸಬೇಕಾಗಿರುವುದು ಇನ್ನೂ ತುಂಬಾ ಇದೆ ಎಂಬ ವಿಚಾರವನ್ನು ಹೇಳುತ್ತಿದ್ದೆ ಅಷ್ಟೆ. ಮಾನ್ಯ ಉಪ ಮುಖ್ಯಮಂತ್ರಿಗಳಾದ ಮಾನ್ಯ ಗೋವಿಂದ ಎಂ.ಕಾರಜೋಳರವರು ಸದನಕ್ಕೆ ತಡವಾಗಿ ಬಂದಿರುವುದರಿಂದ ಅವರಿಗೆ ಮಾಹಿತಿ ಸಿಕ್ಕಿಲ್ಲ. ಅವರು ಹೇಳಿದಂತಹ ಎಲ್ಲಾ ಮಾಹಿತಿಗಳ ಸಮಗ್ರ ಚಿತ್ರಣವನ್ನು ನಾನು ಈಗಾಗಲೇ ಹೇಳಿದ್ದೇನೆ. ಇವತ್ತಿನ ದಿವಸ ಇಡೀ ವ್ಯವಸ್ಥೆ pollute ಆಗಿದೆ. ಅದು ಒಂದೆರಡು ಅಲ್ಲ, ಅದು ಶಾಸಕಾಂಗ ಇರಬಹುದು, ಕಾರ್ಯಾಂಗ ಇರಬಹುದು ಮತ್ತು ನ್ಯಾಯಾಂಗ ಇರಬಹುದು, ಯಾವುದು ಒಂದಕ್ಕೊಂದು ಹೊರತಾಗಿಲ್ಲ. ಈ ಮೂರು ಅಂಗಗಳು ಅಲ್ಲದೇ, ಇಡೀ ದೇಶದ ಎಲ್ಲಾ ವ್ಯವಸ್ಥೆ ಕೂಡ pollute ಆಗಿದೆ. ಇವತ್ತಿನ ದಿವಸ ಅದನ್ನು ಸರಿಪಡಿಸಬೇಕಾಗಿದೆ. ಅದನ್ನು ಮೊದಲನೆಯ ಸ್ಥಿತಿಗೆ ತರಬೇಕಾಗಿದೆ. ಅದನ್ನು ತರತಕ್ಕಂಥ ದಿಸೆಯಲ್ಲಿ ಒಂದು ದೊಡ್ಡ ಪ್ರಯತ್ನವನ್ನು ಮಾಡಬೇಕಾಗಿದೆ. ನಮ್ಮ ಸ್ವಾತಂತ್ರ್ಯ ಪೂರ್ವದಲ್ಲಿ 560 ರಾಜ ಮಹಾರಾಜರ ಸಂಸ್ಥಾನಗಳಿದ್ದವು. 560 ಸಂಸ್ಥಾನಗಳಲ್ಲಿ ರಾಜ, ಮಹಾರಾಜರುಗಳು, ಸಾಮಂತ ರಾಜರು ಮತ್ತು ಪಾಳೆಗಾರರು ಇದ್ದರು. ಎಲ್ಲೋ ಒಂದು ಕಡೆ ಬ್ರಿಟಿಷ್‌ನವರು ನಮ್ಮ ದೇಶಕ್ಕೆ ಬಂದನಂತರ ನಾವೆಲ್ಲರೂ ಒಂದಾಗಿದ್ದೇವೆ. ನಮ್ಮ ದೇಶಕ್ಕೆ ಬ್ರಿಟಿಷ್‌ನವರು ಬರದೇ ಇದ್ದರೆ, ನಾವು ಇನ್ನೂ ಒಂದಾಗುತ್ತಿದ್ದೆವೋ, ಇಲ್ಲವೋ ಗೊತ್ತಿಲ್ಲ. ನಾವು ಇನ್ನೂ ಯಾವ ಸ್ಥಿತಿಗೆ ತಲುಪುತ್ತಿದ್ದೆವೊ ಗೊತ್ತಿಲ್ಲ. ಒಂದು ಕಡೆ railways, Posts and Telegraph ಇವೆಲ್ಲಾ ನಮ್ಮ ದೇಶಕ್ಕೆ ಬ್ರಿಟಿಷರು ಕೊಟ್ಟಂತಹ ಕಾಣಿಕೆಗಳು ಎಂದು ನಾವು ಹೇಳುತ್ತೇವೆ. ಏನೇ ಆಗಲಿ, ಇವತ್ತಿನ ದಿವಸ ಶಿಕ್ಷಣದ ವಿಚಾರದಲ್ಲಿ, ನಿರುದ್ಯೋಗ ಸಮಸ್ಯೆ ವಿಚಾರದಲ್ಲಿ, ಸೂರಿಲ್ಲದವರಿಗೆ ಸೂರು ಕೊಡತಕ್ಕಂಥ ವಿಚಾರದಲ್ಲಿ, ಹಸಿವು ನೀಗಿಸತಕ್ಕಂಥ ವಿಚಾರದಲ್ಲಿ ನಾವು ಬಹುದೊಡ್ಡ ಹೆಜ್ಜೆಗಳನ್ನಿಡಬೇಕಾಗುತ್ತದೆ. ಇವತ್ತಿಗೂ ಈ ದೇಶದಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಅಲೆಮಾರಿಗಳಿದ್ದಾರೆ. ಬಹುಶಃ ಮಕ್ಕಳಿಗೆ ಶಿಕ್ಷಣ ಕೊಡದಿರುವ ಜನಗಳು ಇದ್ದಾರೆ, ಸೂರು ಇಲ್ಲದ ಜನ ಇದ್ದಾರೆ. ಹಾಗಾಗಿ, ಇನ್ನೂ 70 ವರ್ಷಗಳು ಕಳೆದರೂ ಕೂಡ ನಮ್ಮ ದೇಶದಲ್ಲಿ ಅನೇಕ ಜನರಿಗೆ ಸೂರು ಇಲ್ಲವಲ್ಲಾ. ನಾವು ಸೂರು ಇಲ್ಲದವರ ಬಗ್ಗೆಯೂ ಕೂಡ ಯೋಚನೆ ಮಾಡಬೇಕಾಗುತ್ತದೆ. ಊಟ ಇಲ್ಲದೇ ಇರತಕ್ಕಂಥ ಜನರ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಅಲೆಮಾರಿ ಜೀವನ ನಡೆಸತಕ್ಕಂಥವರಿಗೆ ಆದ್ಯತೆ ಕೊಟ್ಟು, ಅವರನ್ನು ಮೇಲೆತ್ತಲು ಯೋಚನೆ ಮಾಡಬೇಕಾಗುತ್ತದೆ. ದುಡಿಯುವ ಕೈಗಳಿಗೆ ಕೆಲಸ ಕೊಟ್ಟಿಲ್ಲ, ಅವರ ಬಗ್ಗೆಯೂ ಕೂಡ ನಾವು ಯೋಚನೆ ಮಾಡಬೇಕಲ್ಲವೇ? ಹಾಗಾಗಿ, ನಮ್ಮ ದೇಶದಲ್ಲಿ ಇಂತಹ ಇನ್ನು ಗಂಭೀರವಾದ ಸಮಸ್ಯೆಗಳು ಬಹುದೊಡ್ಡ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಮಾಣದಲ್ಲಿವೆ. ಇವುಗಳಿಗೆಲ್ಲಾ ಪರಿಹಾರವನ್ನು ಕಂಡುಕೊಳ್ಳುವಂತಹ ಪ್ರಾಮಾಣಿಕವಾದಂತಹ ಪ್ರಯತ್ನ ಆಗಬೇಕಾಗಿದೆ. ಆ ಪ್ರಾಮಾಣಿಕವಾದ ಪ್ರಯತ್ನದ ಹಿನ್ನೆಲೆಯಲ್ಲಿ, ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ.ಕಾರಜೋಳರವರು ಹೇಳಿದಂತೆ, ಸಂವಿಧಾನವನ್ನು ಗಂಭೀರವಾಗಿ ಅನುಷ್ಠಾನಗೊಳಿಸುವ ದಿಸೆಯಲ್ಲಿ ಆಗಿರುವಂತಹ ತಪ್ಪುಗಳಿಂದ ಇಂತಹ ಅನಾಹುತಗಳಾಗಿವೆ. ಅದನ್ನು ನಾನು ಒಪ್ಪುತ್ತೇನೆ. ಅದನ್ನು ನೀವು mis-administration ಎನ್ನುತ್ತೀರೊ, mis-management ಎನ್ನುತ್ತೀರೊ ಅಥವಾ ಜನರ ಬಗ್ಗೆ ಕಾಳಜಿ ಇಲ್ಲದಿರುವ ಸರ್ಕಾರಗಳು ಎಂದು ಹೇಳುತ್ತೀರೊ ನನಗೆ ಗೊತ್ತಿಲ್ಲ. ಒಟ್ಟಾರೆಯಾಗಿ, ಸಮಸ್ಯೆಗಳು ಇನ್ನೂ ದೊಡ್ಡ ಪ್ರಮಾಣದಲ್ಲಿವೆ. ಇನ್ನೂ ಸಮಾಜವನ್ನು ಕಿತ್ತು ತಿನ್ನುವಂತಹ ಸಮಸ್ಯೆಗಳು ನಮ್ಮ ಜೊತೆ ಇವೆ. ಇನ್ನೂ ಮನುಷ್ಯ-ಮನುಷ್ಯನನ್ನು ಪ್ರೀತಿಸತಕ್ಕಂಥ ವಾತಾವರಣ ನಿರ್ಮಾಣವಾಗಿಲ್ಲ. ಆ ವಾತಾವರಣವನ್ನು ನಿರ್ಮಾಣ ಮಾಡಬೇಕು ಎನ್ನುವುದು ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರವರ ನೇತೃತ್ವದಲ್ಲಿ ರಚನೆಯಾದ ಸಂವಿಧಾನದ ಆಶಯವಾಗಿರುತ್ತದೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತಿನ ದಿವಸ ಈ ಸದನದಲ್ಲಿ ಸಂವಿಧಾನ ಕುರಿತು ಗಂಭೀರವಾದ ಚರ್ಚೆಗಳು ಆಗುತ್ತಿದೆ. ಇನ್ನೂ ಈ ಚರ್ಚೆ ನಡೆಯಲಿ. ನಮ್ಮ ವಿಧಾನಮಂಡಲದಲ್ಲಿ ತಾವು ಮತ್ತು ಕೆಳಮನೆಯ ಸ್ಪೀಕರ್‌ರವರು ಸೇರಿ ಸಂವಿಧಾನದ ಬಗ್ಗೆ ಸದನದಲ್ಲಿ ಭಾಷಣವನ್ನು ಮಾಡಿ, ಅದಕ್ಕೆ ಮುನ್ನುಡಿಯನ್ನು ಬರೆದಿದ್ದೀರಿ. ಇವತ್ತಿನ ದಿವಸ ಈ ರಾಜ್ಯದಲ್ಲಿ ಸಂವಿಧಾನದ ಬಗ್ಗೆ ಪೂರ್ಣ ಪರಿಚಯ ಮಾಡಿಕೊಡುವುದಕ್ಕೆ ಒಂದು ದೊಡ್ಡ ಪ್ರಯತ್ನ ಆರಂಭವಾಗಿದೆ. ಈ ಹಿಂದೆ ನಾವು ಶಾಲಾ-ಕಾಲೇಜುಗಳಲ್ಲಿ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಮಾತ್ರ ಸಂವಿಧಾನದ ಬಗ್ಗೆ ಪಾಠ ಹೇಳಿಕೊಡಲಾಗುತ್ತಿತ್ತು. ಆದರೆ, ಈಗ ಎಲ್ಲಾ ವಿದ್ಯಾರ್ಥಿಗಳಿಗೂ ಸಂವಿಧಾನದ ಬಗ್ಗೆ ಪಾಠ ಹೇಳಿಕೊಡತಕ್ಕಂಥ ವ್ಯವಸ್ಥೆ ಮಾಡಲಾಗಿದೆ. ಇಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಂವಿಧಾನ ಕುರಿತು ಪಾಠ ಮಾಡಲಾಗುತ್ತಿದೆ. ಉಳಿದ ಮೆಡಿಕಲ್ ವಿದ್ಯಾರ್ಥಿಗಳಿಗೂ ಕೂಡ ಸಂವಿಧಾನದ ಬಗ್ಗೆ ಪಾಠ ಹೇಳಿಕೊಡಿ. ಅದೇ ರೀತಿ ಎಲ್ಲಾ ವಿದ್ಯಾರ್ಥಿಗಳಿಗೂ ಸಂವಿಧಾನದ ಕುರಿತು ಪಾಠ ಮಾಡಿ. ಅನಕ್ಷರಸ್ಥರಿಗೂ ಕೂಡ ಸಂವಿಧಾನದ ಬಗ್ಗೆ ತಿಳಿಸಿಕೊಡಿ. ನಾವು ಅಕ್ಷರಸ್ಥರೇ, ತಪ್ಪುಗಳನ್ನು ಮಾಡುತ್ತಿದ್ದೇವೆ. ನಮ್ಮ ರಾಜ್ಯ ಸಭಾ ಟಿ.ವಿ. ಚಾನೆಲ್‌ನಲ್ಲಿ ಅನಕ್ಷರಸ್ಥರೂ ಕೂಡ ಸಂವಿಧಾನದ ಬಗ್ಗೆ ತಿಳಿದುಕೊಳ್ಳಲು ಕೂಡ ಒಂದು Documentary ಮಾಡಿದೆ. ಅದು 10 ಗಂಟೆಯ Documentary ಇದೆ. ಆ Documentary ಯನ್ನು ಕನ್ನಡ ಭಾಷೆಗೆ ಅವತರಣಿಕೆಯಲ್ಲಿ ಮಾಡಿ. ಏಕೆಂದರೆ, ಓದುಬರಹ ಬರುವ ಮತ್ತು ಓದುಬರಹ ಬಾರದೇ ಇರತಕ್ಕಂಥ ಎಲ್ಲರಿಗೂ ಮುಟ್ಟುವಂತಹ ಮಾಧ್ಯಮವೆಂದರೆ ಅದು ದೃಶ್ಯಮಾಧ್ಯಮ.

ಮಾನ್ಯ ಸಭಾಪತಿಯವರೇ, ಸಿನಿಮಾ ಮತ್ತು ನಾಟಕಗಳನ್ನು ವೀಕ್ಷಿಸಿ ಕೇಳಿಸಿಕೊಂಡರೆ ಸಾಕು, ಓದು-ಬರಹ ಬರದೇ ಇರತಕ್ಕಂಥವರೂ ಕೂಡ ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತಾರೆ. ಮತ್ತೆ ಅವರೂ ಕೂಡ ನಾಟಕ ಮಾಡುತ್ತಾರೆ, ಅವರೂ ಸಿನಿಮಾ ಮಾಡುತ್ತಾರೆ. ಹಾಗಾಗಿ, ನೀವು ಆ Documentary ಯನ್ನು ಕನ್ನಡ ಭಾಷೆಗೆ ಅವತರಣಿಕೆಯಲ್ಲಿಯೇ ಮಾಡಬೇಕು. ನಾವೆಲ್ಲಾ ಚಿತ್ರಮಂದಿರಗಳಿಗೆ ಸಿನಿಮಾ ರಿಲೀಸ್ ಆಗುವುದಕ್ಕಿಂತ ಮುಂಚೆ ಸೈಡ್

ರೀಲ್ ಅನ್ನು ನೋಡಲು ಹೋಗುತ್ತಿದ್ದೆವು. ಅಂತಹ ಕಡೆಗಳಲ್ಲಿ ಹಾಕಿ ಜನರಿಗೆ ತೋರಿಸಬೇಕು. ಸಂವಿಧಾನ ರಚನಾ ಸಭೆ ಯಾವ ರೀತಿ ಆಯಿತು, ಸಂವಿಧಾನ ಹೇಗೆ ರಚನೆಯಾಯಿತು, ಸಂವಿಧಾನದ ಆಶಯಗಳೇನು ಎಂದು ತಿಳಿಸಬೇಕಾಗಿರುತ್ತದೆ. ಸಂವಿಧಾನದಲ್ಲಿ ಪ್ರಜೆಯೇ ಪ್ರಭು. ನೀನೇ ನಿಜವಾದ ಪ್ರಭು ಎಂದು ಜನರಿಗೆ ಹೇಳಿದರೆ ಅದು ಅವರಿಗೆ ಅರ್ಥ ಆಗಬೇಕಲ್ಲವೇ? ನಮ್ಮೂರಲ್ಲಿರುವ ಬೋರಪ್ಪನಿಗೆ, ನೋಡಪ್ಪಾ, ನೀನು ಪ್ರಜಾಪ್ರಭುತ್ವದ ಪ್ರಭು ಎಂದರೆ, ಆತನು 'ಅರೆರೆ ಇವನು ನನ್ನನ್ನು ಪ್ರಭು ಎಂದು ಕರೆಯುತ್ತಿದ್ದಾನೆ, ಇವನಿಗೆ ತಲೆ ಸರಿಯಿಲ್ಲ' ಎಂದು ನಕ್ಕುಬಿಡುತ್ತಾನೆ. ಹಾಗಾಗಿ, ಸಮಾಜದಲ್ಲಿರುವ ಕಟ್ಟಕಡೆಯ ಮನುಷ್ಯನಿಗೂ ಪ್ರಜಾಪ್ರಭುತ್ವದ ಅರಿವನ್ನು ಮೂಡಿಸುವಂತಹ ಕೆಲಸ ಆಗಬೇಕಾಗಿದೆ. ವಿದ್ಯಾವಂತರು ಪಠ್ಯಪುಸ್ತಕಗಳಿಂದ ಸಂವಿಧಾನದ ಬಗ್ಗೆ ತಿಳಿದುಕೊಳ್ಳುತ್ತಿದ್ದಾರೆ. ಆದರೆ ಅವಿದ್ಯಾವಂತರನ್ನೂ ಕೂಡ ಒಟ್ಟು ವಾಹಿನಿಗೆ ತರುವಂತಹ ದಿಸೆಯಲ್ಲಿ, ಈ ಒಂದು ಸಂವಿಧಾನವನ್ನು ಪರಿಚಯ ಮಾಡಿಕೊಡುವಂತಹ ಪ್ರಯತ್ನ ಆಗಬೇಕು. ತಾವು ವಿಧಾನಮಂಡಲದ ಗ್ರಂಥಾಲಯ ಸಮಿತಿಗೆ ಅಧ್ಯಕ್ಷರಿದ್ದೀರಿ. ಆ ಹಿಂದಿ ಅವತರಣಿಕೆಯಲ್ಲಿರುವ ಸಂವಿಧಾನದ Documentary ಯನ್ನು ಕನ್ನಡ ಭಾಷೆಗೆ ಅವತರಣಿಕೆ ಆಗುವಂತೆ ಮಾಡಿದಾಗ, ಈ ರಾಜ್ಯದ ಮೂಲೆ ಮೂಲೆಗೂ ಹಳ್ಳಿ-ಹಳ್ಳಿಗಳಿಗೂ ತಲುಪುವಂತಹ ಕೆಲಸವನ್ನು ಮಾಡಿ. ಜನರಿಗೆ ಸಂವಿಧಾನದ ಕುರಿತು ಸಂಪೂರ್ಣವಾಗಿ ಪರಿಚಯವಾಗಲಿ. ಇದರ ಜೊತೆಗೆ ರಾಜಕೀಯ ಪ್ರಜ್ಞೆ, ಜಾಗೃತಿ ಮೂಡಿಸುವಂತಹ ದಿಸೆಯಲ್ಲಿ ಮತ್ತೆ ಈ ರಾಷ್ಟ್ರವನ್ನು ಬಲಿಷ್ಠವಾಗಿ ಕಟ್ಟುವ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಮತ್ತು ಮಹಾತ್ಮ ಗಾಂಧೀಜಿಯವರ ಆಶಯವನ್ನು ನನಸು ಮಾಡುವಂತಹ ದಿಸೆಯಲ್ಲಿ ನಾವೆಲ್ಲರೂ, ನಮ್ಮ ನಮ್ಮನ್ನು ಪ್ರಶ್ನೆ ಮಾಡಿಕೊಂಡು, ನಾವು ಒಟ್ಟು ವಾಹಿನಿಗೆ ಆರೋಗ್ಯಕರವಾದಂತಹ ದೃಷ್ಟಿಯಲ್ಲಿ ಚಿಂತನೆ ಮಾಡುವಂತಹ ಅವಕಾಶಗಳು ನಿರ್ಮಾಣವಾಗಲಿ ಎಂದು ಆಶಿಸುತ್ತಾ, ನನಗೆ ಇಷ್ಟು ಹೊತ್ತು ಸಂವಿಧಾನದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

**ಡಾ॥ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ನಾನು ಎಲ್ಲರಿಗೂ ಮಾತನಾಡಲು ಅವಕಾಶ ಕೊಡಬೇಕಲ್ಲವೇ?

**ಡಾ॥ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಕೆಳಮನೆಯಲ್ಲಿ ಸಭಾಧ್ಯಕ್ಷರ ಮೂಲಕ ಮತ್ತು ಮೇಲ್ಮನೆಯಲ್ಲಿ ತಮ್ಮ ಮೂಲಕ ಸಂವಿಧಾನದ ಬಗ್ಗೆ ಸದನದಲ್ಲಿ ಭಾಷಣವನ್ನು ಮಾಡಿ, ಅದಕ್ಕೆ ಮುನ್ನುಡಿಯನ್ನು ಬರೆದಿದ್ದೀರಿ. ಸಂವಿಧಾನವು ಈ ದೇಶದ ಉದ್‌ಗ್ರಂಥ ಹಾಗೂ ನಮ್ಮೆಲ್ಲರ ಒಂದು ರಕ್ಷಣಾ ಕವಚ. ನಮಗೆ ಸಂವಿಧಾನದಿಂದ ರಕ್ಷಣೆ ಸಿಕ್ಕಿರುವುದರಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಕ ನಮ್ಮ ವಿಚಾರಧಾರೆಗಳನ್ನು ಮಂಡಿಸುವುದಕ್ಕೆ ಸಾಧ್ಯವಾಗಿದೆ. ಸಂವಿಧಾನದ ಬಗ್ಗೆ ಮಾತನಾಡಲು ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ನಾನು ಈ ಸಂದರ್ಭದಲ್ಲಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಭಾರತ ದೇಶ 10 ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. ಅನೇಕ ಸನ್ಮಿತ್ರ ಸದಸ್ಯರುಗಳು ಈಗಾಗಲೇ ಹೇಳಿದರು. ಇವತ್ತಿಗೂ ರೂಢಿ ಮತ್ತು ಸಂಪ್ರದಾಯಗಳನ್ನೇ ಪಾಲಿಸಿಕೊಂಡು ಬರುತ್ತಿರುವ ಇಂಗ್ಲೆಂಡ್, ಸೂರ್ಯ ಮುಳುಗದ ಸಾಮ್ರಾಜ್ಯವೆಂದು ತಿಳಿದುಕೊಂಡು ಜಗತ್ತಿನ ಅನೇಕ ದೇಶಗಳ ಮೇಲೆ ತನ್ನ ಪಾರುಪತ್ಯವನ್ನು ಮೆರೆಯಿತು. ಕಲೋನಿಯಲ್ ರೂಲ್, ವಸಾಹತು ಶಾಹಿ, ನೆಪೋಲಿಯನ್ ಆಡಳಿತ ಮತ್ತು ಸ್ಟಾಲಿನ್ ಆಡಳಿತ, ಈ ಪದಗಳು ಇವತ್ತಿಗೂ ಉಳಿದಿದೆ. ಸರ್ವಾಧಿಕಾರಿ ಆಡಳಿತ, Aristocrat ಎಂದು ಹೇಳುವಂತಹ ಈ ರೀತಿಯ ಪದಗಳಿಂದ ಪ್ರಜಾಪ್ರಭುತ್ವದ ಕಗ್ಗೊಲೆ ಆದಂತಹ ಸಂದರ್ಭದಲ್ಲಿ, ಈ ಶಬ್ದಗಳ ಮೂಲಕ ಕಟುವಾದಂತಹ ಸಂದರ್ಭವನ್ನು ಕಂಡಿಸುತ್ತೇವೆ. ಈ ಸದನದಲ್ಲಿ ಅನೇಕ ಮುತ್ಸದ್ಧಿಗಳು ನಮಗೆ ಪ್ರೇರಣಾ ಶಕ್ತಿಯಾಗಿರುವಂತಹ ಭಾರತ ರತ್ನ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಚಿತ್ರ ಇದೆ. ಜೈ ಜವಾನ್, ಜೈ ಕಿಸಾನ್ ಎಂದು ಹೇಳಿದಂತಹ ಪ್ರಮಾಣಿಕತೆ ಮತ್ತು ಸರಳತೆಗೆ ಒಂದು ಉದಾರಣೆಯಾಗಿರತಕ್ಕಂಥ ಮಾನ್ಯ ಲಾಲ್ ಬಹದ್ದೂರ್ ಶಾಸ್ತ್ರಿಯವರ ಫೋಟೋ ಇದೆ.

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠಾಸೀನರಾದರು)**

**ಡಾ॥ತೇಜಸ್ವಿನಿ ಗೌಡ:–** ಕಾರ್ಯಾಂಗ ಎಷ್ಟು ಚೆನ್ನಾಗಿ ಕೆಲಸ ಮಾಡಬಹುದು, ಸುಂದರ ಭಾರತವನ್ನು, ಸುಂದರ ಕರ್ನಾಟಕವನ್ನು ಎಷ್ಟು ಚೆನ್ನಾಗಿ ಕಟ್ಟಬಹುದು ಎನ್ನುವುದಕ್ಕೆ ಅತ್ಯುನ್ನತ ಪ್ರಶಸ್ತಿಯಾದ ಭಾರತ ರತ್ನ ಪ್ರಶಸ್ತಿಯನ್ನು ಗಳಿಸಿದಂತಹ ಡಾಕ್ಟರ್ ಸರ್ ಎಂ. ವಿಶ್ವೇಶ್ವರಯ್ಯನವರ ಫೋಟೋ ಇದೆ. ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರು ಸ್ವಾತಂತ್ರ್ಯ ಬರುವಾಗ ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಸ್ವಾತಂತ್ರ್ಯವನ್ನು ಬಲಪ್ರಯೋಗದ ಮೂಲಕ ಪಡೆಯಬೇಕು. ಶಕ್ತಿಯನ್ನು ಉಪಯೋಗಿಸಿ ಸ್ವಾತಂತ್ರ್ಯವನ್ನು ಪಡೆಯಬೇಕು ಎನ್ನುವುದು ಒಂದು ಚಿಂತನೆಯಾಗಿತ್ತು. ಮಾನ್ಯ ಭಗತ್ ಸಿಂಗ್ ಮತ್ತು ಚಂದ್ರಶೇಖರ್ ಆಜಾದ್ ಇವರುಗಳು ಈ ಸಾಲಿನಲ್ಲಿ ಬರುತ್ತಾರೆ. ಭಾರತವನ್ನು ಅಹಿಂಸೆ ಮತ್ತು ಸತ್ಯಾಗ್ರಹದ ಮೂಲಕ ಸ್ವಾತಂತ್ರ್ಯ ಪಡೆಯಬೇಕೆಂದು ಮಹಾತ್ಮ ಗಾಂಧೀಜಿಯವರು ಒಂದು ಹಾದಿಯನ್ನು ಹಿಡಿದರು. ಅದರಲ್ಲಿ ಅನೇಕರು ಹುತಾತ್ಮರಾದರು. ಕೆಲವರನ್ನು ಗಲ್ಲಿಗೇರಿಸಲಾಯಿತು. ಸ್ವಾತಂತ್ರ್ಯ ಗಳಿಸಲು ತ್ಯಾಗ ಬಲಿದಾನ ಮಾಡಿದವರನ್ನು ಮರೆತವರಿಗೆ ಸಂವಿಧಾನ ಅರ್ಥವಾಗುವುದಕ್ಕೆ ಸಾಧ್ಯವಿಲ್ಲ. 565 ರಾಜ ಸಂಸ್ಥಾನಗಳನ್ನು ಹೊಂದಿದಂತಹ ದೇಶವನ್ನು ಮನವೊಲಿಸಿ, ಪ್ರಜಾಸತ್ತಾತ್ಮಕವಾಗಿ ತರಬೇಕಾದರೆ, ಗಣರಾಜ್ಯವನ್ನಾಗಿ ಮಾಡಬೇಕಾದರೆ, ಭಾರತ ರತ್ನ ಉಕ್ಕಿನ ಮನುಷ್ಯರಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲ್‌ರವರು ಅವೊತ್ತಿನ ಗೃಹ ಸಚಿವರಾಗಿದ್ದರು. ನಾವು ಅವರನ್ನು ಇವತ್ತಿಗೂ ಸ್ಮರಿಸುತ್ತೇವೆ. ಅವರೆಲ್ಲರ ಪರಿಶ್ರಮದಿಂದ ಇವತ್ತಿನ ದಿವಸ ಇಂತಹ ಉತ್ತಮವಾದ ಗಣರಾಜ್ಯವಾಗಿರುವ ನಮ್ಮ ಭಾರತ ದೇಶ ನಮ್ಮೆದುರಿಗೆ ಇದೆ. ವಿಶ್ವಸಂಸ್ಥೆಯಲ್ಲಿ ಮಾನವ ಹಕ್ಕುಗಳ ರಕ್ಷಣೆಗೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪೂರಕವಾಗುವಂತಹ 38 ಅಂಶಗಳನ್ನು ಪಟ್ಟಿಮಾಡಲಾಗಿದೆ. ಅದರಲ್ಲಿ ನಾನು ತುಂಬಾ ಹೆಮ್ಮೆಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

**(ಮುಂದು)**

**(302)11.3.2020/12.20/ಎಂ.ಎಂ–ಕೆ.ಎಸ್**
**ಡಾ: ತೇಜಸ್ವಿನಿ ಗೌಡ(ಮುಂದು):**

12ನೆಯ ಶತಮಾನದಲ್ಲಿ ವಚನ ಕ್ರಾಂತಿಯ ಮೂಲಕ ಬಸವಾದಿ ಶಿವ ಶರಣರ ಮೂಲಕ ಜಗತ್ತಿಗೆ ಮೊಟ್ಟ ಮೊದಲ ಅಲಿಖಿತ ಸಂಸತ್ತನ್ನು ಕೊಟ್ಟಿದ್ದರೆ, ಅದು ನಮ್ಮವರೇ ಆದ ಕಲ್ಯಾಣ ಕರ್ನಾಟಕ ಎಂದು ನಾವು ಏನು ಅಭಿಮಾನದಿಂದ ಕರೆಯುತ್ತೇವೆ; ಸಾಮಾಜಿಕ ಕ್ರಾಂತಿ ವಚನಗಳ ಮೂಲಕ, ವೈಚಾರಿಕತೆಗಳ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಕ, ಅನುಭವ ಮಂಟಪವನ್ನು ಮೊಟ್ಟ ಮೊದಲ ಸಂಸತ್ತು ಎಂದು ಹೇಳಬಹುದು. ಇತ್ತೀಚೆಗೆ ಮಾನ್ಯ ಪ್ರಧಾನ ಮಂತ್ರಿಯವರು ಇಂಗ್ಲೆಂಡ್‌ನಲ್ಲಿ 'ಬಸವಣ್ಣ'ನವರ ಪ್ರತಿಮೆಯನ್ನು ಅನಾವರಣ ಮಾಡುವ ಸಂದರ್ಭದಲ್ಲಿ ಅಂತಹ ಮಾತುಗಳನ್ನು ಉಲ್ಲೇಖ ಮಾಡಿದ್ದಾರೆ. ನಾವು ಧನ್ಯರಿದ್ದೇವೆ. ಅತ್ಯುತ್ತಮವಾದ ಆರ್ಥಿಕತೆಯನ್ನು ಹೇಗೆ ತರಬಹುದೆಂದು ಬಸವಣ್ಣನವರು ಹೇಳಿದರು, ಮಹಿಳೆಯನ್ನು ಭೋಗದ ವಸ್ತುವನ್ನಾಗಿ ನೋಡುವ ಕಾಲದಲ್ಲಿ ಇವತ್ತು ಕೂಡ ಗಾಂಧೀಜಿ ಕಂಡಂತಹ ಕನಸು, ಅರ್ಧ ರಾತ್ರಿಯಲ್ಲಿ ಮಹಿಳೆ ಸ್ವತಂತ್ರವಾಗಿ ನಿರ್ಭಯವಾಗಿ ತಿರುಗಾಡುವಂತಹ ಸ್ಥಿತಿ ಇಲ್ಲ. ಅಂತಹದ್ದರಲ್ಲಿ ಅಕ್ಕಮಹಾದೇವಿಯವರಿಗೆ ಅವಕಾಶ ಕೊಟ್ಟಿದ್ದು ಮಾತ್ರವಲ್ಲ, ಅವರ ವಿಚಾರಗಳನ್ನು ಕೇಳುವಂತಹ ಪ್ರಾತಿನಿಧ್ಯ; ಇವತ್ತು ಕೇವಲ ನಾವು ನಾಲ್ಕು ಮಂದಿ ಇಲ್ಲಿದ್ದೇವೆ. ಅಕ್ಕಮಹಾದೇವಿಯವರು ಅವತ್ತಿನ ಪುಟ್ಟ ಅನುಭವ ಮಂಟಪದಲ್ಲಿ ಪ್ರತಿನಿಧಿಸಿದ್ದರು ಎಂದು ಹೇಳಿದರೆ ನಾವು ಹೆಮ್ಮೆ ಪಡುವಂತಹ ಸಂದರ್ಭ ಇದೆ. ಜಾತಿಯ ಹೆಸರಿನಲ್ಲಿ ಮನುಷ್ಯ ಮನುಷ್ಯನನ್ನು ಶೋಷಣೆ ಮಾಡಬಾರದು. ವ್ಯಕ್ತಿ ಸ್ವಾತಂತ್ರ್ಯವನ್ನು, ವ್ಯಕ್ತಿ ಗೌರವವನ್ನು ಅವರು ಹೇಳುವ ರೀತಿ ಬಸವಣ್ಣನವರು ಹೇಳುತ್ತಾರೆ; ಮಾನ್ಯ ಗೋವಿಂದ ಕಾರಜೋಳರವರು ಅವಕಾಶ ಸಿಕ್ಕಾಗಲೆಲ್ಲಾ ಅಧ್ಯಯನದ ದೃಷ್ಟಿಯಿಂದ ನಮಗೆ ಸಮಯವನ್ನು ಕೊಡುತ್ತಾರೆ, ಅವರಿಗೆ ನಾನು ಧನ್ಯವಾದವನ್ನು ಹೇಳುತ್ತೇನೆ. ಇವತ್ತು ನಾವು ಹೇಳುತ್ತೇವೆ, 'Secular Nation' ಜಾತ್ಯಾತೀತ ಭಾರತ ಎಲ್ಲಿದೆ ಮಾನ್ಯ ಐವನ್ ಜೀಯವರೇ? "ಸೆಟ್ಟಿಯೆಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಮಾದಾರನೆಂಬೆನೆ ಚೆನ್ನಯ್ಯನ? ಡೋಹರನೆಂಬೆನೆ ಕಕ್ಕಯ್ಯನ? ಆನು ಹಾರುವನೆಂದಡೆ ನಗುವ ನಮ್ಮ ಕೂಡಲಸಂಗಮದೇವ" ಎಂದು ಬಸವಣ್ಣನವರು 12ನೇ ಶತಮಾನದಲ್ಲಿ 900 ವರ್ಷಗಳ ಹಿಂದೆ ಹೇಳಿದ್ದಾರೆ.

ಸಂವಿಧಾನ ನಮಗೆ ಎಲ್ಲವನ್ನೂ ಹೇಳಿದೆ. ಸಂವಿಧಾನಕ್ಕೆ ಕಾನೂನು ಸಚಿವರಾದ ಮಾನ್ಯ ಮಾಧುಸ್ವಾಮಿಯವರು ತಮ್ಮ ಪ್ರಸ್ತಾವಿಕ ಭಾಷಣದಲ್ಲಿ ಬಹಳ ಉತ್ತಮವಾಗಿ ಹೇಳಿದರು. ಗಾಂಧೀಜಿಯವರನ್ನು ನಾವು ಸ್ಮರಿಸುತ್ತೇವೆ. ಅಧಿಕಾರವನ್ನೇ ಬಯಸದೆ ಅತ್ಯುನ್ನತ ಜೀವನವನ್ನು ನಡೆಸುತ್ತಿದ್ದಂತಹವರು ದಕ್ಷಿಣ ಭಾರತದಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಜನಾಂಗೀಯ ತಾರತಮ್ಯದ ವಿರುದ್ಧ ಹೋರಾಟ ಮಾಡಿದಂತಹವರು, ಭಾರತ ದೇಶಕ್ಕೆ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಯನ್ನು ರೂಪಿಸುವಾಗ ಯಾವತ್ತೂ ಕೂಡ ಅಧಿಕಾರವನ್ನು ಬಯಸಬೇಕೆನ್ನುವ ಸ್ವಾರ್ಥವನ್ನು ಅವರು ಇಟ್ಟುಕೊಳ್ಳಲಿಲ್ಲ. ಅವರಿಗೆ ಯಾವ ಪದವಿಯ ಆಸೆಯೂ ಇರಲಿಲ್ಲ. ಅದಕ್ಕೋಸ್ಕರವೇ ಗಾಂಧೀಜಿಯವರು "ರಾಷ್ಟ್ರಪಿತ", "ಪಿತಾಮಹ" ಎಂದು ಎನಿಸಿಕೊಂಡರು. ಅವರಿಗೆ ನಮ್ಮ ದೇಶದಲ್ಲಿನ ಅನೇಕ ವ್ಯಕ್ತಿತ್ವಗಳು ಪ್ರೇರಣೆಯಾಗಿದ್ದವು. ಅದರಲ್ಲಿ ಗಾಂಧೀಜಿಯವರ ಮೇಲೆ ಬಹುಮುಖ್ಯವಾಗಿ ಪ್ರಭಾವ ಬೀರಿದಂತಹವರು ರಾಮಾಯಣ ಮಹಾಕಾವ್ಯದ ಆದರ್ಶ ಪುರುಷ 'ಶ್ರೀ ರಾಮ'. ರಾಮ ರಾಜ್ಯದ ಕಲ್ಪನೆ; ಮರ್ಯಾದಾ ಪುರುಷೋತ್ತಮ, ಏಕಪತ್ನೀ ವ್ರತಸ್ಥ, ಬೀದಿಯಲ್ಲಿ ಹೋಗುವ 'ಅಗಸ' ಎನ್ನುವ ಪದವನ್ನು ಬಳಸುವುದಕ್ಕೆ ನಾನು ಇಷ್ಟಪಡುವುದಿಲ್ಲ. ಕಟ್ಟಕಡೆಯ ಮನುಷ್ಯ ವನವಾಸವನ್ನು ಮುಗಿಸಿ ಬಂದ ಮೇಲೆ ನಿನ್ನ ಪತ್ನಿಯ ಶೀಲದ ಬಗ್ಗೆ ಶಂಕೆಯಿದೆ ಎಂದಾಗ ಜನರೆಲ್ಲಾ ಬೈಯುತ್ತಾರೆ. ಸೀತೆಯನ್ನು ಕಾಡಿಗೆ ಕಳುಹಿಸಿದ ಮಹಾಪುರುಷ ಡೆಮಾಕ್ರಸಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎಷ್ಟು ಮನ್ನಣೆಯನ್ನು 'ರಾಮ' ಕೊಟ್ಟಿದ್ದರು ಎನ್ನತಕ್ಕಂತಹದ್ದನ್ನು ನನಗೆ ಆ ಅಂಶ ಇಲ್ಲಿ ಬಹಳ ಪೂರಕವಾಗಿ ಕಾಣುತ್ತದೆ. ಪಿತೃವಾಕ್ಯ ಪರಿಪಾಲಕ, ಬಲ ಪ್ರಯೋಗವೇ ನ್ಯಾಯ; jungle law ಎಂದು ಹೇಳುತ್ತೇವೆ, ನಾಗರಿಕತೆ ಹಾಗೂ uncivilized ಎನ್ನುತ್ತೇವೆ, ನಾಗರೀಕನಾದವನು ಅನಾಗರೀಕವಾಗಿ ವರ್ತಿಸಬೇಡ ಎನ್ನುತ್ತೇವೆ. ಸಿವಿಲ್ ಸೊಸೈಟಿ, ನಾಗರಿಕ ಸೊಸೈಟಿ ಎಂದೆಲ್ಲಾ ಹೇಳುತ್ತೇವೆ. ಬಲಾಢ್ಯತೆ, ಬಲಿಷ್ಠತೆಯೇ ಪ್ರಧಾನವಾಗಿದ್ದಂತಹ ಕಾಲವೊಂದಿತ್ತು. ಆದರೆ ಇವತ್ತು ಬಲಪ್ರಧಾನವಲ್ಲ; ಬುದ್ಧಿಮತ್ತೆ, ಸಾಮಾಜಿಕ ನ್ಯಾಯ, ಅವಕಾಶ ಇವುಗಳಿಗೆ ಆದ್ಯತೆ ಇದೆ. ಭಾರತದಲ್ಲಿನ ಅನೇಕ ಗ್ರಾಮಗಳಲ್ಲಿ ಅನೇಕ ಗ್ರಾಮಗಳಲ್ಲಿ ರಾಮರಾಜ್ಯದ ಕಲ್ಪನೆಯ ಗ್ರಾಮ ಸ್ವರಾಜ್ಯ ಇವತ್ತಿಗೂ ಆಗಬೇಕಾಗಿದೆ. ಗಾಂಧೀಜಿಯವರು ಕನಸು ಕಂಡರು, ಅರ್ಧರಾತ್ರಿಯಲ್ಲಿ ಮಹಿಳೆ ಬೀದಿಯಲ್ಲಿ ನಿರ್ಭಯವಾಗಿ ತಿರುಗಾಡಬೇಕು, ಅವತ್ತು ನಿಜವಾದ ಸ್ವಾತಂತ್ರ್ಯ ಸಿಕ್ಕಿದೆ ಎಂದು ನಾನು ಪರಿಗಣಿಸುತ್ತೇನೆ ಎಂದರು. ನಿರ್ಭಯ ಎನ್ನುವ ಹೆಣ್ಣುಮಗಳು ದೆಹಲಿಯ ಬೀದಿಯಲ್ಲಿ ಬಸ್ಸಿಗೆ ಕಾಯುತ್ತಿದ್ದಾಗ ಅರ್ಧರಾತ್ರಿಯಲ್ಲಿ ಕಾಮುಕರ ದಂಡು ಆಕೆಯ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ಮಾಡಿ, ಸಂಚರಿಸುವ ಬಸ್‌ನಲ್ಲಿ ಅವಳ dignity ಯನ್ನು modesty ಯನ್ನು outrage ಮಾಡಿ ಅವಳನ್ನು ಅತ್ಯಂತ ಕ್ರೂರವಾಗಿ, ಆ ಕ್ರೌರ್ಯಕ್ಕೆ ಯಾವುದೇ ಪದ/ಶಬ್ದಗಳನ್ನು ಬಳಸುವುದಕ್ಕೆ ಸಾಧ್ಯವಿಲ್ಲ. ಅವಳನ್ನು ಕೊಲ್ಲುವ ಪ್ರಯತ್ನ ಮಾಡಿ, ತದನಂತರ ಅವಳು ಆಸ್ಪತ್ರೆಯಲ್ಲಿ ನರಳಿ ನರಳಿ ಸಾಯುತ್ತಾಳಲ್ಲ; ನಮ್ಮ ಕಾಲದಲ್ಲಿ ಯಾವತ್ತು ಇಂತಹ ದುರಂತಗಳು ನಡೆಯುವುದಿಲ್ಲ ಎನ್ನುವ ಆಶಯವನ್ನು ತರುವುದು? ಇತ್ತೀಚೆಗೆ ತೆಲಂಗಾಣದಲ್ಲಿ ಪ್ರಿಯಾಂಕ ರೆಡ್ಡಿ ಎನ್ನುವಂತಹ ವೈದ್ಯೆಯ ಮೇಲೆ ಹಾಡುಹಗಲಿನಲ್ಲಿಯೇ ಸಾಮೂಹಿಕ ಅತ್ಯಾಚಾರ ನಡೆದು, ಆಕೆಯನ್ನು ಸಜೀವವಾಗಿ ಸುಡುತ್ತಾರಲ್ಲಾ; ಯಾವತ್ತು ಮಹಿಳಾ ಸ್ವಾತಂತ್ರ್ಯ, ಯಾವತ್ತು ಮಹಿಳೆಯ dignity ಯನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಮಹನೀಯರೇ? ತ್ರೇತಾಯುಗದಲ್ಲಿ ಶ್ರೀರಾಮಚಂದ್ರರು ಹೇಗೆ ನಮಗೆ ಪ್ರೇರಣೆ ಆಗುತ್ತಾರೆಯೋ ಅದೇ ರೀತಿ ಮಹಾಭಾರತದಲ್ಲಿ ದ್ವಾಪರ ಯುಗದಲ್ಲಿ ಶ್ರೀಕೃಷ್ಣನನ್ನು ಅರ್ಜುನನು ಯುದ್ಧರಂಗದಲ್ಲಿ "ನನಗೆ ಯುದ್ಧ ಮಾಡಲು ಆಗುವುದಿಲ್ಲ; ಅಣ್ಣ, ತಮ್ಮ, ಮಾವ ಎಲ್ಲರೂ ಯುದ್ಧರಂಗದಲ್ಲಿ ಕಾಣುತ್ತಿದ್ದಾರೆ, ನನ್ನ ಬಂಧು-ಬಳಗ ಇದೆ, ಯುದ್ಧ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವುದಕ್ಕೆ ನನ್ನ ಕೈಯಿಂದ ಸಾಧ್ಯವಿಲ್ಲ ಕೃಷ್ಣಾ ಎಂದು ಕೇಳುತ್ತಾನೆ. ಆಗ ಪ್ರೇರಣಾ ಶಕ್ತಿಯಾದ ಶ್ರೀ ಕೃಷ್ಣ ಒಂದೇ ಮಾತು ಹೇಳಿದ್ದು: "ನೀನು ಧರ್ಮ ರಕ್ಷಕ, ನೀನು ರಕ್ಷಕ, ನೀನು ರಾಜ್ಯವನ್ನು ರಕ್ಷಣೆ ಮಾಡಬೇಕು"; ದೇಶಕ್ಕೆ ಪ್ರಧಾನಿ ಒಂದು ವ್ಯವಸ್ಥೆಯನ್ನು ತಂದರು; ಇವತ್ತು ಸರ್ಕಾರ, ಅವತ್ತು ರಾಜ. ಅವರು ಹೇಳಿದರು, "ನಿನಗೆ ಅದ್ಯಾವುದೂ ಕಾಣಬೇಕಾಗಿಲ್ಲ, ನಿನ್ನ ಒಳಗಣ್ಣಿಗೆ ಕಾಣಬೇಕಾಗಿರುವುದು ಧರ್ಮ ಮತ್ತು ಅಧರ್ಮದ ನಡುವಿನ ಯುದ್ಧ; ಗುರಿಯನ್ನು ಮಾತ್ರ ಕಾಣಬೇಕು; ಯುದ್ಧ ಮಾಡಬೇಕು; ಧರ್ಮವನ್ನು ರಕ್ಷಣೆ ಮಾಡಬೇಕು. ಇಲ್ಲದಿದ್ದರೆ ಅಧರ್ಮ ಗೆಲ್ಲುತ್ತದೆ" ದ್ವಾಪರ ಯುಗದಲ್ಲಿ ಶ್ರೀಕೃಷ್ಣ ಅದಕ್ಕಾಗಿಯೇ ಯಾವ ಹಿಸ್ಟರಿ ಇಲ್ಲದಿದ್ದರೂ, ಯಾವ ಪುಸ್ತಕ ಇಲ್ಲದಿದ್ದರೂ; ,,

**ಉಪ ಸಭಾಪತಿಯವರು:–** ಮಾನ್ಯ ತೇಜಸ್ವಿನಿಯವರೇ, ಇನ್ನು ಐದು ನಿಮಿಷದಲ್ಲಿ ಮುಗಿಸುತ್ತೀರಾ?

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸಾಧ್ಯವಿಲ್ಲ, ದಯಮಾಡಿ, ಒಂದೊಂದು ಗಂಟೆ ಕೊಡುತ್ತೀರಿ, ಇಲ್ಲದಿದ್ದರೆ, ನಾನು ಕುಳಿತುಬಿಡುತ್ತೇನೆ, ನನಗೆ ಐದು ನಿಮಿಷದಲ್ಲಿ ಮುಗಿಸಲು ಆಗುವುದಿಲ್ಲ. ನಾನು ಒಬ್ಬ ಅಡ್ವೋಕೇಟ್ ಆಗಿ ಸಂವಿಧಾನವನ್ನು ಅಧ್ಯಯನ ಮಾಡಿದವಳು, ನಾನು ರಾಜ್ಯಶಾಸ್ತ್ರದ ವಿದ್ಯಾರ್ಥಿ ಹಾಗೂ M.A. in International Relations ಮಾಡಿದ್ದೇನೆ. ನನಗೆ ಪಾರ್ಲಿಮೆಂಟ್ ಸದಸ್ಯೆಯಾಗಿ ಒಂದಷ್ಟು ಅವಕಾಶ ಸಿಕ್ಕಿತು. ಜಮ್ಮು ಕಾಶ್ಮೀರದ ವಿಚಾರದಲ್ಲಿ;

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಅವರಿಗೆ ಸ್ವಲ್ಪ ಅವಕಾಶ ಕೊಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿ ಗೌಡರವರು ಚೆನ್ನಾಗಿ ಮಾತನಾಡುತ್ತಿದ್ದಾರೆ, ಮಾತನಾಡಲಿ ಬಿಡಿ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇವತ್ತು ಸಂವಿಧಾನದ ಮೇಲೆ ಚರ್ಚೆ ತಂದಿದ್ದೇ ಶ್ರೀಕೃಷ್ಣನ ಉದಾತ್ತ ಧ್ಯೇಯಗಳನ್ನು ಕೂಡ, ಶ್ರೀಕೃಷ್ಣ ಸದಾ ಕಾಲ ಯಾರನ್ನು represent ಮಾಡಿದರು? ಇವತ್ತಿಗೂ ಪ್ರಸ್ತುತ debate ಮಾಡಿದರೆ, ಗಂಟೆಗಟ್ಟಲೆ debate ಮಾಡುವುದಕ್ಕೆ ಸಿದ್ಧತೆ ಮಾಡಿಕೊಳ್ಳುವಷ್ಟು ಉದಾತ್ತ ಧ್ಯೇಯಗಳಿವೆ. ವಿದ್ವತ್‌ಗೆ ವಾಲ್ಮೀಕಿ ರಾಮಾಯಣ; ರಾಮಾಯಣವನ್ನು 'ಮಹರ್ಷಿ ವಾಲ್ಮೀಕಿ' ಯವರು ಬರೆದರು. ಅದಕ್ಕೆ ಪ್ರತಿ ವರ್ಷ 'ವಾಲ್ಮೀಕಿ ಜಯಂತಿ' ಆಚರಣೆ ಮಾಡುತ್ತಿದ್ದೇವೆ. ದಾಸ ಶ್ರೇಷ್ಠರಲ್ಲಿ ಒಬ್ಬರು ಪುರಂದರದಾಸರು ಮತ್ತೊಬ್ಬರು ಕನಕದಾಸರು. ಸರ್ವಜ್ಞರ ವಚನಗಳು ಇವತ್ತಿಗೂ ಪ್ರಸ್ತುತವಾಗಿವೆ. ನಮ್ಮ ಸಂವಿಧಾನ ಇಂತಹ ಅನೇಕ ಅಂಶಗಳಿಂದ ಪ್ರೇರಣೆ ಪಡೆದಿದೆ ಎನ್ನುವಂತಹ ಮಾತನ್ನು ಮಾನ್ಯ ಕಾನೂನು ಸಚಿವರಾದ ಮಾಧುಸ್ವಾಮಿಯವರು ಹೇಳಿದರು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯರೇ, ದಿನಾಂಕ 26ನೇ ಜನವರಿ 1949ರಂದು ಸಂವಿಧಾನದ ಕರಡು ಪ್ರತಿ ಅಂಗೀಕಾರವಾಯಿತು. ದಿನಾಂಕ 26–01–1950ರಂದು ಅದನ್ನು ಜಾರಿ ಮಾಡಲಾಯಿತು ತದನಂತರದಲ್ಲಿ 124 ಬಾರಿ ತಿದ್ದುಪಡಿಯಾಗಿದೆ. 104 ಕಾನೂನುಗಳಾಗಿವೆ. ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರು ಬಹಳ ಚೆನ್ನಾಗಿ ಹೇಳಿದರು. ಈ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಸಂವಿಧಾನ ಏನು ಹೇಳುತ್ತದೆ; ತಪ್ಪು ಯಾವುದು, ಸರಿ ಯಾವುದು ಎಂಬ ಸಾಮಾನ್ಯ ಜ್ಞಾನವನ್ನು ಜನರಿಗೆ ಸರಳವಾಗಿ ತಿಳಿಸಿಬಿಟ್ಟರೆ ಅಪರಾಧಗಳು ಅರ್ಧದಷ್ಟು ಕಡಿಮೆಯಾಗುತ್ತವೆ. ಅಸ್ಪೃಶ್ಯತೆ ಯಾವರೀತಿ ಅಪರಾಧ? ಇವತ್ತು ವ್ಯಕ್ತಿ ಸ್ವಾತಂತ್ರ್ಯ; ಜಮ್ಮು ಕಾಶ್ಮೀರದ ತುತ್ತತುದಿಯಲ್ಲಿರಲಿ ಅಥವಾ ಕನ್ಯಾಕುಮಾರಿಯ ಕಟ್ಟಕಡೆಯ ಗುಡಿಸಲಿನಲ್ಲಿರಲಿ ಮಹಾರಾಜರಿಗೂ ಒಂದೇ ವೋಟು, ಮಂತ್ರಿಗೂ, ಕೂಲಿ ಮಾಡುವ ಒಬ್ಬ ಸಹೋದರನಿಗೂ ಒಂದೇ ವೋಟು ಎಂದು ಹೇಳಿದರೆ; equality ಯ spirit ಸುಮ್ಮನೆ ಹೇಳಿದರೆ ಅರ್ಥವಾಗಲು ಸಾಧ್ಯವಿಲ್ಲ, ಕಾನೂನಿನ ಮೂಲಕ ಸಂವಿಧಾನ ನಮಗೆ ಕೊಟ್ಟ rights ಇದು. ನಾನು ಮುಖ್ಯವಾಗಿ ಸಂವಿಧಾನ, ಜಿಯೋಗ್ರಫಿ; ಒಂದು ದೇಶ ಎಂದರೆ, ... Which Nation you belong to, ಎಂದು ಕೇಳಿದರೆ, ಯಾವ್ಯಾವುದನ್ನೋ ದೇಶ ಎಂದು ಹೇಳುವುದಕ್ಕಾಗುವುದಿಲ್ಲ. ಪೌರತ್ವ ಪಾಸ್‌ಪೋರ್ಟ್ ಯಾಕೆ ಬೇಕು? ನನ್ನ ದೇಶದಲ್ಲಿ terrorist activities ನಡೆದಾಗ... 'Airlift' ಎಂಬ ಸಿನಿಮಾ ಬರುತ್ತದೆ, ಸಿರಿಯಾದಲ್ಲಿ, ಇರಾಕ್‌ನಲ್ಲಿ ಭಾರತೀಯರು ಸಿಕ್ಕಿಹಾಕಿಕೊಂಡರೆ ನನ್ನ ದೇಶ, ಈ ದೇಶ ಅವರನ್ನು ಸಂರಕ್ಷಣೆ ಮಾಡಿ ಎತ್ತಿಕೊಂಡು ಬರುತ್ತದೆ. Terrorism-ridden ದೇಶಗಳಲ್ಲಿ ಕೆಲಸ ಮಾಡುವಾಗ ಅವರಿಗೆ ಒಂದಷ್ಟು ಸವಲತ್ತುಗಳನ್ನು ಕೊಡುತ್ತೇವೆ, ತಮ್ಮ ಪ್ರಾಣವನ್ನು armed forces ಒತ್ತೆ ಇಡುತ್ತವೆ. Naxalism and Terrorist area ಗಳಲ್ಲಿ ಕೆಲಸ ಮಾಡುವಾಗ ತನ್ನ ದೇಶವೇ ಮೊದಲು ಎಂದು ಹೇಳುವಂತಹ armed forces ಕೆಲಸ ಮಾಡಬೇಕಾದರೆ ಸೈನ್ಯಕ್ಕೆ ವಿಶೇಷ AFSPA (Armed Forces Special Powers Act) ಎಂಬುದನ್ನು repeal ಮಾಡಬೇಕು, ತೆಗೆಯಬೇಕು ಎಂದು ಹೇಳಿದೆವು, ಕಾನೂನು ಸರಿಯಾಗಿದೆ, ಆದರೆ ಅದನ್ನು ಜಾರಿ ಮಾಡುವಾಗ ಒಂದಷ್ಟು ಲೋಪದೋಷವಾಯಿತು ಎಂದು ಆ ಕಾನೂನನ್ನೇ, ವಿಧಿಗಳನ್ನೇ ತರುವುದಕ್ಕೆ ಸಾಧ್ಯವಿಲ್ಲ. ನಮ್ಮ ಸಂವಿಧಾನದಲ್ಲಿ 'Article 342' ಏನು ತುರ್ತುಪರಿಸ್ಥಿತಿಯನ್ನು ಹೇರುವುದಕ್ಕೆ ಅವಕಾಶ ನೀಡುವಂತಹ ಒಂದು ವಿಧಿ ಇದೆ, 'ಇಂದಿರಾ ಜೀ'ಯವರನ್ನು with due respect, ನಾವು ಆಡಳಿತ ಪಕ್ಷದ ಕಡೆ ಕುಳಿತಿರಬಹುದು, she was a greatest leader. ಭಾರತ ಕಂಡಂತಹ ಒಬ್ಬ ದಕ್ಷ, ಮಹಿಳಾ ನಾಯಕರಾಗಿ, ಪ್ರಧಾನಿಯಾಗಿ ಇಂದಿರಾ ಜೀಯವರು ಐತಿಹಾಸಿಕವಾಗಿ ಆ ಒಂದು ತಪ್ಪನ್ನು ಮಾಡದೇ ಹೋಗಿದ್ದಿದ್ದರೆ, ಆ ಒಂದು ತಪ್ಪು ಕಪ್ಪು ಚುಕ್ಕೆಯಾಗಿದ್ದು ಬಿಟ್ಟರೆ ಅವರ ಸಾಮರ್ಥ್ಯವನ್ನು ಎಲ್ಲರೂ ಕೊಂಡಾಡಿದ್ದಾರೆ. Political benches ನಲ್ಲಿ ಅವತ್ತಿನ 'ವಾಜಪೇಯಿ'ಯವರು ಆ ಕಡೆ ಕುಳಿತಿದ್ದರೂ ಕೂಡ ಬಾಂಗ್ಲಾದೇಶದ ಯುದ್ಧ ಕಾಲದಲ್ಲಿ ಇಂದಿರಾ ಜೀಯವರು ತಳೆದಂತಹ ಒಂದು ನೀತಿಯನ್ನು ಕೊಂಡಾಡಿದ್ದಾರೆ. ಆದರೆ 342ನೇ ವಿಧಿ ಏನು

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುತ್ತದೆ? ದೇಶಕ್ಕೆ ಆಪತ್ತು ಬಂದಾಗ, ದೇಶದಲ್ಲಿ ದಂಗೆಯಾಗುವ ಮುನ್ಸೂಚನೆ ಇದ್ದಾಗ ಸೇನೆಯಲ್ಲಿ ದಂಗೆ ಉಂಟುಮಾಡಬಹುದಾದಾಗ ನೆರೆ ದೇಶಗಳಿಂದ aggression ಇದ್ದಾಗ, ದೇಶಕ್ಕೆ ಅಪಾಯ ಇದ್ದಾಗ ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಬೇಕು ಎನ್ನುವಂತಹ ಸದಾಶಯವನ್ನು ಹೊಂದಿದಂತಹ ಒಂದು ಕಾನೂನನ್ನು, ವಿಧಿಯನ್ನು ಅವತ್ತಿನ ಇಂದಿರಾಜೀ ಒಬ್ಬರನ್ನೇ ನಾನು; 'ಪಾಟೀಲ್ ಜೀ' with due respect...

(ಮುಂದು)

(303) 11-03-2020/ 12-30/ ಕೆಹೆಚ್-ಕೆಎಸ್

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಗೌಡರವರೇ,...

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ.ರಮೇಶಗೌಡರವರೇ ಒಂದು ನಿಮಿಷ. ನಮಗೆ ಸಮಯಾವಕಾಶ ಕಡಿಮೆ ಇದೆ.

**ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಗೌಡರವರ ಪರವಾಗಿಯೇ ಮಾತನಾಡುತ್ತೇನೆ. ಅವರು ಬಹಳ ಚೆನ್ನಾಗಿ ಇಷ್ಟೆಲ್ಲಾ ಹೊಗಳುತ್ತಿದ್ದಾರೆ. ಆದರೆ, ಇಂದಿರಾ ಕ್ಯಾಂಟಿನ್ ಬಗ್ಗೆ . . .

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ರಮೇಶಗೌಡರವರೇ, ಅದಕ್ಕೂ-ಇದಕ್ಕೂ ಯಾವುದೇ ಸಂಬಂಧ ಇಲ್ಲ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ಒಂದಕ್ಕೊಂದು ಸಂಬಂಧ ಇದೆ. ಇವರು ಇಷ್ಟೊಂದೆಲ್ಲಾ ಹೊಗಳುತ್ತಿದ್ದಾರೆ ಅಲ್ಲವೇ, ಈ ದೇಶದಲ್ಲಿ emergency ಇದ್ದಾಗ ಅವರು ಸಹ ಆಳಿರುವವರು, ಸ್ವಾಮಿ, ಅವರ ಹೆಸರನ್ನು ಏಕೆ ತೆಗೆಯುತ್ತಿದ್ದೀರಿ?

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಹೆಚ್.ಎಂ.ರಮೇಶಗೌಡರವರೇ ಇನ್ನು ತುಂಬಾ ಸಮಯ ಇದೆ. ಆಗ ಇದರ ಬಗ್ಗೆ ಮಾತನಾಡೋಣ. ಒಂದು ಸರ್ಕಾರ ಎಂದರೆ ಹೇಗೆ ಇರಬೇಕು, ಒಂದು political structure ಹೇಗೆ ಇರಬೇಕು? ತುರ್ತು ಪರಿಸ್ಥಿತಿಯನ್ನು ಅರ್ಟಿಕಲ್-342 ಅನ್ನು misuse ಎಂದು ಹೇಳಿ, ಅರ್ಟಿಕಲ್-356 ರ ಪ್ರಕಾರ ಈ ದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ನೂರಕ್ಕೂ ಹೆಚ್ಚು ಬಾರಿ, 58 ಬಾರಿ ಚುನಾಯಿತ ಸರ್ಕಾರಗಳನ್ನು ವಜಾಗೊಳಿಸುವಂತಹ, misuse of 'Article 356' ಬಗ್ಗೆ ನಾವು debate ಮಾಡಿದ್ದೇವೆ. ಮಾನ್ಯ ಆಯನೂರು ಮಂಜುನಾಥ್‌ರವರು ಭಾರತ ದೇಶದ 4 ಮನೆಗಳಾದ ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಮತ್ತು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಿಧಾನ ಪರಿಷತ್ತುಗಳನ್ನು ಕಂಡು ಬಂದಿರುವಂತಹವರು. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಈ ಸದನದಲ್ಲಿ 42 ವರ್ಷಗಳ ಕಾಲ ಇರುವಂಥವರು. ಅತ್ಯಂತ ರಾಜಕೀಯ ಮುತ್ಸದ್ಧಿಯಾದ ಮಾನ್ಯ ರಾಮಕೃಷ್ಣ ಹೆಗಡೆಯವರ ಜೊತೆ ಮಾನ್ಯ ಗೋವಿಂದ ಎಂ.ಕಾರಜೋಳರವರು ಮತ್ತು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ರಾಜಕೀಯ ಬದುಕನ್ನು ಸಾಗಿ ಬಂದಂಥವರು. ಈ ಮಾನ್ಯ ಸದಸ್ಯರುಗಳೆಲ್ಲಾ ಇವತ್ತಿಗೂ ನಮಗೆ ಉತ್ತಮವಾದಂತಹ ಮುತ್ಸದ್ಧಿಗಳು ಈ ಸದನದಲ್ಲಿ ಇದ್ದಾರೆ, ಇನ್ನು ಮುಂದಕ್ಕೂ ಸಹ ಈ ಸದನಕ್ಕೆ ಬರುತ್ತಾರೆ. ಇದರ ಬಗ್ಗೆ generalize ಮಾಡುವುದು ತಪ್ಪು. ಮಾನ್ಯ ಎಸ್.ಎಲ್.ಭೋಜೇಗೌಡರವರು ಕೆಲವೊಂದು ವಿಚಾರಗಳ ಬಗ್ಗೆ ಕೆಲವೊಮ್ಮೆ ಭಾವನಾತ್ಮಕವಾಗಿ ಹೇಳುತ್ತಾರೆ. ನಾವು ಆ ಹಾದಿಯನ್ನು ಬಳಸುವಂತಹದ್ದು ತಪ್ಪು. ಈ ದೇಶದಲ್ಲಿ electoral reforms ಆಗಬೇಕು. ಮಾನ್ಯ ಜಯಮಾಲರವರು ಇವತ್ತಿಗೂ ಸಹ ಶೇಕಡಾ 33 ರಷ್ಟಕ್ಕೆ ನಾವು ಏಕೆ ಹೋರಾಟ ಮಾಡಬೇಕು? ಇದರ ಬಗ್ಗೆ ನಾನು ಕೇಳಿದ್ದೇನೆ. ಶೇಕಡಾ 51 ರಷ್ಟು ಮಹಿಳೆಯರಿಗೆ ಜಾಗೃತಿ ಮೂಡಿಸಿದ ದಿನ, ಅವರ ಹಕ್ಕುಗಳ ಬಗ್ಗೆ ಸಂವೇದನೆ ಮೂಡಿಸಿದ ದಿನ ವೋಟ್‌ನ್ನು ಯಾರಿಗೆ ನೀಡಬೇಕು, ಎಂತಹ ಯೋಗ್ಯರಿಗೆ ಕೊಡಬೇಕು, ನಮಗೆ ಪಾಲು ನೀಡಬೇಕೆಂದು ನಾವು ಅರಿತುಕೊಂಡ ದಿನ, ಈ ಮೀಸಲಾತಿ ಯಾರಿಗೆ ಬೇಕು? ಎಲ್ಲರೂ ಮೀಸಲಾತಿ ಬಗ್ಗೆ ಮಾತನಾಡುತ್ತಾರೆ. ಯಾವುದೂ equality ಯಾವ ಆರ್ಟಿಕಲ್ . . . ನಮಗೆ ಆರ್ಟಿಕಲ್ 12 ರಿಂದ 50ರವರೆಗೆ 'ಮೂಲಭೂತ ಹಕ್ಕು'ಗಳು ಯಾರಿಗೆ ಅನ್ವಯವಾಗುತ್ತದೆ ಎಂದರೆ, ಈ ಸಂವಿಧಾನ ನಮಗೆ ಕೊಟ್ಟಿರುವಂತಹ ಪ್ರತಿಯೊಂದನ್ನೂ ಪಾಲನೆ ಮಾಡುವವರಿಗೆ ಇದು ಅನ್ವಯವಾಗುತ್ತದೆ. Human rights ಯಾರಿಗೆ ಅನ್ವಯವಾಗುತ್ತದೆ ಎಂದರೆ, ಈ ಸಂವಿಧಾನವನ್ನು ಗೌರವಿಸುವವರಿಗೆ ಇದು ಅನ್ವಯವಾಗುತ್ತದೆ. ಇವತ್ತಿನ ದಿವಸ ಟೆರರಿಸ್ಟ್‌ಗಳನ್ನು support ಮಾಡುವಂತಹವರಿಗೆ, ನಮ್ಮ ದೇಶದ ಒಳಗೆ ಆರ್ಥಿಕ ಬಿಕ್ಕಟ್ಟನ್ನು ಉಂಟು ಮಾಡುವುದಕ್ಕಾಗಿ ಹೊರ ದೇಶಗಳಿಂದ ಶಸ್ತ್ರಾಸ್ತ್ರ ಬರುವಂತಹದ್ದು ಮತ್ತು ಮಾದಕ ದ್ರವ್ಯಗಳು ಬರುವಂತಹದ್ದು, ಭಾರತದ ಸ್ಮೃತಿಯನ್ನು ಕೊಲ್ಲುವಂತಹ ಚಟುವಟಿಕೆಗಳಿಗೆ ಎಲ್ಲಿ ರಕ್ಷಣೆ ಇದೆ? ಅದೇ ರೀತಿ ಆರ್ಟಿಕಲ್–370 ರ ಪ್ರಕಾರ ಬೆಂಗಳೂರಿನಲ್ಲಿರುವ ಜನರು ತುಂಬಾ ಟ್ಯಾಕ್ಸ್‌ನ್ನು ಕಟ್ಟುತ್ತಾರೆ. ಆ ಟ್ಯಾಕ್ಸ್ ಹಣವೆಲ್ಲಾ ನಮ್ಮದೇ... ನಾವು ಬೇರೆಯವರಿಗೆ ಕೊಡುವುದಿಲ್ಲ. ನಾವು ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಿಗೆ ಕೊಡುವುದಿಲ್ಲ. ನಾವು ಜಮ್ಮು–ಕಾಶ್ಮೀರಕ್ಕೆ ಇಷ್ಟು ನಿಧಿಯನ್ನು ನಾವು ಕೊಡುವಾಗ ಅನೇಕ ಮನಸ್ಸಿನಲ್ಲಿ ಈ ಒಂದು ಪ್ರಶ್ನೆ ಉದ್ಭವವಾಯಿತು. ಅದೇನೆಂದರೆ, ಅಲ್ಲಿ ಸೈನ್ಯ ಮತ್ತು ಮಿಲಿಟರಿಗೆ ಎಷ್ಟು ಖರ್ಚು ಮಾಡಲಾಗುತ್ತಿದೆ, ಇದರ ಬಗ್ಗೆ ನಾವು compromise ಮಾಡಿಕೊಳ್ಳುವುದಕ್ಕೆ ಸಾಧ್ಯವೇ? ನಮ್ಮ ದೇಶಕ್ಕೆ 'PREAMBLE' ಏನು ಕಟ್ಟಿಕೊಂಡಿದ್ದೇವೆ. ನಾವು ನಮ್ಮ ದೇಶಕ್ಕೆ 'PREAMBLE' ಏನು ಕಟ್ಟಿಕೊಂಡಿದ್ದೇವೆ? The 'PREAMBLE' of the 'Constitution of India' reads as follows;

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

*'WE, THE PEOPLE OF INDIA, having solemnly resolved to constitute India into a SOVEREIGN SOCIALIST SECULAR DEMOCRATIC REPUBLIC and to secure to all its citizens:..'*

ಭಾರತದ ಮಹಾ ಜನತೆಯಾದ ನಾವು ಒಕ್ಕೊರಲಿನಿಂದ ನಿರ್ಣಯಿಸುತ್ತೇವೆ, ನಮ್ಮ ಭಾರತವನ್ನು *SOVEREIGN SOCIALIST SECULAR DEMOCRATIC REPUBLIC* ಆಗಿ ಕಟ್ಟುತ್ತೇವೆ. ನಮ್ಮ ದೇಶ ಸಾರ್ವಭೌಮ ದೇಶವಾಗಿರಬೇಕು, ಜಾತ್ಯಾತೀತಾ, ಪ್ರಜಾಸತ್ತಾತ್ಮಕ ಹಾಗೂ ಗಣರಾಜ್ಯವನ್ನಾಗಿ ಕೊಟ್ಟುಕೊಳ್ಳುತ್ತೇವೆ ಮತ್ತು ಈ ನಮ್ಮ ಎಲ್ಲಾ ನಾಗರೀಕರಿಗೆ ನ್ಯಾಯವನ್ನು ಕೊಡುತ್ತೇವೆ. ನಾವು ಯಾವುದರಲ್ಲಿ 'JUSTICE' ಕೊಡುತ್ತೇವೆ. Social, economic and political ನ್ಯಾಯವನ್ನು ಕೊಡುತ್ತೇವೆ, ಅಸ್ಪೃಶ್ಯತೆಯನ್ನು ನಿವಾರಣೆ ಮಾಡಬೇಕು. ಅಸ್ಪೃಶ್ಯತೆ ಮಾಡುವುದು ಅಪರಾಧ ಎಂದು ಸಂವಿಧಾನದಲ್ಲಿ ಇದೆ. ಆದರೂ ಸಹ ಇದರ ಬಗ್ಗೆ ಏಕೆ ಚರ್ಚೆ ಮಾಡುತ್ತಿದ್ದೇವೆ? ಇವತ್ತಿಗೂ ಕೂಡ ಅದನ್ನು ತೆಗೆಯುವುದಕ್ಕೆ ಸಾಧ್ಯವಾಗಿಲ್ಲ. Implementation part ನಲ್ಲಿ ನಾವು ತಪ್ಪಿದ್ದೇವೆ. ನೆನ್ನೆ ಮತ್ತು ಮೊನ್ನೆಯ ದಿವಸ ಶಾಸಕಾಂಗ ಮತ್ತು ಕಾರ್ಯಾಂಗದ ನಡುವೆ ಜಟಾಪಟಿ ನಡೆಯುತ್ತಿರುವುದನ್ನು ನಾನು ನೋಡುತ್ತಿದ್ದೆ. ಇದು ಆರೋಗ್ಯಕರವಾದ ಬೆಳವಣಿಗೆ ಅಲ್ಲ. ಉತ್ತಮ ಶಾಸನಗಳನ್ನು ಮಾಡುವಂತಹದ್ದು ಈ ಎಲ್ಲಾ ಮನೆಗಳ ಕರ್ತವ್ಯವಾಗಿದೆ. ಇದನ್ನು ಪರಿಣಾಮಕಾರಿಯಾಗಿ ಮತ್ತು ಪ್ರಾಮಾಣಿಕವಾಗಿ ಜಾರಿಗೊಳಿಸುವಂತಹ ಕರ್ತವ್ಯ ಮತ್ತು ಜವಾಬ್ದಾರಿ ಕಾರ್ಯಾಂಗದ ಮೇಲೆ ಇದೆ. ಶಾಸಕಾಂಗ ಮತ್ತು ಕಾರ್ಯಾಂಗ ಈ ಎರಡು ಕೂಡ ಕಣ್‌ತಪ್ಪಿನಿಂದ, ಮೈಮರೆಯುವಿಕೆಯಿಂದ, ಸೋಮಾರಿತನದಿಂದ ಅಥವಾ ದ್ವೇಷದಿಂದ failure ಆದರೆ ನಾವು ಜಾತಿ ರಾಜಕಾರಣ ಮಾಡಬಾರದು. ನಾವು ಮೈಮರೆತರೆ ನಮ್ಮನ್ನು ಸರಿಪಡಿಸುವುದಕ್ಕಾಗಿ ನ್ಯಾಯಾಂಗ ಎನ್ನುವಂತಹ ಒಂದು ವ್ಯವಸ್ಥೆಯನ್ನು ನಮ್ಮ ಪೂರ್ವಜರು ಬಹಳ ಚೆನ್ನಾಗಿ ಮಾಡಿದ್ದಾರೆ. ಈ ಮೂರು ಯೂನಿಟ್‌ಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿಯೂ ರಕ್ಷಣೆ ಸಿಗದೇ ಹೋದರೆ ಅಲಿಖಿತ... The fourth pillar of the democracy is Press and Media. ಪ್ರತಿಕೋದ್ಯಮ ಮತ್ತು ಮಾಧ್ಯಮಗಳು .... ಪ್ರಜಾಪ್ರಭುತ್ವದ 3 ಅಂಗಗಳು ಫೆಲ್ಯೂರ್ ಆದರೆ, ಅವರು ತಮ್ಮ ಕರ್ತವ್ಯದಿಂದಾಗಿ ಅದನ್ನು ಮಾಡುವಂತಹದ್ದನ್ನು ಇವತ್ತಿನ ದಿವಸ ನಾವು ನೋಡಬಹುದು. ಈಗಾಗಲೇ 'ನಿರ್ಭಯಾ' ಪ್ರಕರಣ ಮುಚ್ಚಿ ಹೋಗಿತ್ತು. ಆದರೆ ಈ ಪ್ರಕರಣ ಮುಚ್ಚಿ ಹೋಗುವುದಕ್ಕೆ ಮಾಧ್ಯಮದ ಪತ್ರಕರ್ತರು ಬಿಡಲಿಲ್ಲ. ಈ ಅಂಗಗಳು ಮೈಮರೆತಾಗ ಮತ್ತು ತಪ್ಪಿದಾಗ ಅವರು ಜಾಗೃತರಾಗುತ್ತಾರೆ.

ಇನ್ನು ತಲ್ವಾರ್ ಪ್ರಕರಣದಲ್ಲಿ ಏಕೆಂದರೆ, ಅರುಣಾ ಶಾನ್‌ಬಾಗ್‌ರವರ ಅನೇಕ ತಿದ್ದುಪಡಿಗಳು ಬಹಳ ಅರ್ಥಪೂರ್ಣವಾಗಿದೆ. ಅವತ್ತಿನ ಬಾಂಬೆಯಲ್ಲಿ ನರ್ಸ್ ಹೆಣ್ಣು ಮಗಳ ಮೇಲೆ ಅಲ್ಲಿನ ಒಬ್ಬ ಜವಾನ ಅತ್ಯಾಚಾರ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಾನೆ. ಅವಳಿಗೆ ಕುತ್ತಿಗೆಯನ್ನು ಬಿಗಿದಾಗ oxygen supply ಆಗದೇ ಇದ್ದಾಗ, ಆಕೆ ಕೋಮಾ ಸ್ಥಿತಿಗೆ ತಲುಪುತ್ತಾರೆ. ಸುಮಾರು 40 ರಿಂದ 45 ವರ್ಷಗಳ ಕಾಲ bed ridden ಆಗುತ್ತಾರೆ. ಆ ದಯಾಮರಣ ಕೊಡಬೇಕಾ, ಬೇಡವೇ ಎನ್ನುವುದರ ಮೇಲೆ debate ಆಗುತ್ತದೆ. ಯಾರಾದರೂ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಅವರ ಮೇಲೆ ಪ್ರಕರಣ ದಾಖಲಿಸಲಾಗುತ್ತದೆ. 'Right to Life'... ಎಲ್ಲರಿಗೂ ಜೀವಿಸುವ ಹಕ್ಕು ಇದೆ. ನಮ್ಮ ಬಜೆಟ್ ಭಾಷಣದಲ್ಲಿ ಕೆಲವೊಂದು ವಿಚಾರಗಳ ಮಾತನಾಡುತ್ತೇವೆ. ಮಂಗಗಳ ರಕ್ಷಣೆಗೆ, ರಣಹದ್ದಿನ ರಕ್ಷಣೆಗೆ, ನದಿಗಳ ರಕ್ಷಣೆಗೆ ಮತ್ತು ಅರಣ್ಯದ ರಕ್ಷಣೆಗೆ ಹಾಗೂ ಭೂಮಿಯ ಮೇಲಿರುವಂತಹ ಪ್ರತಿಯೊಂದು ಜೀವಿಗಳ ರಕ್ಷಣೆ ನಮ್ಮ ಹೊಣೆ ಎಂದು 'Fundamental Right' ನಲ್ಲಿ ಅರ್ಟಿಕಲ್ 12 ರಿಂದ ಹಿಡಿದು 50ರವರೆಗೆ ಪಟ್ಟಿಯಾಗಿರುವಂತಹ ಪ್ರತಿಯೊಂದು ಅರ್ಟಿಕಲ್‌ನಲ್ಲಿ ನಿರ್ದಿಷ್ಟವಾಗಿ ರಕ್ಷಣೆ ಕೊಡುವಂತಹ ವಿಧಿಗಳು ಇವೆ. ಕೆರೆ ಒತ್ತುವರಿ, ಸ್ಮಶಾನ ಒತ್ತುವರಿ ಮತ್ತು ಅರಣ್ಯ ಒತ್ತುವರಿ ಮಾಡಿದರೆ ಪ್ರಭಾವಿಶಾಲಿಗಳು ಎಷ್ಟೇ ಜನರಿದ್ದರೂ ಕೂಡ ಅವರಿಗೆ ನ್ಯಾಯಾಲಯದಿಂದ ಒಂದು ತಾಕೀತು ಬಂದ ಕೂಡಲೇ ವಿಧಿ ಇಲ್ಲದೆ ಅಧಿಕಾರಿಗಳನ್ನು ಜೈಲಿಗೆ ಕಳುಹಿಸುತ್ತಾರೆ ಮತ್ತು ರಾಜಕಾರಣಿಗಳನ್ನು ಜೈಲಿಗೆ ಕಳುಹಿಸಲಾಗುತ್ತದೆ. ಆದ್ದರಿಂದ ಇವತ್ತಿನ ದಿವಸ ರಕ್ಷಣೆ ಸಿಕ್ಕಿದೆ ಎನ್ನುವ ಮಾತನ್ನು ನಾವು ಹೇಳಬೇಕಾಗಿದೆ.

'Equality', ಆರು ವರ್ಷದ ಒಳಗಿನ ಮಗುವಿಗೆ; ಅನೇಕ ಮಾನ್ಯ ಸದಸ್ಯರು ತುಂಬಾ ಚೆನ್ನಾಗಿ ಮಾತನಾಡಿದರು. Illegitimate child, ದಾಂಪತ್ಯದಿಂದ ಹುಟ್ಟಿದ ಮಗುವಿಗೆ ಸಮಾಜದಲ್ಲಿ ಎಲ್ಲಾ ಹಕ್ಕುಗಳಿಗೂ ಮನ್ನಣೆ ಸಿಗುತ್ತದೆ. ಪ್ರೇಮಕ್ಕೆ ಹುಟ್ಟಿದ ಮಗುವಿಗೂ ಸಹ ಸಮಾಜದಲ್ಲಿ ಮನ್ನಣೆ ಕೊಡುತ್ತಾರೆ. ಆದರೆ, ಮನುಷ್ಯನ ದೌರ್ಬಲ್ಯವಾದ ಕಾಮದಾಟಕ್ಕೆ ಹುಟ್ಟಿದ ಮಗುವನ್ನು ಬೀದಿಯಲ್ಲಿ ಬಿಸಾಕುತ್ತಿದ್ದಾರೆ. Orphanage ಹೇಗೆ ಬಂದಿತು, ಈ ಸಮಾಜದಲ್ಲಿ ಅನಾಥಾಲಯಗಳು ಮತ್ತು ವೃದ್ಧಾಶ್ರಮಗಳು ಏಕೆ ಇವೆ ಎಂದರ, ಸುಶಿಕ್ಷಿತ ಆರೋಗ್ಯಕರ ಸಮಾಜಕ್ಕೆ ಅಪಮಾನ ಮಾಡುವಂತಹ ಸಂಗತಿಗಳಾಗಿವೆ. ತಂದೆ-ತಾಯಿಗಳನ್ನು ಬೀದಿಗೆ ಬಿಸಾಕುವಂತಹದ್ದು, ಅದೇ ರೀತಿ ಮಕ್ಕಳನ್ನು ಬೀದಿಗೆ ಬಿಡುವಂತಹದ್ದು, ಅಂತಹ ಸಮಯದಲ್ಲಿ, State will come to their rescue. ರಾಜ್ಯಾಂಗ ಅವರನ್ನು ನೋಡಿಕೊಳ್ಳಬೇಕೆಂದು ಹೇಳುತ್ತದೆ. ಈ ಕಲ್ಯಾಣ ಕಾರ್ಯಕ್ರಮಗಳು ಅದಕ್ಕೋಸ್ಕರ ಇವೆ. ಹಿಂದುಳಿದ ಮಕ್ಕಳಿಗಾಗಿ ಹಾಸ್ಟೆಲ್‌ಗಳನ್ನು ಕಟ್ಟಬೇಕು. ನೀವು ಕೊಡುವಂತಹ ಚಾರಿಟಿ ಅಲ್ಲ, it is their right. ನೀವು ಕೊಡುವಂತಹ ಭಿಕ್ಷೆ ಅಲ್ಲ. 'Right to Education' ಅಡಿ 6 ವರ್ಷದಿಂದ 14 ವರ್ಷದ ಮಗುವಿಗೆ ಉಚಿತ ಶಿಕ್ಷಣವನ್ನು ಕೊಡಬೇಕು.

ಅದೇ ರೀತಿ ಇವತ್ತಿನ ದಿವಸ ತುಳಿತಕ್ಕೆ ಒಳಗಾದಂತಹ ಅಸ್ಪೃಶ್ಯತೆಗೆ ಒಳಗಾದಂತಹ ಮಕ್ಕಳಿಗೆ ಅವರ ಮನೋಬಲದ ಬಗ್ಗೆ; ಕೀಳರಿಮೆ ಏಕೆ ಬಂದಿದೆ ಎನ್ನುವುದರ ಬಗ್ಗೆ ಮಾನ್ಯ ಜಯಮಾಲರವರು ಮಾತನಾಡುತ್ತಿದ್ದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮೀಣ ಮತ್ತು ನಗರಗಳ ನಡುವಿನ ತಾರತಮ್ಯ ಏಕೆ ಬಂದಿದೆ, ಸಮಾನಾಂತರವಾದಂತಹ ಬೆಳವಣಿಗೆ ಆಗಬೇಕಾಗಿತ್ತು. ಅದು ಏಕೆ ಆಗಲಿಲ್ಲ. CAA [Citizenship (Amendment) Act] ಅಮೆಂಡ್‌ಮೆಂಟ್ ಬಂದಿರುವ ಹಿನ್ನಲೆಯಲ್ಲಿ ಈ debate ಬಂದಿದೆ. Union Territory, ನಮ್ಮ ಭಾರತ ಯಾವುದೂ ಎಂದು ಕೇಳಿದರೆ, ನಾವು ಯಾವುದನ್ನೂ ಭಾರತ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆಗ ಅಖಂಡ ಭಾರತ ಎಂದು ಬೇರೆ ಇತ್ತು. ಪಶ್ಚಿಮ ಭಾಗದಲ್ಲಿ ಅರಬ್ಬಿ ಸಮುದ್ರ ಇದೆ, ವಾಯುವ್ಯ ಭಾಗದಲ್ಲಿ ಪಾಕಿಸ್ತಾನ ಇದೆ, ನಂತರ ಆಫ್ಘಾನಿಸ್ತಾನ ಇದೆ, ಉತ್ತರ ಭಾಗಕ್ಕೆ ಚೀನಾ, ನೇಪಾಳ, ಬಾಂಗ್ಲಾದೇಶ, Myanmur, ಬರ್ಮಾದೇಶ, ಕೆಳಗಡೆಗೆ ಬಂದರೆ ಶ್ರೀಲಂಕಾ ಇದ್ದೆ, ಈ how important the geographical area is ಎಂಬುದನ್ನು ಅರಿತುಕೊಳ್ಳಬೇಕು. ಇವತ್ತಿನ ದಿವಸ ಆರು ವಿದೇಶಗಳನ್ನು ಗಡಿಭಾಗವನ್ನಾಗಿ ಹೊಂದಿರುವಂತಹ ಕಾಶ್ಮೀರದಲ್ಲಿ ಸೈನ್ಯಕ್ಕೆ ಕೊಡಬೇಕಾದಂತಹ ನಿಧಿಯನ್ನು ಕೊಡದೇ ಹೋದರೆ, ಸೈನಿಕರಿಗೆ ಕೊಡಬೇಕಾದಂತಹ ಕಲ್ಯಾಣ ಕಾರ್ಯಕ್ರಮಗಳನ್ನು ಕೊಡದೇ ಹೋದರೆ, can we risk the safety and security of this Country? ದೇಶ ಮೊದಲು, ಭದ್ರತೆಗಾಗಿ ನಾವು ಯಾವತ್ತಿಗೂ ಕೂಡ ಯಾವುದೇ ಸರ್ಕಾರ ಇರಬಹುದು, ದೇಶದ ಭದ್ರತೆಯನ್ನು ಮಾಡುವ ಪ್ರಶ್ನೆ ಬರುವುದಿಲ್ಲ. Expression ಬಗ್ಗೆ ಮಾತನಾಡುತ್ತೇವೆ. ನನ್ನ ದೇಶದ ಬಗ್ಗೆ ನನಗೆ ಹೆಮ್ಮೆ ಇದೆ. *DEMOCRATIC, SOCIALIST & SECULAR* ದೇಶ ಎಂದು ಹೇಳಿದ್ದೇವೆ. ನಾವು ಯಾವುದೇ ಧರ್ಮದ ಆಧಾರದ ಮೇಲೆ ದೇಶ ಎಂದು ಕಟ್ಟಿಕೊಳ್ಳಲಿಲ್ಲ. ನಮ್ಮ ದೇಶದಿಂದ ಬೇರ್ಪಟ್ಟಂತಹ ನಮ್ಮ ಸಹೋದರ ರಾಷ್ಟ್ರ ಪಾಕಿಸ್ತಾನ 'Islamic Republic of Pakistan' ಎಂದು ಮಾಡಿದ್ದಾರೆ. ಸಮಸ್ಯೆ ಎಲ್ಲಿ ಹುಟ್ಟಿಕೊಂಡಿತು?

(ಮುಂದು)

**(304) 11/03/2020/12:40/ಎಸ್‌ಪಿಆರ್/ಜಿಆರ್**
**ಡಾ|| ತೇಜಸ್ವಿನಿ ಗೌಡ(ಮುಂದು):**

ಹೇಗೆ ಇಲ್ಲಿನ ಅಲ್ಪಸಂಖ್ಯಾತ ಬಂಧುಗಳ ರಕ್ಷಣೆಯನ್ನು ಮಾಡುವುದು ಒಂದು ರಾಜ್ಯ ಅಥವಾ ದೇಶದ ಕರ್ತವ್ಯವೋ ಅದೇ ರೀತಿಯಾಗಿ ಬೇರೊಂದು ದೇಶದಲ್ಲಿ ಇರುವ ಅಲ್ಪಸಂಖ್ಯಾತರ ಬಗ್ಗೆ ಧ್ವನಿಯನ್ನು ಎತ್ತುವ ಮತ್ತು ಅವರ ರಕ್ಷಣೆ ಮಾಡುವ ಜವಾಬ್ದಾರಿ ನಮ್ಮ ದೇಶದ ಮೇಲಿದೆ. ಇವತ್ತಿನ ದಿವಸ ಸಿ.ಎ.ಎ., ಮತ್ತು ಎನ್.ಆರ್.ಸಿ., ಯನ್ನು ಜಾರಿಗೊಳಿಸಿದ ವಿಚಾರದ ಬಗ್ಗೆ ಹೇಳುವುದಾದರೆ, ಈಗ್ಗೆ 72 ವರ್ಷಗಳ ಹಿಂದೆ ಈ ದೇಶದವರು, ಈ ದೇಶ ವಾಸಿಗಳು ಎನ್ನುವ ಕಾರಣಕ್ಕೆ, ಆಚರಿಸುವ ಧರ್ಮ ಯಾವುದೇ ಇರಲಿ ಹೊರದೂಡಲ್ಪಟ್ಟ ಆ ದೇಶಕ್ಕೆ ಸೇರಿದವರಲ್ಲ ಹಾಗೂ ಈ ದೇಶಕ್ಕೂ ಸೇರಿದವರಲ್ಲ ಅಂತಹ ನತದೃಷ್ಟ ನಾಗರೀಕರಿಗೆ ಭಾರತ ದೇಶದಲ್ಲಿ ಪೌರತ್ವವನ್ನು ನೀಡಲು ಕೇಂದ್ರ ಸರ್ಕಾರವು ಮುಂದಾಗಿದೆ. ನಾವು ಅವರಿಗೆ ಏನು ಕೊಡುವುದಕ್ಕೆ ಸಾಧ್ಯ? ಅಂತಹ ನಾಗರೀಕರಿಗೆ ಇನ್ನೂ ರೇಷನ್ ಕಾರ್ಡ್,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿಕ್ಷಣ ಸಿಕ್ಕಿಲ್ಲ. ಆ ಜನರಿಗೆ ಯಾವುದೇ ಸಮಾಜ ಕಲ್ಯಾಣ ಕಾರ್ಯಕ್ರಮಗಳು ದೊರೆತಿಲ್ಲ. ನನ್ನ ದೇಶ ನನ್ನ ಸಹಾಯಕ್ಕೆ ಬರುತ್ತದೆ ಎನ್ನುವ ಭದ್ರತೆಯನ್ನು ನೀಡುವ ನಿಟ್ಟಿನಲ್ಲಿ ಕಾಯ್ದೆಯನ್ನು ಜಾರಿಗೆ ತರಲಾಗಿದೆ ಹೊರತು; ಯಾರಿಗೂ ಅನ್ಯಾಯ ಮಾಡಬೇಕೆನ್ನುವ ಉದ್ದೇಶದಿಂದಲ್ಲ. ನಮ್ಮ ಮತ್ತೊಬ್ಬ ಸಹೋದ್ಯೋಗಿ ಶ್ರೀ ತನ್ವೀರ್ ಸೇಠ್‌ರವರ ಮೇಲೆ ಹತ್ಯಾ ಪ್ರಯತ್ನ ನಡೆಯಿತು. ಅವರ ಮೇಲೆ ಏಕೆ ಹೀಗಾಗುತ್ತದೆ? ಆ ಹತ್ಯಾ ಪ್ರಯತ್ನವನ್ನು ಯಾರು ನಡೆಸಿದರು? ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಶ್ರೀ ಜಾಫರ್ ಶರೀಫ್‌ರವರು ಇದ್ದರು. ನಮ್ಮ ಸರ್ಕಾರವು ಯಾವುದೇ ಜಾತಿ ಆಧಾರಿತ ಭಾವನೆಯನ್ನು ಹೊಂದಿಲ್ಲ. ನಮ್ಮ ಸರ್ಕಾರ ಸಿ.ಎ.ಎ., ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ಯಾವುದೇ ದುರುದ್ದೇಶಗಳನ್ನು ಹೊಂದಿಲ್ಲ. ಮುಗ್ಧ ಜನರ ಬಗ್ಗೆ ಸರ್ಕಾರಿಯಾ ಕಮಿಷನ್ ಬಗ್ಗೆ ಮಾತನಾಡಬೇಕು. ಬಡ ಮುಸಲ್ಮಾನರು ಆ ಸ್ಥಿತಿಯಲ್ಲಿರುವುದಕ್ಕೆ ಯಾರು ಕಾರಣ? ಸಾಚಾರ್ ವರದಿಯ ಬಗ್ಗೆ ನಾವು ಇವತ್ತಿನ ದಿವಸ ಅಧ್ಯಯನವನ್ನು ಮಾಡಬೇಕು. ಆತ್ಮ ಸಾಕ್ಷಿಯಿಂದ ಪ್ರಶ್ನೆಯನ್ನು ಮಾಡಿಕೊಳ್ಳಬೇಕು. ಇದಕ್ಕೆ ಕಾರಣರ್ಯಾರು? ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ ನಮ್ಮ ಉದ್ದೇಶ ಎಲ್ಲರೂ ಒಂದೇ ಆಗಿರಬೇಕು. ದೇಶದ ಪ್ರಧಾನ ಮಂತ್ರಿಗಳು "ಸಬ್ ಕಾ ಸಾಥ್ ಸಬ್ ಕಾ ವಿಕಾಸ್" "ಸರ್ವ ವ್ಯಾಪಿ ಸರ್ವ ಸ್ಪರ್ಶಿ, ಸಬ್ ಕಾ ವಿಶ್ವಾಸ್" ಎಂಬುದಾಗಿ ಹೇಳಿದ್ದಾರೆ. ಒಂದು ಚುನಾಯಿತ ಸರ್ಕಾರವನ್ನು ಪ್ರಶ್ನಿಸಿದರೆ, ನಾನು 72 ವರ್ಷಗಳ ಹಿಂದಕ್ಕೆ ಹೋಗುವುದಕ್ಕಾಗುತ್ತದೆಯೇ? We, the people of India, ನಾವುಗಳೆಲ್ಲರೂ ಸೇರಿ ಸಂವಿಧಾನವನ್ನು ತಂದಿದ್ದೇವೆ. ಇಂದಿಗೂ ಸಹ ಸಂವಿಧಾನದ ಆಶಯಗಳನ್ನು ನಾವು ಕಾಯಬೇಕಾದ ಸ್ಥಿತಿ ಇದೆ. ಇದಕ್ಕೆ ಕಾರಣವೇನು? ಪೌರತ್ವದ ವಿಚಾರ ಬಂದಾಗ ಭಾರತ ದೇಶದಲ್ಲಿ ಪರವಾನಿಗೆಯನ್ನು ಹೊಂದದಿರುವವರು ಇವತ್ತಿನ ದಿವಸ ಚಿಕ್ಕಮಗಳೂರಿನ ಕಾಫಿ ತೋಟ, ಶೃಂಗೇರಿಯಿಂದ ಮೊದಲುಗೊಂಡು ... ಮಾನ್ಯ ಸದಸ್ಯರು People's Republic of China ಎಂಬದಾಗಿ ಹೇಳಿದರು. ಆ ದೇಶದಲ್ಲಿ ಯಾವ ರೀತಿಯ ಪ್ರಜಾಪ್ರಭುತ್ವವಿದೆ? Do you want to implement such a democratic system? ಅಲ್ಲಿ ಯಾವ ರೀತಿಯ ಚುನಾವಣೆ ನಡೆಯುತ್ತದೆ? ಅಲ್ಲಿ ಯಾವ ರೀತಿಯ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ? Yes, I do agree, Greece is the oldest democracy and India is the largest democracy. ನಮಗೆ ನಮ್ಮ ದೇಶದ ಬಗ್ಗೆ ಹೆಮ್ಮೆಯಿದೆ. ನಮ್ಮಲ್ಲಿ ಲೋಪದೋಷಗಳಿರಬಹುದು. ಮಾನ್ಯ ಉಪ ಮುಖ್ಯಮಂತ್ರಿ ಶ್ರೀ ಗೋವಿಂದ ಕಾರಜೋಳರವರು ಪ್ರಸ್ತಾಪಿಸಿದಂತೆ, ಅದರ ನಡುವೆಯು ನಮ್ಮ ದೇಶವು ಅಭಿವೃದ್ಧಿ ಆಗಿಲ್ಲವೆಂದಲ್ಲ. ನೀವು ದೇಶವನ್ನು ಕಟ್ಟಿದ್ದೀರಿ. ಕಾಲಕಾಲಕ್ಕೆ ಬದಲಾದ ಸನ್ನಿವೇಶಗಳಲ್ಲಿ ಈಗ ನಾವು ಕಟ್ಟುತ್ತಿದ್ದೇವೆ. ಆದರೆ ಒಟ್ಟಾರೆಯಾಗಿ ನೋಡಿದಾಗ, ಇನ್ನೂ ಶೇಕಡಾ 33 ರಷ್ಟು ಅನಕ್ಷರತೆ ಇದೆ. ಬಡತನವಿದೆ. ನಮ್ಮ ರಾಜ್ಯದಲ್ಲಿ ಒಂದೂವರೆ ಲಕ್ಷ ಬಿ.ಪಿ.ಎಲ್., ಕಾರ್ಡ್‌ಗಳಿವೆ. ನಮ್ಮ ರಾಜ್ಯದಲ್ಲಿನ ಮಕ್ಕಳು ಸರ್ಕಾರ ನೀಡುವ ಬಿಸಿಯೂಟಕ್ಕೆ ಕೈಯೊಡ್ಡುವ ಪರಿಸ್ಥಿತಿ ಇನ್ನೂ ಸಹ ಇದೆ ಎಂದರೆ this is the reality. ಇಂತಹ ವಿಚಾರಗಳನ್ನು ಆತ್ಮಸಾಕ್ಷಿಯಿಂದ ಮಂಥನ ಮಾಡುವ ಈ ಸಂದರ್ಭದಲ್ಲಿ ಇವತ್ತಿನ ದಿವಸ ಭಾರತ ಸಂವಿಧಾನದ, ಅದರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುಚ್ಛೇದಗಳ ಆಶಯಗಳೇನಿವೆ, ಅವುಗಳನ್ನು ಅರಿತುಕೊಳ್ಳಬೇಕು. ಸಮಾಜಕ್ಕೆ ಅಪಮಾನ ಮಾಡುವ, ನಾವು ತಲೆ ತಗ್ಗಿಸಲು ಇರುವ ಕೆಲವು human dignity ಅಪಮಾನ ಮಾಡುವ ಅಸ್ಪೃಶ್ಯತೆ ಅಥವಾ ಅವಕಾಶಗಳಿಂದ ವಂಚಿಸುವಂತಹ ಸಂದರ್ಭಗಳಿರಬಹುದು. ಏಕೆಂದರೆ ಕ್ರೀಡೆಯ ವಿಚಾರದಲ್ಲಿ ಹೇಳುವುದಾದರೆ, ನಮ್ಮ ರಾಜ್ಯ ಹಾಗೂ ದೇಶದಲ್ಲಿನ ಕ್ರೀಡಾ ಪ್ರತಿಭೆಗಳಿಗೆ ಇನ್ನೂ ಅವಕಾಶ ದೊರೆತಿಲ್ಲ. ಕೆಲವು ಕ್ರೀಡಾ ಪ್ರತಿಭೆಗಳು ಅರಣ್ಯ ಪ್ರದೇಶಗಳಲ್ಲಿರುತ್ತಾರೆ. ಅವರಿಗೆ ಉತ್ತಮವಾದ ಶಿಕ್ಷಣ, ಸರ್ಕಾರಿ ಸವಲತ್ತುಗಳು ದೊರೆತಿರುವುದಿಲ್ಲ. ನಮ್ಮ ಸರ್ಕಾರಿ ಶಾಲಾ ಕಾಲೇಜುಗಳು ಅತ್ಯುತ್ತಮ ಗುಣಮಟ್ಟವನ್ನು ಹೊಂದಬೇಕು. ಮುಂದುವರೆದು Uniform Civil Code under Article 44 ಬಗ್ಗೆ ಚರ್ಚೆಯಾಗಬೇಕು. ನಮಗೆ Uniform Civil Code ಏಕೆ ಬೇಡ? 1985 ನೇ ಇಸ್ವಿಯಲ್ಲಿ ಶಹಭಾನು ಪ್ರಕರಣದಲ್ಲಿ ಪತಿಯಿಂದ ತ್ಯಜಿಸಲ್ಪಟ್ಟ, ಪರಿತ್ಯಕ್ತ ಮುಸಲ್ಮಾನ ಹೆಣ್ಣುಮಗಳು ಅವಳ ಜೀವನಾಂಶವನ್ನು ಕೇಳಿದರೆ, ನಾವು ನಮ್ಮ ದೇಶದಲ್ಲಿ appeasement politics ಏಕೆ ಮಾಡುತ್ತೇವೆ. ಇವತ್ತಿನ ದಿವಸ ತ್ರಿವಳಿ ತಲಾಕ್ ಮೂಲಕ ಮೊಬೈಲ್ ಹಾಗೂ ದೂರವಾಣಿ ಮುಖೇನ ಹೆಂಡತಿಯನ್ನು ಬೀದಿಗೆ ತಳ್ಳುವಂತಹ ಕಾನೂನನ್ನು ಏಕೆ ಇಷ್ಟು ವರ್ಷಗಳ ಕಾಲ ನಾವಿಟ್ಟುಕೊಂಡಿದ್ದೇವೆ. ಇದರ ಬಗ್ಗೆ ಚರ್ಚೆಯಾಗಲಿ. ಇವತ್ತಿನ ದಿವಸ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಡಾ॥ ಬಿ.ಆರ್.ಅಂಬೇಡ್ಕರ್‌ರವರ 125 ನೇ ಜನ್ಮ ದಿನದಂದು ಕೇಂದ್ರ ಸರ್ಕಾರವು ಹೊಸ ಕಾನೂನನ್ನು ಮಾಡಿದ್ದಾರೆ. ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ತಡವಾಗಿ ನೀಡಲಾಗಿದೆ. ಪ್ರಶಸ್ತಿಯನ್ನು ತಡವಾಗಿ ಕೊಟ್ಟವರು ಮತ್ತು ತಡವಾಗಿ ಕೊಟ್ಟಿದ್ದನ್ನು ನಾವೆಲ್ಲರೂ ನೋಡಿಕೊಂಡು ಕೂತಿರುವವರು ನಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕು. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಯಾವ ಮನಃಸ್ಥಿತಿಯಲ್ಲಿ ಬೇರೆ ಧರ್ಮಕ್ಕೆ ಮತಾಂತರ ಹೊಂದಿದ್ದರು, ಅಂತಹ ಅಂದಿನ ಸಾಮಾಜಿಕ ಸ್ಥಿತಿಗಳನ್ನು ನೋಡಬೇಕು. ಅಂದಿನ ಸ್ಥಿತಿಗೂ, ಇಂದಿನ ಸ್ಥಿತಿಗೂ ತುಂಬಾ ಬದಲಾವಣೆಯಾಗಿದೆ ಎಂದು ನಾನಂದುಕೊಳ್ಳುವುದಿಲ್ಲ. ಮಹಿಳೆಯರನ್ನು ನಡೆಸಿಕೊಳ್ಳುವ ರೀತಿ ಮತ್ತು ಅವರಿಗೆ ಅವಕಾಶವನ್ನು ನೀಡಬೇಕಾದಾಗ, merit electoral reforms ತೋಳ್ಬಲ, ಹಣಬಲ, ಪಾರುಪತ್ಯ ಮೆರೆಯಬಾರದು. ಚುನಾವಣೆ ಆಯೋಗವು ಏನು ಮಾಡಿದೆ?

**ಡಾ॥ ಜಯಮಾಲ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ...

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಒಂದೆರೆಡು ನಿಮಿಷ ನಾನು ಮಾತನಾಡಿ ಮುಗಿಸುತ್ತೇನೆ.

**ಡಾ॥ ಜಯಮಾಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇವುಗಳೆಲ್ಲದರ ಜೊತೆಯಲ್ಲಿ ಇವತ್ತಿನ ದಿವಸ ಯಾವ ಹೋರಾಟಗಳು ನಡೆಯುತ್ತಿವೆ, ಮುಂದಿನ ತಿಂಗಳ 15 ನೇ ತಾರೀಖಿನಂದು ನಡೆಯುವ N.P.R., (National Population Register) ಗೆ ಎದುರಾಗುವ ಸಂದಿಗ್ಧ ಪರಿಸ್ಥಿತಿಗೆ 'ಶಾದಿಭಾಗ್ಯ ಯೋಜನೆ' ಯನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಲ್ಲಿಸಿದ್ದಾರೆ. ಇದು ಮಹಿಳೆಯರಿಗೆ ಸಂಬಂಧಪಟ್ಟ ಯೋಜನೆಯಾಗಿದೆ. ನಾವು ಹೆಣ್ಣುಮಕ್ಕಳಿಗೆ ಮದುವೆಯಾಗುತ್ತಿಲ್ಲವೆಂದು ಈ ಯೋಜನೆಯನ್ನು ಕೇಳುತ್ತಿದ್ದೇವೆ. ಈ ಯೋಜನೆಯಲ್ಲಿ ಹೆಣ್ಣುಮಕ್ಕಳಿಗಾಗಿ ಐವತ್ತು ಸಾವಿರ ರೂಪಾಯಿಗಳನ್ನು ಕೊಡಲಾಗುತ್ತದೆ. ಇವತ್ತಿನ ದಿವಸ ಸರ್ಕಾರದಿಂದ ಈ ಯೋಜನೆಯನ್ನು ನಿಲ್ಲಿಸುವಂತಹ ಕೆಲಸಗಳಾಗುತ್ತಿವೆ. ಇದಕ್ಕೆ ಸಂಬಂಧಪಟ್ಟಂತೆ ಹೇಳಿಕೆಯನ್ನೂ ಸಹ ನೀಡಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಬೆಳಕನ್ನು ಹರಿಸಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ, ಈ ರೀತಿಯ ತಾರತಮ್ಯ ಧರ್ಮ, ಜಾತಿಗಳಲ್ಲಿ ಖಂಡಿತವಾಗಿಯೂ ಸಹ ಆಗಬಾರದು. ಜಾತಿ–ಧರ್ಮಗಳಿಗಿಂತ ಮಾನವೀಯತೆಯು ದೊಡ್ಡದು. ನಾವು ಇವತ್ತಿನ ದಿವಸ ಆ ಮಾನವೀಯ ಮೌಲ್ಯಗಳ ಆಧಾರದ ಮೇಲೆ ಆಲೋಚನೆ ಮಾಡಬೇಕು. ಸರ್ಕಾರ ಶಾದಿಭಾಗ್ಯ ಕೊಡಬಹುದು ಅಥವಾ ದೇವಸ್ಥಾನಗಳಲ್ಲಿ ನಡೆಯುವ ಎಲ್ಲಾ ಜಾತಿ ವರ್ಗದ ಮದುವೆಗಳಿರಬಹುದು. ಅವುಗಳಿಗೆ ಸರ್ಕಾರವು ಹಣ ಸಹಾಯ ಮಾಡಬೇಕೆನ್ನುವ ನಿಟ್ಟಿನಲ್ಲಿ ಮಾನ್ಯ ಸದಸ್ಯರು ಈ ವಿಚಾರದಲ್ಲಿ ಬೆಳಕನ್ನು ಚೆಲ್ಲಬೇಕೆಂದು ನಾನು ಕೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶಾದಿ ಭಾಗ್ಯ ಯೋಜನೆಯನ್ನು ಸರ್ಕಾರವು ಏಕೆ ಸ್ಥಗಿತಗೊಳಿಸಿದೆ ಎಂದು ಹೇಳಲು ಮಾನ್ಯ ಸದಸ್ಯೆ ಡಾ॥ ತೇಜಸ್ವಿನಿಗೌಡ ರವರಿಗೆ ನಿಯಮಾವಳಿಗಳಲ್ಲಿ ಅವಕಾಶವಿಲ್ಲ. ಮಾನ್ಯ ಸದಸ್ಯರು ಬೇರೆ ರೂಪದಲ್ಲಿ ಈ ವಿಚಾರವನ್ನು ಚರ್ಚೆಗೆ ತರಲಿ. ಈ ವಿಷಯದಲ್ಲಿ ಸರ್ಕಾರದೊಂದಿಗೆ ಮಾತನಾಡಿ ಏನಾಗಿದೆ ಎಂದು ಪರಿಶೀಲನೆ ಮಾಡುತ್ತೇವೆ.

**ಡಾ॥ ತೇಜಸ್ವಿನಿ ಗೌಡ(ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸದ್ಭಾವನೆಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಸಭಾನಾಯಕರು ಈಗಾಗಲೇ ಹೇಳಿದ್ದಾರೆ. ಎಲ್ಲ ಬಡವರಿಗೆ ವಿವಾಹ ಭಾಗ್ಯ ದೊರೆಯಬೇಕೆನ್ನುವುದು ನನ್ನ ಸದಾಶಯ. ನಮ್ಮ ಸಂವಿಧಾನವು ಇದನ್ನು ಹೇಳುತ್ತದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜನ್ನು ತಟ್ಟುವ ಮೂಲಕ ಹರ್ಷವನ್ನು ವ್ಯಕ್ತಪಡಿಸಿದರು)**

ತಾಳಿ ಭಾಗ್ಯ ಯೋಜನೆ ಇದೆ. ನಾನು ತುಂಬಾ sensitive. ಒಂದು ಗಂಡು ಒಂದು ಹೆಣ್ಣಿಗೆ ತಾಳಿ ಕಟ್ಟುವುದಕ್ಕಾಗದೇ ಇರುವಷ್ಟು ಅಸಹಾಯಕತೆ ಬಂದರೆ, ನನಗಿರುವ ಆತಂಕವೇನೆಂದರೆ, ಗಂಡ ಹೆಂಡತಿಯನ್ನು ಹೇಗೆ ಸಾಕುತ್ತಾನೆ? ಇದು ಅವನ ಆತ್ಮಗೌರವದ ಪ್ರಶ್ನೆಯಾಗಿದೆ. ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಜೀವನಾಧಾರಕ್ಕೆ ಏನಾದರೂ ಸಿಗಬೇಕು. ಸಂವಿಧಾನದಲ್ಲಿ ಪ್ರತಿಯೊಂದಕ್ಕೂ ಅವಕಾಶವಿದೆ. ಸಂವಿಧಾನವನ್ನು ಬಿಟ್ಟು ಬೇರೆನೂ ಇಲ್ಲ. ಆದರೆ ನಾವು ಸಂವಿಧಾನವನ್ನು ಅರ್ಥಮಾಡಿಕೊಳ್ಳಲಿಲ್ಲ. ಮಾನ್ಯ ಸಭಾಪತಿಯವರ ಮೂಲಕ ನಾನು ಆಗ್ರಹ ಮಾಡುವುದೇನೆಂದರೆ, ಭಾರತ ದೇಶದ ಪ್ರತಿಯೊಬ್ಬ ಪ್ರಜೆ ಸಂವಿಧಾನವನ್ನು ಓದಲೇ ಬೇಕು ಹಾಗೂ ಅರ್ಥ ಮಾಡಿಕೊಳ್ಳಲೇ ಬೇಕು. ಇದರ ಬಗ್ಗೆ ಕಡ್ಡಾಯವಾಗಿ ನಿರ್ಧಾರ ಮಾಡಲೇಬೇಕು. ಅದೇ ರೀತಿಯಾಗಿ ಭಾರತ ದೇಶದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇತಿಹಾಸವನ್ನೂ ಸಹ ಪ್ರತಿಯೊಬ್ಬ ಪ್ರಜೆಯು ಓದಿ, ಅರ್ಥ ಮಾಡಿಕೊಳ್ಳಲೇಬೇಕು. ಇಲ್ಲವೆಂದಾದರೆ, ನಮ್ಮ ಹಿರಿಯರು ಮಾಡಿರುವ ತ್ಯಾಗ, ಬಲಿದಾನ, ಅವರ ಆಶಯಗಳು ನಮಗೆ ಮರೆತು ಹೋಗುತ್ತವೆ. ಡಾ॥ ಅಂಬೇಡ್ಕರ್‌ರವರ ಹೇಳಿಕೆಯನ್ನು ನಾನು ಉಲ್ಲೇಖ ಮಾಡುವುದಾದರೆ, "ಇತಿಹಾಸ ಮರೆತವನಿಗೆ, ಭವಿಷ್ಯವನ್ನು ರೂಪಿಸುವ ಶಕ್ತಿ ಇರುವುದಿಲ್ಲ ಹಾಗೂ ಭವಿಷ್ಯವನ್ನು ಸೃಷ್ಟಿಸಲಾರ" ಎನ್ನುವ ಆಶಯವನ್ನು ಅಂಬೇಡ್ಕರ್‌ರವರು ಹೇಳಿದ್ದಾರೆ. ಆದ್ದರಿಂದ Article 51A of the Constitution of India ನಲ್ಲಿ Fundamental Duties ಎನ್ನುವುದು ಇದೆ. ಮೂಲಭೂತ ಕರ್ತವ್ಯಗಳು ಕಡಿಮೆ ಒಂದೇ ಪುಟದಲ್ಲಿವೆ. ಆದರೆ ಮೂಲಭೂತ ಹಕ್ಕುಗಳು ಸಂವಿಧಾನ ಅನುಚ್ಛೇದ 11 ರಿಂದ 50 ರ ವರೆಗೆ ಇದೆ. ಇದರ ಒಟ್ಟಾರೆಯ ಸಾರಾಂಶವೇನೆಂದರೆ, ನಿನಗಿಂತ ದೇಶ ದೊಡ್ಡದು, ನಿನಗಿಂತ ಸಮಾಜ ದೊಡ್ಡದು, ದೇಶಕ್ಕಾಗಿ ಹಾಗೂ ದೇಶದ ರಕ್ಷಣೆಗಾಗಿ ನಿನ್ನ ಜೀವವನ್ನು ಕೊಡಬೇಕಾದ ಸನ್ನಿವೇಶ ಬಂದಾಗ ಮೊದಲು ಕರ್ತವ್ಯವನ್ನು ನಿರ್ವಹಿಸಬೇಕು. ಅಸ್ಪೃಶ್ಯತೆ ನಿವಾರಣೆ ಮಾಡುವುದು, ಮಹಿಳೆಯರ ರಕ್ಷಣೆಯನ್ನು ಮಾಡುವುದು ಪ್ರತಿಯೊಬ್ಬರ ಕರ್ತವ್ಯ. ಪರಕೀಯರು, ವಿದೇಶಿಯರು, ಸಮಾಜ ಘಾತುಕ ಶಕ್ತಿಗಳು ಈ ನೆಲದ ಮೇಲೆ ರಕ್ತ ಕಾರದಂತೆ, ಇನ್ನೊಬ್ಬರ ಸಾಮಾಜಿಕ ಆಸ್ತಿ ಪಾಸ್ತಿಗಳನ್ನು ನಷ್ಟ ಮಾಡದಂತೆ ರಕ್ಷಣೆ ಮಾಡಬೇಕಾದ ಕರ್ತವ್ಯ ಕೂಡ ಪ್ರತಿಯೊಬ್ಬ ಪ್ರಜೆಗೆ ಇದೆ. ಇದು ಸಂವಿಧಾನದಲ್ಲಿ ನಮೂದಾಗಿದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಅದನ್ನು ನಾವು ಮರೆತು ಬೇರೆಯದನ್ನು ವ್ಯಾಖ್ಯಾನೀಕರಿಸುತ್ತೇವೆ, ವಿಶೇಷವಾಗಿ ಅನುಚ್ಛೇದ 32. ಸಂವಿಧಾನಕ್ಕೆ ಯಾವುದೇ ತಿದ್ದುಪಡಿಗಳನ್ನು ಮಾಡಬೇಕಾದರೆ, ಅದಕ್ಕೆ ಬದಲಾವಣೆಗಳನ್ನು ತರಬೇಕಾದರೆ, Parliament ನಂತಹ Temple of Democracy ಇದೆ, ಅಲ್ಲಿ ಎಲ್ಲಾ ಪಕ್ಷದ ಪ್ರತಿನಿಧಿಗಳು ತಮಗೆ ಇಷ್ಟ–ಕಷ್ಟಗಳ ಬಗ್ಗೆ ಚರ್ಚೆ ಮಾಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಸಾರ್ವತ್ರಿಕ ಚುನಾವಣೆಯ ಮೂಲಕ ಸಂಖ್ಯೆಗಳ ಆಧಾರದ ಮೇಲೆ ನಾವು ಮಾಡಿಕೊಂಡಿದ್ದೇವೆ. ಬಹುಮತ ಇರುವ ಪಕ್ಷವು ಅಧಿಕಾರಕ್ಕೆ ಬರುತ್ತದೆ. ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿಗಳನ್ನು ಚರ್ಚೆಗಳ ನಂತರ ತಂದಾಗ ಅದನ್ನು ಗೌರವಿಸಿ, ಜಾರಿ ಮಾಡುವುದರ ಮೂಲಕ ಸಂವಿಧಾನದ ಸದಾಶಯಕ್ಕೆ ಅರ್ಥವನ್ನು ತಂದುಕೊಡುವ ರಾಷ್ಟ್ರ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ. ಇಂತಹ ಸಂವಿಧಾನದ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ಇನ್ನು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಹೆಚ್ಚು ಅಧ್ಯಯನಗಳನ್ನು ಮಾಡುವುದಕ್ಕೆ ಪ್ರೇರಣೆಯಾಗಿದೆ. ಆದ್ದರಿಂದ ಭಾರತ ದೇಶದ ಅನೇಕ ಭಾಗಗಳಲ್ಲಿ ಅಸಮಾನತೆ ಇದೆ. ಬಿಹಾರ್ ರಾಜ್ಯಕ್ಕೆ ಏಕೆ ಹೆಚ್ಚು ಅನುದಾನವನ್ನು ಕೊಡುತ್ತೀರೆಂದು ಪ್ರಶ್ನೆ ಮಾಡುತ್ತಾರೆ. ಗಂಗಾ ನದಿ ಬಿಹಾರ್ ರಾಜ್ಯದಲ್ಲಿ ಬಂದು ಪ್ರವಾಹವುಂಟು ಮಾಡಿ, ಎಲ್ಲವನ್ನೂ ಕೊಚ್ಚಿಕೊಂಡು ಹೋಗುತ್ತದೆ. ಅದೇ ರೀತಿಯಾಗಿ ರಾಜ್ಯದ ಕೊಡಗು ಜಿಲ್ಲೆಗೆ ಏಕೆ ಹೆಚ್ಚಿನ ಅನುದಾನವನ್ನು ನೀಡುತ್ತೀರೆಂದು ಕೇಳುತ್ತಾರೆ. ಆ ಭೌಗೋಳಿಕ ವೈಪರೀತ್ಯ ಪ್ರದೇಶದಲ್ಲಿ ಕೊಡಗು ಜಿಲ್ಲೆ ಇದೆ. ಅತೀ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೆಚ್ಚು ಸೈನಿಕರನ್ನು ನೀಡುವ ರಾಜ್ಯದ ಕೊಡಗು, ಬೆಳಗಾವಿ ಮುಂತಾದವು ಪುಣ್ಯ ಭೂಮಿಗಳಾಗಿವೆ. ಅವರಿಗೆ ವಿಶೇಷವಾಗಿ ನೀಡುವುದು ದಾನವಲ್ಲ. It is their right ಎನ್ನುವ ಮಾತನ್ನು ನಾನು ಹೇಳುತ್ತೇನೆ. ಸೈನ್ಯಕ್ಕೆ, ಕಾರ್ಮಿಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಪ್ರತಿಯೊಬ್ಬರಿಗೂ ಸಲ್ಲಬೇಕಾದ ನ್ಯಾಯ ಹಾಗೂ ಹಕ್ಕುಗಳನ್ನು ನಾವು ಇವತ್ತಿನ ದಿವಸ ರಕ್ಷಣೆ ಮಾಡಿದರೆ, ಅದೇ ನಾವು ಸಂವಿಧಾನಕ್ಕೆ ಕೊಡುವ ಬಹುದೊಡ್ಡ ಕೊಡುಗೆಯಾಗಿದೆ ಎಂದು ಹೇಳುತ್ತೇನೆ. ಮಾತನಾಡಲು ಅವಕಾಶ ಕೊಟ್ಟ ಪೀಠಕ್ಕೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

**(ಮುಂದು)**

(305)/11-3-2020/12-50/ಎಲ್ಎಂ/ಜಿಆರ್

**ಶ್ರೀ ಸಿ.ಎಂ.ಇಬ್ರಾಹಿಂ(ವಿಧಾನಸಭೆಯಿಂದ ಆಯ್ಕೆಯಾದವರು)**:ಮಾನ್ಯ ಸಭಾಪತಿಗಳೆ, Uniform Civil Code ಎಂದು ಹೇಳಿದರು. ಇಡೀ ದೇಶದ ಜನರಿಗೆ ಇರುವ ಕಾನೂನೇ ಮುಸ್ಲಿಂರಿಗೂ ಇರುವುದು. ಕೇವಲ ಎರಡು ಅವು ಮದುವೆ ಮತ್ತು ಆಸ್ತಿ ಹಕ್ಕು ಇವುಗಳಿಗೆ ಸಿಮೀತವಾಗಿ Uniform Civil Code ಇರುವುದು. ನಮ್ಮಲ್ಲಿ ಮದುವೆ ಸಮಯದಲ್ಲಿ ಧಾರೆ ಎರೆಯುವುದಿಲ್ಲ, ಅಗ್ರಿಮೆಂಟ್ ಆಗುತ್ತದೆ, ಹುಡುಗ-ಹುಡುಗಿಗೆ ನೀನು ಒಪ್ಪಿದೆಯೆನಪ್ಪ, ನೀನು ಒಪ್ಪಿದಿಯೆನಮ್ಮ" ಎಂದು ಕೇಳುತ್ತಾರೆ ಅಲ್ಲಿಗೆ ಮದುವೆ ಮುಗಿಯಿತು. ಎಷ್ಟು ದಿನ ಇರುತ್ತೀರಿ ಇರಿ, ಒಪ್ಪಿಗೆಯಾಗಲಿಲ್ಲ ಎಂದರೆ ಬೇರೆಯಾಗುತ್ತೇವೆ ಎಂದರೆ ಬೇರೆಯಾಗಿ ಅಷ್ಟೆ. ಆದರೆ ಗಂಡಿಗೆ ಎಷ್ಟು ಹಕ್ಕು ಕಾನೂನಿನಲ್ಲಿ ಇದೆ ಅಷ್ಟೆ ಹಕ್ಕು ಹೆಣ್ಣಿಗೂ ಇದೆ. ಈ ಗಂಡು ನನಗೆ ಬೇಡ ಎಂದು ಹೆಣ್ಣು ಹೇಳಬಹುದು. ತೀನ್ ತಲಾಕ್ ವಿಧೇಯಕವನ್ನು ತಂದರು ಅದಕ್ಕೆ ನಾವು ಯಾರು ವಿರೋಧ ಮಾಡಲು ಹೋಗಲಿಲ್ಲ. We will welcome it. Yes, alright, ಒಂದೇ ಸರಿ ಹೇಳುವುದು ಬೇಡ ಸಮಯ ತೆಗೆದುಕೊಂಡು ಹೇಳಲಿ ಎಂದು ಸುಮ್ಮನಾಗಿದ್ದೇವೆ. ಎರಡನೆಯದು, ಆಸ್ತಿ ಹಕ್ಕಿನಲ್ಲಿ ಹೆಣ್ಣು ಗಂಡನ ಮನೆಗೆ ಹೋದರೂ ಕೂಡಾ ತಂದೆ ಆಸ್ತಿಯಲ್ಲಿ ಮತ್ತು ಗಂಡನ ಆಸ್ತಿಯಲ್ಲಿಯು ಹೆಣ್ಣಿಗೆ ಹಕ್ಕಿದೆ. ಇದೆಲ್ಲವು ಆ personal law ನಲ್ಲಿ ಇದೆ. ಕಳ್ಳತನವಾದರೆ, ಮೋಸ ಮಾಡಿದರೆ, ಕೊಲೆ ಮಾಡಿದರೆ ಮುಸ್ಲಿಂರಿಗೂ ಅದೇ ಶಿಕ್ಷೆ. All the laws are equal. ಮುಸ್ಲಿಂರಿಗೇ ಒಂದು ಕಾನೂನು ಇದೆ, ಅಥವಾ ಬೇರೆಯವರಿಗೆ ಇಲ್ಲ ಎನ್ನುವ ತಪ್ಪು ಸಂದೇಶ ಹೊರಗಡೆ ಹೋಗಬಾರದು. ಎರಡನೆಯದು, ಸಂವಿಧಾನದ ತಿದ್ದುಪಡಿ ಬಗ್ಗೆ ಹೇಳಿದ್ದಾರೆ, ಮೂಲಭೂತ ಹಕ್ಕುಗಳ ತಿದ್ದುಪಡಿ ಮಾಡುವಂತಹ ಅಧಿಕಾರ ಪಾರ್ಲಿಮೆಂಟಿಗೂ ಇಲ್ಲ, ಯಾರಿಗೂ ಇಲ್ಲ. ಇದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಆ ಸಂದರ್ಭದಲ್ಲಿ ಡಾ: ಬಾಬಾ ಸಾಹೇಬ ಅಂಬೇಡ್ಕರ್‌ರವರು, ಡಾ: ರಾಜೇಂದ್ರ ಪ್ರಸಾದ್‌ರವರು ಏನು ಭಾಷಣ ಮಾಡಿದ್ದಾರೆ ಎನ್ನುವುದನ್ನು ತೆಗೆದು ಸ್ವಲ್ಪ ಓದಿ. ಆದರೆ ಈಗ ಏನು ಆಗುತ್ತಿದೆ ಎಂದರೆ, ಸಂವಿಧಾನದ ತಿದ್ದುಪಡಿಯಾಗುತ್ತಿಲ್ಲ, ಆದರೆ ಒಂದೊಂದೇ ಪುಟಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮೊನ್ನೆ ಮೀಸಲಾತಿ ಬಗ್ಗೆ ಸುಪ್ರೀಮ್ ಕೋರ್ಟ್ ತೀರ್ಪು ಬಂತು. ಅದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ಮಾಡಬೇಕು ಎನ್ನುವ ನಿಲುವು ತೆಗೆದುಕೊಳ್ಳಲು ಇದುವರೆಗೂ ಸಾಧ್ಯವಾಗಿರುವುದಿಲ್ಲ. ದೇಶದಲ್ಲಿ ಐದು ಸಾವಿರ ವರ್ಷಗಳಿಂದ ತುಳಿತಕ್ಕೆ ಒಳಪಟ್ಟಿರುವ ಅಸ್ಪೃಶ್ಯ ವರ್ಗದ ಜನರು, ಅಲ್ಪಸಂಖ್ಯಾತರು 70 ವರ್ಷಗಳಲ್ಲಿ ಮುಂದೆ ಬಂದು ಬಿಡುತ್ತಾರೆಯೇ. ಆ ಸಮಾಜದ ಪಿಡುಗು ಹೋಗಬೇಕು ಎಂದರೆ it takes time. ಒಂದೇ ಸಲ ಹೋಗುವುದಿಲ್ಲ. ಆಗ ನಾವೆಲ್ಲರೂ ಸೇರಿ ಹಿಂದುಳಿದವನು ಇದ್ದರೆ ಬಾ ನನ್ನ ಪಕ್ಕದಲ್ಲಿ ಕುಳಿತುಕೊ ಎಂದು ಹೇಳಬೇಕು. ಹಿಂದುಳಿದ ವರ್ಗದವರಿಗೆ ಏಕೆ ಕೊಡಬಾರದು? ಒಬ್ಬ ತಾಯಿಗೆ 5 ಮಕ್ಕಳಿರುತ್ತಾರೆ. ಅದರಲ್ಲಿ ಒಂದು ಮಗು ಹುಟ್ಟಿನಿಂದಲೆ ಅಂಗವಿಕಲವಾಗಿರುತ್ತದೆ. ಆಗ ಆ ಮಗುವಿಗೆ ತಾಯಿ ಏನೇ ಕೊಡುವಾಗ ಸ್ವಲ್ಪ ಜಾಸ್ತಿ ಕೊಟ್ಟಾಗ ಉಳಿದ ನಾಲ್ಕು ಜನ ಸಹೋದರರು ಹೌದು ತಾಯಿ ನೀನು ಕೊಟ್ಟು ಒಳ್ಳೆಯದನ್ನು ಮಾಡಿದೆ ಎಂದು ಸಹಕಾರ ಕೊಡಬೇಕೆ ಹೊರತು ಅದರ ಮೇಲೆ competition ಮಾಡಲು ಹೋಗಬಾರದು. ಇದೇ clarification ನನ್ನು ನಾನು ಹೇಳಲಿಕ್ಕೆ ಇಚ್ಚೆಪಡುತ್ತೇನೆ.

**ಡಾ: ತೇಜಸ್ವಿನಿ ಗೌಡ**(ವಿಧಾನಸಭೆಯಿಂದ ಆಯ್ಕೆಯಾದವರು):–ಮಾನ್ಯ ಸಭಾಪತಿಗಳೆ, ಮಾನ್ಯ ಶ್ರೀ ಸಿ.ಎಂ.ಇಬ್ರಾಹಿಂರವರು ಅಧ್ಯಯನ ವಿಚಾರದಲ್ಲಿ ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. Uniform Civil Code ಎಂದು ಹೇಳುವಾಗ, ಈ ಸಂವಿಧಾನವನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. The greatness of India ಗಣರಾಜ್ಯದ ಸೊಗಸು ಎಂದರೆ ಧರ್ಮದ ಆಧಾರದ ಮೇಲೆ ದೇಶವನ್ನು ಕಟ್ಟಲಿಲ್ಲ. 'Socialist' ಎನ್ನುವ ಪದವನ್ನು 1976ರಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಿ ಸೇರಿಸಲಾಗಿದೆ. ಎಲ್ಲ ದೇಶಗಳ ಉತ್ತಮ ಅಂಶಗಳನ್ನು ತೆಗೆದುಕೊಂಡು ಸಂವಿಧಾನವನ್ನು ರಚನೆ ಮಾಡಲಾಗಿದೆ. ಯಾವ ಧರ್ಮ ಹಿಂಸೆಯನ್ನು ಬೋಧಿಸುತ್ತದೆ Interpretation of law and implementation ನಲ್ಲಿ ನಾವು ಎಲ್ಲಿ ತಪ್ಪಿದ್ದೇವೆ. ಕಾಂಗ್ರೆಸ್ ಪಾರ್ಟಿ ಸದುದ್ದೇಶದಿಂದ ಬಡವರ ಕಲ್ಯಾಣ ಮಾಡಲು 20 ಅಂಶಗಳ ಕಲ್ಯಾಣ ಕಾರ್ಯಕ್ರಮವನ್ನು ಜಾರಿ ಮಾಡಿದರು. ನನ್ನ ಮಾತನ್ನು ಬಿಡಿ, ಆದರೆ ದಿ: ರಾಜೀವ ಗಾಂಧೀಜಿಯವರೇ ಯೋಜನೆ ಕೊನೆ ಹಂತಕ್ಕೆ ಕೇವಲ 15% ರಿಚ್ ಆಗುತ್ತದೆ ಎಂದು ಹೇಳಿದ್ದಾರೆ. ಸೋರಿಕೆಯಾಗುತ್ತಿದೆ ಇದಕ್ಕೆ ಯಾರೋ ಒಬ್ಬ ವ್ಯಕ್ತಿ ಕಾರಣವಲ್ಲ, system failure ಆಗಿದೆ. ಹೀಗಾಗಿ 70 ವರ್ಷ ತೆಗೆದುಕೊಳ್ಳಬೇಕಾಯಿತು. ಮಾನ್ಯ ಆರ್.ಬಿ.ತಿಮ್ಮಾಪೂರರವರು ಹೇಳಬೇಕು, ಇದು ಆತ್ಮಸಾಕ್ಷಿಯ ಪ್ರಶ್ನೆ, ಮೀಸಲಾತಿಯ ಫಲವನ್ನು ಕಾಲಕಾಲಕ್ಕೆ.. ಅದರಿಂದ ಹೊರಗೆ ಬಂದವರನ್ನು ಹೊರತುಪಡಿಸಿ ಆ ಬಡವರಿಗೆ ತಲುಪುವಂತೆ ನೋಡಿಕೊಳ್ಳಬೇಕಾಗಿರುವುದು ಯಾರ ಕರ್ತವ್ಯ. ಮೆರಿಟ್ ಸಾಮರ್ಥ್ಯ ಕೂಡಾ ಮುಖ್ಯ. ಅಸ್ಪೃಶ್ಯತೆ ಮತ್ತು ಅಸಮಾನತೆ ಇದೊಂದು ಸಾಮಾಜಿಕ ಪಿಡುಗು. ಇದನ್ನು ಹೋಗಲಾಡಿಸಲು ಇನ್ನು ಸಮಯಬೇಕು. ಬೇಗ ಹೋಗಲಾಡಿಸಬೇಕಾಗಿದೆ. ನಾವೇ ಇರಲಿ, ನೀವೆ ಇರಲಿ, 72 ವರ್ಷಗಳ ಕೊರತೆಯನ್ನು ಬೇಗ ನಿವಾರಿಸಬೇಕಾಗಿದೆ. ಅವರನ್ನು ಬಡತನದಿಂದ ಮೇಲಕ್ಕೆ ತರಬೇಕು. ಚೈನಾ ದೇಶವನ್ನು ದಾಟಿ ನಾವು ಮುಂದೆ ಹೋಗಬೇಕಾಗಿದೆ. ಅಮೇರಿಕಾ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೇಶದ ಜೊತೆಯಲ್ಲಿ ನಿಂತುಕೊಳ್ಳುತ್ತೇವೆ. ಮಾನಸಿಕವಾಗಿ ಆ ಬಲ್ಯಾಢತೆ ಇದೆ. ದಿ: ಇಂದಿರಾ ಗಾಂಧಿಯವರು ಅಲಿಪ್ತ ರಾಷ್ಟ್ರಗಳಿಗೆ ನಾಯಕತ್ವವನ್ನು ಕೊಟ್ಟರು. ನೇತಾಜಿಯವರು ಅಧಿಕಾರಕ್ಕೆ ಬರದೇ ಇರಬಹುದು. He has given his own contribution. ಒಂದು ಪಕ್ಷ ಎಂದು ಭಾವಿಸುವುದು ಬೇಡ, ಶ್ರೀ ಪ್ರಣವ ಮುರ್ಖಜಿಯವರಿಗೆ ಭಾರತ ರತ್ನ ಕೊಡುವಷ್ಟು ಕೊಡುಗೆಯನ್ನು ಅವರು ರಾಜಕೀಯದಲ್ಲಿ ಕೊಟ್ಟಿದ್ದಾರೆ. ಅವರಿಗೆ ಭಾರತ ರತ್ನ ಕೊಡಲು ತಡ ಮಾಡಲಾಯಿತು. ಇದು ನಮ್ಮಿಂದ ಆದ ಲೋಪ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇದರಲ್ಲಿಯು ಆತ್ಮಪ್ರತಿಷ್ಠೆ ಮಾಡಿಕೊಳ್ಳುವ ಅವಶ್ಯಕತೆ ಇದೆಯೇ? ಮಾನ್ಯ ಸಿ.ಎಂ.ಇಬ್ರಾಹಿಂ ಸಾಹೇಬರು ನನಗೆ ಒಂದು ವಿಷಯದಲ್ಲಿ clarify ಮಾಡಬೇಕು. Uniform Civil Code ಎಂದು ಹೇಳುವ ಸಂದರ್ಭದಲ್ಲಿ ದೇಶದಲ್ಲಿ ಒಂದೇ ಗಂಡ, ಒಂದೇ ಮದುವೆ, ಒಬ್ಬಳೆ ಹೆಂಡತಿ, ನೈತಿಕತೆ, ಎರಡೇ ಮಕ್ಕಳನ್ನು ಮಾಡಿಕೊಳ್ಳಬೇಕು, ದೇಶಕ್ಕೆ ಭಾರವಾಗಿ ಹೋಗಬಾರದು. ಮಕ್ಕಳನ್ನು ಬೀದಿಗೆ ಬಿಸಾಕಬಾರದು, ಉತ್ತಮ ಪ್ರಜೆಯನ್ನಾಗಿ ಮಾಡಿ ಜನಸಂಖ್ಯೆಯನ್ನು ದೇಶಕ್ಕೆ ಸಂಪತ್ತು ಮಾಡಬೇಕು. ಇಂದು ಮದ್ಯವ್ಯಸನಿಗಳನ್ನು, ನಿರುದ್ಯೋಗಿಗಳನ್ನು ಎಲ್ಲಿಗೆ ಕಳುಹಿಸಬೇಕು. ತಾರುಣ್ಯದ ಯುವಕ ಕುಡಿದು ಬಿದ್ದಾಗ ಮಕ್ಕಳನ್ನು ಕಟ್ಟಿಕೊಂಡು ಆ ಯುವತಿ ಏನು ಮಾಡಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೂಲಕ ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಆದರೆ ಹೆಣ್ಣುಮಕ್ಕಳ ಮೇಲೆ ಸರ್ಕಾರದ ಗಮನ ಯಾವಾಗಲೂ ಸ್ವಲ್ಪ ಕಡಿಮೆಯೇ ಇದೆ. ನನ್ನ ಜೊತೆ ಕುಳಿತಿರುವ ಸಹೋದರರು ನನಗೆ ಬೆಂಬಲ ಕೊಡುತ್ತಾರೆ. Fifty percent of the humanity, fifty percent of the population ಅಮ್ಮನ್ನೆ ಇಲ್ಲ ಎಂದ ಮೇಲೆ ನೀವು ಹೇಗೆ ಹುಟ್ಟಿದ್ದಿರಿ, ಅಮ್ಮನನ್ನು ನೀವು ಹೇಗೆ ದುರ್ಬಲಳು ಎಂದು ಕರೆಯುತ್ತೀರಿ. ಸೈನೆಯಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಕೊಟ್ಟಿದ್ದಾರೆ. We can lead the war front. ಅವಕಾಶ ಕೊಟ್ಟರೆ ತಾನೆ? Opportunity ಕೊಡುವುದೂ ಕೂಡ ದೇಶದ ಕರ್ತವ್ಯ. You have to give me the opportunity. Opportunity ಕೊಟ್ಟಿಲ್ಲ ಎಂದ ಮೇಲೆ whether I am capable or incapable ಎನ್ನುವುದು ಹೇಗೆ ಗೊತ್ತಾಗುತ್ತದೆ. ಆದ್ದರಿಂದ ಆ ಧರ್ಮದಲ್ಲಿ ಇರುವಂತಹ ಎಲ್ಲ ಸದುದ್ದೇಶಗಳನ್ನು ನಾವು ಅನುಸರಿಸಲೇ ಬೇಕು. ಹಿಂದೆ ಹಿಂದು ವಿಧುವೆಯ ತಲೆ ಬೋಳಿಸುತ್ತಿದ್ದರು, ಸತಿಸಹಗಮನ ಪದ್ದತಿ ಇತ್ತು. ಬೀದಿಯಿಂದ ಆಚೆ ಇಡುತ್ತಿದ್ದರು. Reforms ಕಾಲ-ಕಾಲಕ್ಕೆ ಆಗಿದೆ. ನಾವು ಈ ವಿಚಾರದಲ್ಲಿ ಮಾನ್ಯ ರಾಜರಾಮ ಮೋಹನರಾಯರನನ್ನು, ಶ್ರೀಮತಿ ಜ್ಯೋತಿ ಭಾಪುಲ್ಲೆರವರನ್ನು ಸ್ಮರಿಸಲೇಬೇಕಾಗುತ್ತದೆ. ಅದಕ್ಕಿಂತ ಮುಖ್ಯವಾಗಿ ಭಾರತ ರತ್ನ ಡಾ: ಬಿ.ಆರ್.ಅಂಬೇಡ್ಕರ್‌ರವರು ಮಹಿಳೆಯರಿಗೆ ಇಷ್ಟು ಸಾಮರ್ಥ್ಯ, ಆತ್ಮಶಕ್ತಿಯನ್ನು ಸಂವಿಧಾನದಲ್ಲಿ ಕೊಟ್ಟರು. ಅವರು ಒತ್ತಡಕ್ಕೆ ಮಣಿಯಲಿಲ್ಲ. ಅಖಂಡತೆಯ ವಿಚಾರ, ಮಹಿಳೆಯರ ವಿಚಾರ, ದುರ್ಬಲ ವರ್ಗದವರ ವಿಚಾರದಲ್ಲಿ ಡಾ: ಬಿ.ಆರ್.ಅಂಬೇಡ್ಕರ್‌ರವರು ಮಾರ್ಗದೀಪವನ್ನು ಹಚ್ಚಿದ್ದಾರೆ. ಆ ದೀಪವನ್ನು ಮುಂದಕ್ಕೆ ಬೆಳಗಿಸಿಕೊಂಡು ಹೋಗುವಲ್ಲಿ, implementation ಮಾಡುವಲ್ಲಿ ರಾಜ್ಯಾಂಗ, ಕಾರ್ಯಂಗ, ಶಾಸಕಾಂಗ ಮತ್ತು ನ್ಯಾಯಾಂಗ ಪಾತ್ರವಹಿಸುತ್ತವೆ. When there will be a

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

judicial intervention? ನಾವು failure ಆದಾಗ ಬರುತ್ತದೆ. ಭ್ರಷ್ಟಾಚಾರ ಮಾಡಿದಾಗ ಬರುತ್ತದೆ. State ಕಿವಿಯನ್ನು ಯಾರು ಹಿಂಡ ಬೇಕು. ಮೂರೂ ಜನ ವಿಫಲವಾದಾಗ ಪ್ರೆಸ್‌ನಲ್ಲಿ ಬರುತ್ತದೆ. ಆದ್ದರಿಂದ ಇದನ್ನು ನಾವು positive ಆಗಿ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ **ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:–ಮಾನ್ಯ ಸಭಾಪತಿಯವರೇ, ಸಂವಿಧಾನವನ್ನು ಹಲವಾರು ತತ್ವಗಳ ಆಧಾರದ ಮೇಲೆ ರೂಪಿಸಲಾಗಿದೆ. ಆದರೆ ಮೂಲಭೂತ ಆಶಯಗಳು ಎರಡು ಇವೆ. Fundamental principles ಅನ್ನು ಬದಲಾವಣೆ ಮಾಡಲು ಬರುವುದಿಲ್ಲ. ಶ್ರೀ ಸಿ.ಎಂ.ಇಬ್ರಾಹಿಂ ರವರು ಹೇಳಿರುವುದಕ್ಕೆ ನನ್ನ ಹತ್ತಿರ reference ಇದೆ. ಸಂವಿಧಾನವನ್ನು ತಿದ್ದುಪಡಿ ಮಾಡಬಹುದು. ಆದರೆ ಮೂಲ ತತ್ವಗಳ ಆಧಾರದಲ್ಲಿ ಏನು ಸಂವಿಧಾನವನ್ನು ರಚನೆ ಮಾಡಿದ್ದಾರೆ ಅವುಗಳನ್ನು ಬದಲಾವಣೆ ಮಾಡಲು ಬರುವುದಿಲ್ಲ. ಕೇಶವಾನಂದ ಭಾರತಿ ಕೇಸ್‌ನಲ್ಲಿ ಸರ್ವೋಚ್ಚ ನ್ಯಾಯಾಲಯ ಹೇಳಿದೆ, ಈ ದೇಶದ ಪ್ರಭುತ್ವವನ್ನು ನಾಶ ಮಾಡಿ ಇನ್ನೊಂದು ದೇಶಕ್ಕೆ ಆಧೀನ ಮಾಡಲು ಸಾಧ್ಯವಿದೆಯೇ, ಸಾಧ್ಯವಿಲ್ಲ. ಈಗಿನ ಪ್ರಭುತ್ವಕ್ಕೆ ಸರ್ಕಾರದ ಬದಲಾಗಿ ನಿರಂಕುಶ ಪ್ರಭುತ್ವದ ಆಡಳಿತ ತರಲು ಬರುತ್ತದೆಯೇ, ಬರುವುದಿಲ್ಲ. ಈ ದೇಶದ ಒಕ್ಕೂಟ ವ್ಯವಸ್ಥೆಯನ್ನು ಬದಲಿಸಿ ಹಲವು ರಾಜ್ಯಗಳನ್ನು ಸ್ವತಂತ್ರ ರಾಜ್ಯಗಳೆಂದು ಮಾಡಲು ಬರುತ್ತದೆಯೇ; No, impossible. ಈ ದೇಶದ ಧರ್ಮ ನಿರಪೇಕ್ಷಿತ ಸ್ವರೂಪವನ್ನು ಬದಲಿಸಿ, ಧರ್ಮಾಧಾರಿತವಾದ ಸ್ವರೂಪವನ್ನು ಸರ್ಕಾರ ಸ್ಥಾಪಿಸಬಹುದೆ ಎಂದು ಪ್ರಶ್ನೆ ಮಾಡಿದ್ದಾರೆ ಅದಕ್ಕೆ 'No' ಎಂದಿದ್ದಾರೆ. ಇವೆಲ್ಲವು fundamental principle ನಲ್ಲಿ ಬಂದಿರುವುದು. ಪ್ರಜೆಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ನೀಡಿರುವ ಹಕ್ಕುಗಳನ್ನು ರದ್ದುಪಡಿಸಬಹುದೆ; ಇಲ್ಲ. ಶ್ರೀ ಸಿ.ಎಂ.ಇಬ್ರಾಹಿಂರವರು ಹೇಳಿರುವ ವಿಚಾರ ಇಲ್ಲಿ ಬರುತ್ತದೆ. ಈ ದೇಶವನ್ನು ಕಲ್ಯಾಣ ರಾಷ್ಟ್ರವಾಗಿ ನಿರ್ಮಾಣ ಮಾಡಬೇಕು ಎನ್ನುವ ಜನಾದೇಶವನ್ನು ರದ್ದುಗೊಳಿಸಬಹುದೆ; No, it cannot be done. ಸಂಸತ್ತಿನ ಎರಡು ಮನೆಗಳ ಕಾರ್ಯಾವಧಿಯನ್ನು ಅನಿರ್ದಿಷ್ಟ ಕಾಲಾವಧಿವರೆಗೆ ಮುಂದೂಡಬಹುದೆ; ಸಾಧ್ಯವಿಲ್ಲ, ಮಾಡಲಿಕ್ಕಾಗುವುದಿಲ್ಲ. ಸಂವಿಧಾನವನ್ನು ಕಾನೂನು ರೀತ್ಯಾ ಅಥವಾ ಯಾವುದೇ ರೀತಿಯಲ್ಲಿ ತಿದ್ದುಪಡಿ ಮಾಡದಂತೆ ಸಂವಿಧಾನವನ್ನು ನಿರ್ಭಂಧಿಸಬಹುದೆ; No. ಮೂಲಭೂತ ತತ್ವಗಳನ್ನು ಸಂವಿಧಾನದಲ್ಲಿ ಪ್ರತ್ಯೇಕವಾಗಿ ತೋರಿಸಿರುವುದಿಲ್ಲ. ಇವೆಲ್ಲವು ಸಂವಿಧಾನದಲ್ಲಿ ಅಂತರ್ಗತವಾಗಿವೆ. ಈಗ ನಾನು ಹೇಳಿರುವ ಅಂಶಗಳೇಲ್ಲವು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರೆ ಎತ್ತಿರುವಂತಹ ಪ್ರಶ್ನೆಗಳು. ಅದರಲ್ಲಿ ಪ್ರಮುಖವಾಗಿ ಪ್ರಜೆಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ನೀಡಲಾಗಿರುವ ಹಕ್ಕುಗಳನ್ನು ರದ್ದುಗೊಳಿಸಬಹುದೆ? ಎಂದರೆ 'No' ಎಂದು ಹೇಳಿದ್ದಾರೆ. ಇವೆಲ್ಲವು ಸಂವಿಧಾನದ ಆಶಯಗಳಲ್ಲಿ ಬರುತ್ತವೆ.

(ಮುಂದು)

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

306/11-03-2020/01-00/ಬಿಎಸ್‌ಡಿ-ಎಂಡಿ

**ಶ್ರೀ ಸಿ.ಎಂ. ಲಿಂಗಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಾ, ನಾನು ಎರಡೂಮುಕ್ಕಾಲು ವರ್ಷಗಳ ಕಾಲ ಸದಸ್ಯನಾಗಿದ್ದು, ಒಮ್ಮೆಯೂ ಕೂಡ ಚರ್ಚೆಗಳಲ್ಲಿ ಭಾಗವಹಿಸುವ ಅವಕಾಶವನ್ನು ನಾನು ಪಡೆದುಕೊಳ್ಳಲಿಲ್ಲ. ನನಗೆ ಯಾರೂ ಅವಕಾಶ ಕೊಡಲಿಲ್ಲ ಎಂದಲ್ಲ, ನಾನು ಪಡೆದುಕೊಳ್ಳಲಿಲ್ಲ. ಆದರೆ ಭಾರತದ ಸಂವಿಧಾನದ ವಿಚಾರದಲ್ಲಿ ಬಹಳ ಅರ್ಥಪೂರ್ಣವಾದ ಚರ್ಚೆ ನಡೆಯುತ್ತಿರುವಾಗ ನಾನೊಬ್ಬ ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿ, ನನ್ನ ಅಭಿಪ್ರಾಯವನ್ನು ಘನತೆವೆತ್ತ ಸಭೆಯ ಗಮನಕ್ಕೆ ತರಬೇಕು ಎನ್ನುವ ಉದ್ದೇಶದಿಂದ ತಮ್ಮ ಅನುಮತಿಯೊಡನೆ ಮಾತನಾಡಲು ನಿಂತಿದ್ದೇನೆ. ತಾವು ಅನುಮತಿ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ತಮಗೆ ಅಭಿನಂದಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಇವತ್ತು ಪ್ರಪಂಚದ ಸುಮಾರು 200 ದೇಶಗಳಲ್ಲಿ ಸಂವಿಧಾನ ಇಲ್ಲದೇ ಇರುವ ದೇಶಗಳು ಬಹಳ ಕಡಿಮೆ. ಸುಮಾರು 29 ದೇಶಗಳಿಗೆ ಸಂವಿಧಾನ ಇಲ್ಲ. ಉಳಿದೆಲ್ಲ ದೇಶಗಳು ಸಂವಿಧಾನವನ್ನು ಹೊಂದಿವೆ. ಅದರಲ್ಲಿಯೂ ಪ್ರಪಂಚದಲ್ಲಿಯೇ ಅತೀ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದ ಸಂವಿಧಾನವು ಭರತ ಖಂಡದ ಚರಿತ್ರೆಯಲ್ಲಿಯೇ ಮೊಟ್ಟಮೊದಲ ಸಂವಿಧಾನವಾಗಿದೆ. ಹಿಂದೆ ಯಾವ ಕಾಲದಲ್ಲಿಯೂ ನಮ್ಮ ದೇಶದಲ್ಲಿ ಸಂವಿಧಾನ ಇರಲಿಲ್ಲ. ರಾಜ-ಮಹಾರಾಜರ ಆಳ್ವಿಕೆಯ ಸಂದರ್ಭದಲ್ಲಿಯೂ ಸಂವಿಧಾನವೂ ಇರಲಿಲ್ಲ. "King can do no wrong" ಎನ್ನುವ ಒಂದು ಇಂಗ್ಲೀಷ್ ನಾಣ್ಣುಡಿಯಂತೆ ರಾಜ ತಪ್ಪು ಮಾಡುವುದೇ ಇಲ್ಲ. 'ಅವನ ಕೈ-ಕಾಲು ಕತ್ತರಿಸಿ ಹಾಕು' ಎಂದು ರಾಜ ಹೇಳಿದರೆ ತಪ್ಪಲ್ಲ, ಅವನನ್ನೇ ಕತ್ತರಿಸಿ ಹಾಕು ಎಂದರೆ ತಪ್ಪಲ್ಲ. ಇಂತಹ ವ್ಯವಸ್ಥೆಯಲ್ಲಿ ನಮ್ಮ ದೇಶವು ಇತ್ತು. ಬಹುಶ: ಗೌತಮ ಬುದ್ಧನ ಕಾಲಕ್ಕಿಂತ ಹಿಂದಿನಿಂದಲೂ ಹಾಗೆ ನಡೆದುಕೊಂಡು ಬಂದಿದೆ. ಪುಣ್ಯವಶಾತ್ ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾಗಿ ಬ್ರಿಟಿಷರ ವಿರುದ್ಧ ಹೋರಾಟ ನಡೆಯುತ್ತಿರುವಾಗಲೇ ಮಹಾತ್ಮ ಗಾಂಧಿಯವರು ಸೇರಿದಂತೆ ಅನೇಕರು ಭಾರತಕ್ಕೆ ಮೊಟ್ಟಮೊದಲ ಸಂವಿಧಾನವು ಬೇಕು ಎಂದಿದ್ದರು. ಬ್ರಿಟಿಷರು East India Company ಯಿಂದ ಭಾರತ ದೇಶದ ಆಡಳಿತವನ್ನು ತೆಗೆದುಕೊಂಡ ನಂತರ ಭಾರತಕ್ಕೆ ಸಂಬಂಧಪಟ್ಟ ತೀರ್ಮಾನಗಳು ಃಡಿuಣiಛಿಚಿಡಿಟuಛಿಟಜಟಿಣ ನಲ್ಲಿ ಆಗುತ್ತಿತ್ತು. British Parliament ನಲ್ಲಿ ತೀರ್ಮಾನವಾದ ಅಂಶಗಳು ಭಾರತದಲ್ಲಿ ಆಚರಣೆಯಾಗುತ್ತಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬ್ರಿಟಿಷರು 200 ವರ್ಷಗಳ ಕಾಲ ಆಳ್ವಿಕೆ ಮಾಡಿದರು. ಸ್ವಾತಂತ್ರ್ಯ ಸಂಗ್ರಾಮದ ಹೋರಾಟ ಒಂದು ಕಡೆಯಾದರೆ, ಭಾರತಕ್ಕೆ ಒಂದು ಸಂವಿಧಾನ ಇರಲೇಬೇಕು ಎಂದು ಸ್ವಾತಂತ್ರ್ಯ ಬಂದ ನಂತರ ಸಂವಿಧಾನ ರಚನಾ ಸಭೆಯನ್ನು ರಚನೆ ಮಾಡಲಾಯಿತು. ಡಾ॥ ಬಾಬು ರಾಜೇಂದ್ರ ಪ್ರಸಾದ್ ರವರ ಅಧ್ಯಕ್ಷತೆ ಹಾಗೂ ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ರವರ ಅಧ್ಯಕ್ಷತೆಯ Drafting

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Committee Of Indian Constitution ಗಳ ಮೂಲಕ ಸುಮಾರು ಒಂದೂಮುಕ್ಕಾಲು ವರ್ಷಗಳ ಕಾಲ ಸತತವಾದ ಕಾರ್ಯಕ್ರಮಗಳನ್ನು ಮಾಡಿಕೊಂಡು, ಹತ್ತಾರು ಸಭೆಗಳನ್ನು ನಡೆಸಿ, ಸಂವಿಧಾನ ರಚನೆ ಒಂದು ಜಡಿಚಿಜಿಣ ಮಾಡಲಾಯಿತು. ಎಲ್ಲಾ ಚರ್ಚೆಗಳ ನಂತರ 1949, ನವೆಂಬರ್ 26ನೇ ತಾರೀಖು ಸಂವಿಧಾನ ಸಿದ್ಧವಾಯಿತು. ಇದರಲ್ಲಿ ಡಾ॥ ಅಂಬೇಡ್ಕರ್ ರವರ ಪಾತ್ರ ಎಷ್ಟು ಮಹತ್ವದ್ದು ಎಂದು ಹೇಳುವುದರ ಜೊತೆಗೆ ನಮ್ಮ ಮಂಗಳೂರಿನ ಬೆನಗಲ್ ಗ್ರಾಮದ ಶ್ರೀ ಬಿ.ಎನ್. ರಾವ್‌ರವರ ಪಾತ್ರವೂ ಇದೆ. ಅದೊಂದು family. ಅವರು Governor of the Reserve Bank of India ಆಗಿದ್ದರು. ಅವರ signature 10 ಮತ್ತು 20 ರೂಪಾಯಿಗಳ ನೋಟಿನ ಮೇಲೆ ಪ್ರಿಂಟ್ ಬಿದ್ದಂತೆ ಇತ್ತು. ಶ್ರೀ ಬಿ.ಎನ್. ರಾವ್ ಎಂದರೆ ಬೆನಗಲ್ ನರಹರಿ ರಾಮರಾವ್ ಎಂದಾಗಿದೆ. ಅವರು ವಿಶ್ವಸಂಸ್ಥೆ ಮತ್ತು ಅನೇಕ ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದವರಾಗಿದ್ದಾರೆ. ಆ ಕಾಲಕ್ಕೆ ಭಾರತದ Constitution Advisor ಆಗಿದ್ದ ಶ್ರೀ ಬಿ.ಎನ್. ರಾವ್‌ರವರ ಸಹಾಯವನ್ನು ಡಾ॥ ಅಂಬೇಡ್ಕರ್‌ರವರು ತೆಗೆದುಕೊಳ್ಳುತ್ತಾರೆ. ಇವರಿಬ್ಬರ ಸತತ ಪರಿಶ್ರಮದಿಂದ ಕೊನೆಗೆ 1949, ನವೆಂಬರ್ 26ನೇ ತಾರೀಖು ಸಂವಿಧಾನ ತಯಾರಾಗುತ್ತದೆ. ಇದನ್ನು ಬಹಳ ಮುಖ್ಯ ಕಾರಣಕ್ಕೆ ಅಂದರೆ, ಮದರಾಸಿನಲ್ಲಿ 1930, ಜನವರಿ 26 ರಂದು ಕಾಂಗ್ರೆಸ್ ಅಧಿವೇಶನ ನಡೆಯುತ್ತದೆ. ಆ ಸಭೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. "We want total independence, not less than not" ಎಂಬ ಘೋಷವಾಕ್ಯದ ನೆನಪಿಗಾಗಿ 1949, ನವೆಂಬರ್ 26ನೇ ತಾರೀಖಿನಂದು ಪ್ರಾರಂಭವಾಗಬೇಕಾಗಿದ್ದ ಸಂವಿಧಾನವು 1950, ಜನವರಿ 26ನೇ ತಾರೀಖಿಗೆ ಮುಂದೂಡಿ, ಆ ದಿನಾಂಕದಿಂದ ಜಾರಿಗೆ ತರುತ್ತಾರೆ.

ಮಾನ್ಯ ಸಭಾಪತಿಯವರೇ, ಸುಮಾರು 2000 ವರ್ಷಗಳಿಂದ ಸಮರ್ಥವಾಗಿ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಬರುತ್ತಿರುವ ಹಾಗೂ ಅಲಿಖಿತ ಸಂವಿಧಾನ (unwritten constitution) ವನ್ನು ಬ್ರಿಟನ್ ಹೊಂದಿದೆ. ಅಲ್ಲಿ ಯಶಸ್ವಿಯಾಗಿ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಬರುತ್ತಿದ್ದು, ಆ ದೇಶದ ಅಲಿಖಿತ ಸಂವಿಧಾನಕ್ಕೆ ಹೋಲಿಕೆ ಮಾಡಿದರೆ ನಮ್ಮಲ್ಲಿರುವುದು 395 Article ಇರುವ ಬಹುದೊಡ್ಡ ಹಾಗೂ ವಿಸ್ತಾರವಾದ ಸಂವಿಧಾನವಾಗಿದೆ. ಮಾನ್ಯ ಸಭಾಪತಿಯವರೇ, ಸಂವಿಧಾನದ preamble ನಲ್ಲಿ ಇಡೀ ನಮ್ಮ ದೇಶದಲ್ಲಿ ಎಷ್ಟೇ ವರ್ಷಗಳು ಕಳೆದರೂ ಯಾವ್ಯಾವ ತತ್ವಗಳ ಆಧಾರದ ಮೇಲೆ ಆಡಳಿತ ನಡೆಸಬೇಕು ಎಂಬುದನ್ನು ಹೇಳಿದ್ದಾರೆ. ಮೊದಲನೆಯದಾಗಿ *"The Constitution of India has solemnly promised to all its citizens justices-social, economic and political; liberty of thought expression, belief, faith and worship; equality of status and of opportunity to all the sections, fraternity, brotherhood, sovereignty..."* ಇರಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದು)

(307)/11-3-2020/1-10/(ಎಲ್‌ಎಂ)ಹೆಚ್‌ವಿ/ಎಂಡಿ
**ಶ್ರೀ ಸಿ.ಎಂ.ಲಿಂಗಪ್ಪ**(ಮುಂದು):

ಯಾವ ದೇಶದಲ್ಲಿ sovereignty ಎನ್ನುವ ಪರಮಾಧಿಕಾರ ಇರುವುದಿಲ್ಲ ಅದು ದೇಶವೇ ಅಲ್ಲ. 1947ನೇ ಆಗಸ್ಟ್ 15ರ ಮಧ್ಯರಾತ್ರಿ 12 ಗಂಟೆಯವರೆಗೆ ನಮಗೆ sovereignty ಇರಲಿಲ್ಲ. ನಂತರವೇ ಈ ದೇಶಕ್ಕೆ sovereignty ಬಂದಿರುವುದು. ಹೀಗೆ Representative Democracy ಇರಬೇಕು, federal type of government ಇರಬೇಕು, ಕೇಂದ್ರ ಸರ್ಕಾರ ಸುಭದ್ರವಾಗಿ ಇರಬೇಕು ಮತ್ತು ರಾಜ್ಯ ಸರ್ಕಾರಗಳು ತಮ್ಮ-ತಮ್ಮ ಕೆಲಸ-ಕಾರ್ಯಗಳನ್ನು ಮಾಡಿಕೊಂಡು ಹೋಗಬೇಕು. ಇದಕ್ಕಾಗಿ ಒಂದು preamble ನ್ನು ಬಹಳ ಸೊಗಸಾಗಿ, ಸ್ಪಷ್ಟವಾಗಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಮಾಡಿ ಕೊಟ್ಟಿದ್ದಾರೆ. 1976ನೇ ಸಾಲಿನಲ್ಲಿ ಈ ದೇಶದಲ್ಲಿ ತುರ್ತುಪರಿಸ್ಥಿತಿ ಇತ್ತು. ಆಗ ಒಂದು ತಿದ್ದುಪಡಿಯಾಗುತ್ತದೆ. ಆಗ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದರು. ಇರುವ preamble ಗೆ secular and socialist, ಸಮಾಜವಾದ ಮತ್ತು ಜಾತ್ಯಾತೀತತೆ ಎನ್ನುವ ಎರಡು ಪದಗಳನ್ನು ಸೇರಿಸಲಾಯಿತು. ಈ ವಿಚಾರದಲ್ಲಿ ದೊಡ್ಡ ವಿವಾದವಾಗುತ್ತದೆ. ವಿಷಯವನ್ನು ಸುಪ್ರೀಮ್ ಕೋರ್ಟ್‌ಗೆ ತೆಗೆದುಕೊಂಡು ಹೋಗುತ್ತಾರೆ. ಇದು ಆಗಬಾರದಿತ್ತು, ಆದರೂ ಇದನ್ನು ಸೇರಿಸಿರುವುದು ಸರಿ ಇದೆ ಎಂದು ಸುಪ್ರೀಮ್ ಕೋರ್ಟ್ ತೀರ್ಪು ಕೊಡುತ್ತದೆ. ಆದರೆ ಇನ್ನು ಮುಂದೆ preamble ಗೆ ಯಾವುದೇ ಪದವನ್ನು ಸೇರಿಸಬಾರದು, ಯಾವುದೇ ಪದವನ್ನು ತೆಗೆಯಬಾರದು ಎಂದು ಕೂಡಾ ಸುಪ್ರೀಮ್ ಕೋರ್ಟ್ ತೀರ್ಪು ಕೊಟ್ಟಿದೆ. ಇಷ್ಟು ಸುಭದ್ರ ಮಾಡಿ ಈ ದೇಶಕ್ಕೆ ಸಂವಿಧಾನವನ್ನು ಕೊಟ್ಟಿದ್ದಾರೆ.

ಇನ್ನು ಮೂಲಭೂತ ಹಕ್ಕುಗಳ ಬಗ್ಗೆ ಹೇಳಬೇಕು ಎಂದರೆ, ನಮ್ಮ ದೇಶದಲ್ಲಿ ಜಾತಿ, ಧರ್ಮ, ಭಾಷೆ, ಸಂಸ್ಕೃತಿ, ಜೀವನ ವಿಧಾನದಲ್ಲಿ ಹೇಳಲು ಆಗದಷ್ಟು ವ್ಯತ್ಯಾಸವಿದೆ. ಇವೆಲ್ಲವು ಸರಿಸಮಾನವಾಗಿರಬೇಕು ಎನ್ನುವ ವಿಶಾಲವಾದ ಭಾವನೆಯನ್ನು ಇಟ್ಟುಕೊಂಡು Article 14 to Article 31 ರವರೆಗೆ ಮೂಲಭೂತ ಹಕ್ಕುಗಳನ್ನು ಕೊಟ್ಟಿದ್ದಾರೆ. ಈ ಮೂಲಭೂತ ಹಕ್ಕುಗಳು ನಮಗೆ ಕಡಿಮೆಯಾಯಿತು, ಅವರಿಗೆ ಜಾಸ್ತಿಯಾಯಿತು ಎಂದು ಯಾರು ಹೇಳಲು ಸಾಧ್ಯವೇ ಇಲ್ಲ. ಸಂವಿಧಾನದಲ್ಲಿ ಇದು ಸರಿ ಇಲ್ಲ, ಅದು ಸರಿ ಇಲ್ಲ ನಾವು ಬದಲಾಯಿಸುತ್ತೇವೆ ಎನ್ನುವುದು ಇತ್ತೀಚೆಗೆ ಅಲ್ಲಲ್ಲಿ ಕೇಳಿ ಬರುತ್ತಿದೆ. ಮೂಲಭೂತ ಹಕ್ಕುಗಳು ಸರಿ ಇಲ್ಲ ಎಂದು ಹೇಳುತ್ತಾರೆ. ಈಗ ಇರುವ ಮೂಲಭೂತ ಹಕ್ಕನ್ನು ಭಾರತದ ಲೋಕಸಭೆಯಾಗಲಿ, ಭಾರತದ ಸರ್ವೋಚ್ಚ ನ್ಯಾಯಾಲಯವಾಗಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ. ಅಷ್ಟರಮಟ್ಟಿಗೆ Article 32 ನ್ನು ಗಟ್ಟಿ ಮಾಡಿದ್ದಾರೆ. Article 32 ರ ಪ್ರಕಾರ ನಮ್ಮ ಮೂಲಭೂತ ಹಕ್ಕುಗಳನ್ನು ಯಾರು ಬದಲಾವಣೆ ಮಾಡಲು ಸಾಧ್ಯವಿಲ್ಲ. Article 32 ಬಗ್ಗೆ ಹೇಳುತ್ತಾರೆ. What is the importance

of this Article 31? That is the very heart and soul of the fundamental rights. ಈ ದೇಶದಲ್ಲಿ ತುರ್ತುಪರಿಸ್ಥಿತಿ ಇರಲಿ, ಯುದ್ಧ ನಡೆಯುತ್ತಿರಲಿ, ಇನ್ನಾವುದೇ ಗಲಭೆಯಾಗಲಿ ಐದು writs ಗಳನ್ನು ಸಂವಿಧಾನ ಈ ದೇಶದ ಪ್ರಜೆಗೆ ಕೊಟ್ಟಿದೆ. 1. Writ of Habeas Corpus 2. Writ of Mandamus 3. Writ of Prohibition 4. Writ of Certiorari 5. Writ of Quo Warranto. ಈ 5 ರಿಟ್‌ಗಳ ಮೂಲಕ ದೇಶದಲ್ಲಿ ತುರ್ತುಪರಿಸ್ಥಿತಿ ಇದ್ದರೂ ಕೂಡ ಸಾಮಾನ್ಯ ಪ್ರಜೆ ಇವುಗಳನ್ನು ಬಳಕೆ ಮಾಡಿಕೊಂಡು ತನ್ನ ಮೂಲಭೂತ ಹಕ್ಕುಗಳನ್ನು ರಕ್ಷಣೆ ಮಾಡಿಕೊಳ್ಳಬಹುದು. ಆದ್ದರಿಂದ ನಾನು ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ, ಸಂವಿಧಾನವನ್ನು ರಚನೆ ಮಾಡಿದವರು ಬಹಳ ಉದಾತ್ತ ಮೇಧಾವಿಗಳು, ಬಹಳ ವಿಚಾರಪರರು, ಅನೇಕ ದೇಶಗಳ ಸಂವಿಧಾನವನ್ನು ಓದಿ ತಿಳಿದುಕೊಂಡು ನಮ್ಮ ದೇಶದ ಪರಿಸ್ಥಿತಿಗೆ ಯಾವ ರೀತಿ ಇರಬೇಕು ಎನ್ನುವಂತಹ ಅಂಶಗಳನ್ನು ಸಂಗ್ರಹಿಸಿ ತಿಂಗಳಾಗಟ್ಟಲೆ ಕುಳಿತು ಚರ್ಚೆ ಮಾಡಿ ಸಂವಿಧಾನಕ್ಕೆ ಸೇರಿಸಿದ್ದಾರೆ.

ಭಾರತದ ಸಂವಿಧಾನವನ್ನು ಸರ್ವೋಚ್ಚ ನ್ಯಾಯಾಂಗವಾಗಲಿ, ಘನತೆವೆತ ಸಂಸತ್ ಆಗಲಿ, ಕಾರ್ಯಾಂಗವಾಗಲಿ ಯಾರು ಕೂಡಾ ಸಂವಿಧಾನದ preamble ನ್ನು ಮೂಲಭೂತ ಹಕ್ಕುಗಳನ್ನು ಮತ್ತು ಈ ಹಕ್ಕುಗಳನ್ನು ರಕ್ಷಣೆ ಮಾಡುವಂತಹ ರಿಟ್‌ಗಳನ್ನು ಮುಟ್ಟಲು ಕೂಡಾ ಆಗುವುದಿಲ್ಲ. ಒಂದು ವೇಳೆ ಆ ರೀತಿಯ ಪ್ರಯತ್ನ ನಡೆಯಿತು ಎಂದರೆ, ಭಾರತ ದೇಶ ಇರುವುದಿಲ್ಲ. ಅಲೋಲ-ಕಲೋಲವಾಗುತ್ತದೆ, ರಕ್ತಪಾತವಾಗುತ್ತದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುವಂತಹ ಕಾಲದಲ್ಲಿ ಎಷ್ಟು ರಕ್ತಪಾತವಾಯಿತು ಅದರ ನೂರರಷ್ಟು ರಕ್ತಪಾತವಾಗುತ್ತದೆ. ನಾನೊಬ್ಬ ರಾಜ್ಯಶಾಸ್ತ್ರ ವಿದ್ಯಾರ್ಥಿ ಎಂದು ಮೊದಲೇ ಹೇಳಿದ್ದೇನೆ. ನನ್ನ ಪ್ರಕಾರ ಎರಡು ವಿಚಾರಗಳನ್ನು ಇದರಲ್ಲಿ ಹಾಕಿರುವುದು ಏಕೊ ಜಾಳುಜಾಳಾಗಿದೆ, ಬಿಗಿಯಾಗಿಲ್ಲ. ಬೇರೆ ಕಲಂಗಳು ಯಾವ ರೀತಿ ಬಿಗಿಯಾಗಿವೆ ಆ ರೀತಿ ಇದು ಇಲ್ಲ. ಮೊದಲನೆಯದಾಗಿ, Directive Principles of State Policy ನಲ್ಲಿ 16 ಅಂಶಗಳನ್ನು ಇದರಲ್ಲಿ ಸೇರಿಸಲಾಗಿದೆ. ಸಂವಿಧಾನ ಬಂದು 70 ವರ್ಷಗಳಾಗಿವೆ, ಆದರೆ ಅದರ implementation ಸಮಾಧಾನಕರವಾಗಿರುವುದಿಲ್ಲ. ಅದನ್ನು ಸೇರಿಸುವ ಅವಶ್ಯಕತೆ ಇರಲಿಲ್ಲ. ಆಡಳಿತಾತ್ಮಕವಾಗಿ ಕಾಲ ಕಳೆದ ಹಾಗೆ ಅಂಶಗಳನ್ನು ಸೇರಿಸಬಹುದಾಗಿತ್ತು. ಒಂದು ಉದಾಹರಣೆಯನ್ನು ಹೇಳುತ್ತೇನೆ, Implementation of common Civil Court ಆಗಿದೆಯೇ ಇಲ್ಲವೆ, Prohibition of slaughter of cows ಅನುಷ್ಠಾನ ಆಗಿದೆಯೇ ಇಲ್ಲವೇ ಎಂಬುದರ ಬಗ್ಗೆ ತಾವೇ ಹೇಳಬೇಕು ಇದೆಲ್ಲವನ್ನು ಸೇರಿಸುವ ಬದಲಾಗಿ ಕೈಬಿಡಬೇಕಾಗಿತ್ತು.

**(ಮುಂದು)**

(308) 11.3.2020 1.20 ಪಿಕೆ:ಎಕೆ
**ಶ್ರೀ ಸಿ.ಎಂ.ಲಿಂಗಪ್ಪ (ಮುಂದುವರೆದಿದೆ)**

ಕಡೆಯದಾಗಿ ಹೇಳುವುದಾದರೆ, where there is Fundamental Right, there shall be Fundamental Duty also. ನಮಗೆ ಮೂಲಭೂತ ಹಕ್ಕೂ ಬೇಕು, ಮೂಲಭೂತ ದುಡಿಮೆಯೂ ಬೇಕು. ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಸಾಧ್ಯ. ಆದರೆ 1976ರಲ್ಲಿ ತಂದಂಥ Fundamental Duties ತುಂಬಾ ಜೊಳ್ಳಾಗಿದೆ, ಬಿಗಿ ಇಲ್ಲ. ಒಂದು ಉದಾಹರಣೆ ಕೊಡುತ್ತೇನೆ. ಅದೇನೆಂದರೆ, ‘Give respect to National Anthem’. ರಾಷ್ಟ್ರಗೀತೆಗೆ ಗೌರವ ಕೊಡಬೇಕು. ರಾಷ್ಟ್ರಗೀತೆ ಕೇಳಿದಾಗ ಅದು ಮುಗಿಯುವ ತನಕ ಶಿಸ್ತುಬದ್ಧವಾಗಿ ನಿಂತು ನಂತರ ಮುಂದುವರೆಯಬೇಕು. ಇವತ್ತು ಇದು ಆಗುತ್ತಿದೆಯೇ? ಆಗುತ್ತಿಲ್ಲ. ಹಿಂದೆ ಒಂದು ಕಾಲ ಇತ್ತು. ಸಿನಿಮಾ ಮಂದಿರಗಳಲ್ಲಿ ಸಿನಿಮಾ ಮುಗಿದ ಮೇಲೆ ರಾಷ್ಟ್ರಗೀತೆಯನ್ನು ಹಾಕುತ್ತಿದ್ದರು. ಆಗ ಶೇಕಡ 10 ರಷ್ಟು ಜನ ಕೂಡ ಇರುತ್ತಿರಲಿಲ್ಲ. ಸುಮ್ಮನೆ ಅವರ ಪಾಡಿಗೆ ಅವರು ಹೋಗಿಬಿಡುತ್ತಿದ್ದರು. ಆದರೆ ಈಗ ಸಿನಿಮಾದ ಪ್ರಾರಂಭದಲ್ಲೇ ರಾಷ್ಟ್ರಗೀತೆ ಹಾಕಬೇಕೆಂದು ನ್ಯಾಯಾಲಯಗಳು ತೀರ್ಪು ಕೊಟ್ಟವು. ಇದು ಒಳ್ಳೆಯ ಕೆಲಸ ಮತ್ತು ಅನಿವಾರ್ಯ ಕೂಡ. ಮೊದಲೇ ರಾಷ್ಟಗೀತೆಯನ್ನು ನುಡಿಸಿದರೆ ಇಷ್ಟ ಇರುತ್ತದೆಯೋ ಇಲ್ಲವೋ ಎಲ್ಲರೂ ಎದ್ದು ನಿಂತು ಗೌರವ ತೋರಿಸುತ್ತಾರೆ. ಇಂಥದ್ದೆಲ್ಲಕ್ಕೆ ಬಿಗಿ ಸಾಲದು. ಮೂಲಭೂತ ಹಕ್ಕಿಗೆ ಸಂಬಂಧಪಟ್ಟಂತೆ ನಿಯಮಗಳು ಬಹಳ ಬಿಗಿ ಇದೆ. ಇದರ ಉಲ್ಲಂಘನೆಯಾದರೆ ತಕ್ಷಣ ಶಿಕ್ಷೆ ಆಗುತ್ತದೆ. ಆದರೆ Fundamental Duties ಎಂದು ಬಂದಾಗ, ನನ್ನಿಚ್ಛೆ, ನನ್ನಿಷ್ಟ ಎನ್ನುವ ಮನೋಭಾವ ತೋರುತ್ತೇವೆ.

ಮಾನ್ಯ ಸಭಾಪತಿಯವರೇ, 1776ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನ ಸ್ವತಂತ್ರವಾಯಿತು. ಆಗ ಅವರ ಸಂವಿಧಾನದಲ್ಲಿ 19–20 ಆರ್ಟಿಕಲ್‌ಗಳಿತ್ತು. ಇವತ್ತಿನ ತನಕ 8–10 ತಿದ್ದುಪಡಿಗಳಾಗಿರಬಹುದು. ನಾನು ಈಗಾಗಲೇ ಹೇಳಿದ ಹಾಗೆ, ಬ್ರಿಟನ್‌ನಲ್ಲಿ 2000 ವರ್ಷಗಳಿಂದ ಪ್ರಜಾಪ್ರಭುತ್ವ ವ್ಯವಸ್ಥೆ ನಡೆದುಕೊಂಡು ಬರುತ್ತಿದೆ. ತಿದ್ದುಪಡಿಗಳಾಗಿವೆಯೋ ಇಲ್ಲವೋ ಗೊತ್ತಿಲ್ಲ. ಆದರೆ 395 ಆರ್ಟಿಕಲ್‌ಗಳನ್ನು ಹೊಂದಿರುವ, ಸುದೀರ್ಘವಾಗಿರುವಂತಹ ನಮ್ಮ ಸಂವಿಧಾನಕ್ಕೆ 123 ತಿದ್ದುಪಡಿಗಳನ್ನು ತಂದಿರುವುದು ಬಹುಶಃ ಅದು ತುಂಬಾ ಹೆಚ್ಚಾಯಿತೇನೋ, ಇನ್ನಾದರೂ ಕೂಡ ಈ ತಿದ್ದುಪಡಿಗಳ ಸರಣಿಗೆ ತಡೆ ಹಾಕಬೇಕಾಗುತ್ತದೆ ಎನ್ನುವ ವೈಯಕ್ತಿಕ ಅನಿಸಿಕೆಯನ್ನು ಸದನದ ಮುಂದಿಟ್ಟು, ತಾವು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಪ್ರಜಾಪ್ರಭುತ್ವದ ಅಡಿಯಲ್ಲಿ ಕುಳಿತು ಸಾಂವಿಧಾನಿಕ ಸಂಸ್ಥೆಗಳಲ್ಲಿ ಆಡಳಿತ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಡೆಸುತ್ತಿದ್ದೇವೆ. ಇದಕ್ಕೆ ಮೂಲಭೂತವಾದ ನಮ್ಮ ಶ್ರೇಷ್ಠ ಗ್ರಂಥ ಎಂದರೆ ಅದು ನಮ್ಮ ಭಾರತದ ಸಂವಿಧಾನವೇ ಕಾರಣವಾಗಿದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರ, ಈ ವರ್ಷ ಮೊಟ್ಟ ಮೊದಲನೇ ಬಾರಿಗೆ ಸಂಸತ್ತಿನಲ್ಲಿ ರಾಜ್ಯಗಳ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಸಂವಿಧಾನದ ಬಗ್ಗೆ ಚರ್ಚೆ ಮಾಡಬೇಕು; ಸಂವಿಧಾನದ ಆಶಯಗಳನ್ನು ಪ್ರತಿಯೊಬ್ಬ ನಾಗರಿಕ ತಿಳಿಯುವಂತಾಗಬೇಕು ಎನ್ನುವ ವಿಚಾರವನ್ನು ಆಲೋಚನೆ ಮಾಡಿರುವುದು ಒಂದು ಕಡೆ ದುರ್ದೈವ ಎಂದು ಭಾವಿಸುತ್ತೇನೆ; ಇನ್ನೊಂದು ಕಡೆ, ಇದರ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಕಾರಣಕರ್ತರಾದ ಎಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಹೇಳುತ್ತೇನೆ.

ಕೆಲವು ಕಾಲ ಎಲ್ಲರನ್ನು ಮರುಳು ಮಾಡಬಹುದು, ಕೆಲವರನ್ನು ಎಲ್ಲಾ ಕಾಲದಲ್ಲೂ ಮರುಳು ಮಾಡಬಹುದು ಆದರೆ, ಎಲ್ಲರನ್ನು ಎಲ್ಲಾ ಕಾಲದಲ್ಲೂ ಮರುಳು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಭಾವೈಕ್ಯತೆ ಬಗ್ಗೆ ಮಾತನಾಡುತ್ತೇವೆ. ಮಾನ್ಯ ಕಾರಜೋಳರವರು ಇಂದು ಕೆಲವು ಮಾತುಗಳನ್ನಾಡಿದರು. ದೇಶದಲ್ಲಿ ಸಾಧನೆಯೇ ಆಗಿಲ್ಲ ಎಂದು ನಾನು ಹೇಳುವುದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಭಾರತವೇ ಬೇರೆ, ಈಗಿರುವ ಭಾರತವೇ ಬೇರೆ. ನಮ್ಮ ಸಂವಿಧಾನದ preamble ನಲ್ಲಿ 'India, that is Bharat' ಎಂದು ಇದೆ. ಇಂಡಿಯಾ ಎಂದರೆ ಭಾರತವಲ್ಲ, ಇಂಡಿಯಾ ಅಥವಾ ಭಾರತವಲ್ಲ, 'India, that is Bharat', that is our preamble. ಎಲ್ಲಾ ಧರ್ಮದ ಜನರು ವಾಸ ಮಾಡುವ ನಮ್ಮ ಈ ದೇಶದ ಸಂವಿಧಾನದಲ್ಲಿ ಭಾವೈಕ್ಯತೆಗೆ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾರೆ. ಹೃದಯ-ಹೃದಯಗಳ ವಾತ್ಸಲ್ಯಕ್ಕೆ ಕೊಂಡಿಯ ಅವಶ್ಯಕತೆ ಇದೆಯೇ? ಇದೆ. ಅದು ಯಾವಾಗ ಎಂದರೆ, ಒಬ್ಬರನ್ನೊಬ್ಬರು ಅರಿತು ಬಾಳಿದಾಗ. ಆ ಹೃದಯ ವೈಶಾಲ್ಯ, ಆ ಶ್ರೀಮಂತಿಕೆ ನಮ್ಮ ಸಂವಿಧಾನದಲ್ಲಿದೆ, ಆದರೆ ನಾವು ಅದನ್ನು ಅಳವಡಿಸಿಕೊಂಡಿಲ್ಲ. ಹಾಗಾಗಿ ಈ ಜಾತೀಯತೆಯ ವ್ಯವಸ್ಥೆ, ಅಸ್ಪೃಶ್ಯತೆ ನಮ್ಮನ್ನು ಈಗಲೂ ಕೂಡ ಕಾಡುತ್ತಿದೆ. ಭಾವೈಕ್ಯತೆ ಎಂದರೆ, ಮೊದಲು ತಾನು ನಂಬಿದ ಧರ್ಮವನ್ನು, ಸಿದ್ಧಾಂತವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುವುದೇ ಆಗಿದೆ. ಭಾವೈಕ್ಯದ ಅರ್ಥದ ಜೊತೆಗೆ ಅದನ್ನು ಅನುಷ್ಠಾನಕ್ಕೆ ತರುವವರಾಗಬೇಕು. ಇದರ ಜೊತೆ, ಇನ್ನೊಬ್ಬರು ನಂಬಿಕೊಂಡು ಬಂದಿರುವ ಧರ್ಮವನ್ನು, ಸಿದ್ಧಾಂತವನ್ನು ಆರಾಧನ ವಿಧಿಯಾಗಿ, ಪ್ರಾಮಾಣಿಕವಾಗಿ ಗೌರವಿಸುವಂಥದ್ದೇ ಭಾವೈಕ್ಯತೆ. ನಮ್ಮ ಭಾವಗಳು ಎಲ್ಲೋ ಹೋಗಿ ಐಕ್ಯವಾಗುತ್ತವೆ. ಅದೇ ಭಾವೈಕ್ಯತೆ. ರಾಮಕೃಷ್ಣ ಪರಮಹಂಸರು ಒಂದು ಕಡೆ, ದೇಶದಲ್ಲಿ ಕಾಲ ಕಾಲಕ್ಕೆ ತಕ್ಕಂತೆ ನಾನಾ ಮತಗಳು ಹುಟ್ಟಿಕೊಂಡಿವೆ. ಎಲ್ಲಾ ಮತಗಳು ಪಥಗಳೇ ಆಗಿವೆ. ಮತಗಳು ಪರಮಾರ್ಥವಲ್ಲ, ನಾವು ಸಾಗಿ ಹೋಗಬೇಕು, ಅದು ಅವ್ಯಕ್ತವಾದ ಮಹಾ ಚೇತನ ಮತ್ತು ಶಕ್ತಿ, ಅದು ಸಾಗರ ಇದ್ದಂತೆ. ನದಿಗಳು ತಾವು ಹುಟ್ಟಿದ ಸ್ಥಾನದಿಂದ ಸಮುದ್ರ ಸೇರುವವರೆಗೆ ಭಿನ್ನ ಭಿನ್ನ ರಾಗ-ರೂಪಗಳನ್ನು ಪಡೆದುಕೊಳ್ಳುತ್ತವೆ. ನದಿಗಳು ಎಲ್ಲೋ ಹುಟ್ಟಿ ತಾವು ಹರಿದು ಹೋಗುವ ದಾರಿಯ ಮೂಲಕ ಸಾಗರ ಸೇರುವಾಗ ನಾನಾ ಹೆಸರುಗಳನ್ನು ಪಡೆದುಕೊಳ್ಳುತ್ತವೆ. ಆದರೆ ಆ ನದಿಗಳು ಒಮ್ಮೆ ಸಮುದ್ರ ಸೇರಿದ ಮೇಲೆ ಅವುಗಳ ನಾಮಗಳು ಅಳಿಸಿ ಹೋಗುತ್ತವೆ. ಒಬ್ಬ ಸಾಧಕ ಒಂದು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಧರ್ಮದ ಚೌಕಟ್ಟಿನಲ್ಲಿ ಸಾಗಿ ಪರಮಾತ್ಮನಲ್ಲಿ ಬೆರೆತನೆಂದರೆ ಅವನು ನಾಮ, ರೂಪ, ಕ್ರಿಯೆ ಎಲ್ಲವೂ ಅಳಿಸಿ ಹೋಗುತ್ತದೆ. ಅವನು ಒಂದಾಗಿಬಿಡುತ್ತಾನೆ. ಅದು ಭಾವೈಕ್ಯತೆ.

(ಮುಂದು)

(309) 11–03–2020 1.30 ಡಿಎಸ್–ಎಕೆ
**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು):**

ಭಾವೈಕ್ಯತೆ ಬರಬೇಕಾದರೆ ನಾನು ನಂಬಿದ ಧರ್ಮವನ್ನು ಚೆನ್ನಾಗಿ ತಿಳಿದುಕೊಂಡು ಅನುಷ್ಠಾನಕ್ಕೆ ತಂದು ಇನ್ನೊಬ್ಬರು ನಂಬಿದ ಧರ್ಮವನ್ನು ಪ್ರಾಮಾಣಿಕವಾಗಿ ಗೌರವಿಸುವುದರ ಜೊತೆಗೆ ಸಹೋದರ ಭಾವನೆಗೆ ಹೋಗುವುದು ನಿಜವಾದ ಭಾವೈಕ್ಯತೆಯಾಗಿದೆ. ಭಾವೈಕ್ಯತೆಯನ್ನು ಸಾಧಿಸುವ ವಿಧಾನವೆಂದರೆ ಅನುಭವಿಗಳ ಸಾನ್ನಿಧ್ಯದಲ್ಲಿ ಎಲ್ಲಾ ಧರ್ಮಗಳ ಗ್ರಂಥಗಳ ಅಧ್ಯಯನ ನಡೆಯಬೇಕು. ಕುರಾನ್, ಬೈಬಲ್, ನಮ್ಮ ಮಹಾಗ್ರಂಥಗಳಾಗಿರುವಂತಹ ಉಪನಿಷತ್ತುಗಳಿರಬಹುದು, ವೇದಗಳಿರಬಹುದು, ಅವೆಲ್ಲವನ್ನು ನೋಡಿದರೆ ಎಲ್ಲಾ ಧರ್ಮಗಳ ಸಾರಾ ಒಂದೇ ಎಂಬುದಾಗಿ ನಮಗೆ ತಿಳಿಯುತ್ತದೆ. ಆಗ ನಾವು ಈ ಅಖಂಡ ಭಾರತದಲ್ಲಿ ಭಾವೈಕ್ಯತೆಯಿಂದ ಬಾಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ನಾವು ಇವತ್ತು ನಮ್ಮ ಮುಂದಿನ ಪೀಳಿಗೆಗೆ ಈಗಲೂ ಕಾಲ ಮಿಂಚಿಲ್ಲ, ತಿಳಿಸಿಕೊಡಬೇಕಾದ ಕೆಲಸ ಆಗಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಇವತ್ತು preamble ನಲ್ಲಿ ಭಾರತ ಸಂವಿಧಾನವು ಈ ದೇಶಕ್ಕೆ ಹೆಸರಿಟ್ಟಿರುವುದೇ ‘ಇಂಡಿಯಾ’ ಎಂದರೆ ‘ಭಾರತ’; India, that is Bharat ಎಂದು ಇದೆ. ಈ preamble ನಲ್ಲಿ ನಮಗೆ 1960 ರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ “Preamble is not a part of Constitution” ಎಂದು ಶ್ರೀ ಬೇರುವಾಡಿ ಪ್ರಕರಣದಲ್ಲಿ ಹೇಳಿದರು. ಸಂವಿಧಾನವನ್ನು ಕೊಟ್ಟು ಹತ್ತು ವರ್ಷಗಳಾಗಿದೆ. 1960 ರಲ್ಲಿ ಬೇರುವಾಡಿ ಪ್ರಕರಣದಲ್ಲಿ ಭಾಗ ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿತು. 1973 ರಲ್ಲಿ ಶ್ರೀ ಕೇಶವಾನಂದ ಭಾರತಿ ಪ್ರಕರಣದಲ್ಲಿ ಇದು ಸಂವಿಧಾನದ ಭಾಗ ಹೌದು ಎಂದು ಹೇಳಿದರು. 13 ವರ್ಷಗಳ ನಂತರ ‘Preamble is a part of Constitution’ ಎಂದು ಹೇಳತಕ್ಕಂಥ ವ್ಯವಸ್ಥೆ ಇವತ್ತು Apex Court ನಲ್ಲಿ ಬಂತು ಎಂದರೆ ನಾವು ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ಈ ಸಂವಿಧಾನವನ್ನು ಬರೆದಂತಹ ಸಂದರ್ಭದಲ್ಲಿ ಎಂಥೆಂಥ legal luminaries, ಎಂಥೆಂಥ ಮಹಾನ್ ವ್ಯಕ್ತಿಗಳು ಎಷ್ಟು ಶ್ರಮ ವಹಿಸಿದ್ದರು ಆ ಶ್ರಮವನ್ನು ಆ ಸಂದರ್ಭದಲ್ಲಿ, I am not going to comment on the judgment or the Supreme Court. 1976 ರಲ್ಲಿ ಸರ್ಕಾರದ ಮೇಲೆ LIC ಕೇಸ್ ಹಾಕುತ್ತದೆ. ಅದು ಸರ್ಕಾರ ಮತ್ತು LIC ನಡುವೆಯ ಪ್ರಕರಣ. ಆ ಸಂದರ್ಭದಲ್ಲಿ ‘Preamble is a part of Constitution’ ಎಂದು ಬಂದಾದ ಮೇಲೆ ಅದು ಅಲ್ಲಿಗೆ ನಿಲ್ಲುತ್ತದೆ. ನಾನು ಈ ವಿಚಾರವನ್ನು ಏಕೆ

ಹೇಳುತ್ತಿದ್ದೆನೆಂದರೆ, ಈ ಅಖಂಡ ಭಾರತದಲ್ಲಿ ನಮ್ಮ ಸಂವಿಧಾನ ಅಷ್ಟು freedom ಇದೆ. ಒಂದು ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಆಯ್ಕೆಯಾಗಿ ಬರುತ್ತೇವೆ. ಒಂದು ಸರ್ಕಾರ ಬರುತ್ತದೆ. ಸರ್ಕಾರ ಬಂದಾಗ ಆಲೋಚನೆಗಳು ಬೇರೆ ಬೇರೆ ಇರುತ್ತವೆ. ಭಿನ್ನಭಿನ್ನ ಅಭಿಪ್ರಾಯಗಳಿರುತ್ತವೆ. ಸಂವಿಧಾನವನ್ನು ಗೌರವಿಸಬೇಕಾಗಿರುವುದು ಪ್ರತಿಯೊಬ್ಬರ ಕರ್ತವ್ಯ, ಧರ್ಮವಾಗಿರುತ್ತದೆ. Merely because I am representing a majority government, ಇಂಥದೊಂದು ಕಾಯ್ದೆಯನ್ನು ತರಬೇಕಾದರೆ, ಕಾಯ್ದೆ ಆಚೆ ಬರಬೇಕಾದರೆ ಆರೋಗ್ಯ ಪೂರ್ಣ ಚರ್ಚೆ ಆಗಬೇಕಾಗುತ್ತದೆ; whether inside or outside the House. ಎರಡು ಕಡೆ ಆರೋಗ್ಯ ಪೂರ್ಣವಾದ ಚರ್ಚೆಯಾಗಬೇಕಾಗುತ್ತದೆ. ಆರೋಗ್ಯ ಪೂರ್ಣವಾಗಿ ಚರ್ಚೆಯಾಗಿ ಯಾವುದು ಆಚೆ ಬರುವುದಿಲ್ಲವೋ ಆ ಕಾಯ್ದೆ ನಾಡಿನ ಅಭ್ಯುದಯಕ್ಕೆ, ನಾಡಿನ ಸರ್ವೋತೋಮುಖ ಅಭಿವೃದ್ಧಿಗೆ ಸಹಕಾರಿ ಆಗುವುದಿಲ್ಲ ಎನ್ನುವ ವಿಚಾರವನ್ನು ನಾವು ಈಗಾಗಲೇ ಸುಮಾರು 124 ತಿದ್ದುಪಡಿಯೊಳಗೆ ಮನಗಂಡಿದ್ದೇವೆ. ಹಾಗಾಗಿ ಸುಪ್ರೀಂ ಕೋರ್ಟ್ very recently ಹೇಳುತ್ತದೆ,

> *"In a country like India, where democracy is based on the 'first past the post system', more often than not, those in power will not represent the majority of the voting electorate, let alone the majority of people.*
>
> *Let us assume they got 51% votes of population, does that mean that the other 49% people should keep silent for next five years and say nothing? Does that mean that those 49% have no voice for the five years...that they must accept whatever is done and not protest against it?*

ಇದು ಬಹಳ ಮುಖ್ಯವಾದದ್ದು. ನನಗೆ ಮೆಜಾರಿಟಿ ಇದೆ ಎಂದು ಹೇಳಿದರೆ 51 ಪರ್ಸೆಂಟ್ ನನಗೆ ಮತ ಹಾಕಿದ್ದಾರೆ, 49 ಪರ್ಸೆಂಟ್ ಹೊರಗಡೆ ಇದ್ದಾರೆ. ಅವರು silent spectators ಅಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಅವರ ಅಭಿಪ್ರಾಯವನ್ನು ನಾವು ಗೌರವಿಸಬೇಕಾಗುತ್ತದೆ. ಅವರ ಅಭಿಪ್ರಾಯವನ್ನು ಗೌರವಿಸದಿದ್ದಾಗ ಮಾತ್ರ ಸಂವಿಧಾನದ ಆಶಯಗಳಿಗೆ ನಾವು ಸರಿಯಾದ ಮಾರ್ಗದಲ್ಲಿ ಹೋಗುವುದಕ್ಕೆ ಅವಕಾಶವಾಗುತ್ತದೆ ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹಾಗಾಗಿ majority decision ನಲ್ಲಿ ಮಾಡಬೇಕು. ಆದರೆ ಯಾವುದೇ ತಿದ್ದುಪಡಿಯಾದಂತಹ ಸಂದರ್ಭದಲ್ಲಿ ಜನಗಳ ಆಶಯಕ್ಕೆ, ಸಾರ್ವತ್ರಿಕ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಆಗಬೇಕಾದ ಕೆಲಸ ಸರಿಯಾಗಿ ಆಗುತ್ತಿದೆ ಎನ್ನುವ ವಿಚಾರವನ್ನು ನಾವು ಇವತ್ತು ಅವಲೋಕನ ಮಾಡಬೇಕಾಗುತ್ತದೆ ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ಭಾಗ–2 ರಲ್ಲಿ ಪೌರತ್ವ ಕಾಯ್ದೆ 1955 ರಲ್ಲಿ ಜಾರಿಗೆ ಬರುತ್ತದೆ. ಪೌರತ್ವ ಕಾಯ್ದೆ 1986, 1992, 2003, 2005, 2015, 2019 ರಲ್ಲಿ ತಿದ್ದುಪಡಿಯಾಗುತ್ತದೆ. ನನ್ನ ಪ್ರಶ್ನೆ ಏನೆಂದರೆ, 1955 ರಲ್ಲಿ ಜಾರಿಗೆ ಬಂದಿರುವುದು ಐದು ಬಾರಿ ತಿದ್ದುಪಡಿಯಾಗುತ್ತದೆ. ನಾನು ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. I am not going to comment on the CAA or the NRC. ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. That is not the issue before us now. The issue before us is only the Constitution. ಐದು ಬಾರಿ ತಿದ್ದುಪಡಿಯಾದಂತಹ ಸಂದರ್ಭದಲ್ಲಿ 1976 ರಲ್ಲಿ ಏನು ಹೇಳುತ್ತದೆಂದರೆ, ಈ ನಾಲ್ಕು ಬಾರಿ ತಿದ್ದುಪಡಿಯಲ್ಲಿ ಏನು ಹೇಳುತ್ತದೆ, 2019ರಲ್ಲಿ ಏನು ಹೇಳುತ್ತದೆ ಎಂಬುದನ್ನು ನಾವೆಲ್ಲರೂ ಕೂಡ ಇವತ್ತು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಆ ವಿಷಯ ನಮ್ಮ ಮುಂದೆ ಇದೆ. ನಾನು ಅಲ್ಲಿಗೆ ಬಿಡುತ್ತೇನೆ. ಆ ವಿಚಾರದಲ್ಲಿ ಮುಂದೆ ಒಂದು ದಿವಸ ಚರ್ಚೆಯಾಗಲಿ. ಹಾಗಾಗಿ ಇವತ್ತು ನಾವು ಧರ್ಮಗಳನ್ನು ಗೌರವಿಸಬೇಕಾಗುತ್ತದೆ. ಇವತ್ತು ಜಾತಿಯ ವ್ಯವಸ್ಥೆಗೆ ಜಾತಿ ಪದ್ಧತಿಯ ವಿನಾಶವಿಲ್ಲದೆ ಬೇರೆ ಯಾವ ಮಾರ್ಗದಿಂದಲೂ ಕೆಳ ಜಾತಿಯವರ ಏಳಿಗೆ ಸಾಧ್ಯವಿಲ್ಲ ಎನ್ನುವ ವಿಚಾರವನ್ನು ಡಾ॥ಬಿ.ಆರ್. ಅಂಬೇಡ್ಕರ್‌ರವರು ಹೇಳಿದ್ದಾರೆ. ಅಸ್ಪೃಶ್ಯರ ಹೋರಾಟಕ್ಕೆ ಸಹಾಯವಾಗಲೆಂದು 1933 ಫೆಬ್ರವರಿ 11 ರಂದು ಗಾಂಧೀಜಿಯವರು 'ಹರಿಜನ' ಎನ್ನುವ ಪತ್ರಿಕೆಯನ್ನು ಆರಂಭಿಸಿದರು. ಆ ಸಂದರ್ಭದಲ್ಲಿ ಡಾ॥ಬಿ.ಆರ್.ಅಂಬೇಡ್ಕರ್‌ರವರು ಈ ರೀತಿ ಹೇಳಿದರು, "ನಾನು ಈಗ ಯಾವ ಸಂದೇಶವನ್ನು ನೀಡುವುದಿಲ್ಲ. ಜಾತಿ ಭ್ರಷ್ಟನಾಗಲು, ಜಾತಿ ವ್ಯವಸ್ಥೆಯ ಪರಿಣಾಮ ಜಾತಿ ಪದ್ಧತಿ ಜಾರಿಯಲ್ಲಿರುವವರೆಗೂ ಜಾತಿ ಭ್ರಷ್ಟತೆ ಜಾತಿಯಲ್ಲಿರುತ್ತದೆ. ಜಾತಿ ಭ್ರಷ್ಟತೆ ನಾಶವಾಗಬೇಕು ಎನ್ನುವುದಾದರೆ ಜಾತಿಯ ವ್ಯವಸ್ಥೆಯೇ ನಾಶವಾಗಬೇಕು. ಮುಂಬರುತ್ತಿರುವ ಹೋರಾಟಗಳಲ್ಲಿ ಹಿಂದೂಗಳು ಯಾರನ್ನು ರಕ್ಷಿಸಲು ಸಾಧ್ಯವಿಲ್ಲ, ಅವರು ಈ ರೀತಿಯ ಕೆಟ್ಟ ನೀತಿಯನ್ನು ಹೊರ ಹಾಕಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಇದಕ್ಕೆ ಉತ್ತರವಾಗಿ ಗಾಂಧೀಜಿಯವರು ಹಲವಾರು ವಿದ್ಯಾವಂತ ಹಿಂದೂಗಳು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಅಸ್ಪೃಶ್ಯತೆ ಎನ್ನುವುದು ಜಾತಿ ವ್ಯವಸ್ಥೆಯಿಂದ ಉಂಟಾಗಿರುವಂಥದ್ದಲ್ಲ. ಇದು ಬಹಳ ಮುಖ್ಯವಾದದ್ದು. ಅದು ಮೇಲು–ಕೀಳಿನ ಭಾವನೆಯಿಂದ ಬಂದಿರುವುದು. ಇದು ಹಿಂದೂ ಧರ್ಮದೊಳಗೆ ನುಸುಳಿ ಅದನ್ನು ವಿನಾಶದತ್ತ ಕೊಂಡೊಯ್ಯುತ್ತದೆ. ಅಸ್ಪೃಶ್ಯತೆ ಮೇಲೆ ದಾಳಿ, ಮೇಲು–ಕೀಳುಗಳ ದಾಳಿ ಆಗಿದೆ" ಎನ್ನುವ ವಿಚಾರವನ್ನು 1933 ಫೆಬ್ರವರಿ 11ನೇ ತಾರೀಖು ಗಾಂಧೀಜಿಯವರಿಗೆ ಡಾ॥ಬಿ.ಆರ್.ಅಂಬೇಡ್ಕರವರು ಹೇಳುತ್ತಾರೆ. ಇಲ್ಲಿ ಬಹಳ ಮುಖ್ಯವಾಗಿರುವಂಥದ್ದು, ನಾವು ಇವತ್ತು ಅವರನ್ನು blame ಮಾಡುವುದು, ಇವರನ್ನು blame ಮಾಡುವುದು, ಬರೀ ಇದರಲ್ಲೇ ಕಾಲ ಕಳೆದಿದ್ದೇವೆ. ಆದರೂ ಕೂಡ ಸರಿಯಾದ ರೀತಿಯಲ್ಲಿ ನಾವು ಅತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಅನೇಕ ಧರ್ಮಗಳ ರಕ್ಷಣೆಗೆ ಅನೇಕ ರೀತಿಯಲ್ಲಿ ಅವರವರ ಧಾಟಿಯಲ್ಲಿ ಕೆಲಸ ಮಾಡುತ್ತಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಮತ್ತೊಂದು ಬಹಳ ಮುಖ್ಯವಾಗಿ ಹೇಳುತ್ತಾರೆ, ಅಖಿಲ ಭಾರತ ಪರಿಶಿಷ್ಟ ಜಾತಿಗಳ ಒಕ್ಕೂಟದ ಕಾರ್ಯಕಾರಿ ಸಮಿತಿಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಭೆಯಲ್ಲಿ ಮಾನ್ಯ ಡಿ.ದೇವರಾಜ ಅರಸು, ಬೊಮ್ಮಾಯಿ, ಡಾ॥ಬಿ.ಆರ್.ಅಂಬೇಡ್ಕರ್‌ರವರು ರಾಜ್ಯಸಭೆಯ ಸದಸ್ಯರಾಗಿರುತ್ತಾರೆ.

(ಮುಂದು)

310/11-3-2020/1-40/ಬಿಕೆಪಿ-ಆರ್‌ಎನ್

**ಶ್ರೀ ಎಸ್.ಎಲ್.ಭೋಜೇಗೌಡ(ಮುಂದು...)**

1955 ರ ಸಾರ್ವತ್ರಿಕ ಚುನಾವಣೆಯಲ್ಲಿ ಡಾ॥ ಅಂಬೇಡ್ಕರ್‌ರವರು ಸೋತಿರುತ್ತಾರೆ. ಆಗ ಅವರು ರಾಜ್ಯಸಭೆ ಸದಸ್ಯರಿರುತ್ತಾರೆ. ಆಗ ಅವರು ಹೇಳಿದ ಒಂದು ಮಾತು ಎಲ್ಲಾ ರಾಜಕೀಯ ಪಕ್ಷಗಳು ಪಾಲನೆ ಮಾಡಬೇಕಾದಂತಹ ಒಂದು ವಿಚಾರವಾಗಿದ್ದು, ಅದನ್ನು ಅನಿವಾರ್ಯವಾಗಿ ಪಾಲನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಇದನ್ನು ಪಾಲನೆ ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವುದು ಸಂವಿಧಾನದ ಆಶಯ. ಅವರು ಒಂದು ನಿರ್ಣಯ ಮಾಡುತ್ತಾರೆ. ಕಳೆದ ಚುನಾವಣೆಯಲ್ಲಿ ಅನುಭವಿಸಿದ ಸೋಲು ಕಾರ್ಯಕಾರಿ ಸಮಿತಿಗೆ ತಿಳಿದಿದೆ. ಆದರೆ, ಈ ಸೋಲಿನಿಂದ ಕಾರ್ಯಕಾರಿ ಸಮಿತಿ ಸದಸ್ಯರುಗಳು ಎದೆಗುಂದಿಲ್ಲ. ಈ ರೀತಿಯ ಸೋಲುಗಳು ಸರ್ವೇ ಸಾಮಾನ್ಯ. ಒಂದು ರಾಜಕೀಯ ಪಕ್ಷ ಕೇವಲ ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ಅಸ್ತಿತ್ವದಲ್ಲಿರುವುದಿಲ್ಲ. ಒಂದು ರಾಜಕೀಯ ಪಕ್ಷ ಅಸ್ತಿತ್ವದಲ್ಲಿರುವುದು ಜನರನ್ನು ಜಾಗೃತಗೊಳಿಸಲು, ಶಿಕ್ಷಿತಗೊಳಿಸಲು ಹಾಗೂ ವ್ಯವಸ್ಥೆಯನ್ನು ಸರಿಪಡಿಸಲು; ಒಕ್ಕೂಟದ ಮೂಲಕ ಈ ಕಾರ್ಯವನ್ನು ಶಕ್ತಿಮೀರಿ ಮಾಡಿರುವುದರಲ್ಲಿ ಯಾವುದೇ ಸಂದೇಹವಿಲ್ಲ. ಅಂದರೆ, ಸಂವಿಧಾನದ ಆಶಯದಲ್ಲಿ ಅಧಿಕಾರಕ್ಕೆ ಬಂದಂತಹ ಪಕ್ಷ ಮಾತ್ರ ಸಂವಿಧಾನದ ಆಶಯಗಳಿಗೆ ಒತ್ತುಕೊಟ್ಟು ಕೆಲಸ ಮಾಡಬೇಕು ಅಂತಲ್ಲ, ಅಧಿಕಾರ ಇಲ್ಲದೇ ಇದ್ದರೂ ಕೂಡ ರಾಜಕೀಯ ಪಕ್ಷವಾಗಿ ಸಂವಿಧಾನದ ಆಶಯಗಳಿಗೆ ಒತ್ತು ಕೊಟ್ಟು ಕೆಲಸ ಮಾಡುವಂತಹದ್ದಾಗುತ್ತದೆ. ಆ ಸಾಧನೆಯನ್ನು ನಾವು ಮಾಡಬೇಕೆಂದು ಹೇಳಿ ಇವತ್ತು ಸಂವಿಧಾನದ ಆಶಯದ ಬಗ್ಗೆ ಹೇಳುತ್ತೇನೆ.

ಇದರ ಬಗ್ಗೆ ಅನೇಕ ಬಾರಿ ಚರ್ಚೆಯಾಗಿದೆ. ನಾವು ಒಬ್ಬರಿಗೊಬ್ಬರು ಬಹಳ ಕಾಮೆಂಟ್ ಮಾಡಿದ್ದೇವೆ. ಆರ್.ಎಸ್.ಎಸ್. ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಆರ್.ಎಸ್.ಎಸ್. ಒಂದು ಸಂಸ್ಥೆಯಾಗಿದೆ. ಅದರದ್ದೇ ಆದಂತಹ ವೈಚಾರಿಕ ತತ್ವಗಳ ಆಧಾರದ ಮೇಲೆ ಹಿಂದೂ ಧರ್ಮವನ್ನು ರಕ್ಷಣೆ ಮಾಡಬೇಕು, ಹಿಂದೂ ಧರ್ಮದ ಬಗ್ಗೆ ಮಾತನಾಡಬೇಕೆಂದು ಹೇಳುತ್ತೇವೆ. ಆ ಕೆಲಸ ಮಾಡಬೇಕು. ಆರ್.ಎಸ್.ಎಸ್. ರವರ ಪ್ರಾರ್ಥನೆ, ಅದು ಪ್ರಾರ್ಥನೆ ಅಷ್ಟೆ. ಅದು ಆರ್.ಎಸ್.ಎಸ್. ನವರಿಗೆ ಮಾತ್ರ ಸಿಮೀತವಾಗಿರುವಂತಹ ಪ್ರಾರ್ಥನೆಯೇ? ಇದರ ಬಗ್ಗೆ ನಾವು ಅಲೋಚನೆ ಮಾಡಬೇಕಾಗುತ್ತದೆ. ಇನ್ನು ದೇಶಪ್ರೇಮದ ವಿಚಾರವಾಗಿ ಹೇಳಬೇಕೆಂದರೆ, ಈ ದೇಶದಲ್ಲಿ ಹುಟ್ಟಿದಂತಹ ಪ್ರತಿಯೊಬ್ಬ ಪ್ರಜೆಯೂ ದೇಶವನ್ನು ಪ್ರೇಮಿಸಲೇಬೇಕು. ದೇಶದ ಆಶಯಗಳಿಗೆ ಕೆಲಸ ಮಾಡಬೇಕಾಗುತ್ತದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ನಮಸ್ತೇ ಸದಾ ವತ್ಸಲೇ ಮಾತೃಭೂಮೇ**
**ತ್ವಯಾ ಹಿಂದುಭೂಮೇ ಸುಖಂ ವರ್ಧಿತೋಹಮ್**
**ಮಹಾಮಂಗಲೇ ಪುಣ್ಯಭೂಮೇ ತ್ವದರ್ಥೇ**
**ಪತತ್ವೇಷಕಾಯೋ ನಮಸ್ತೇ ನಮಸ್ತೇ**
**ಪ್ರಭೋ ಶಕ್ತಿಮನ್ ಹಿಂದುರಾಷ್ಟ್ರಾಂಗಭೂತಾ**
**ಇಮೇ ಸಾದರಂ ತ್ವಾಂ ನಮಾಮೋ ವಯಮ್**
**ತ್ವದೀಯಾಯ ಕಾರ್ಯಾಯ ಬದ್ಧಾ ಕಟೀಯಂ**

ಓ, ನನ್ನ ಪ್ರೀತಿಯ ಮಾತೃ ಭೂಮಿಯೇ, ನಿನಗೆ ನನ್ನ ಶತಕೋಟಿ ಪ್ರಣಾಮಗಳು. ಈ ರೀತಿಯಲ್ಲಿ ಏತಕ್ಕೆ ಹೇಳಬಾರದು? ಅವರೇ ಏತಕ್ಕೆ ಹೇಳಬೇಕು. ಇದು ಗುತ್ತಿಗೆಯೇ? That much I am asking. ಇದು ರಾಷ್ಟ್ರಪ್ರೇಮ, ದಯಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಉಲ್ಲೇಖ ಮಾಡಿ ಹೇಳುತ್ತಿದ್ದಾರೆ. ಅವರು ರಾಷ್ಟ್ರ ಪ್ರೇಮದ ಗೀತೆಯನ್ನು ಹಾಡುತ್ತಾರೆಂದು ಹೇಳುತ್ತಾರೆ. ನಾವು ಹೇಳುವುದೇನೆಂದರೆ, ಇದನ್ನು ಇಡೀ ಪ್ರಪಂಚ ಹಾಡಲಿ, ನಾವು ಖುಷಿ ಪಡುತ್ತೇವೆ. ಮತ್ತೆ, ಗುತ್ತಿಗೆಯ ವಿಷಯವನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಆರ್. ಧರ್ಮಸೇನ:–** ಮಾನ್ಯ ಸಭಾನಾಯಕರ ಬಾಯಿಯಿಂದ ಹೇಳಿಸಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:–** ನಾವು ಸತ್ಯವನ್ನು ಹೇಳಿದರೆ ದೇಶದ್ರೋಹಿಗಳಾಗುತ್ತೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸದಸ್ಯರು ಹೇಳಿದ್ದರ ಬಗ್ಗೆ ನಾವು ಅರ್ಥ ಮಾಡಿಕೊಂಡಿದ್ದು ಏನೆಂದರೆ ರಾಷ್ಟ್ರೀಯ ಸ್ವಯಂ ಸೇವಕದಳದವರು ದೇಶಭಕ್ತಿಯ ಬಗ್ಗೆ ಹಾಡುತ್ತಾರೆ, ಇಡೀ ಪ್ರಪಂಚ ಹಾಡಲಿಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದು ಸಂವಿಧಾನದ ಆಶಯ ಅಲ್ಲವೆ! ಈ ನಾಡಿನಲ್ಲಿ, ಈ ಮಣ್ಣಿನಲ್ಲಿ ಹುಟ್ಟಿದಂತಹ ಪ್ರತಿಯೊಬ್ಬ ಪ್ರಜೆಯೂ ಸಹ ಈ ನಾಡಿನ ನೆಲ–ಜಲವನ್ನು ಪ್ರೀತಿಯಿಂದ ಗೌರವಿಸಲೇಬೇಕು. ಮತ್ತೆ, ನಮ್ಮ ರಾಷ್ಟ್ರಕವಿ ಕುವೆಂಪುರವರ ನಾಡಗೀತೆಯ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಓ, ನನ್ನ ಪ್ರೀತಿಯ ಮಾತೃಭೂಮಿಯೇನಿನಗೆ ನನ್ನ ಶತಕೋಟಿ ಪ್ರಣಾಮಗಳು.**
**ಓ, ಮಹಾ ಮಂಗಳ ಪುಣ್ಯ ಭೂಮಿಯೇ**
**ನಿನಗೆ ಸಾವಿರಾರು ತನುಗಳ ಅರ್ಪಣೆ**
**ಓ, ಹಿಂದೂ ಭೂಮಿ ಭಾರತವೇ ನೀನು ಸುಖ ನೀಡಿ**
**ನನ್ನನ್ನು ಬೆಳೆಸಿದ್ದೀಯಾ**
**ನಿನ್ನ ಋಣ ಎಷ್ಟೆಂದರೆ ಒಂದು ಜನ್ಮದಲ್ಲಿ ತೀರಿಸಲಾಗದು.**

ಈ ರೀತಿಯಲ್ಲಿ ಹೇಳಲಿಕ್ಕೆ ಸಾಕಷ್ಟು ವಿಷಯಗಳಿವೆ. I don't want to waste the time.

**ನಮಸ್ತೇ ಸದಾ ವತ್ಸಲೇ ಮಾತೃಭೂಮೇ**
**ತ್ವಯಾ ಹಿಂದುಭೂಮೇ ಸುಖಂ ವರ್ಧಿತೋಹಮ್**
**ಮಹಾಮಂಗಲೇ ಪುಣ್ಯಭೂಮೇ ತ್ವದರ್ಥೇ**

ನಾನು ಹೇಳತಕ್ಕಂತಹ ವಿಚಾರ, ಇದು ನಮ್ಮ ಸಂವಿಧಾನದ ಆಶಯ ಅಲ್ಲವಾ! ಹೀಗಾಗಿ ನಮ್ಮ ಸಹೋದರಿ ಡಾ॥ ತೇಜಸ್ವಿನಿ ಗೌಡರವರು ಮಾತನಾಡತಕ್ಕಂತಹ ಸಂದರ್ಭದಲ್ಲಿ ಸೀತಾ ಮಾತೆಯ ಬಗ್ಗೆ ಮಾತನಾಡಿದರು. ರಾಮನ ಆಡಳಿತದ ಬಗ್ಗೆ ಮಾತನಾಡಿದರು. ಆ ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಎಂ. ಕಾರಜೋಳರವರು ಸದನದಲ್ಲಿ ಕುಳಿತಿದ್ದರು. ಈ ವಿಷಯವಾಗಿ ಅವರು ಕೇಳಿದ್ದಾರೆ. ರಾಮ ಆಡಳಿತ ಮಾಡತಕ್ಕಂತಹ ಸಂದರ್ಭದಲ್ಲಿ ಲೋಪದೋಷ ಎಲ್ಲಿ ಬಂತು ಎನ್ನುವ ವಿಚಾರವನ್ನು ಗೂಢಚರ್ಯರಿಂದ ಶ್ರೀ ರಾಮ ತಿಳಿದುಕೊಳ್ಳುತ್ತಾನೆ. ಅಗಸ ಮತ್ತು ಅವನ ಹೆಂಡತಿ ಹೊರಗಡೆ ಹೇಳಿದ್ದನ್ನು ಗೂಢಚಾರ ಬಂದು ಶ್ರೀರಾಮನಿಗೆ "ನಿನ್ನ ಆಡಳಿತದ ಬಗ್ಗೆಯೇ ಅನುಮಾನ ಇದೆ" ಎಂದು ಹೇಳುತ್ತಾನೆ. ಪಿತೃವಾಕ್ಯ ಪರಿಪಾಲನೆಗಾಗಿ ಕಾಡಿಗೆ ಹೋಗುತ್ತಾನೆ. ಆ ವನವಾಸವನ್ನು ಅವನು ಅನುಭವಿಸದಿದ್ದರೆ ಅನೇಕ ಪುಣ್ಯ ಕಾರ್ಯಗಳು, ಲೋಕ ಕಲ್ಯಾಣಗಳು ಆಗುತ್ತಿತ್ತಾ! ಹೀಗಾಗಿ, ಸೀತಾ ಮಾತೆಯನ್ನು ಕಾಡಿಗೆ ಕಳುಹಿಸಿದಂತಹ ಸಂದರ್ಭದಲ್ಲಿ ಹೇಳತಕ್ಕಂತಹ ವಿಚಾರದ 'ವಾಲ್ಮೀಕಿ ರಾಮಾಯಣ' ಗ್ರಂಥವನ್ನು ಯಾರು ಬರೆದರು? ಅದನ್ನು ಬರೆದವರು ಅಸ್ಪೃಶ್ಯರು. ಮಹಾಭಾರತ, ಪಂಚಮವೇಧವನ್ನು ಬರೆದವರು ಅಸ್ಪೃಶ್ಯರು. ಇವತ್ತು ಆ ಅಸ್ಪೃಶ್ಯರ ಬಗ್ಗೆ ಮಾತನಾಡುತ್ತಿದ್ದೇವೆ. ಇವುಗಳು ನಮಗೆ ಮಹಾ ಗ್ರಂಥಗಳು. ಅಲ್ಲಿ ಇರತಕ್ಕಂತಹ ಆದರ್ಶಗಳನ್ನು, ವಿಚಾರಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಈ ಅಸ್ಪೃಶ್ಯರ ಬಗ್ಗೆ ಇರತಕ್ಕಂತಹ ಮನೋಭಾವನೆ ಕ್ಷಣಾರ್ಧದಲ್ಲಿಯೇ ಎಲ್ಲವೂ ಕೊನೆಯಾಗುತ್ತದೆ. ಸೀತಾ ಮಾತೆ ತನ್ನನ್ನು ಕಾಡಿಗೆ ಕರೆದುಕೊಂಡು ಹೋಗುವಾಗ ಈ ರೀತಿ ಹೇಳುತ್ತಾಳೆ.

**"ಎಲ್ಲಿ ಮುನಿಪೋತ್ತಮರ ಪಾವನದ ವನದೆಡೆಗೆಳೆಲ್ಲಿ**
**ಸಿದ್ದಾಶ್ರಮಂಗಳ ಮಂಗಳಸ್ಥಳಗ**
**ಅಲ್ಲಿ ಸುಹವಿಗಳ ಕಂಪೊಗೆದ ಪೊಗೆದಳೆದಗ್ನಿಹೋತ್ರದ ಕುಟೀರಂಗಳು**
**ಎಲ್ಲಿ ಪರಿಚಿತವಾದ ವೇದಶಾಸ್ತ್ರಧ್ವನಿಗ**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಇಲ್ಲಿಗೊಯ್ಯದೆ ದಾರುದಾರುಣದ ಕಟ್ಟಡವಿ**
**ಗಿಲ್ಲಿಗೇಕೈತಂದೆ ತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯ್ದಳು**

**ಲಕ್ಮಣನ ಮಾತು ಕಿವಿದರೆಗೆ ಬೀಳುವ ಮುನ್ನ ಹಮ್ಮಿಸಿ ಬಿದ್ದಳಂಗನೆ**
**ಧರೆಗೆ ನಡುನಡುಗುತ ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ**
**ಮರುಗಿ ತಣ್ಣೀರ್ದಳೆದು ಪತ್ರದಿಂ ಕೊಡೆವಿಡಿದು**
**ಸೆರಗಿಂದೆ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋಧಿಸಿದನು"**

ಕಾಡಿನಲ್ಲಿ ಲಕ್ಷ್ಮಣ ಸೀತೆಯನ್ನು ಕರೆದುಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ಸೀತೆ ಏನು ಕೇಳುತ್ತಾಳೆಂದರೆ, ಋಷಿಗಳ ಆಶ್ರಮವನ್ನು ನೋಡಬೇಕೆಂದು ನಾನು ಶ್ರೀರಾಮನಿಗೆ ಹೇಳಿದೆ, ಋಷಿಗಳ ಆಶ್ರಮಕ್ಕೆ ಕರೆದುಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ನೀನು ಈ ದಟ್ಟ ಅಡವಿಗೆ ಕರೆದುಕೊಂಡು ಬಂದಿದೆಯಲ್ಲಾ, ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀಯಾ ಎಂದು ಲಕ್ಷ್ಮಣನನ್ನು ಕೇಳುತ್ತಾಳೆ.  ಆಗ ಸೀತಾ ತುಂಬು ಗರ್ಭಿಣಿ.  ಆಗ ಲಕ್ಷ್ಮಣ ಹೇಳುತ್ತಾನೆ, "ನಿನ್ನಲ್ಲೊದ ಆ ರಘುಕುಲೊದ್ವಹ ಸೀರಿವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿಬಾ ಎಂದೆನೆಗೆ ನೇಮಿಸಿದ್ದೊಡೆ ಪ್ರಜಾ ಮಾತಿಗೆ ಮಣಿದು;" ಸೀತೆ ಪವಿತ್ರಳು ಎಂದು ಗೊತ್ತಿದ್ದರೂ ಕೂಡ ಪ್ರಜೆಗಳ ಮಾತಿಗೆ ಬೆಲೆ ಕೊಟ್ಟು ತನ್ನ ಪತ್ನಿಯನ್ನು ಕಾಡಿಗೆ ಅಟ್ಟಿದಂತಹ ಕೆಲಸವನ್ನು ರಾಮರಾಜ್ಯದಲ್ಲಿ ಮಾಡಲಾಯಿತು.  ಇವತ್ತು ನಮ್ಮ ರಾಮರಾಜ್ಯದಲ್ಲಿ ಆಗುತ್ತಿದೆಯೇ ಎನ್ನುವುದನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ನಾವು ರಾಮರಾಜ್ಯದ ಬಗ್ಗೆ ಮಾತನಾಡುತ್ತೇವೆ. ಬಿರುಗಾಳಿ ಸಂದರ್ಭದಲ್ಲಿ ಗೊನೆಬಿಟ್ಟ ಬಾಳೆಮರ ಯಾವ ರೀತಿ ನೆಲಕ್ಕೆ ಬೀಳುತ್ತದೆ, ಅದೇ ರೀತಿಯಲ್ಲಿ ತುಂಬು ಗರ್ಭಿಣಿ ಸೀತಾ ಮಾತೆ ಲಕ್ಷ್ಮಣನ ಮಾತು ಕಿವಿಯ ತಮಟೆಯನ್ನು  ತಲುಪುವ ಮುನ್ನವೇ ಕೆಳಗಡೆ ಬೀಳುತ್ತಾಳೆ.  ಈ ರೀತಿಯ ರಾಮನ ಸೇವೆ ಮಾಡುವಂತಹ ಪ್ರಸಂಗ ಬಂತಲ್ಲಾ ಎಂದು ಹೇಳಿ ಲಕ್ಷ್ಮಣ ರೋಧಿಸುತ್ತಾನೆ. ಇದು ಒಂದು ಭಾಗ.  ಇದನ್ನು ಬರೆದವರು ಯಾರು? ಇದನ್ನು ಬರೆದವರು ಅಸ್ಪೃಶ್ಯರು.  ಮಹಾಭಾರತದಲ್ಲಿ ಕರ್ಣನ ಪಾತ್ರದ ಬಗ್ಗೆ ಹೇಳುತ್ತೇನೆ.  ಶ್ರೀಕೃಷ್ಣ ಕರ್ಣನ ಹತ್ತಿರ ಹೋಗಿ ಕೇಳುತ್ತಾನೆ. "ನೀನು ಪಂಚಪಾಂಡವರ ಹಿರಿಯ ಅಣ್ಣ, ಆ ಕುಟುಂಬದ ಹಿರಿಯ ಮಗ.

(ಮುಂದು. .

**(311) 11.03.2020 01.50 ಎಸ್‌ವಿ-ಆರ್‌ಎನ್**
**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):**

ಇಂದು ನೀನು ಮನಸ್ಸು ಮಾಡಿದರೆ ನೂರಾರು, ಸಾವಿರಾರು ಪ್ರಜೆಗಳು ಸಾಯುವುದು ನಿಲ್ಲುತ್ತದೆ.  ನೀನು ಮನಸ್ಸು ಮಾಡಿ ಸುಯೋಧನನನ್ನು ಬಿಟ್ಟು ಬಂದು ನಿನ್ನ ಅಣ್ಣ-ತಮ್ಮಂದಿರೊಂದಿಗೆ ನಿಲ್ಲು.  ಧರ್ಮವನ್ನು ಕಾಪಾಡು ಎಂದು ಹೇಳುತ್ತಾನೆ.  ಅದಕ್ಕೆ ಕರ್ಣ ಅದು ಧರ್ಮವಲ್ಲ ಎಂದು ಹೇಳುತ್ತಾನೆ.  ಅಂಗರಾಜ್ಯಾಧಿಪತಿ ಕರ್ಣ 'ಸ್ವಾಮಿನಿಷ್ಠೆ' ಎಂಬ ಒಂದು ಮಾತನ್ನು ಹೇಳುತ್ತಾನೆ.  ಕರ್ಣನ loyalty ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದೆಯೇ? ದಯಮಾಡಿ ಇದನ್ನು ಯಾರೂ ತಪ್ಪಾಗಿ ಅರ್ಥೈಸಬಾರದು.  ರಾಮಾಯಣದಲ್ಲಿ ರಾಮನ ಆಡಳಿತ, ಮಹಾಭಾರತದಲ್ಲಿ ಕರ್ಣನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತ್ಯಾಗ, ಸ್ವಾಮಿನಿಷ್ಠೆ ಇಂತಹ ಉದಾಹರಣೆಗಳನ್ನು ಕೊಡುವ ಮೊದಲು ನಮ್ಮನ್ನು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಗಾಂಧೀಜಿಯವರ ಬಗ್ಗೆ, ಅಂಬೇಡ್ಕರ್ ಅವರ ಬಗ್ಗೆ, ಬುದ್ಧ-ಬಸವಣ್ಣನವರ ಬಗ್ಗೆ ಮಾತನಾಡುತ್ತೇವೆ. ರಾಷ್ಟ್ರಕವಿ ಡಾ:ಜಿ.ಎಸ್.ಶಿವರುದ್ರಪ್ಪನವರು ತಮ್ಮ ಕವನದಲ್ಲಿ ಹೇಳುತ್ತಾರೆ.

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ।
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ॥

ನಮ್ಮ ಪ್ರೀತಿ-ಸ್ನೇಹವನ್ನು ನಾವು ಇಲ್ಲಿಯೇ ಗುರುತಿಸಿಲ್ಲ. ಇಬ್ಬರೂ ಕಿತ್ತಾಡುತ್ತೇವೆ. ಆಡಳಿತ ಪಕ್ಷದವರು ಆ ಕಡೆ ಎದ್ದರೆ, ವಿರೋಧಪಕ್ಷದವರು ಈ ಕಡೆಯಲ್ಲಿ ಏಳುತ್ತೇವೆ.

ಎಲ್ಲಿದೆ ನಂದನ ಎಲ್ಲಿದೆ ಬಂಧನ
ಎಲ್ಲಾ ಇವೆ ಈ ನಮ್ಮೊಳಗೆ।
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯಿದೆ ನಾಲಿಗೆಗೆ॥

ಕುದಿಯುವ ನೀರಿನಲ್ಲಿ ನಾವು ಮುಖವನ್ನು ನೋಡುವುದಕ್ಕೆ ಆಗುತ್ತದೆಯೇ? ತಿಳಿಯಾದ ನೀರಿದ್ದರೆ ನಮ್ಮ ಮುಖವನ್ನು ನಾವು ನೋಡಿಕೊಳ್ಳಬಹುದು. ಆ ಭ್ರಾತೃತ್ವ ಎಲ್ಲಿದೆ? ಅಂತಹ ಭ್ರಾತೃತ್ವ ನಮಗೆ ಇಂದು ಈ ಸಂವಿಧಾನದಲ್ಲಿ ಬೇಕಾಗಿದೆ.

ಹತ್ತಿರವಿದ್ದೂ ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ।
ಎಷ್ಟು ಕಷ್ಟವೋ ಹೊಂದಿಕೆಯೆಂಬುದು
ನಾಲ್ಕು ದಿನದ ಈ ಬದುಕಿನಲಿ॥

ಹತ್ತಿರವಿದ್ದರೂ ದೂರ ನಿಲ್ಲುತ್ತೇವೆ. We are very close to each other. ಆದರೂ ಕೂಡ ನಾನಾ ವಿಚಾರಗಳಲ್ಲಿ ನಾವು ದೂರ ದೂರವಿದ್ದೇವೆ. ದೂರ ಏಕೆ ನಿಲ್ಲುತ್ತೇವೆ ಎಂದರೆ ನಮ್ಮ ಅಹಂ ಎನ್ನುವ ಕೋಟೆಯಲ್ಲಿ ನಾನು ಮೇಲು ಎಂಬ ಭಾವನೆಯಿಂದ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಇನ್ನು ಐದು ನಿಮಿಷದಲ್ಲಿ ಮುಕ್ತಾಯ ಮಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಭೋಜನ ವಿರಾಮದ ನಂತರ ಮಾತನಾಡುತ್ತೇನೆ. ಇನ್ನೂ ನಾನು ಸಾಸಿವೆಕಾಳಿನಷ್ಟೂ ವಿಚಾರಕ್ಕೆ ಬಂದಿರುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ರಾತ್ರಿಯಿಡೀ ರಾಮಾಯಣವನ್ನು ಕೇಳಿ ಬೆಳಗಾದ ನಂತರ ರಾಮ–ಸೀತೆಯರು ಅಣ್ಣ–ತಂಗಿ ಎಂದು ಹೇಳಿದಂತಾಯಿತು.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಮಾತನಾಡುತ್ತಿರಲಿ, ನಾವೆಲ್ಲಾ ಊಟ ಮಾಡಿಕೊಂಡು ಬರುತ್ತೇವೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಪೀಠಿಕೆಯಲ್ಲಿ ಇಷ್ಟಿದೆ. ಇನ್ನೂ ಆರ್ಟಿಕಲ್‌ನಲ್ಲಿ ಎಷ್ಟಿರಬಹುದು?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಭೋಜೇಗೌಡರೇ, ಸಂಜೆಯ ವೇಳೆಗೆ ಸಂವಿಧಾನದ ವಿಷಯಕ್ಕೆ ಬರುತ್ತೀರಾ?

**ಶ್ರೀ ಬಿ.ಸಿ.ಪಾಟೀಲ್:–** ಮಾನ್ಯ ಭೋಜೇಗೌಡರೇ, ಹಾಗಾದರೆ ಇದುವರೆವಿಗೂ ತಾವು ಹೇಳಿದ್ದು unconstitutional ಅಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಪಾಟೀಲರೇ, ನಮ್ಮ ಸಂವಿಧಾನದ ಪೀಠಿಕೆಯ ಬುನಾದಿ ಅಷ್ಟು ಗಟ್ಟಿಯಾಗಿದೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಸಂವಿಧಾನದ ಕುರಿತು ಆಳವಾಗಿ ಹೋಗಿದ್ದಾರೆ. ನಾನು ಅವರ ಬಗ್ಗೆ ಒಂದು ನಿಮಿಷ...

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, ನಿಮ್ಮ ಮಾತು ಮುಗಿದಿದೆಯೇ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಾನು ಅವರ ಅನುಮತಿಯನ್ನು ಕೇಳಿ ಮಾತನಾಡುತ್ತಿದ್ದೇನೆ. ನನಗೆ ಅವಕಾಶವನ್ನು ನೀಡಿದಾಗ ಒಂದು ನಿಮಿಷವನ್ನು ಕಡಿಮೆ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ರವಿಕುಮಾರ್ ಅವರೇ, ನೀವು ಪ್ರಾರಂಭ ಮಾಡಬಹುದು. ಅಡ್ಡಿಯಿಲ್ಲ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಮಾತನಾಡುವಾಗ ಹೇಗೆ ಅಂಬೇಡ್ಕರ್ ಅವರು ಒಬ್ಬ ಋಷಿಯಾಗಿ, ಒಬ್ಬ ವಿಜ್ಞಾನಿಯಾಗಿ, ಒಬ್ಬ ರಾಜಕಾರಣಿಯಾಗಿ, ಒಬ್ಬ ರಾಜನೀತಿಜ್ಞನಾಗಿ ಇಡೀ ಭಾರತ ದೇಶವನ್ನು ಅರ್ಥ ಮಾಡಿಕೊಂಡು, ರಾಮಾಯಣವನ್ನು ಅರ್ಥ ಮಾಡಿಕೊಂಡು, ಮಹಾಭಾರತವನ್ನು ಅರ್ಥ ಮಾಡಿಕೊಂಡು, ದೇಶದ ಪ್ರಸಕ್ತ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, ಭಾರತವು ಮುಂದಿನ ದಿನಗಳಲ್ಲಿ ಹೇಗಿರಬೇಕೆಂಬ ಕಲ್ಪನೆಯೊಂದಿಗೆ ದೇಶದ ಎಲ್ಲಾ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಒಂದು ಸರಿಯಾದ ಸಂವಿಧಾನವನ್ನು ಕೊಟ್ಟರು ಎಂದು ಹೇಳಿದರು. ನಾವು ಇಲ್ಲಿ ಹೊಡೆದಾಡಬಹುದು. ಆದರೆ ನಮ್ಮ ದಾರಿ ಸ್ಪಷ್ಟವಾಗಿದೆ ಎಂದು ಅವರು ಬಹಳ ಮಾರ್ಮಿಕವಾಗಿ, ಬಹಳ ವಿಶಾಲವಾದ ಅರ್ಥದಲ್ಲಿ ಹೇಳುತ್ತಿದ್ದಾರೆ. ಅವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ರಾಮನ ಬಗ್ಗೆ ಮಾತನಾಡಿದರು ಎಂದು ಮಾನ್ಯ ರವಿಕುಮಾರ್ ಅವರು ಅಭಿನಂದಿಸಿದರು. ಮುಂದೆಯೂ ಮಾತನಾಡುವವರಿದ್ದಾರೆ. ಆಗಲೂ ಮಾನ್ಯ ರವಿಕುಮಾರ್ ಅವರು ಇದೇ ಸಹಮತಿಯನ್ನು ಇರಿಸಿಕೊಳ್ಳಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅವರು ರಾಮನ ಬಗ್ಗೆ ಹೇಳಿದರು, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಗ್ಗೆಯೂ ಹೇಳಿದರು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ರವಿಕುಮಾರ್ ಅವರೇ, ಮಾನ್ಯ ಭೋಜೇಗೌಡರು ನಿಮ್ಮ ಕಡೆ ಬರುತ್ತಿದ್ದಾರೆಂದು ಗೊತ್ತಾಗುತ್ತಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಇಲ್ಲಿ ಏನೋ ಒಳಮರ್ಮ ಇದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ರೇವಣ್ಣನವರೇ, ಒಳಮರ್ಮವೇನೂ ಇಲ್ಲ. ನೀವು ಗಾಬರಿ ಪಡುವ ಅವಶ್ಯಕತೆಯೇನೂ ಇಲ್ಲ. ನಾವಿಬ್ಬರೂ ಒಂದು ದೇಶದಲ್ಲಿದ್ದೇವೆಂದು ಅವರು ಹೇಳುತ್ತಿದ್ದಾರೆ. ಆತಂಕ ಪಡಬೇಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ವಸ್ತುಸ್ಥಿತಿಯನ್ನು ಹೇಳಿದ್ದೇನೆ. ನಮಗೆ ಸಂವಿಧಾನವನ್ನು ಕೊಡತಕ್ಕಂತಹ ಸಂದರ್ಭದಲ್ಲಿ ಅಂಬೇಡ್ಕರ್ ಅವರಿಗೆ, ಮಹಾತ್ಮಾ ಗಾಂಧಿಯವರಿಗೆ ಅನೇಕ ಭಿನ್ನಾಭಿಪ್ರಾಯಗಳಿದ್ದವು. ಯಾವುದೇ ಭಿನ್ನಾಭಿಪ್ರಾಯಗಳಿದ್ದರೂ, ಸಂವಿಧಾನವನ್ನು ಕೊಡುವಾಗ ಅವರು ಸಹಿ ಮಾಡಿರುವಂತಹ ಕಾಗದವನ್ನು ಎಲ್ಲರೂ ನೋಡಬೇಕು. ಬೇರೆ ಬೇರೆ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಈ ದೇಶದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿತದೃಷ್ಟಿಯಿಂದ ದೇಶದ ಜನರಿಗೆ, ಸಮಾಜದ ಕಟ್ಟಕಡೆಯ ಮನುಷ್ಯನಿಗೆ ನೀಡುತ್ತಿರುವ ಬಹುದೊಡ್ಡ ಕಾಣಿಕೆ ಎಂದು ಹೇಳಿ ಕೊಟ್ಟಂತಹ ಸಂದರ್ಭದಲ್ಲಿ ಹೃದಯವೈಶಾಲ್ಯದಿಂದ ಎಲ್ಲರೂ ಸ್ವೀಕಾರ ಮಾಡಿದ್ದಾರೆ. ಅಲ್ಲಿಯೂ ವಿರೋಧ ಮಾಡಿದವರಿದ್ದರು. ಪಾರ್ಲಿಮೆಂಟ್‌ನ ಹೊರಗಡೆ ಕೂಗಾಡಿದವರು ಇದ್ದರು. ಒಳಗಡೆಯೂ ಕೂಗಾಡಿದವರು ಇದ್ದರು. ಈಗ ಅದನ್ನು ನಾನು ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇಂದು ಆ ಸಂವಿಧಾನದಡಿಯಲ್ಲಿ ನಾವೆಲ್ಲರೂ ಇಲ್ಲಿ ನಿಂತಿದ್ದೇವೆ. ಮಾನ್ಯ ಸಭಾಪತಿಯವರು ಹೇಳುತ್ತಿರುವುದರಿಂದ ನಾನು ಬೇಗ ಮುಗಿಸುತ್ತೇನೆ. ನಾನು ಇನ್ನೂ ಬಹಳ ಮಾತನಾಡುವುದಿತ್ತು. ಅಂಬೇಡ್ಕರ್ ಅವರ ಮನದಾಳದ ಮಾತುಗಳು ಬಹಳ ಇದ್ದವು.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಸೀತೆಯನ್ನು ರಾವಣಾಸುರ ಅಪಹರಿಸಿದಂತೆ ಮಾನ್ಯ ಭೋಜೇಗೌಡರನ್ನು ಮಾನ್ಯ ರವಿಕುಮಾರ್ ಅವರು ಅಪಹರಿಸುವರೇನೋ?

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಜಯಮ್ಮನವರೇ, ಮಾನ್ಯ ರವಿಕುಮಾರ್ ಅವರು ಆ ರೀತಿಯವರಲ್ಲ ಬಿಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಅಖಂಡ ಭಾರತದ ಭೂಪಟವೆಂದರೆ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಆಫ್ಘಾನಿಸ್ತಾನ ಒಳಗೊಂಡಿದ್ದವು. ಅದಕ್ಕಿಂತ ಮುಂಚೆ 1893ರಲ್ಲಿ ಡ್ಯುರಾಂಡ್ ರೇಖೆ ಒಪ್ಪಂದವಾಗಿ ಜಾರಿಯಾಗುವ ಮೂಲಕ ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನದಿಂದ ಬೇರೆಯಾಗುತ್ತದೆ. ಈ ಡ್ಯುರಾಂಡ್ ರೇಖೆಯನ್ನು ಆಫ್ಘಾನಿಸ್ತಾನ ಮತ್ತು ಪಾಕಿಸ್ತಾನ, ಪಾಕಿಸ್ತಾನ ಮತ್ತು ಭಾರತ ಎಂದು ಕರೆಯುತ್ತೇವೆ. 1914ರಲ್ಲಿ ಮ್ಯಾಕ್‌ಮಹೋನ್ ರೇಖೆಯಿಂದ ಭಾರತ ಮತ್ತು ಚೀನಾದ ಗಡಿಯನ್ನು ಗುರುತಿಸಲಾಯಿತು. 1947ರಲ್ಲಿ ರ್‍ಯಾಡ್‌ಕ್ಲಿಫ್ ರೇಖೆಯಿಂದ ಭಾರತ–ಪಾಕಿಸ್ತಾನ, ಭಾರತ–ಬಾಂಗ್ಲಾದೇಶವನ್ನು ಬೇರ್ಪಡಿಸಲಾಯಿತು. ಪಾಕ್ ಆಕ್ರಮಿತ ಕಾಶ್ಮೀರ ಎಂದು ಕಾಶ್ಮೀರದ ಒಂದು ಭಾಗವನ್ನು ಕರೆಯಲಾಗುತ್ತದೆ. ಇಂದು ನಮ್ಮ ಮಕ್ಕಳಿಗೆ ಭಾರತದ ಭೂಪಟವನ್ನು ಬರೆಯಿರಿ ಎಂದರೆ ಚೆನ್ನಾಗಿ ಬರೆಯುತ್ತಾರೆ. ಅದನ್ನು ನಾವು ಕಲಿಸಿಕೊಟ್ಟಿದ್ದೇವೆ.

**(ಮುಂದು)**

(312) 2.00 11.3.2020 KG VK

**ಶ್ರೀ ಎಸ್.ಎಲ್.ಭೋಜೇಗೌಡ (ಮುಂದು):**

ಆ ಭೂಪಟದ ಪ್ರಕಾರ, ನಮ್ಮ ದೇಶ ಇವತ್ತು ಇದೆಯೇ ಎನ್ನುವ ವಿಚಾರವನ್ನು ನಾವು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ನಮ್ಮ ಮಕ್ಕಳು ಬರೆಯುತ್ತಿರುವಂತೆ, ಆ ರೀತಿ ಭಾರತದ ಭೂಪಟ ಇವತ್ತು ನಮ್ಮ ಮುಂದೆ ಇದೆಯಾ? ಈ ಗಡಿರೇಖೆಗಳ ಪ್ರಕಾರ, ಅದಕ್ಕೆ ನಾವು ಹೋರಾಟ ಮಾಡಬೇಕಾಗಿದೆ. ಅದಕ್ಕೆ ಯಾರು ಕಾರಣ ಕರ್ತರು ಎಂದು ಈಗ ಅದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೂ ಕಾಲ ಮಿಂಚಿಲ್ಲ. ನಮ್ಮ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದೇಶ ನಮ್ಮ ಹತ್ತಿರ ಇರಬೇಕಾಗುತ್ತದೆ. ಇವತ್ತು ಮಕ್ಕಳು ಬರೆಯುತ್ತಿರುವಂತಹ ಭೂಪಟ ಅದು ತಪ್ಪಾಗಬಾರದು. ಮುಂದೆ ಒಂದು ದಿವಸ ನಾನು ಬರೆದಿರುವಂತಹ ಭೂಪಟ ಈ ರೀತಿ ಇದೆ, ಆದರೆ, ಈ ರೀತಿ ಭಾರತ ಇಲ್ಲವೆಂದು ಆ ಮಕ್ಕಳಿಗೆ ತಿಳುವಳಿಕೆ ಬಂದಾಗ ಮಾತನಾಡಿದರೆ ಈ ಸಂವಿಧಾನದ ಆಶಯದ ಪ್ರಕಾರ ನಾವು ಅವರಿಗೆ ನ್ಯಾಯ ಕೊಟ್ಟಂತೆ ಆಗುವುದಿಲ್ಲ. ನಾವು ಇದರ ಬಗ್ಗೆ ಅಲೋಚನೆ ಮಾಡಬೇಕಾಗಿದೆ. ಇವತ್ತು ಪಾಕ್ ಆಕ್ರಮಿತ ಪ್ರದೇಶದಲ್ಲಿ ನಮ್ಮ ಶಿರ (ಕುತ್ತಿಗೆ) ಇಲ್ಲ. ಎಲ್ಲಿ ಇದೆ ಎಂದು ಹೇಳಿ? ನಮ್ಮ ಕುತ್ತಿಗೆಯೇ ಇಲ್ಲ. ಪಾಕಿಸ್ತಾನ, ಚೈನಾ ಇವತ್ತು ಗೆಳೆಯರು ಇದ್ದಾರೆಂದು ಹೇಳಿದರೆ, ಆ border ಹೋಗಿದ್ದರಿಂದ ನಮ್ಮ ವಿರೋಧಿಗಳಿಬ್ಬರು ಗೆಳೆಯರಾದರು. ಆ ಇಬ್ಬರು ಗೆಳೆಯರು ಆ ಆಕ್ರಮಿತ ಪ್ರದೇಶದದಿಂದ ಇನ್ನೊಂದು ಗಡಿರೇಖೆಯಲ್ಲಿ corridor ಎಂದು ಇದೆ. ಅದು ವಿಶ್ವಸಂಸ್ಥೆಯ ನ್ಯಾಯಾಲಯದ ಮುಂದೆ ಇದೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನಮ್ಮ ಮಕ್ಕಳಿಗೆ ಅದು ಏನಾದರೂ ಗೊತ್ತಾದರೆ ಎಂತಹ ತಪ್ಪು ಕಲ್ಪನೆ ನಮ್ಮ ಮೇಲೆ ಬರುತ್ತದೆ ಎಂದರೆ, ನಾವು ಆಳತಕ್ಕಂತಹ ಜನ ಏನು ತಪ್ಪು ಮಾಡಿದ್ದೇವೆ ಎನ್ನುವ ವಿಚಾರ. ಹಾಗಾಗಿ, ಮಾನ್ಯ ಸಭಾಪತಿಯವರೇ, ಇಂತಹ ಸಂವಿಧಾನಿಕ ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ನಾವುಗಳು ಡಾ||ಅಂಬೇಡ್ಕರ್‌ರವರು ಕೊಟ್ಟಂತಹ ಈ ಸಂವಿಧಾನದಲ್ಲಿ ನಾವೆಲ್ಲರೂ ಕುಳಿತಿರುವಂತಹ ಸಂದರ್ಭದಲ್ಲಿ ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ನಾವುಗಳು ಕೆಲಸ ಮಾಡಲೇಬೇಕಾಗಿರುವಂತಹ ಪರಿಸ್ಥಿತಿ ನಮ್ಮ ಮುಂದೆ ಇವತ್ತು ಇದೆ. ಇವತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯ, the highest Apex Court of our Country. ಅನೇಕ ಮಾನ್ಯ ಸದಸ್ಯರು ವಿದ್ಯಾಭ್ಯಾಸದ ಬಗ್ಗೆ ಮಾತನಾಡಿದ್ದಾರೆ. ಆದರೆ, 6 ನೇ ವರ್ಷದಿಂದ 14ನೇ ವರ್ಷದವರೆಗೆ education is a fundamental right. ನಾವು ಕೊಡಬೇಕು ಎನ್ನುವ ವಿಚಾರದಲ್ಲಿ ಇವತ್ತು ಸಹ ನಾವು ಸಾಧನೆ ಮಾಡುವುದಕ್ಕೆ ಆಗಲಿಲ್ಲ. ಈಗಲೂ ಸಹ ಆ ವಿಷಯದಲ್ಲಿ ಕಣ್ಣು ತೆರೆಯುತ್ತಿದ್ದೇವೆ. ಮಹಿಳೆಯರ ಹಕ್ಕಿನ ಬಗ್ಗೆ ಹೋರಾಟ ಮಾಡಿದಂತಹ ಡಾ||ಅಂಬೇಡ್ಕರ್‌ರವರು ಮಹಿಳೆಯರ ಹಕ್ಕಿನ ಬಗ್ಗೆ ತಿಳಿಸಿದ್ದಾರೆ. ಆದರೆ, ಅದು ಇವತ್ತಿಗೂ ಸಹ ಸರಿಯಾಗಿ ಆಗಿಲ್ಲ. ನ್ಯಾಯಾಲಯದಲ್ಲಿ ಇವತ್ತು ಸಹ ನೀನು ಏನು ಕೆಲಸ ಮಾಡುತ್ತೀಯಮ್ಮ ಎಂದು ಕೇಳುತ್ತಾರೆ. 'Housewife' ಎಂದು ಹೇಳುತ್ತಾಳೆ, ನ್ಯಾಯಾಲಯ ನಿರ್ಧಿಷ್ಟವಾದ ಆದಾಯ ಗೃಹಿಣಿಗೆ ಇದೆಯೇ ಎಂದು ಪ್ರಶ್ನೆ ಮಾಡುವಂತಹ ಪರಿಸ್ಥಿತಿ ಇದೆ. Housewife; What are the responsibilities of a housewife ಎಂದು ಈ ಸದನ ನೋಡಬೇಕಾಗುತ್ತದೆ. ಮಹಿಳೆ ಹೆಂಡತಿಯಾಗಿ ಕೆಲಸ ಮಾಡುತ್ತಾಳೆ, ತಾಯಿಯಾಗಿ ಕೆಲಸ ಮಾಡುತ್ತಾಳೆ, ಅಡಿಗೆಯವಳಾಗಿ ಕೆಲಸ ಮಾಡುತ್ತಾಳೆ, ಶಿಕ್ಷಕಿಯಾಗಿ ಕೆಲಸ ಮಾಡುತ್ತಾಳೆ, ನರ್ಸ್ ಆಗಿ ಕೆಲಸ ಮಾಡುತ್ತಾಳೆ. How many salaries we are going to give her? ಯಾವ ಯಾವ ಹುದ್ದೆಗಳಿಗೆ ಎಷ್ಟು ವೇತನ ಕೊಡುತ್ತೀರಿ? ಮಹಿಳೆ 7/8 ಜವಾಬ್ದಾರಿಗಳನ್ನು ನಿರ್ವವಹಿಸುತ್ತಾಳೆ. So, what is the monthly income of that housewife? ಎಷ್ಟು responsibility ಗಳನ್ನು housewife ನಿರ್ವಹಿಸುತ್ತಾಳೆ. ಅದಕ್ಕೆ ತಕ್ಕಂತಹ ಗೌರವ ನಮ್ಮ ಆಶಯದಲ್ಲಿ ಸಿಕ್ಕಿದೆಯೇ? ಈ ಪರಿಸ್ಥಿತಿಯಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಹಿಳೆಯರ ಹಕ್ಕಿನ ಬಗ್ಗೆ ನಾವು ಬಾಯಿ ತುಂಬ ಮಾತನಾಡಿದರೆ ಸಾಲದು, ಸಹಾನುಭೂತಿ ತೋರಿಸಿದರೆ ಆಗಲಿಲ್ಲ, she should come out with the truth. ಸತ್ಯ ಆಚೆಗೆ ಬರಬೇಕಾಗಿದೆ. ಅದು ಸಂವಿಧಾನದ ಆಶಯ. ಅದು ಡಾ॥ಅಂಬೇಡ್ಕರ್‌ರವರು ಹೇಳಿರುವಂತಹದ್ದು.

ಮಾನ್ಯ ಸಭಾಪತಿಯವರೇ, ಕೃಷಿಯ ಬಗ್ಗೆ ಮಾತನಾಡಿದ್ದಾರೆ. In the Parliament the very first amendment of the Constitution of India was to land reform. ಇವತ್ತು land reform ಏನಾಗಿದೆ, ಇವತ್ತಿನವರೆಗೂ ಪರಿಪಕ್ವವಾಗಿ ಈಗಲೂ ಸಹ, ನಿನ್ನೆ ದಿವಸ ಮಾನ್ಯ ಸದಸ್ಯರೊಬ್ಬರು ಮಾತನಾಡುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಹೇಳಿದರು. ಜಮೀನನ್ನು ಕೊಡುವಂತಹ ವಿಚಾರದಲ್ಲಿ ಜಾಸ್ತಿ ಮಾಡಿ ಎಂದು ಹೇಳಿದರು. ಈ ಪರಿಸ್ಥಿತಿ land reform ಗೆ ಆಗಿದೆ. ಇವತ್ತಿನವರೆಗೂ ಅದನ್ನು ಪರಿಪಕ್ವವಾಗಿ ಮುಗಿಸುವುದಕ್ಕೆ ಆಗಿಲ್ಲ. ಕಟ್ಟಕಡೆಯ ಮನುಷ್ಯನಿಗೆ ಮನೆ ಕೊಡುವುದಕ್ಕೆ ಆಗಿಲ್ಲ. ಸಮಾನ ಹುದ್ದೆಗೆ ಸಮಾನ ವೇತನ ಕೊಡುವುದಕ್ಕೆ ಆಗಿಲ್ಲ. ಪಾರ್ಲಿಮೆಂಟ್‌ನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ವಿಚಾರದಲ್ಲಿಯಾಗಲಿ, ನಮ್ಮ ವಿಚಾರದಲ್ಲಿಯಾಗಲಿ ಬಿಲ್ಲು ಬಂದಾಗ, will there be any discussion on that Bill ಚರ್ಚೆ ಆಗುತ್ತದೆಯೇ, ನಮ್ಮ ವೇತನ ಎಷ್ಟೂ ಬೇಕಾದರೂ ಜಾಸ್ತಿಯಾಗುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನ ಎಷ್ಟು ಬೇಕಾದರೂ ಜಾಸ್ತಿಯಾಗುತ್ತದೆ. ಅದು ಎಲ್ಲಿಯಾದರೂ ಚರ್ಚೆ ಆಗುತ್ತದೆಯೇ, ಬಿಲ್ಲು ಬರುವುದೇ ಗೊತ್ತಿಲ್ಲ, ಅದು ಪಾಸ್ ಆಗಿದ್ದೇ ಗೊತ್ತಿಲ್ಲ. ಆದರೆ, ಹಣ ನಮ್ಮ ಖಾತೆಗೆ ಹೋಗುತ್ತದೆ. Constitutional Rights ಏನಾಯಿತು? ಸಮಾನ ಹುದ್ದೆಗೆ, ಸಮಾನ ವೇತನ ಏನಾಯಿತು? ಕೃಷಿ ಬದುಕು ಸಂಪೂರ್ಣವಾಗಿ ನಾಶವಾಗಿದೆ. ನಮ್ಮ ಮಾನ್ಯ ಪ್ರಧಾನ ಮಂತ್ರಿಯವರು ಹೇಳಿದ್ದಾರೆ, ನಮ್ಮ ಬಜೆಟ್‌ನಲ್ಲಿಯೂ ಸಹ 2020 ಕ್ಕೆ ದುಪ್ಪಟ್ಟು ಆಗುತ್ತದೆಂದು ಹೇಳಿದ್ದಾರೆ. ಆ ದುಪ್ಪಟ್ಟು ಮಾಡುವ ವಿಧಾನ ಹೇಗೆ ಎಂದು ಹೇಳಿದರೆ ಒಳ್ಳೆಯದು. ಕೇವಲ ಮಾತಿನಲ್ಲಿ ಹೇಳಿದರೆ ಆಗುವುದಿಲ್ಲ. ಕೃಷಿ ಪ್ರಧಾನವಾಗಿರುವಂತಹ ಈ ಭರತಖಂಡದಲ್ಲಿ ಕೃಷಿಗೆ ಆದ್ಯತೆಯನ್ನು ಕೊಟ್ಟು ರೈತರನ್ನು ಉಳಿಸುವಂತಹ ಕೆಲಸ ಆಗಬೇಕಾಗಿದೆ. ಆ ನಿಟ್ಟಿನಲ್ಲಿ ನಾವೆಲ್ಲರೂ ಸೇರಿ ಪಕ್ಷಾತೀತವಾಗಿ ಕೆಲಸ ಮಾಡಬೇಕಾಗಿದೆ. ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಕೆಲಸ ಮಾಡುವಂತಹ ವಿಚಾರವನ್ನು ಇನ್ನಾದರೂ ಸಹ ನಾವು ಕಣ್ಣು ತೆರೆದು ಸಮಾಜ ನೋಡುವಂತಹ ದೃಷ್ಟಿ ಬೇರೆ ಇರಬಾರದು, ರಾಜಕಾರಣಿಗಳ ಬಗ್ಗೆ ಅತ್ಯಂತ ಕೆಟ್ಟ ಅಭಿಪ್ರಾಯ ಇದೆ. ಈ ಕೆಟ್ಟ ಅಭಿಪ್ರಾಯದಿಂದ ದೂರ ಹೋಗಬೇಕು ಎನ್ನುವುದು ಒಂದು ವಿಚಾರ. ಈ ವಿಚಾರವನ್ನು ನಾವೆಲ್ಲರೂ ಮನದಟ್ಟು ಇಟ್ಟು ಕೆಲಸ ಮಾಡಬೇಕೆಂದು, ಈ ಸಂದರ್ಭದಲ್ಲಿ ಸಂವಿಧಾನದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಪತಿಯವರಿಗೆ ಮತ್ತು ಯಾವುದೇ ಪ್ರತಿರೋಧವನ್ನು ವ್ಯಕ್ತಪಡಿಸದೆ ಕೇಳಿದಂತಹ ತಮ್ಮೆಲ್ಲರಿಗೂ ಹೃದಯಪೂರ್ವಕ ವಂದನೆಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(313) 11.03.2020 03.10 LL-BNS(KS)

**(ಮಧ್ಯಾಹ್ನ 2 ಗಂಟೆ 08 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನ: ಮಧ್ಯಾಹ್ನ 3 ಗಂಟೆ 18 ನಿಮಿಷಕ್ಕೆ ಪ್ರಾರಂಭವಾಯಿತು)**

**(ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)**

## ಭಾರತ ಸಂವಿಧಾನದ ಮೇಲಿನ ಮುಂದುವರೆದ ವಿಶೇಷ ಚರ್ಚೆ

**ಡಾ॥ ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ ಬಗ್ಗೆ ಚರ್ಚೆಯನ್ನು ಹುಟ್ಟಿ ಹಾಕಿ 70 ವರ್ಷಗಳ ನಂತರ, ಸಂವಿಧಾನವನ್ನು ಪುನರ್ ಮನನ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಈ ಸದನದಲ್ಲಿ ವಿಶೇಷವಾಗಿ ಪೀಠಾಧ್ಯಕ್ಷರಾದ ತಾವು ಎದ್ದು ನಿಂತು ಸಂವಿಧಾನದ ಬಗೆಗಿನ ಇಡೀ ಪುಸ್ತಕವನ್ನು ಓದಿ, ನಮ್ಮೆಲ್ಲರನ್ನೂ ಎಚ್ಚರಗೊಳಿಸಿ ಸಂವಿಧಾನದ ಪುಸ್ತಕಗಳನ್ನು ಎಲ್ಲಾ ಸದಸ್ಯರು ಹಿಡಿದುಕೊಂಡು ಓದುವ ಮಟ್ಟಕ್ಕೆ ತಾವು ತಂದಿದ್ದೀರಿ ಮತ್ತು ಸಂವಿಧಾನದ ಬಗ್ಗೆ ತಿಳಿದುಕೊಳ್ಳಬೇಕೆಂಬ ಆಸೆಯನ್ನು ನಮ್ಮಲ್ಲಿ ಬಿತ್ತಿದ್ದೀರಿ. ಅದಕ್ಕಾಗಿ, ತಮಗೆ ವಿಶೇಷವಾದ ಅಭಿನಂದನೆಯನ್ನು ಸಲ್ಲಿಸುತ್ತೇನೆ.

(ಮುಂದು)

(314)11.03.2020/3.20/ವೈಎಲ್–ಕೆಎಸ್
**ಡಾ॥ ವೈ.ಎ.ನಾರಾಯಣಸ್ವಾಮಿ(ಮುಂದು):**

ಸಂವಿಧಾನ ಈ ನೆಲದ ಶ್ರೇಷ್ಠವಾದ ಗ್ರಂಥ ಎಂಬುದನ್ನು ಆದಿ ಭಾಗದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಡೀ ಭಾರತ ದೇಶವನ್ನು ಒಂದು ದೇಹಕ್ಕೆ ಹೋಲಿಸಿದರೆ, ಆ ದೇಹದೊಳಗೆ ಅಡಗಿರುವ ಆತ್ಮ 'ಸಂವಿಧಾನ' ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು. ಇತಿಹಾಸವನ್ನು ಮರೆತವರು 'ಇತಿಹಾಸ ಸೃಷ್ಟಿಸಲಾರರು' ಎನ್ನುವ ಹಿರಿಯರ ಮಾತು ಬಹಳ ಪ್ರಸ್ತುತವಾಗಿದೆ. ಸಂವಿಧಾನವನ್ನು ರಚನೆ ಮಾಡಬೇಕಾದರೆ, ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಡಬೇಕಾದರೆ, ಅದರ ಹಿಂದಿನ ರೋಚಕವಾದ ಸಂಗತಿಗಳ ಬಗ್ಗೆ ನಾವೆಲ್ಲರೂ ಮತ್ತೊಮ್ಮೆ ಪುನರ್ ಮನನ ಮಾಡಿಕೊಳ್ಳಬೇಕು ಮತ್ತು ಯುವ ಪೀಳಿಗೆಗೆ ಹೇಳಿಕೊಡುವ ವ್ಯವಸ್ಥೆಗೆ ನಾವೆಲ್ಲರೂ ನಾಂದಿ ಹಾಡಬೇಕೆನ್ನುವುದಷ್ಟೇ ಪ್ರಸ್ತುತವಾದದು ಎನ್ನುವ ಮಾತನ್ನು ಹೇಳುತ್ತಾ, ತಮಗೆ ವಿನಂತಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬಹಳ ಮುಖ್ಯವಾಗಿ ಭಾರತ ದೇಶವು ಬಹಳ ದೊಡ್ಡದಾದ ದೇಶವಾಗಿದ್ದು, ವೈವಿಧ್ಯತೆಯಲ್ಲಿ ಏಕತೆ; ನೂರಾರು ಜಾತಿಗಳು; ಸಾವಿರಾರು ಭಾಷೆಗಳು; ಹತ್ತಾರು ಧರ್ಮಗಳು; ಇವೆಲ್ಲವನ್ನು ಸೇರಿಸಿ ಒಂದೇ ಒಂದು ಕಾನೂನಿನ ಅಡಿಯಲ್ಲಿ ಈ ದೇಶ ನಡೆಯಬೇಕು. ಈ ದೇಶದಲ್ಲಿ ದಟ್ಟ ದಾರಿದ್ರ್ಯದವರೆಗೂ ಎಲ್ಲರೂ ಸ್ವಾಭಿಮಾನದಿಂದ ಬದುಕಬೇಕು, ಎಲ್ಲರೂ ಹಕ್ಕುಗಳ ರಕ್ಷಣೆ ಮಾಡಿಕೊಳ್ಳಬೇಕು. ಹಳೆಯ ಕಾಲದಲ್ಲಿದಂತಹ ಜೀತ ಪದ್ಧತಿ, ಉಳಿಗಮಾನ್ಯ ಪದ್ಧತಿ, ಅಸ್ಪೃಶ್ಯತೆ, ಅಸಮಾನತೆ ಇವೆಲ್ಲದರ ನಿವಾರಣೆ ಆಗಬೇಕೆಂದು ನಮ್ಮ ಸ್ವಾತಂತ್ರ್ಯ ಸಂಗ್ರಾಮದ ನೇತಾರರು, ಹಿರಿಯರು, ಸೇನಾನಿಗಳು, ಈ ದೇಶಕೋಸ್ಕರ ಪ್ರಾಣವನ್ನೇ ಒತ್ತೆ ಇಟ್ಟಂತಹ ಹುತಾತ್ಮರ ಆಶ್ರಯವನ್ನು ನಾವೆಲ್ಲರೂ ನೆನಪಿಸಿಕೊಳ್ಳಬೇಕು. ಅವರ ಹತ್ತಿರ ಎರಡೇ ಎರಡು ಮಂತ್ರಗಳಿದ್ದವು. ಅದೇನೆಂದರೆ, ಎಲ್ಲರಿಗೂ ಸಮಾನವಾಗಿ ಬದುಕುವ ಹಕ್ಕನ್ನು ನೀಡಬೇಕು, ವಾಕ್ ಸ್ವಾತಂತ್ರ್ಯವನ್ನು ನೀಡಬೇಕು, ಭೇದ-ಭಾವವನ್ನು ಎಣಿಸಬಾರದು, ಬೆಳಗ್ಗೆ ಚರ್ಚೆಯಾದಂತೆ ಎಲ್ಲರಿಗೂ ಸಮಾನವಾದ ಹಕ್ಕನ್ನು ನೀಡಬೇಕು ಮತ್ತು ಭಾರತ ದೇಶದಲ್ಲಿರುವ ಎಲ್ಲರೂ ಕಾನೂನಿನ ಅಡಿಯಲ್ಲಿ ಸಮಾನರು ಎನ್ನುವ ಕಟ್ಟಲೆಯನ್ನು ನಾವೆಲ್ಲರೂ ಹಾಕಿಕೊಳ್ಳಬೇಕು, ಅದಕ್ಕೆ ಒಂದು ಕಾನೂನಿನ ರೂಪ ನೀಡಬೇಕೆಂದು ಹಿರಿಯರೆಲ್ಲರೂ ಯೋಚನೆ ಮಾಡಿ, ಸಂವಿಧಾನದ ಶಿಲ್ಪಿಯಾದ ಡಾ॥ ಬಿ.ಆರ್.ಅಂಬೇಡ್ಕರ್‌ರವರ ನೇತೃತ್ವದಲ್ಲಿ ಕರಡು ಸಮಿತಿಯನ್ನು ರಚಿಸಿ, ಸಂವಿಧಾನದ ರಚನಾ ಸಮಿತಿಯ ಅಧ್ಯಕ್ಷರಾದ ಡಾ॥ ಬಾಬು ರಾಜೇಂದ್ರ ಪ್ರಸಾದ್‌ರವರು ಇದನ್ನು ಶುರು ಮಾಡಿದ್ದರು. ಇಡೀ ವಿಶ್ವದ ಕ್ರಾಂತಿಗಳ ಬಗ್ಗೆ ಬೆಳಗ್ಗೆ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು Aristotle, Socrates ಹಾಗೂ Plato ಯವರಿಂದ ಎಲ್ಲೆಲ್ಲಿ political arena ಪ್ರಾರಂಭವಾಗಿತ್ತು, ಅಲ್ಲಿಂದ ಹಿಡಿದು ಮಾನ್ಯ ಡಾ॥ ತೇಜಸ್ವಿನಿ ಗೌಡರವರೆಗೂ ಅತ್ಯಂತ ಅದ್ಭುತವಾಗಿ ಇತಿಹಾಸದ ಪುಟವನ್ನು ಬಿಚ್ಚಿಟ್ಟಿದ್ದಾರೆ. ನಾನು ಮತ್ತೊಮ್ಮೆ ಆ ಇತಿಹಾಸದ ಬಗ್ಗೆ ಮಾತನಾಡಲು ಹೋಗದೇ ಸಂವಿಧಾನಕ್ಕೆ ಪೀಠಿಕೆ ಬಹಳ ಮುಖ್ಯವಾದದು ಎನ್ನುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಆ ಪೀಠಿಕೆಯ ಆದಿ ಭಾಗದಲ್ಲಿಯೇ The 'PREAMBLE' of the 'Constitution of India' reads as follows;

> *'WE, THE PEOPLE OF INDIA, having solemnly resolved to constitute India into a SOVEREIGN SOCIALIST SECULAR DEMOCRATIC REPUBLIC and to secure to all its citizens: JUSTICE, LIBERTY, EQUALITY, FRATERNITY....*
>
> *IN OUR CONSTITUENT ASSEMBLY.....'*

ಎಂದು 26ನೇ ನವೆಂಬರ್, 1949ನೇ ಸಾಲಿನಂದು ಪೀಠಿಕೆಯನ್ನು ಶುರು ಮಾಡಿದ್ದಾರೆ. ಆ ಪೀಠಿಕೆ ಬಂದಂತಹ ಸಂದರ್ಭದಲ್ಲಿ ಆ ಪೀಠಿಕೆಯು ಐದಾರು ಪದಗಳಲ್ಲಿದ್ದು, ಆ ಪೀಠಿಕೆಯ ಆಶಯ ಮತ್ತು ಕನಸು ಏನೆಂಬುದರಿಂದ ಭಾರತ ಸಂವಿಧಾನವು ಪುಟ್ಟ ಪೀಠಿಕೆಯಿಂದ ಪ್ರಾರಂಭವಾಗುತ್ತದೆ. ಇದು ನಮ್ಮ ಪ್ರಾಚೀನ ಕಾವ್ಯಗಳ ನಾಂದಿ ಪದ್ಯದಂತೆ! ಅಂದರೆ, 'ಒಂದು ಹಾಡು ಹಾಡುವ ಮೊದಲು ಸ್ವರ ಬರುತ್ತದೆ, ಆ ಸ್ವರ ಶುರುವಾದ ತಕ್ಷಣ ಯಾವ ಹಾಡು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹಾಡುತ್ತಾರೆ' ಎಂಬುದು ನಮಗೆ ಗೊತ್ತಾಗುತ್ತದೆ. ಹಾಗೆಯೇ ಈ ಸಂವಿಧಾನವು ಪುಟ ಪೀಠಿಕೆಯಿಂದ ಪ್ರಾರಂಭವಾಗುತ್ತದೆ. ಪ್ರಾಚೀನ ಕಾವ್ಯಗಳ ನಾಂದಿ ಪದ್ಯದಂತೆ ಇದ್ದು, ಮೊದಲ ಪದ್ಯವು ಇಡೀ ಕಾವ್ಯದ ಆಶಯವನ್ನು ಹೇಳುತ್ತದೆ. ಇಡೀ ಹೊಳೆಯ ಬಗ್ಗೆ ನೀರಿನ ಹನಿಯು ಹೇಳುವಂತೆ ಈ ಪೀಠಿಕೆಯು ಸಂವಿಧಾನದ ಆಶಯವನ್ನು ಮಾತ್ರವಲ್ಲದೇ, ರೂಪುಗೊಳ್ಳಬೇಕಾದ ಭಾರತದ ಪರಿಕಲ್ಪನೆಯನ್ನೇ ಮುಂದೆ ಇಡುತ್ತದೆ ಎಂದು ಸಂವಿಧಾನದ ಶಿಲ್ಪಿಯಾದ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು 'ಭಾರತ ಭವಿಷ್ಯದ ಜೀವನ ವಿಧಾನದ ಕನ್ನಡಿ' ಎನ್ನುವ ಮಾತನ್ನು ಹೇಳಿದ್ದಾರೆ. ಪೀಠಿಕಾ ಪುಟವನ್ನು ರಚನೆ ಮಾಡಿದವರು 'ಶಾಂತಿನಿಕೇತನ' ಪದ್ಯದ ಕಲಾವಿದರಾದ ಬಿಯೋಹರ್ ರಾಮನೋಹರ್ ಸಿನ್ಹಾ ರವರು ತಮ್ಮ ಚಿತ್ರ ಕಲೆಯ ಮೂಲಕ ಶೃಂಗರಿಸಿದ್ದರು. ಈ ಮೂಲಕ ಅಂಬೇಡ್ಕರ್‌ರವರು ಬೌದ್ಧಿಕ ಪ್ರಖರತೆ ಮತ್ತು ದಾರ್ಶನಿಕತೆಗೆ ಧಾರ್ಮಿಕ ರಾಷ್ಟ್ರೀಯ ವಿಮರ್ಶಕರಾದ ರವೀಂದ್ರನಾಥ ಟಾಗೂರ್‌ರವರ 'ಶಾಂತಿನಿಕೇತನ' ಅಂಶವೂ ವಿಲೀನವಾಗಿತ್ತು. ಸಂವಿಧಾನದ ಸಭೆಯು ಪೀಠಿಕೆಯನ್ನು 26 ನವೆಂಬರ್ 1949 ರಂದು ಅಳವಡಿಸಿಕೊಂಡಿದ್ದು, ಇವತ್ತಿಗೆ 26 ವರ್ಷಗಳಾಗಿವೆ. ವಾಸ್ತವವಾಗಿ ನಮ್ಮ ದೇಶದ ಸಂವಿಧಾನದ ಪೀಠಿಕೆ ಅಕ್ಷರಗಳ ಮೂಲಕ ಶುರುವಾಗುವುದಿಲ್ಲ. ಅದು 'ಅಶೋಕ ಚಕ್ರ' ದ ಮೂಲಕವಾಗಿರುವುದು. 'ಅಶೋಕ' ಎಂದರೆ, 'ದುಃಖರಾಹಿತ್ಯ' ಎಂದರ್ಥ. ಅಂದರೆ, ನೆತ್ತರ ಕಾಳಗಕ್ಕೆ ಹೇಸಿ, ಅಹಿಂಸೆಯನ್ನು ಮೌಲ್ಯವಾಗಿ ಒಪ್ಪಿಕೊಂಡು ಚಕ್ರವರ್ತಿಯ ಹೆಸರಿನಲ್ಲಿರುವ ಚಿಹ್ನೆಗೆ ಬೌದ್ಧ ಹಿನ್ನೆಲೆ ಇದೆ. ಚಲನೆಯ ಸಂಕೇತವಾದ ಚಕ್ರದ ಶೋಧವು ಮಾನವನ ನಾಗರೀಕ ವಿಕಾಸದಲ್ಲಿ ಕಾಂತ್ರಿಕಾರಕ ಪಲ್ಲಟವನ್ನು ತಂದಿರುವುದು ಅಷ್ಟೆ. 'ಬುದ್ಧನ ಧರ್ಮ ಚಕ್ರದ ಕಲ್ಪನೆಯಲ್ಲಿಯು ಲೋಕದ ಬಾಳು ನಿರಂತರವಾಗಿ ಪರಿವರ್ತನೆಯಾಗಬೇಕಾಗಿದೆ' ಎನ್ನುವುದನ್ನು ಸಹ ಈ 'ಅಶೋಕ ಚಕ್ರ' ದ ಮುನ್ನುಡಿಯಲ್ಲಿ ಅಡಗಿದೆ ಎನ್ನುವುದನ್ನು ಬಹಳ ಮುಖ್ಯವಾಗಿ ಗಮನಿಸಬೇಕಾಗಿದೆ. ಇದು ಕೇವಲ 'ಅಕ್ಷರ' ಗಳಿಂದ ಶುರುವಾಗಿಲ್ಲ. 'ಅಶೋಕ ಚಕ್ರ' ದ ಮೂಲಕ ಶುರುವಾಗಿದೆ ಎನ್ನುವ ಮಾತನ್ನು ವಿಮರ್ಶಕರು ಬಹಳ ಗಟ್ಟಿಯಾಗಿ ಹೇಳಿದ್ದಾರೆ.

ಎರಡನೆಯದಾಗಿ, ಪೀಠಿಕೆಯಲ್ಲಿ 3 ಭಾಗಗಳಿವೆ. ಮೊದಲನೆಯದಾಗಿ, ಭಾರತದ ಜನಗಳಾದ ನಾವು ಭಾರತವನ್ನು ಸಾರ್ವಭೌಮ, ಸಮಾಜವಾದೀ, ಧರ್ಮ ನಿರಪೇಕ್ಷತೆ, ಪ್ರಜಾಸತ್ತಾತ್ಮಕ, ಘನ ರಾಜ್ಯ ರೂಪಿಸುವುದಕ್ಕೆ ಈ ವಾಕ್ಯವನ್ನು ಮುಂದಿಡುತ್ತದೆ. ಈ ವಾಕ್ಯ ಶುರುವಾಗುವುದು ಎಲ್ಲಿ ಎಂದರೆ, *'WE, THE PEOPLE OF INDIA,…'* ಶಬ್ಧವನ್ನು ಬಹುವಚನ ಸೂಚಕವು, ದೇಶದ ಸಮಸ್ತ ಪ್ರಜೆಗಳ ಜಾತಿ, ಧರ್ಮ, ಭಾಷೆ, ಜನಾಂಗ, ಲಿಂಗಗಳನ್ನು ಪರಿಗಣಿಸದೇ ತಬ್ಬಿಕೊಳ್ಳುವ ತೆರೆದ ತೋಳಿನಂತಿದೆ. *'WE, THE PEOPLE OF INDIA,…'* ಎಂದರೆ, the people of India have no caste, religion or geographical area, but we are all one, ಎನ್ನುವ ಸಂದೇಶವನ್ನು '*WE*' ಎನ್ನುವ ಪದವೂ… The word '***WE'*** in the *'PREAMBLE'* of the *'CONSTITUTION OF INDIA'* has vast and broad meaning.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪೀಠಿಕೆಯಲ್ಲಿ ಬಹಳ ಸೋಗಸಾಗಿ ಹೇಳಿದ್ದಾರೆ. ಬಹಳ ಮುಖ್ಯವಾಗಿ ಸಂವಿಧಾನವು ಬಂದು 70 ವರ್ಷಗಳಾದ ಮೇಲೆ 'ಅನುಸಂಧಾನ' ಎಂದು 'ವೈಯಕ್ತಿಕ ಸ್ವಾತಂತ್ರ್ಯದ ಗುರಿಯೇ, ಸಂವಿಧಾನದ ಪರಮ ಗುರಿ' ಎನ್ನುವುದರ ಬಗ್ಗೆ ಬಹಳಷ್ಟು ವಿವರವಾಗಿ ವ್ಯಕ್ತಪಡಿಸಿದ್ದಾರೆ. ಈ ಪ್ರಜಾತಂತ್ರ ವ್ಯವಸ್ಥೆಗೆ ಹೆಗ್ಗುರುತು ಯಾವುದೆಂದರೆ, ಯಾವುದೇ ಅಂಗಗಳು ತನ್ನ ವ್ಯಾಪ್ತಿಯನ್ನು ಮೀರಬಾರದು. ಅದು ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಇರಬಹುದು. ಆಮೇಲೆ 'ಪತ್ರಿಕಾಂಗ' ಸೇರಿಕೊಂಡಿದ್ದೆ. ಯಾವ ಅಂಗಗಳು ತನ್ನ ವ್ಯಾಪ್ತಿಯನ್ನು ಮೀರಬಾರದು ಎನ್ನುವುದೇ ಈ ಪ್ರಜಾತಂತ್ರ ವ್ಯವಸ್ಥೆಯ ಹೆಗ್ಗುರುತು ಎನ್ನುವುದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು. ಆದರೆ, ಆ ವ್ಯಾಪ್ತಿಯನ್ನು ಬಿಟ್ಟು ನಾವೆಲ್ಲರೂ ಎಲ್ಲವನ್ನೂ ಮಾಡುವುದಕ್ಕೆ ಶುರು ಮಾಡಿದ್ದೇವೆ. ಬಹಳ ದೊಡ್ಡ ಹೋರಾಟದ ಕನಸಿನ ಭಾಗವಾಗಿ ರೂಪುಗೊಂಡಿರುವ ಈ ಸಂವಿಧಾನದ ಮಹತ್ವವನ್ನು ಬಹುಶಃ ನಾವು ಮುಂದಿನ ಪೀಳಿಗೆಗೆ ಗಟ್ಟಿಯಾಗಿ ಹೇಳದೆ ಹೋದರೆ, ಬಹುಶಃ ನಾವೆಲ್ಲರೂ ತಿಳಿದುಕೊಂಡಿರುವಷ್ಟು ಮಟ್ಟಿಗೆ ಇರುವುದಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

(ಮುಂದು)

(315)11.03.2020/3.30/ಎಸ್‌ಕೆ-ಬಿಎನ್‌ಎಸ್

**ಡಾ॥ ವೈ.ಎ. ನಾರಾಯಣಸ್ವಾಮಿ (ಮುಂದು):**

ಮಾನ್ಯ ಸಭಾಪತಿಯವರೇ, ಸಂವಿಧಾನವು ಪ್ರಜಾಪ್ರಭುತ್ವದ ಮೌಲ್ಯ ಹಾಗೂ ಸಿದ್ಧಾಂತಗಳ ಮೇಲೆ ರಚಿತವಾಗಿರುವ ಒಂದು ಶ್ರೇಷ್ಠವಾದ ದಾಖಲಾತಿ. ಸಿದ್ಧಾಂತಗಳು ಮತ್ತು ಮೌಲ್ಯಗಳು ಹಾಗೂ ಜನರ ಭಾವನೆಗಳು, ಆಚಾರ-ವಿಚಾರಗಳು, ಪದ್ಧತಿಗಳು ಇವೆಲ್ಲವುಗಳ ಮೇಲೆ ನಿಂತಿರುವ ಶ್ರೇಷ್ಠವಾದ ಗ್ರಂಥ. ಇದರ ಬಗ್ಗೆ ನಮ್ಮೆಲ್ಲಾ ಹಿರಿಯರು ಸಾರಿ ಸಾರಿ ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂಬುದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕಾಗಿದೆ. ಈ ದೇಶದಲ್ಲಿರುಂತಹ ಸಂವಿಧಾನ ಬಹಳ ದೊಡ್ಡ ಸಂವಿಧಾನ. ಪ್ರಪಂಚದಲ್ಲಿಯೇ ಅತ್ಯಂತ ಉದ್ದನೆಯ ಸಂವಿಧಾನ, ಪ್ರಪಂಚದಲ್ಲಿ ಅತ್ಯಂತವಾಗಿ ಕೈಯಲ್ಲಿಯೇ calligraphy, Italic language ನಲ್ಲಿ ಬರೆದಿರುವಂತಹ ದೊಡ್ಡ ಸಂವಿಧಾನ ಭಾರತ ದೇಶದ್ದಾಗಿದೆ ಎಂದು ನಾವು ಅಂದುಕೊಂಡಿದ್ದೇವೆ. ಅದಕ್ಕೆ ಅದರದೇ ಆದ ಬಹಳಷ್ಟು ವೈಶಿಷ್ಟ್ಯತೆಗಳಿವೆ. ನನಗೆ ಬಹಳ ಸಂತೋಷವಾಗಿದ್ದು ಯಾವುದು ಎಂದರೆ, ಎರಡು ವರ್ಷಗಳು, ಹನ್ನೊಂದು ತಿಂಗಳು, ಹದಿನೇಳು ದಿನಗಳ ನಂತರ ಇದು ಅನುಷ್ಠಾನಕ್ಕೆ ಬಂತು ಎಂದು ಈಗಾಗಲೇ ಹೇಳಿದ್ದಾರೆ. ಈಗಾಗಲೇ ನಾವು ಓದಿದ್ದೇವೆ. ಆದರೆ, ಆ ಸಂವಿಧಾನವನ್ನು ಸೆಂಟ್ರಲ್ ಹಾಲ್‌ನಲ್ಲಿಟ್ಟು, as a Constituent Assembly ಜನರೆಲ್ಲಾ ಸಹಿ ಹಾಕುತ್ತಾರಲ್ಲಾ. ಆ ಸಹಿ ಹಾಕುವ ಫೋಟೋವನ್ನು ನೋಡಿದೆ; ಯಾವುದೇ ಧರ್ಮ ಗ್ರಂಥಕ್ಕೆ ಶ್ರೇಷ್ಠವಾದ ಭಗವದ್ಗೀತೆ ಗ್ರಂಥ, ಖುರಾನ್, ಬೈಬಲ್ ಮತ್ತೊಂದು ಯಾವುದೇ ಗ್ರಂಥಕ್ಕೆ ಕೊಡುವ ಗೌರವಕ್ಕಿಂತ ಹೆಚ್ಚಾಗಿ ಅವರು ಅಲ್ಲಿ ನಿಂತುಕೊಂಡು ಸಹಿ ಮಾಡಿರುವ ಪರಿ ನೋಡಿದರೆ, ನನಗೆ ನಿಜವಾಗಲೂ ಬಹಳ ಸಂತೋಷವಾಯಿತು ಮತ್ತು ಇದನ್ನು ನೋಡಿದರೆ ನನಗೆ ಹೆಮ್ಮೆ ಅನಿಸುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಈ ಹಂತದಲ್ಲಿ ಮಾನ್ಯ ಸದಸ್ಯರು ಛಾಯಚಿತ್ರವನ್ನು ಪ್ರದರ್ಶಿಸಿದರು)**

ಎಲ್ಲರೂ ಸಾಲಾಗಿ ಭಾರತ ಸಂವಿಧಾನವನ್ನು ಕಣ್ಣಿಗೆ ಒತ್ತಿಕೊಂಡು, ಇದು ನಮ್ಮ ಜೀವನ. ಇದು ನಮ್ಮ ದೇಶ. ಈ ಗ್ರಂಥದ ಮುಖಾಂತರ ನಮ್ಮ ಬದುಕನ್ನು ಹಸನು ಮಾಡಿಕೊಳ್ಳಬೇಕು. ಅಸಮಾನತೆಯನ್ನು ತೊಡೆದು ಹಾಕಬೇಕು. ಸಮಾನತೆಯನ್ನು ಸಾರಬೇಕು. ಕಟ್ಟಕಡೆಯ ದಟ್ಟ ದಾರಿದ್ರ್ಯವನ್ನು ತೊಡೆದು ಹಾಕಿ, ಜೀವನವನ್ನು ಹಸನುಗೊಳಿಸಬೇಕೆಂದು ಹೇಳಿ, ಮಹಾ ಮಹಿಮರು, ಘಟಾನುಘಟಿಗಳು ಅಂದಿನ ಕಾಲದಲ್ಲಿ ಇದಕ್ಕೆ ಕಾರಣೀಭೂತರಾದಂತಹ ಎಲ್ಲರೂ ಬಂದು ಶಿರ ಬಾಗಿ ಈ ಗ್ರಂಥಕ್ಕೆ ಸಹಿ ಮಾಡಿ ನಮಸ್ಕಾರ ಹಾಕುತ್ತಾರೆ. ಆ ಗ್ರಂಥ ಎಷ್ಟು ಅದ್ಭುತವಾಗಿ ಬರೆದಿದ್ದಾರೆ. ಆ handwriting ನೋಡಿದರೆ ಬಹಳ ಸಂತೋಷವಾಗುತ್ತದೆ. ಬರವಣಿಗೆಯೋ ಅಥವಾ ಪ್ರಿಂಟ್ ಆಗಿದೆಯೋ ಎಂಬ ವ್ಯತ್ಯಾಸಗಳು ನಮಗೆ ಗೊತ್ತಾಗುವುದಿಲ್ಲ. ಆ ನಮ್ಮ ಭಾರತ ಸಂವಿಧಾನದ ಬಗ್ಗೆ ಎಷ್ಟು ಹೇಳಿದರೂ ಸಾಲದು.

ಮಾನ್ಯ ಸಭಾಪತಿಯವರೇ, Constitution to control the Rules and rulers ಎಂದು ನಾವು ಅಂದುಕೊಂಡಿದ್ದೆವು. ಆದರೆ, Constitution has not failed, but we have failed the Constitution. Constitution's purpose has been defeated by us. ಆ purpose ಅನ್ನು ನಮ್ಮ ಸ್ವಾರ್ಥ ಸಾಧನೆಗೋಸ್ಕರ ಜನಸಾಮಾನ್ಯರ ಬದುಕಿನ ಜೊತೆ ಚೆಲ್ಲಾಟವಾಡಿ ಮತ್ತು ಅವರು ನಮ್ಮ ಜೊತೆ ಸರಿ ಸಮಾನವಾಗಿ ನಿಂತುಕೊಳ್ಳಬಾರದೆಂದು ಹೇಳಿ, ಬೇರೆ ಭಾವನೆಗಳನ್ನು ಹೊಂದಿ, ಎಪ್ಪತ್ತು ವರ್ಷಗಳಾದರೂ ಸಮ ಸಮಾಜವನ್ನು ನೋಡುವುದಕ್ಕೆ ಸಾಧ್ಯವಾಗಲಿಲ್ಲ ಎನ್ನುವ ಕೊರತೆ ಮತ್ತು ನೋವು ಇವತ್ತು ನಮಗೆಲ್ಲರಿಗೂ ಕಾಡುತ್ತಿದೆ. ಇಲ್ಲಿ ನಿಂತುಕೊಂಡು ನಾವೆಲ್ಲರೂ ಪಕ್ಷಾತೀತವಾಗಿ ಭಾಷಣ ಮಾಡುತ್ತಿದ್ದೇವೆ. ನಮ್ಮನ್ನೆಲ್ಲಾ ನೋಡಿದಾಗ ನಮಗೆ ಅನಿಸುವುದೇನೆಂದರೆ, ಇವತ್ತು ಪಶ್ಚಾತ್ತಾಪವನ್ನು ಪಟ್ಟುಕೊಂಡು ನಾವು ಭಾಷಣವನ್ನು ಮಾಡುತ್ತಿದ್ದೇವೆ. ಸಂವಿಧಾನ ನಮಗೆಲ್ಲವನ್ನೂ ಕೊಟ್ಟಿದೆ. ಆದರೆ ನಾವೇನು ಸಂವಿಧಾನಕ್ಕೆ ಕೊಟ್ಟಿದ್ದೇವೆ? ಈ ದೇಶ ಮತ್ತು ಸಮಾಜಕ್ಕೆ ನಾವೇನು ಕೊಟ್ಟಿದ್ದೇವೆ? ಆದರೆ ಸಮಾಜದಲ್ಲಿ ಎಲ್ಲರನ್ನು ಕಾಪಾಡುವ ಕೆಲಸವನ್ನು ಸಂವಿಧಾನ ಮಾಡಬೇಕಾದರೆ, ಅದನ್ನು ಅನುಷ್ಠಾನ ಮಾಡುವ ನಿಟ್ಟಿನಲ್ಲಿ ನಮ್ಮ ಕಾಳಜಿ, ಬದ್ಧತೆ, ಜವಾಬ್ದಾರಿ ಏನು ಮತ್ತು ನಾವು ಮಾಡಬೇಕಾದಂತಹ ಮೂಲಭೂತ ಕರ್ತವ್ಯಗಳೇನು? Fundamental Rights ಬಗ್ಗೆ ಮಾತನಾಡುತ್ತೇವೆ. What about Fundamental Duties? If you don't accept Fundamental Duties, you have no right for Fundamental Rights. ಕಾನೂನನ್ನು ನಮಗೆ ಬೇಕಾದಂತೆ ತಿರುಚಿಕೊಳ್ಳುವ ವ್ಯವಸ್ಥೆಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಿಲಾಂಜಲಿಯನ್ನು ಇಡುವುದು ಯಾವಾಗ? ನಮ್ಮ ಕರ್ತವ್ಯಗಳ ಪರಿಪಾಲನೆ ಮಾಡುವುದು ಯಾವಾಗ? ಅದನ್ನು ಬಿಟ್ಟು ನಮ್ಮ ಹಕ್ಕಿಗೋಸ್ಕರ ಮಾತ್ರ ಹೋರಾಟ ಮಾಡುತ್ತಿದ್ದರೆ, ನಮ್ಮ ಕರ್ತವ್ಯ, ದೇಶದ ರಕ್ಷಣೆ, ಸಮಾನತೆ, ಬಡವರ ಉದ್ಧಾರ, ಮಕ್ಕಳ ಶಿಕ್ಷಣ, ಯುವಕರ ಉದ್ಯೋಗ ಇವುಗಳನ್ನೆಲ್ಲಾ ನಾವು ಯಾವಾಗ ಚರ್ಚೆ ಮಾಡುವುದು? ಅದಕ್ಕೋಸ್ಕರ ಹೇಳುತ್ತಿದ್ದೇನೆ. ಮಾನ್ಯ ಎಸ್.ಆರ್. ಪಾಟೀಲ್‌ರವರ ಆದಿಯಾಗಿ ಇವತ್ತು ನಾವು ಏನು ಇಲ್ಲಿ ಮಾತನಾಡುತ್ತಿದ್ದೇವೆ ಸ್ವಾರ್ಥವನ್ನು ಪಕ್ಕಕ್ಕೆ ಇಟ್ಟು, ಇಷ್ಟು ದಿನಗಳ ಕಾಲ ನಾವೇನು ತಪ್ಪು ಮಾಡಿದ್ದೇವೆ. ದೇವರೆ ಇನ್ನು ಮುಂದೆ ತಪ್ಪು ಮಾಡುವುದು ಬೇಡ. ಈ ಸಮಾಜಕ್ಕೆ ಒಳ್ಳೆಯ ಕೆಲಸಗಳನ್ನು ಮಾಡೋಣ. ನಮಗೆಲ್ಲರಿಗೂ ದೇವರು ಆಶೀರ್ವಾದ ಮಾಡಿ ಈ ಸದನಕ್ಕೆ ಕಳುಹಿಸಿದ್ದಾನೆ. ನಮಗಿಂತ ಎಷ್ಟೋ ಜನರಿಗೆ ಇಲ್ಲಿಗೆ ಬರುವುದಕ್ಕೆ ಸಾಧ್ಯವಿಲ್ಲದಿರುವಾಗ ...ನಾನು ಎಲ್ಲರನ್ನೂ ಸೇರಿಸಿಕೊಂಡು ಹೇಳುತ್ತಿದ್ದೇನೆ. ನಾನು ಯಾರ ಬಗ್ಗೆಯೂ ಮಾತನಾಡಲಿಲ್ಲ. ನಾನು CAA, NRC ಬಗ್ಗೆ ಮಾತನಾಡಲಿಲ್ಲ, ಮೂರು ಪಕ್ಷಗಳ ಬಗ್ಗೆ ಮಾತನಾಡಲಿಲ್ಲ. ಆದರೆ ನಾವೆಲ್ಲರೂ ಆತ್ಮಾವಲೋಕನವನ್ನು ಮಾಡಿಕೊಂಡು, ಈಗಾಗಲೇ ಎಪ್ಪತ್ತು ವರ್ಷಗಳಾಯಿತು. ಎಪ್ಪತ್ತು ವರ್ಷಗಳಾದ ನಂತರವೂ ಸಹ ಇನ್ನು ನಾವೆಲ್ಲ ಭಾವನೆಗಳನ್ನು ಅದುಮಿಟ್ಟುಕೊಂಡು, ಇನ್ನು ಸೋಗಲಾಡಿತನದ ಪ್ರದರ್ಶನ ಮಾಡಿಕೊಂಡು, ನಾವೇ ಶ್ರೇಷ್ಠರು. ಬೇರೆಯವರು ಶ್ರೇಷ್ಠರಲ್ಲ. ನಾವೇ ಚೆನ್ನಾಗಿರಬೇಕು, ಬೇರೆಯವರು ಚೆನ್ನಾಗಿರಬಾರದೆಂಬ ಭಾವನೆಗಳನ್ನು ವ್ಯಕ್ತಪಡಿಸುವುದು ಎಷ್ಟು ಮಾತ್ರ ಸಮಂಜಸ ಎನ್ನುವುದನ್ನು ಆತ್ಮಕ್ಕೆ ನಾವೆಲ್ಲ ಪ್ರಶ್ನೆಯನ್ನು ಇವತ್ತು ಹಾಕಿಕೊಳ್ಳಬೇಕಾಗಿದೆ. ಈ ದೇಶದ ರಕ್ಷಣೆ at most priority. ಇದನ್ನು ನೋಡಿದ್ದೀರಿ. ಸಂವಿಧಾನ ಬರೆಯಬೇಕಾದರೆ, ಸಂವಿಧಾನಗಳ ಸಾಲುಗಳು ಎಂಬ ಪಟ್ಟಿ ನನ್ನ ಬಳಿಯಿದೆ. ಯಾವ್ಯಾವ ದೇಶದಿಂದ ಏನೇನು ತೆಗೆದುಕೊಂಡಿದ್ದೇವೆ. ಅಮೆರಿಕಾದ Bill of Rights ನಿಂದ ಹಿಡಿದು ಜಪಾನ್ ರಾಷ್ಟ್ರದ ತನಕ ಎಲ್ಲವನ್ನೂ ಅಳವಡಿಸಿಕೊಳ್ಳಲಾಗಿದೆ. ಆದರೂ ಎಲ್ಲಾ ರಾಷ್ಟ್ರಗಳಿಗಿಂತ ಸರ್ವ ಶ್ರೇಷ್ಠವಾದ ಸಂವಿಧಾನವೆಂದರೆ, ನಮ್ಮ ಭಾರತ ಸಂವಿಧಾನ. ಇದನ್ನು ರಚನೆ ಮಾಡಿದ ಮೇಧಾವಿ ಮಹಾನುಭಾವ ಯಾರೆಂದರೆ ಡಾ॥ ಬಿ.ಆರ್. ಅಂಬೇಡ್ಕರ್‌ರವರು. ಇವತ್ತು ಡಾ॥ ಬಿ.ಆರ್. ಅಂಬೇಡ್ಕರ್‌ರವರನ್ನು ನಾವು ಯಾವ ರೀತಿ ನಡೆಸಿಕೊಂಡಿದ್ದೇವೆಂಬುದರ ಬಗ್ಗೆ ನಾವು ಇವತ್ತು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಮಾನ್ಯ ಕೆಂಗಲ್ ಹನುಮಂತಯ್ಯನವರು ವಿಧಾನ ಸೌಧವನ್ನು ಕಟ್ಟಿದರು. ಅವರು ಒಳಗೆ ಬಂದು ಕುರ್ಚಿಯಲ್ಲಿ ಕೂರುವುದಕ್ಕಾಗಲಿಲ್ಲ. ಡಾ॥ ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನವನ್ನು ರಚನೆ ಮಾಡಿದ ಮೇಲೆ ಒಳಗೆ ಬಂದು Parliament ಪ್ರವೇಶ ಮಾಡುವುದಕ್ಕಾಗಲಿಲ್ಲ. ನಾನು ಯಾವುದೇ ಪಕ್ಷದ ಬಗ್ಗೆಯೂ ಹೇಳುತ್ತಿಲ್ಲ. ಈ ಮಾತನ್ನು ನಮ್ಮ ಮನಸ್ಥಿತಿಯ ಮೇಲೆ ಹೇಳುತ್ತಿದ್ದೇನೆ. ಯಾವ ಮಟ್ಟದಲ್ಲಿ ಮತ್ತು ಯಾವ ಹಂತದಲ್ಲಿ ಯಾರಿಗೆ ಗೌರವ ಸಲ್ಲಬೇಕಾಗಿತ್ತೋ, ಅವರಿಗೆ ಸಲ್ಲಲಿಲ್ಲ ಎಂಬ ನೋವು ನಮಗೆ ಇವತ್ತು ಕಾಡುತ್ತಿದೆ. ಇಂತಹ ಮಹಾನುಭವರನ್ನು ಎಷ್ಟು ಗೌರವಿಸಿದರೂ ಸಾಲದು.. ನಾವು ಚಿಕ್ಕವರಿದ್ದಾಗ ನೋಡುತ್ತಿದ್ದೆವು; ಬಾವಿಯಲ್ಲಿ ನೀರು ಸೇದುವುದಕ್ಕೆ ಬಿಡುತ್ತಿರಲಿಲ್ಲ. ಊರುಗಳಲ್ಲಿ ಮದುವೆ ಮೆರವಣಿಗೆ ಮಾಡುವುದಕ್ಕೆ ಬಿಡುತ್ತಿರಲಿಲ್ಲ. ನಾವು ಚಿಕ್ಕವರಿದ್ದಾಗಿನಿಂದ ನೋಡುತ್ತಿದ್ದೇವೆ. ನಾನು ಬೇರೆಯವರ ಮನೆಗೆ ಊಟಕ್ಕೆ ಹೋದಾಗ, ಮುದ್ದೆ, ಚಪಾತಿಯನ್ನು ಮೇಲಿಂದ ಹಾಕುತ್ತಿದ್ದರು. ತಟ್ಟೆಗೆ ಟಚ್ ಆಗಬಾರದು. ಅದು ಮೈಲಿಗೆಯಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಿಡುತ್ತದೆ. ಇದನ್ನು ನಾನು ಸ್ವತಃ ನೋಡಿದ್ದು, ಇದನ್ನು ನಾನು ಅನುಭವಿಸಿದ್ದೇನೆ. ಇಂತಹ ವಾತಾವರಣದಲ್ಲಿ ಸಮ ಸಮಾಜವನ್ನು ನಿರ್ಮಾಣ ಮಾಡಬೇಕು. ಸಮಾನತೆಯ ಬಗ್ಗೆ ಪ್ರತಿಭಟನೆ ಮಾಡಬೇಕು. ಅಸಮತೋಲನವನ್ನು ಹೋಗಲಾಡಿಸಬೇಕು. ಅಸ್ಪೃಶ್ಯತೆಯನ್ನು ನಿವಾರಣೆ ಮಾಡಬೇಕು ಎಂದು ಹೇಳಿದ ಈ ಮಹಾನ್ ವ್ಯಕ್ತಿಯ ಬಗ್ಗೆ ಇನ್ನು ಹೆಚ್ಚಿನದಾಗಿ ಚರ್ಚೆ ಮಾಡಬೇಕಾಗಿದೆ ಎನ್ನುವುದನ್ನು ನಾವು ಸಹ ಸದನದ ಮುಂದೆ ಇಡುತ್ತೇನೆ.

ಮಾನ್ಯ ಸಭಾಪತಿಯವರೇ, ಸಂವಿಧಾನದ ಎಲ್ಲಾ ಆರ್ಟಿಕಲ್ಸ್ ಬಗ್ಗೆ ನಮ್ಮ ಅಕ್ಕ ಶ್ರೀಮತಿ ತೇಜಸ್ವಿನಿ ಗೌಡರು ಹೇಳುತ್ತಿದ್ದರು. ಕಾಶ್ಮೀರದಿಂದ ಹಿಡಿದು ಬಾಂಬೆಯ ನರ್ಸ್ ಅರುಣಾ ಶಾನ್‌ಭಾಗ್‌ರವರ ಮೇಲೆ ಅತ್ಯಾಚಾರವಾದಾಗ, ಇಚ್ಛಾ ಮರಣಕ್ಕೂ ಅದೇ ತಂದ ಕಾನೂನು ಇದೆ. ನನಗೆ ಬಹುಶಃ ಅನಿಸುವುದೇನೆಂದರೆ, ಪ್ರಪಂಚದಲ್ಲಿ ಯಾವುದೇ ಸಂವಿಧಾನದಲ್ಲಿ ಇಲ್ಲದೇ ಇರುವಂತಹ ಎಲ್ಲಾ ಭಾಗಗಳು, Articles ನಮ್ಮಲ್ಲಿವೆ. ಈ ಮನುಷ್ಯನ ಜೀವನವನ್ನು ಪರಿಪೂರ್ಣವಾಗಿ ಮಾಡುವ ಸಮಾಜದಲ್ಲಿ ಎದೆ ಉಬ್ಬಿಸಿ, ತಲೆ ಎತ್ತಿ ಜೀವನ ಮಾಡುವುದಕ್ಕೆ ಏನೇನೂ ವ್ಯವಸ್ಥೆ ಬೇಕಾಗಿದೆಯೋ, ಎಲ್ಲವನ್ನೂ ಕೊಡುವ ವ್ಯವಸ್ಥೆ ಈ ಒಂದು ಸಂವಿಧಾನದಲ್ಲಿದೆ ಎಂದು ನಾನು ಬಹಳ ಗೌರವದಿಂದ ಒಪ್ಪಿಕೊಳ್ಳುತ್ತಿದ್ದೇನೆ. ಮಾನ್ಯ ಶ್ರೀಕಂಠೇಗೌಡರು ಇವತ್ತು ಬೆಳಗ್ಗೆ ಸದನದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ನೆಲ್ಸನ್ ಮಂಡೇಲಾ ಭಾರತ ದೇಶಕ್ಕೆ ಬಂದಾಗ, ನೀವು ಏನು ತೆಗೆದುಕೊಂಡು ಹೋಗುತ್ತೀರಾ ಎಂದು ಕೇಳಿದಾಗ ಸಹಜವಾಗಿ, ದೇಶದ ಒಬ್ಬ ಪ್ರಧಾನಿ, ರಾಷ್ಟ್ರಪತಿ ಬಂದಾಗ ನಮ್ಮ ದೇಶಕ್ಕೆ ಸಂಬಂಧಪಟ್ಟಂತೆ ಒಂದು ವಿಶೇಷವಾದ ಉಡುಗೊರೆಯನ್ನು ಕೊಡುತ್ತಾರೆ. ಅದೇ ರೀತಿ ನೆಲ್ಸನ್ ಮಂಡೇಲಾರವರನ್ನು ಕೇಳಿದಾಗ ಹೇಳುತ್ತಾರೆ, ಅವರು ನಾನು ಭಾರತ ದೇಶದಿಂದ ಏನಾದರೂ ಉಡುಗೊರೆಯನ್ನು ತೆಗೆದುಕೊಂಡು ಹೋಗುವುದಕ್ಕೆ ಇಚ್ಚಿಸುವುದಾದರೆ, ಅದು ಡಾ॥ ಬಿ.ಆರ್. ಅಂಬೇಡ್ಕರ್‌ರವರು ಬರೆದಿರುವ ಸಂವಿಧಾನ ಮಾತ್ರ ಎನ್ನುವುದನ್ನು ಬಹಳ ಹೆಮ್ಮೆಯಿಂದ ಹಾಗೂ ಸ್ವತಃ ಶೋಷಣೆಗೆ ಒಳಗಾಗಿ ಆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾ ಪುರಷ ನೆಲ್ಸನ್ ಮಂಡೇಲಾ ಹೇಳುತ್ತಾರೆ.

(ಮುಂದು)

(316)11.03.2020 3.40 ಟಿಸಿಹೆಚ್-ಬಿಎನ್‌ಎಸ್
**ಡಾ॥ವೈ.ಎ.ನಾರಾಯಣ ಸ್ವಾಮಿ (ಮುಂದು):**

ಸಂವಿಧಾನ ತಜ್ಞ Granville Austin ರವರು 'ಸರ್ವೋದ್ಧಾರಕ್ಕೆ ಸಮಾಜವನ್ನು ಪುನಶ್ಚೇತನಗೊಳಿಸಲು ಬಹುಶಃ ಬೇರೆ ಯಾವ ದೇಶದ ಸಂವಿಧಾನವು ಭಾರತ ಸಂವಿಧಾನವು ನೀಡಿದಷ್ಟು ಒತ್ತು ನೀಡಿಲ್ಲ' ಎಂದು ಹೇಳಿದ್ದಾರೆ. ಅಂದರೆ, ಸರ್ವ ಶ್ರೇಷ್ಠವಾದ ನಮ್ಮ ಸಂವಿಧಾನ ಬೇರೆ ಯಾವ ಸಂವಿಧಾನಗಳಿಗಿಂತಲೂ ಹೆಚ್ಚಾಗಿ ಸರ್ವೋದ್ಧಾರಕ್ಕೆ ಸಮಾಜ ನಿರ್ಮಾಣ ಮಾಡುವುದಕ್ಕೆ ಭಾರತ ಸಂವಿಧಾನ ಒತ್ತು ಕೊಟ್ಟಿದೆ ಎಂದು ಉಲ್ಲೇಖ ಮಾಡಿದ್ದಾರೆ. ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿರುವ ಡಾ॥ ರಾಜೇಂದ್ರ ಪ್ರಸಾದ್‌ರವರು 'ನಾನು ಸಂವಿಧಾನ ರಚನಾ ಸಮಿತಿಯಲ್ಲಿ ಇದ್ದರೂ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ, ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೂಡ ಅಧ್ಯಕ್ಷನಾಗಿ ಪ್ರತಿ ದಿನದ ಚಟುವಟಿಕೆಗಳನ್ನು ಬಹಳ ಕೂಲಂಕಷವಾಗಿ ಪರಿಗಣಿಸಿದ್ದೇನೆ ಮತ್ತು ಗಮನಿಸಿದ್ದೇನೆ. ವಿಶೇಷವಾಗಿ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾದ ಡಾ॥ಬಿ.ಆರ್.ಅಂಬೇಡ್ಕರ್‌ರವರು ಇಷ್ಟು ಶ್ರದ್ಧೆ ಮತ್ತು ಉತ್ಸುಕತೆಯಿಂದ ಈ ಕಾರ್ಯವನ್ನು ನಡೆಸಿದ್ದಕ್ಕೆ, ಎಲ್ಲಕ್ಕಿಂತ ಹೆಚ್ಚು ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ' ಎಂದು ಹೇಳಿದ್ದಾರೆ. ಡಾ॥ಬಿ.ಆರ್.ಅಂಬೇಡ್ಕರ್‌ರವರನ್ನು ಕರಡು ಸಮಿತಿಗೆ ಸೇರಿಸಿದ್ದು ಮತ್ತು ಅದರ ಅಧ್ಯಕ್ಷರನ್ನಾಗಿ ಮಾಡಿದ್ದು ನಾವು ಮಾಡಿದಂತಹ ಅತ್ಯಂತ ಉತ್ತಮ ಕೆಲಸ ಎನ್ನುವುದನ್ನು ಈ ರಾಷ್ಟ್ರದ ಮೊದಲ ರಾಷ್ಟ್ರಪತಿಯವರಾದ ಡಾ॥ಬಾಬು ರಾಜೇಂದ್ರ ಪ್ರಸಾದ್ ರವರು ಹೇಳಿದ್ದಾರೆ. ಇದರ ಜೊತೆಗೆ ಇನ್ನೊಂದು ಮಾತನ್ನು ಕೂಡ ಹೇಳುತ್ತಾರೆ. ಮಹಾತ್ಮ ಗಾಂಧೀಜಿ ಮತ್ತು ಡಾ॥ ಬಿ.ಆರ್.ಅಂಬೇಡ್ಕರ್‌ರವರ ಮಧ್ಯೆ ತಾತ್ವಿಕ ಭಿನ್ನಾಭಿಪ್ರಯಗಳಿದ್ದರೂ ಕೂಡ ಭಾರತ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಬೇಕೆಂಬ ಆಶಯ ಗಾಂಧೀಜಿಯವರಿಗೆ ಇತ್ತು. ಅದೇ ರೀತಿ ಡಾ॥ ಬಿ.ಆರ್.ಅಂಬೇಡ್ಕರ್‌ರವರಿಗೂ ಕೂಡ ಮಹಾತ್ಮ ಗಾಂಧೀಜಿಯವರ ಚಿಂತನೆಗಳನ್ನು ರಾಜ್ಯ ನಿರ್ದೇಶಕ ತತ್ವಗಳ ಮುಖಾಂತರ ಅವರ ಆಶಯಗಳನ್ನು ಜಾರಿಗೊಳಿಸುವ ಪ್ರಯತ್ನವನ್ನು ಡಾ॥ ಬಿ.ಆರ್.ಅಂಬೇಡ್ಕರ್‌ರವರು ಪ್ರಾಮಾಣಿಕವಾಗಿ ಮಾಡಿದ್ದರು. ಸಿದ್ಧಾಂತಗಳು ಬೇರೆ ಬೇರೆ ಇದ್ದರೂ ಕೂಡ ಅವರು ತಮ್ಮ ಕೆಲಸದಲ್ಲಿ ತೊಡಗಿಸಿಕೊಂಡು ಮಹಾತ್ಮ ಗಾಂಧೀಜಿಯವರ ಆಶಯವನ್ನು ಪ್ರತಿಬಿಂಬಿಸಿ ಮಾಡಲು ಪ್ರಯತ್ನ ಮಾಡಿದರು. ಆದರೆ ಡಾ॥ ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಮಹಾತ್ಮ ಗಾಂಧೀಜಿಯವರಿಗೆ ತಾತ್ವಿಕ ಭಿನ್ನಾಭಿಪ್ರಾಯಗಳು ಇದ್ದರೂ ಕೂಡ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದು ಸರಿಯಾಗಿದೆಯೆಂದು ಸ್ವತಃ ಮಹಾತ್ಮ ಗಾಂಧೀಜಿಯವರೇ, ಆ ಕಾಲದಲ್ಲಿ ಒಪ್ಪಿಕೊಂಡರು. ನೀವೆಲ್ಲರೂ ಇದನ್ನೆಲ್ಲಾ ಓದಬೇಕು. ಅವರು ಹೇಳಿರತಕ್ಕಂಥದ್ದು ಬಹಳ ಸೊಗಸಾಗಿದೆ. ಆದರೆ, ಮಹಾಭಾರತದಲ್ಲಿ ಶುಕ್ರ ನೀತಿಯು 'ರಾಜನಾದವನು ಎಷ್ಟೇ ಬುದ್ಧಿವಂತನಾದರು ತನ್ನ ಅಭಿಪ್ರಾಯಕ್ಕೆ ಅಂಟಿಕೊಂಡಿರಬಾರದು. ಮಂತ್ರಿ ಮಂಡಲದ ಸಲಹೆಯನ್ನು ಪಡೆದು, ಅದರ ಬೆಳಕಿನಲ್ಲಿ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳಬೇಕು' ಎಂದು ಹೇಳಲಾಗಿದೆ. ಇದನ್ನು ನಾವು ಮಂತ್ರಾಲೋಚನೆ ಎಂದು ಕರೆಯುತ್ತೇವೆ. ಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ, ಆ ಸಂಬಂಧ ವಿಚಾರದ ಬಗ್ಗೆ ರಾಜ್ಯದ ಜನರ ಅನುಕೂಲವಾಗಿ ನಿರ್ಧಾರ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಶುಕ್ರ ನೀತಿಯಲ್ಲಿ ನಾವು ಓದಿಕೊಂಡು ಬರುತ್ತಿದ್ದೇವೆ. ನಾನು ಒಂದು ವಿಚಾರವನ್ನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ಬಯಸುತ್ತೇನೆ. ಮಾರ್ಚ್ 8ನೇ ತಾರೀಖಿನಂದು ಮಹಿಳಾ ದಿನಾಚಾರಣೆ ಆಚರಣೆ ಮಾಡಿದೆವು. ಆ ಮಹಿಳಾ ದಿನಾಚಾರಣೆ ಅಂಗವಾಗಿ ಭಾರತ ದೇಶದಲ್ಲಿ ವಿಶೇಷವಾಗಿ, ಇಡೀ ವಿಶ್ವದಲ್ಲಿ ಮಹಿಳೆಯರಿಗೆ ಹೆಚ್ಚಿನ ಗೌರವನ್ನು ಕೊಡಬೇಕು ಮತ್ತು ಅವರಿಗೆ ಹೆಚ್ಚಿನ ಅವಕಾಶಗಳನ್ನು ಕೊಡಬೇಕು. ಡಾ॥ ತೇಜಸ್ವಿನಿಗೌಡ ರವರು ನಮಗೆ ಗೌರವ ಬೇಡ, ನಮಗೆ ಅವಕಾಶ ಕೊಡಿ. ನಾವು ನಿಮ್ಮನ್ನು ಮೀರಿಸಿ ಮುಂದಕ್ಕೆ ಹೋಗುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

**ಡಾ॥ವೈ.ಎ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೆಣ್ಣು ಮಕ್ಕಳಿಗೆ ಹೆಚ್ಚಿನ ಅವಕಾಶ ಕೊಡಬೇಕು. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇಡೀ world is driven by women power. ಬೆಂಗಳೂರು ವಿಮಾನ ನಿಲ್ದಾಣದಲ್ಲಿ entire fire exitinguisher wing ನಲ್ಲಿ ಮಹಿಳೆಯರು ಇದ್ದಾರೆ. ಮಹಿಳಾ ದಿನಾಚರಣೆ ದಿನ ಎಲ್ಲಾ ಪೈಲೆಟ್‌ಗಳು ಎಲ್ಲಾ ಸಿಬ್ಬಂದಿ ವರ್ಗದವರು ಮಹಿಳೆಯರೇ ಇದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಅಷ್ಟೇ ಏಕೆ ನಮ್ಮ ತಾಯಿಯವರು ಕೂಡ ಹೆಣ್ಣು.

**ಡಾ॥ ವೈ.ಎ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಸುನಿತಾ ವಿಲಿಯಮ್ಸ್‌ನಿಂದ ಹಿಡಿದು ಕಲ್ಪನಾ ಚಾವ್ಲವರೆಗೂ, ಇವರೆಲ್ಲರೂ ಮಹಿಳೆಯರೆ. ಆದರೆ, ಆ ಕಾಲದಲ್ಲಿ ನಮ್ಮ ಸಂವಿಧಾನ ರಚನಾ ಸಮಿತಿಯ ಕರಡು ಪ್ರತಿಗೆ ಸುಚೇತ ಕೃಪಲಾನಿ, ಸರೋಜಿನಿ ನಾಯ್ಡು, ವಿಜಯಲಕ್ಷ್ಮೀ ಪಂಡಿತ್, ರಾಜ್‌ಕುಮಾರಿ ಅಮೃತ್ ಕೌರ್, ಅನ್ನಾ ಮೆಹತಾ ಬೇಗಂ, ಅಜಾದ್ ರಸೂಲ್, ಮಾಲತಿ ಚೌಧುರಿ, ಕಮಲ ಚೌಧುರಿ, ಲೀಲಾ ರಾಯ, ಅನ್ನೀ ಮಸ್ಕೆರೆನ್ಸ್, ಪೂರ್ಣಿಮ ಬ್ಯಾನರ್ಜಿ, ಈ ಎಲ್ಲಾ ಹೆಣ್ಣು ಮಕ್ಕಳು ಸಹಿ ಹಾಕಿದ್ದಾರೆ. ಸಂವಿಧಾನ ರಚನೆ ಮಾಡುವಾಗ ಅವರೊಂದಿಗೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಅವರು ಯಾರನ್ನು ಬಿಟ್ಟಿಲ್ಲ. ಎಲ್ಲರನ್ನೂ ಕ್ರೋಢೀಕರಿಸಿ ಸಮಚಿತ್ತದಿಂದ, ಸಮಭಾವದಿಂದ, ಸಮಾನ ಮನಸ್ಸಿನಿಂದ ವಿಶೇಷವಾಗಿ ಬಹಳ ದೂರದೃಷ್ಟಿಯಿಂದ ಈ ಭಾರತ ದೇಶ ಸೂಪರ್ ಪವರ್ ಆಗಬೇಕು. ಈ ಸೂಪರ್ ಪವರ್ ಆಗಬೇಕಾದರೆ, ಇಲ್ಲಿರುವ ಜನಸಂಖ್ಯೆ ಅದರ ಆಧಾರಸ್ಥಂಭಗಳಾಗಬೇಕು. ಅಸ್ಪೃಶ್ಯ ಜನಾಂಗದವರಿಗೆ ಸಮಾನ ಅವಕಾಶ ದೊರಕಿಸಿಕೊಡಬೇಕು. ಆ ಜನರನ್ನು ತಯಾರು ಮಾಡಬೇಕು. ವಿಶ್ವದ ಎಲ್ಲಾ ಕಡೆ ಈ technology ಅನ್ನು export ಮಾಡಬೇಕೆಂದು ಆಗಿನ ಕಾಲದ ಡಾ॥ಬಿ.ಆರ್.ಅಂಬೇಡ್ಕರ್ ರವರ ಆದಿಯಾಗಿ, ಎಲ್ಲರಿಗೂ ಮನಸ್ಸಿನಲ್ಲಿರುವುದು ಇವತ್ತಿನ ದಿವಸ ನಮಗೆ ಕಾಣಿಸುತ್ತಿದೆ.

**ಡಾ॥ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಪಾಕಿಸ್ತಾನದಲ್ಲಿ ಬೆನಜ಼ಿರ್ ಬುಟ್ಟೋರವರು ಪ್ರಧಾನಿಯಾದರು. ಸಿರಿಮಾವೋ ಭಂಡಾರ ನಾಯ್ಕೆಯವರು ಶ್ರೀಲಂಕಾ ದೇಶದಲ್ಲಿ ಪ್ರಧಾನಿಯಾಗಿದ್ದರು. ಶ್ರೀಮತಿ ಇಂದಿರಾಗಾಂಧಿಯವರು ಸುಧೀರ್ಘ ಅವಧಿಗೆ ನಮ್ಮ ದೇಶಕ್ಕೆ ಪ್ರಧಾನಮಂತ್ರಿಯಾಗಿದ್ದರು. ಇದರ ನಡುವೆ ಶ್ರೀಮತಿ ಮಾಯಾವತಿಯವರು ಇರಬಹುದು, ಶ್ರೀಮತಿ ಮಮತಾ ಬ್ಯಾನರ್ಜಿಯವರು ಇರಬಹುದು, ಶ್ರೀಮತಿ ಸುಷ್ಮಾ ಸ್ವರಾಜ್ ರವರು ಇರಬಹುದು, ಶ್ರೀಮತಿ ಜಯಲಲಿತಾ ರವರು ಇರಬಹುದು ಇವರೆಲ್ಲಾ ಅಸಾಧ್ಯತೆಗಳ ನಡುವೆ ಪುರುಷರ ಜೊತೆ ಸಮಾನವಾಗಿ ಹೋರಾಟ ಮಾಡಿ ಪಕ್ಷಗಳನ್ನು ಕಟ್ಟಿ ಅಧಿಕಾರಕ್ಕೆ ಬಂದಂಥವರು. ಪ್ರಜಾಪ್ರಭುತ್ವದಲ್ಲಿ ಹಾಗೆಯೇ ಚಾನ್ಸ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಮತ್ತೆ ನಾನು ಆ ರಿಯಾಯಿತಿಯನ್ನು ಕೂಡ ಕೇಳುವುದಿಲ್ಲ. ಬೇರೆಯರು ಅದನ್ನು ಒಪ್ಪುತ್ತಾರೊ, ಬಿಡುತ್ತಾರೊ ಗೊತ್ತಿಲ್ಲ. ರಾಜಕಾರಣಕ್ಕೆ ಬಂದ ಮೇಲೆ ನಾವು ಕೂಡ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ದುಡಿಯಬೇಕು. ಜನಪ್ರತಿನಿಧಿಗಳಾಗಿ capacity and efficiency ಇದೆಯೆಂದು prove ಮಾಡಬೇಕು. ನಾನು ಇನ್ನೊಂದು ವಿಚಾರವನ್ನು ಉಲ್ಲೇಖ ಮಾಡುತ್ತೇನೆ. ಅರುಣ ಶಾನ್‌ಭಾಗ್ ರವರ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದರು. ಆ ವಿಚಾರದ ಬಗ್ಗೆ ಹೇಳುವುದನ್ನು ಮರೆತೆ. ಅರುಣ ಶಾನ್‌ಭಾಗ್ ರವರು ಶುಶ್ರೂಷೆ ಮಾಡತಕ್ಕಂಥ ಶ್ರೇಷ್ಠ ಸೇವೆಗೆ ಸಮರ್ಪಣೆ ಮಾಡಿಕೊಂಡಂಥವರು ಒಂದು ದಿನ ಅತ್ಯಾಚಾರಕ್ಕೆ ಒಳಗಾಗುತ್ತಾರೆ. ಕಿಡಿಗೇಡಿಗಳು ಅವರ ಕುತ್ತಿಗೆಗೆ ಚೈನ್ ಬಿಗಿದಾಗ, ಉಸಿರಾಟ ನಿಂತು ಆಮ್ಲಜನಕ ಸರಬರಾಜು ಕಡಿಮೆಯಾಗಿ, brain dead ಆಗುತ್ತೆ. ಅವರು ಅನೇಕ ವರ್ಷಗಳ ಕಾಲ ಕೋಮಾಗೆ ಹೋಗಿದ್ದರು. ಇನ್ಯಾವತ್ತಿಗೂ ವಾಪಸ್ಸು ಬರುವುದಿಲ್ಲ, ಆಕೆ ಬದುಕುವುದಿಲ್ಲವೆಂದು ಮೆಡಿಕಲ್ ರಿಪೋರ್ಟ್ ಹೇಳುತ್ತದೆ. ನಮ್ಮ ಸಂವಿಧಾನದಲ್ಲಿ ಎಥಿಕ್ಸ್ ಯಾವ ರೀತಿ ಇದೆಯೆಂದರೆ, 'Right to life', ನೀನು ಜೀವವನ್ನು ಅಂತ್ಯಗೊಳಿಸುವುದಕ್ಕೆ ಆಗುವುದಿಲ್ಲ, ಆತ್ಮಹತ್ಯೆ ಮಾಡಿಕೊಳ್ಳುವುದು ಯಾವ ರೀತಿ ತಪ್ಪಾಗುತ್ತದೆಯೋ ಅದೇ ರೀತಿ ಸಮಾಜದಲ್ಲಿ ದಯಾಮರಣ ಕೊಟ್ಟರೆ, Use ಗಿಂತ misuse ಜಾಸ್ತಿ ಆಗುತ್ತದೆಂದು ದಯಾಮರಣಕ್ಕೆ ಅನುಮತಿ ಕೊಟ್ಟಿಲ್ಲ. ದಯಾಮರಣದ ಬಗ್ಗೆ ಹೃತಿಕ್‌ರೋಷನ್ ಮತ್ತು ಐಶ್ವರ್ಯ ರೈರವರ ಒಂದು ಹಿಂದಿ ಸಿನಿಮಾ ಬಂದಿದೆ. ಅದರ ಟೈಟಲ್ ನನಗೆ ಮರೆತುಹೋಯಿತು. ವಯೋವೃದ್ಧ ತಂದೆ-ತಾಯಿಯನ್ನು ತೀವ್ರ ಕಾಯಿಲೆಗಳಿಗೆ ಒಳಗಾದಂತಹವರನ್ನು ಸಮಾಜ ಕಾಪಾಡಬೇಕು ಎಂಬ ಬದ್ಧತೆಯಿಂದ, ಕಾನೂನಿನ ರಕ್ಷಣೆ ಮತ್ತು ಸಂವಿಧಾನದ ರಕ್ಷಣೆ ಇಲ್ಲದಿದ್ದರೆ, misuse ಆಗುತ್ತದೆ ಎನ್ನತಕ್ಕಂಥ ಭಯದಿಂದ ದಯಾಮರಣದ ಕಾನೂನಿಗೆ ತಿದ್ದುಪಡಿಯನ್ನು ತರುತ್ತಾರೆ. The spirt of the Constitution is so high. ಈ ಸಂದರ್ಭದಲ್ಲಿ ನಾವೆಲ್ಲರೂ ಅದಕ್ಕೆ ಸೆಲ್ಯೂಟ್ ಕೊಡಬೇಕಾಗುತ್ತದೆ ಎಂದು ನನಗೆ ಅನಿಸುತ್ತದೆ. ಧನ್ಯವಾದಗಳು.

**ಡಾ॥ ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿ ಕೇಳಿ ಮಾತನಾಡುತ್ತಿದ್ದೇನೆ. ಬಹಳ ಮುಖ್ಯವಾಗಿ ಭಾರತದ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾದ ಡಾ॥ ಬಿ.ಆರ್.ಅಂಬೇಡ್ಕರ್‌ರವರು ಸಾಮಾಜಿಕ ನ್ಯಾಯಕ್ಕೆ, ಕಾನೂನಿನ ಚೌಕಟ್ಟು ರೂಪಿಸುವುದರಲ್ಲಿ ಬಹಳ ಮಹತ್ವ ನೀಡಿದರು. ಒಂದಷ್ಟು ಹೋರಾಟ ಕೂಡ ಆಯಿತು. ಆ ಹೋರಾಟಗಳಿಗೆ ಕಾನೂನಿನ ಪರಿಮಿತಿ ಸಿಕ್ಕಿರಲಿಲ್ಲ. ಈ ಸಂವಿಧಾನದ ಮುಖಾಂತರ ಕಾನೂನು ಪರಿಮಿತಿ ಸಿಕ್ಕಿತು. ಬಹಳ ಮುಖ್ಯವಾಗಿ ಐದಾರು ಅಂಶಗಳನ್ನು ನಾವೆಲ್ಲರೂ ಗಮನಿಸಬೇಕಾಗುತ್ತದೆ. ಮ್ಯಾಗ್ನ ಕಾರ್ಟಾದವರು ಸಂವಿಧಾನ ರಚನಾ ಸಮಿತಿ ಬೇಕು ಎಂದು ಮೊದಲು ಹೇಳಿದವರು. ಮೋತಿಲಾಲ್ ನೆಹರು ರವರ ಕಾಲದಲ್ಲಿ ಅದು ಒಂದು ಸಂವಿಧಾನ ರಚನಾ ಸಮಿತಿಯನ್ನು ರಚಿಸಲಾಗಿತ್ತು. ಆದರೆ, ಅದು ಜಾರಿಗೆ ಬರಲಿಲ್ಲ. ಇದೆಲ್ಲಾ ಪೇಪರ್‌ನಲ್ಲಿ ಬಂದಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮೋತಿಲಾಲ್ ನೆಹರು ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿತ್ತು, ಅದು 'ನೆಹರು ರವರ ವರದಿ' ಎಂದು ಖ್ಯಾತಿ ಪಡೆಯಿತು. ಆದರೆ ಬ್ರಿಟಿಷ್‌ನವರು ಆ ವರದಿನ್ನು ಒಪ್ಪಿಕೊಂಡು ಜಾರಿಯಾಗಲಿಲ್ಲ. ಅದು ಅಲ್ಲಿಗೆ ನಿಂತುಹೋಯಿತು.

**ಡಾ॥ವೈ.ಎ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಮೇಲೆ ಮಾನ್ಯ ಸಿ.ಎಂ.ಲಿಂಗಪ್ಪ ನವರು ಬಿ.ಎನ್.ರಾವ್‌ರವರ ಬಗ್ಗೆ ಉಲ್ಲೇಖ ಮಾಡಬೇಕೆಂದು ಹೇಳಿದರು.

**ಶ್ರೀ ಸಿ.ಎಂ.ಲಿಂಗಪ್ಪ(ನಾಮ ನಿರ್ದೇಶಿತರು):–** ಅವರ ಹೆಸರು ಬಿ.ಎನ್.ರಾವ್ ಅಲ್ಲ. ಬಿ.ನರಸಿಂಗರಾವ್.

**ಡಾ॥ ವೈ.ಎ.ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಹಿರಿಯ ಸದಸ್ಯರು ಇದ್ದರೆ, ಎಷ್ಟು ಚೆನ್ನಾಗಿ ಇರುತ್ತದೆ. ಮಾನ್ಯ ಸಿ.ಎಂ.ಲಿಂಗಪ್ಪನವರು ಮಾನ್ಯ ರಾವ್ ಅವರ ತಂದೆಯ ಹೆಸರನ್ನು ಕೂಡ ಹೇಳಿಬಿಟ್ಟರು. ಮಗನ ಹೆಸರನ್ನು ಕೂಡ ಹೇಳಿದರು. ಅದನ್ನೇ ನಾವು maturity ಮತ್ತು ಅನುಭವ ಎಂದು ಹೇಳುವುದು. ಆ ಅನುಭವಕ್ಕೆ ಸರಿಸಮಾನವಾದ ವಿದ್ಯೆ ಯಾವುದೂ ಇಲ್ಲ. ಅದಕ್ಕೆ ನನಗೆ ಬಹಳ ಸಂತೋಷವಾಯಿತು. ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ರಾಜ್ಯಶಾಸ್ತ್ರದ ಉಪನ್ಯಾಸಕರಾಗಿದ್ದವರು, ಹಿರಿಯ ಸದಸ್ಯರಾದ ಮಾನ್ಯ ಸಿ.ಎಂ.ಲಿಂಗಪ್ಪನವರು ರಾಜ್ಯಶಾಸ್ತ್ರದ ವಿದ್ಯಾರ್ಥಿಯಾಗಿದ್ದಾರೆ. ಡಾ॥ತೇಜಸ್ವಿನಿ ಗೌಡರವರು ಎಂ.ಎ., ಪಿಹೆಚ್.ಡಿ., ಪಡೆದವರಾಗಿದ್ದಾರೆ. ನಿಮ್ಮಗಳ ಮಧ್ಯದಲ್ಲಿ ಕುಳಿತುಕೊಂಡಿರುವ ನಾನು ಹೇಗೆ ಮಾತನಾಡುತ್ತೇನೋ ಎಂದು ಬೆಳಗ್ಗೆಯಿಂದ ಭಯ ಆಗುತ್ತಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಡಾ॥ವೈ.ಎ.ನಾರಾಯಣ ಸ್ವಾಮಿಯವರು ಕೂಡ ಪಿಹೆಚ್.ಡಿ., ಮಾಡಿದ್ದಾರೆ.

**ಡಾ॥ ವೈ.ಎ.ನಾರಾಯಣ ಸ್ವಾಮಿ:–** ನಾನು ನೀರಾವರಿ ವಿಷಯದಲ್ಲಿ ಪಿಹೆಚ್.ಡಿ., ಮಾಡಿದ್ದೇನೆ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಡಾ॥ ತೇಜಸ್ವಿನಿಗೌಡ ಮತ್ತು ಡಾ॥ ವೈ.ಎ.ನಾರಾಯಣ ಸ್ವಾಮಿ ಇವರಿಬ್ಬರೂ ಡಾಕ್ಟರೇಟ್ ಪಡೆದಿದಾರೆ. ಇವರಿಬ್ಬರ ಪಕ್ಕದಲ್ಲಿ ಕುಳಿತಿದ್ದೇನೆ. ಏನೂ ಓದದೇ ಇರತಕ್ಕಂಥ ನಾನು ಭಯಪಡಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಶ್ರೀ ಕಾಮರಾಜ ನಾಡರ್ ರವರು ಏನೂ ಓದಿರಲಿಲ್ಲ, ಆದರೆ, ಈ ದೇಶದ ಶ್ರೇಷ್ಠ ಮುತ್ಸದ್ಧಿಯಾಗಿದ್ದರು. ಹಾಗಾಗಿ, ಮಾನ್ಯ ಆಯನೂರು ಮಂಜುನಾಥ್‌ರವರ ಅನುಭವವೇ ಒಂದು ದೊಡ್ಡ ವಿಶ್ವವಿದ್ಯಾಲಯವೆಂದು ನಾವು ಭಾವಿಸುತ್ತೇವೆ.

**(ಮುಂದು)**

**(317)11–3–2020/3.50/ಎಂ.ಎಂ–ಜಿ.ಆರ್**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ನಾರಾಯಣಸ್ವಾಮಿಯವರೇ, ಈ ರಾಜ್ಯದಲ್ಲಿ ನಾಲ್ಕೂ ಸದನಗಳನ್ನು ಕಂಡಂತಹವರು 2–3 ಜನರು. ವಿಧಾನಸಭೆ, ವಿಧಾನ ಪರಿಷತ್ತು, ಲೋಕಸಭೆ ಮತ್ತು ರಾಜ್ಯಸಭೆ. ಇವತ್ತು ಮಾನ್ಯ ಆಯನೂರು ಮಂಜುನಾಥರವರು ಇಲ್ಲಿರುವುದು ನಮ್ಮ ಸೌಭಾಗ್ಯವಾಗಿದೆ. ಅವರು ವಿಧಾನಸಭೆ, ಲೋಕಸಭೆ, ರಾಜ್ಯಸಭೆ ಮತ್ತು ಈಗ ವಿಧಾನ ಪರಿಷತ್ತಿನಲ್ಲಿ ಇದ್ದಾರೆ. ಇಡೀ ರಾಜ್ಯದಲ್ಲಿ 2–3 ಜನರು ಮಾತ್ರ ಈ ರೀತಿಯವರಿದ್ದಾರೆ. ಅವರಿಗೆ ಯಾವ ಡಿಗ್ರಿ, ಡಾಕ್ಟರೇಟ್ ಪದವಿ ಬೇಕು?

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು)**

**ಶ್ರೀ ಎಸ್.ಆರ್. ಪಾಟೀಲ್:–** ಈ ಸದನದ ಘನತೆಯನ್ನು ಹೆಚ್ಚಿಸಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:–** ಶ್ರೀ ಡಿ.ಬಿ. ಚಂದ್ರೇಗೌಡ. . .

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಇದನ್ನು ಒಪ್ಪಿಕೊಳ್ಳುತ್ತಾರೆ ಅಂದುಕೊಂಡಿದ್ದೇನೆ, ತುರ್ತು ಪರಿಸ್ಥಿತಿ ಹೇರಿದರೂ Article 20, 21 and 32 of the Constitution will not be abandoned.

**ಶ್ರೀ ಐವನ್ ಡಿ'ಸೋಜಾ:–** ಹೌದು.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, they will be alive at the time of emergency also.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್. ಭೋಜೇಗೌಡ:–** ಅದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ನಮ್ಮ ಸಂವಿಧಾನದಲ್ಲಿ writ of mandamus ಮುಂತಾದವುಗಳ ಮುಖಾಂತರ ಅದನ್ನು restore ಮಾಡಿದ್ದಾರೆ ಅದಕ್ಕೆ ರಕ್ಷಣೆ ಕೊಟ್ಟಿದ್ದಾರೆ. ಅದು ನಮ್ಮ ಸಂವಿಧಾನ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, Hon'ble Member is right. ಮಾನ್ಯ ಕಾನೂನು ಸಚಿವರಾದ ಜೆ.ಮಾಧುಸ್ವಾಮಿಯವರು ನಿನ್ನೆ ಇದರ ಮುನ್ನಡಿಯನ್ನು ಓದುತ್ತಾ ಒಂದು ಮಾತು ಹೇಳಿದರು. *Winston Churchill* ರವರು ಈ ದೇಶಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಚರ್ಚೆಯಾದಾಗ ನಾನು ಅವರು ಹೇಳಿದ ಭಾಷೆಯನ್ನು ಬಳಸುವುದಕ್ಕೆ ಹೋಗುವುದಿಲ್ಲ. ಆದರೆ ಭಾರತೀಯರು ಇದನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಇದೆಯೇ ಎನ್ನುವ ಅರ್ಥದಲ್ಲಿ ಹೇಳಿದರು. *They themselves will come and surrender before us,* ನಾವು ವಾಪಸ್ ಕೊಟ್ಟುಬಿಡುತ್ತೇವೆ ಎನ್ನುವ ಮಟ್ಟಕ್ಕೆ ಮಾತನಾಡಿದರು. 70 ವರ್ಷವಾದ ಮೇಲೆ ಅವರು ಹೇಳಿದ ಮಾತಿನಲ್ಲಿ ಎಲ್ಲೋ ಒಂದು ಕಡೆ ಈಗ ಆಗುತ್ತಿರುವ ವಿದ್ಯಮಾನಗಳು ಬಹುಶಃ ಮೊದಲೇ ಅವರಿಗೆ ಆ ಮುನ್ಸೂಚನೆ ಸಿಕ್ಕಿತ್ತಾ ಎನ್ನುವ ಅನುಮಾನ ನನಗೆ ಬರುತ್ತಿದೆ. 70 ವರ್ಷ ಆಯಿತು. 10 ವರ್ಷಕ್ಕೆ ಮೀಸಲಾತಿ ಕೊಟ್ಟೆವು, ಏಳು ಸಲ ಮುಂದಕ್ಕೆ ಹಾಕಿದೆವು, ಈಗ 70 ವರ್ಷವಾಯಿತು. ಇಲ್ಲಿ ಮೀಸಲಾತಿಗೆ ನಾವ್ಯಾರೂ ಇಲ್ಲಿ ವಿರೋಧವಿಲ್ಲ. ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ತೂಗಿದಾಗ, ಒಂದೇ ಸವಲತ್ತನ್ನು ತೆಗೆದುಕೊಂಡಾಗ, ಸಮತೋಲಿತ ಸಮಾಜವಾಗಿ ಪರಿವರ್ತನೆಯಾಗುತ್ತದೆ ಎನ್ನುವ ಆಶಯದೊಂದಿಗೆ ಅವತ್ತು ಮೀಸಲಾತಿಯನ್ನು ಕೊಟ್ಟಿದ್ದರು *as a rule of this country, after the Constitution came into existence.* ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾವು ಎಲ್ಲಿದ್ದೇವೆ? ನಾವು ನಿನ್ನೆ ಸಂವಿಧಾನದ ಬಗ್ಗೆ ಚರ್ಚೆ ಮಾಡಬೇಕಾದರೆ, ಸುಳ್ಳಿನ ಕಂತೆ ಹೇಳಿಸಿದ್ದೇವೆ ಎಂದು ಹೇಳುತ್ತಿದ್ದರು. ನಾನು ನೇರವಾಗಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲೋ ಒಂದು ಕಡೆ ಬೇಲಿಯೇ ಎದ್ದು ಹೊಲ ಮೇಯಬಾರದು. ಬೇಲಿಯೇ ಎದ್ದು ಹೊಲ ಮೇಯ್ದರೆ, ಕಳ್ಳನ ಕೈಗೆ ಕೀಲಿ ಕೊಟ್ಟಂತಾಗುತ್ತದೆ. ರಾಜಧರ್ಮ ಪಾಲನೆ ಮಾಡುವ ಮನೋಭಿಲಾಷೆ ಹೇಗಿರಬೇಕೆಂದರೆ, ಹೃದಯ ವೈಶಾಲ್ಯತೆ ಇರಬೇಕು, ಮನಸ್ಸು ಸಮತೋಲಿತವಾಗಿರಬೇಕು, ಪ್ರೀತಿ ಉಕ್ಕಿ ಬರಬೇಕು, ಎಲ್ಲಾ ಜನರನ್ನೂ ಸಮಾನವಾದ ಕಣ್ಣಿನಿಂದ ನೋಡುವ ಧರ್ಮ ಪರಿಪಾಲನೆ ರಾಜನಿಗಿರಬೇಕು. ಆಗ ಮಾತ್ರ ರಾಜ್ಯ ರಾಮರಾಜ್ಯವಾಗಿ ಪರಿವರ್ತನೆಯಾಗುತ್ತದೆ ಎನ್ನುವ ಕಲ್ಪನೆ ಮಹಾತ್ಮ ಗಾಂಧಿಯವರದ್ದಾಗಿತ್ತು ಎನ್ನುವುದು ನನ್ನ ಭಾವನೆ. ಸ್ವಾತಂತ್ರ್ಯ ಬಂದ ಮೇಲೆ ನಾವು ವೋಟ್ ಬ್ಯಾಂಕ್ ರಾಜಕಾರಣಕ್ಕೆ ಬಲಿಯಾಗಿ ಈ ಗುಂಪು, ಆ ಗುಂಪು ಎಂದು ಚರ್ಚೆಯಾಯಿತು, ಅದನ್ನು ಸ್ನೇಹಿತರು ಹೇಳುತ್ತಿದ್ದರು. ಮಾನ್ಯ ಲೆಹರ್ ಸಿಂಗ್‌ರವರು ವ್ಯಾಜ್ಯಗಳನ್ನು ಮಕ್ಕಳಲ್ಲೇ ಶುರು ಮಾಡಿಬಿಡುತ್ತೇವೆ ಎಂದು ಹೇಳುತ್ತಿದ್ದರು. ಆ ಜಾತಿಗೆ ಆ ಹಾಸ್ಟೆಲ್, ಈ ಜಾತಿಗೆ ಈ ಹಾಸ್ಟೆಲ್, ಈ ಜಾತಿಯ ಮಕ್ಕಳು ಮಾತ್ರ ಉಚಿತ ಟೂರ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೋಗಬೇಕು, ಬೇರೆ ಜಾತಿಯ ಮಕ್ಕಳು ಉಚಿತ ಟೂರ್ ಹೋಗಬೇಕಾಗಿಲ್ಲ ಈ ಮಕ್ಕಳಿಗೆ ಮಾತ್ರ ಉಚಿತ ಶಿಕ್ಷಣ, ಆ ಮಕ್ಕಳಿಗೆ ಉಚಿತ ಶಿಕ್ಷಣ ಇಲ್ಲ. *There is right to education upto fourteen years.* 14 ವರ್ಷದವರೆಗೆ ಎಲ್ಲರಿಗೂ ಉಚಿತ ಶಿಕ್ಷಣ ಇದೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, *as per Article 21A of the Constitution, that right is there.*

**ಡಾ: ವೈ.ಎ. ನಾರಾಯಣಸ್ವಾಮಿ:–** ಹೌದು. *Article 21A of the Constitution defines that there shall be free education to all upto fourteenth year.* ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು ಅವರ ಜಾತಿಯ ಬಗ್ಗೆ ಮಾತನಾಡುವುದು, ನಾನು ನನ್ನ ಜಾತಿ ಬಗ್ಗೆ ಮಾತನಾಡುತ್ತೇನೆ. ಮಾನ್ಯ ಶ್ರೀಕಂಠೇಗೌಡರು ಅವರ ಜಾತಿ ಬಗ್ಗೆ ಮಾತನಾಡುವುದು, ಶ್ರೀ ಎಸ್.ಆರ್. ಪಾಟೀಲರು ಅವರ ಜಾತಿ ಬಗ್ಗೆ ಮಾತನಾಡುವುದು. ಬಸವಣ್ಣನವರ 12ನೇ ಶತಮಾನದ ಅನುಭವ ಮಂಟಪದ ಬಗ್ಗೆ ನಾವು ಮಾತನಾಡುತ್ತೇವೆ. ವಚನ ಸಾಹಿತ್ಯದ ಬಗ್ಗೆ ಮಾತನಾಡುತ್ತೇವೆ, ಕ್ರಾಂತಿಕಾರಿ ಯೋಜನೆಗಳ ಬಗ್ಗೆ ಮಾತನಾಡುತ್ತೇವೆ. ಆಗಿನ ಕಾಲದಲ್ಲಿಯೇ ಹೆಣ್ಣುಮಕ್ಕಳಿಗೆ ಅಧಿಕಾರ ಕೊಡಬೇಕೆಂದು ಹೇಳಿರುವುದರ ಬಗ್ಗೆಯೂ ನಾವು ಮಾತನಾಡುತ್ತೇವೆ. ಆದರೆ ಏನೂ ಮಾಡಲಿಲ್ಲ, ಮಾಡಿದ್ದೇವೆ ಆದರೆ ನಿರೀಕ್ಷಿತ ಮಟ್ಟದಲ್ಲಿ ಮಾಡಲಿಲ್ಲ. ಏನೂ ಮಾಡಲಿಲ್ಲ ಎಂದರೆ ನನಗೀಗ "ಏನ್ರೀ ಹೀಗೆ ಹೇಳುತ್ತೀರಿ" ಎಂದು ಬೈಯುತ್ತಾರೆ. ಉಪ ಮುಖ್ಯಮಂತ್ರಿಯವರಾದ ಶ್ರೀ ಗೋವಿಂದ ಕಾರಜೋಳರವರು ಬೆಳಿಗ್ಗೆ ಹೇಳಿದರು, ಹಾಗಾದರೆ ನಾವೇನು ಬೆಳೆದಿಲ್ಲವೇ? ಆಗ ಶೇ. 30ರಷ್ಟು ಸಾಕ್ಷರತೆ ಪ್ರಮಾಣ ಇತ್ತು, ಇವತ್ತು ಶೇ.75 ರಷ್ಟು ಆಗಿಲ್ಲವೇ? ಆಗಿದೆ, ಇಲ್ಲವೆಂದು ಹೇಳಿಲ್ಲ. ಆದರೆ 70 ವರ್ಷಗಳು *too long a period.* ಬಹಳ ದೀರ್ಘಕಾಲ 70 ವರ್ಷಗಳಾದರೂ ಇನ್ನೂ *hundred per cent literacy* ತರುವುದಕ್ಕೆ ಆಗಲಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ):–** ಮಾನ್ಯ ಸಭಾಪತಿಯವರೇ, 70 ವರ್ಷವಾದರೂ ಕೂಡ ಮೀಸಲಾತಿ ವ್ಯವಸ್ಥೆಯನ್ನು ತಂದರೂ ಕೂಡ ನಾವು ಗುರಿ ಮುಟ್ಟಲಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಯಾವಾಗ ಗುರಿ ಮುಟ್ಟುತ್ತೇವೆ ಎನ್ನುವುದನ್ನು ಕೇಳಲ್ಪಟ್ಟೆ. ಡಾ: ಬಾಬು ಜಗಜೀವನ ರಾಂರವರು ಈ ದೇಶದ ರೈಲ್ವೆ ಮಂತ್ರಿಗಳಾಗಿದ್ದರು. ಅಗ ಪ್ರಥಮ ಬಾರಿಗೆ ದೇಶದಲ್ಲಿ *in-service reservation* ತರುತ್ತಾರೆ. ಸೇವೆಯಲ್ಲಿ ಮೀಸಲಾತಿ ಕೊಟ್ಟ ಮೇಲೆ ಒಬ್ಬರು ಕೋರ್ಟ್‌ಗೆ ಹೋಗುತ್ತಾರೆ, ಅವರ ಹೆಸರು ಹೇಳುವುದು ಬೇಡ. ಕೋರ್ಟ್‌ಗೆ ಹೋಗಿ ಏನು ಹೇಳುತ್ತಾರೆಂದರೆ, ಕೆಳ ವರ್ಗದ ಜನರಿಗೆ ಮೀಸಲಾತಿ ಕೊಟ್ಟು ರೈಲ್ವೆ ಡ್ರೈವರ್ ಮಾಡಿದ್ದರಿಂದ ಅಪಘಾತಗಳು ಜಾಸ್ತಿಯಾಗುತ್ತವೆ ಎಂದು ಹೇಳುತ್ತಾರೆ. ಆಗ ಸುಪ್ರೀಂ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳಾಗಿ ಶ್ರೀ ಕೃಷ್ಣ ಅಯ್ಯರ್‌ರವರು ಇರುತ್ತಾರೆ, ಅವರು ಮೀಸಲಾತಿ ವಿರುದ್ಧ ಯಾರು ಕೋರ್ಟಿಗೆ ಬಂದಿದ್ದರು ಅವರನ್ನು ಪ್ರಶ್ನೆ ಮಾಡುತ್ತಾರೆ, ಈ ದೇಶದಲ್ಲಿ ಕೆಳವರ್ಗದ ಜನರಿಗೆ ಮೀಸಲಾತಿ ಕೊಡುವುದರಿಂದ ಅಪಘಾತಗಳು ಜಾಸ್ತಿಯಾಗುತ್ತದೆಯೇ? ಮೀಸಲಾತಿ ಕೊಡದೇ ಇದ್ದರೆ ಅಪಘಾತಗಳು *long leave* ಮೇಲೆ ಹೋಗುತ್ತವೇನೂ? ಎಂದು ಕೇಳುತ್ತಾರೆ. ಇದರ ಅರ್ಥ ಏನೆಂದರೆ, ಮೀಸಲಾತಿ ವ್ಯವಸ್ಥೆಯನ್ನು ಜಾರಿಗೆ ತಂದಂದಿನಿಂದ ಇವತ್ತಿನವರೆಗೂ ನಮ್ಮ ಮನಸ್ಥಿತಿ ಸರಿ ಇಲ್ಲ. ಮೀಸಲಾತಿಯನ್ನು ಜಾರಿಗೊಳಿಸುವಂತಹವರ ಮನಸ್ಥಿತಿ ಸರಿಯಿಲ್ಲ. ಹೀಗಾಗಿ ಅನುಷ್ಠಾನದಲ್ಲಿ ವ್ಯತ್ಯಾಸವಾಯಿತು. ಮೀಸಲಾತಿ ವಿರುದ್ಧ ಕೋರ್ಟ್‌ಗೆ ಹೋಗುತ್ತಾರೆ, ಇವತ್ತು ಕೂಡ ಹೋಗುತ್ತಿದ್ದಾರೆ. ಸದನದಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ. ಮೊನ್ನೆ ದಿವಸ ಈ ಮನೆ ಮತ್ತು ಆ ಮನೆ ಎರಡರಲ್ಲೂ ಸುಳ್ಳು ಜಾತಿ ಪ್ರಮಾಣಪತ್ರದ ಬಗ್ಗೆ ಚರ್ಚೆ ಮಾಡಿದ್ದೇವೆ. ಏನಾಗಿದೆ ಎಂದರೆ, ಮೀಸಲಾತಿ ಕೇವಲ ಕಾಗದದಲ್ಲಿ ಇರಬಾರದು. ಅನುಷ್ಠಾನ ನೂರಕ್ಕೆ ನೂರರಷ್ಟು ಆಗಿದ್ದರೆ; ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಲೋಕಸಭೆಯಲ್ಲಿ ಸಂವಿಧಾನವನ್ನು ಮಂಡನೆ ಮಾಡಿದಾಗ ಅವರ ಆಸೆ ಏನಿತ್ತು ಎಂದರೆ, ಹತ್ತು ವರ್ಷದಲ್ಲಿ ಈ ದೇಶದಲ್ಲಿರತಕ್ಕಂತಹ ದೀನದಲಿತರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮೇಲೆ ಬರಬೇಕು ಎನ್ನುವ ಆಸೆ ಇತ್ತು. ಅದಕ್ಕಾಗಿ ಹತ್ತು ವರ್ಷಕ್ಕೆ ಸೀಮಿತ ಮಾಡಿದರು. ಹತ್ತು ವರ್ಷಕ್ಕೆ ಆಗದೇ ಹೋದ ಕಾರಣಕ್ಕಾಗಿ, ಅನುಷ್ಠಾನವನ್ನು ಸರಿಯಾಗಿ ಮಾಡದೇ ಹೋದ ಕಾರಣಕ್ಕಾಗಿ; ಯಾರು ಅವರು ಇವರು ಎಂದು ಹೇಳುವಂಥದ್ದಲ್ಲ; 70 ವರ್ಷ ಆಡಳಿತ ಮಾಡತಕ್ಕಂತಹವರೆಲ್ಲರೂ ಜವಾಬ್ದಾರರು. ಹೀಗಾಗಿ ನಾವು ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಆಸೆಯಾಗಿರಬಹುದು, ಮಹಾತ್ಮ ಗಾಂಧಿಯವರ ಆಸೆಯಾಗಿರಬಹುದು ಈ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದಂತಹ ಎಲ್ಲಾ ಮಹಾತ್ಮರ ಆಸೆಯಾಗಿರಬಹುದು, 70 ವರ್ಷವಾದರೂ ಆಸೆಯನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗಲಿಲ್ಲ. ಬರೀ 70 ವರ್ಷವಲ್ಲ, 900 ವರ್ಷದಿಂದ ಬಸವಣ್ಣನವರು ಹೇಳಿದಂತಹ ಆಸೆಯನ್ನು ಕೂಡ ನಾವು ಅನುಷ್ಠಾನಗೊಳಿಸುವುದಕ್ಕೆ ಆಗಲಿಲ್ಲ. ಏಕೆಂದರೆ, ಬೆಳಿಗ್ಗೆ ಸಹೋದರಿ ಡಾ: ತೇಜಸ್ವಿನಿಯವರು ಮಾತನಾಡುವಂತಹ ಸಂದರ್ಭದಲ್ಲಿ ನಾನು *interfere* ಆಗಬಾರದು ಎಂದು ಬಿಟ್ಟೆ. ತಾವು ಅನೈತಿಕತೆಯಿಂದ ಹುಟ್ಟಿದಂತಹ ಮಗುವಿನ ಬಗ್ಗೆ ಮಾತನಾಡಿದರು. ಶ್ರೀ ಬಸವಣ್ಣನವರಿಗೆ ಅನೈತಿಕತೆಯಿಂದ ಹುಟ್ಟಿದಂತಹ ಮಗುವಿನ ಬಗ್ಗೆ ಎಂತಹ ಕಲ್ಪನೆ ಇತ್ತು ಎಂದರೆ, ಬಸವಣ್ಣನವರು ತಮ್ಮ ವಚನದಲ್ಲಿ ಒಂದು ಕಡೆ ಹೇಳುತ್ತಾರೆ, "ಅಪ್ಪ ಶಿವಶರಣ ಮಾದ್ಹಾರ ಚನ್ನಯ್ಯನ ಮನೆಯ ದಾಸನ ಮಗನು ಕಕ್ಕಯ್ಯನ ಮನೆ ದಾಸಿ ಮಗಳು ಈರ್ವರು ಕೂಡಿ ಹೊಲದೊಳು ಬೆರಣಿಗೆ ಹೋದಾಗ ಸಂಗವ ಮಾಡಿ ಅವರಿಗೆ ಹುಟ್ಟಿದ ಮಗನೇ ನಾನು ಕೂಡಲ ಸಂಗಮನಾಥನ ಸಾಕ್ಷಿಯಾಗಿ ಹೇಳುತ್ತೇನೆ" ಎಂದು ಹೇಳುತ್ತಾರೆ. ಸಾಮಾಜಿಕ ಕಳಕಳಿ, ಕಾಳಜಿ ಅಂತಹದ್ದು ಇತ್ತು ಎಂದರೆ, ಅನೈತಿಕತೆಯಿಂದ ಹುಟ್ಟಿದಂತಹ ಮಗನನ್ನು ತಮಗೆ ಹೋಲಿಸಿಕೊಂಡರು. ಚನ್ನಯ್ಯನ ಮನೆ ದಾಸನ ಮಗನು ಕಕ್ಕಯ್ಯನ ಮನೆ ದಾಸಿಯ ಮಗಳು ಇಬ್ಬರೂ ಕೂಡ ಹೊಲದಲ್ಲಿ ಕುರುಳನ್ನು ಆರಿಸುವುದಕ್ಕೆ; ಬೆರಣಿ ಎಂದರೆ, ಉತ್ತರ ಕರ್ನಾಟಕ ಭಾಗದ ಭಾಷೆಯಲ್ಲಿ ಕುರುಳು ಆರಿಸಲಿಕ್ಕೆ ಹೋಗುವುದು. ಅದಕ್ಕೆ ಅವರಿಗೆ ಹುಟ್ಟಿದ ಮಗನೇ ನಾನು ಎಂದು ಹೇಳುತ್ತಾರೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಉತ್ತರ ಕರ್ನಾಟಕದಲ್ಲಿ ಬೆರಣಿಗೆ 'ಕುರುಳು' ಎಂದು ಹೇಳುತ್ತೇವೆ. ಸಗಣಿಯನ್ನು ದಂಡಿಯಿಂದ ಬಡಿದು ಮಾಡುವುದು. ಅವರಿಗೆ ಹುಟ್ಟಿದ ಮಗ ಎಂದು ತಮ್ಮನ್ನು ತಾವು ಹೋಲಿಸಿಕೊಂಡರು.

(ಮುಂದು)

(318) 11-03-2020/ 04-00/ ಕೆಹೆಚ್-ಜಿಆರ್
**ಶ್ರೀ ಗೋವಿಂದ ಎಂ. ಕಾರಜೋಳ (ಮುಂದು):**

ಸಮಾಜದಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ ಎನ್ನುವಂತಹ ವಿಚಾರವನ್ನು ಬಸವಣ್ಣನವರು ಅರಿತಿದ್ದರು. ಆ ರೀತಿಯ ಮನಸ್ಥಿತಿ ನಮಗೆ ಇದೆಯೇ, ಮಾನ್ಯ ತೇಜಸ್ವಿನಿ ಗೌಡರವರು ಮಾತನಾಡುವಂತಹ ಸಂದರ್ಭದಲ್ಲಿ ಅಕ್ಕ ಮಹಾದೇವಿಯವರ ಬಗ್ಗೆ ಉಲ್ಲೇಖ ಮಾಡಿದರು. ಅವರು ಮಾತನಾಡುವುದಕ್ಕೆ ಸಮಯ ಕಡಿಮೆ ಇರುತ್ತದೆ, ಅದನ್ನು ನಾನು ಹಾಳು ಮಾಡಬಾರದು ಎಂಬ ಕಾರಣಕ್ಕೆ ನಾನು ಮಧ್ಯಪ್ರವೇಶ ಮಾಡುವುದಿಲ್ಲ. ಅಷ್ಟೇ ಅಲ್ಲದೇ, ಅಲ್ಲಮಪ್ರಭುದೇವರ ಅಧ್ಯಕ್ಷತೆಯಲ್ಲಿ ಇರುವಂತಹ ಅನುಭವ ಮಂಟಪದಲ್ಲಿ 770 ಜನರಲ್ಲಿ 87 ಮಹಿಳೆಯರು ಪೀಠಾಧಿಪತಿಗಳಾಗಿದ್ದರು. ಸೂಳೆ ಸಂಕವ್ವ, ಕಸ ಗುಡಿಸುವಂತಹ ಸತ್ಯಕ್ಕ, ಮುಕ್ತಾಯಕ್ಕ, ಅಕ್ಕ ಮಹಾದೇವಿ ಇಂತಹವರು ಅಷ್ಟೇ ಅಲ್ಲದೇ ಬಸವಣ್ಣನವರ ಧರ್ಮಪತ್ನಿ ಗಂಗಾಬಿಕೆ ಮತ್ತು ನೀಲಾಂಬಿಕೆ ಇವರುಗಳು ಸಹ ಅಲ್ಲಿದ್ದರು. ಬಸವಣ್ಣನವರು 900 ವರ್ಷಗಳ ಹಿಂದೆ 87 ಮಹಿಳೆಯರಿಗೆ ಅಂದಿನ ಕಾಲದಲ್ಲಿ ಮೀಸಲಾತಿಗಾಗಿ ಶ್ರಮ ಪಟ್ಟಿದ್ದರು, ನಾವು ಇವತ್ತಿನ ದಿವಸ ಮಹಿಳಾ ಮೀಸಲಾತಿಗಾಗಿ ಸೆಣಸಾಡುತ್ತಿದ್ದೇವೆ. ಅದಕ್ಕೆ ನಾವು ಕೇವಲ ಭಾಷಣವನ್ನು ಮಾತ್ರ ಮಾಡುತ್ತೇವೆ. ನಾನು ಮಧ್ಯೆ ಮಧ್ಯೆ ಎದ್ದು ಏಕೆ ಮಾತನಾಡುವುದಿಲ್ಲವೆಂದರೆ, ನಾವೆಲ್ಲರೂ ಈಗ ಭಾಷಣಕ್ಕಾಗಿಯೇ ಸೀಮಿತವಾಗಿಬಿಟ್ಟಿದ್ದೇವೆ. ಭಾಷಣವನ್ನು ಬಿಟ್ಟು ನಾವು ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರೆ, ಮಾನ್ಯ ಬಸವಣ್ಣನವರು ಬಯಸಿದ್ದಂತಹ ಸುಂದರ ಸಮಾಜ ನಿರ್ಮಾಣವಾಗುತ್ತದೆ. ಮಹಾತ್ಮ ಗಾಂಧಿಯವರ ಆಸೆಯೂ ಸಹ ಈಡೇರುತ್ತದೆ, ಡಾ॥ ಅಂಬೇಡ್ಕರ್‌ರವರು ಜೀವನಪರ್ಯಂತ ಹೋರಾಟ ಮಾಡಿರುವ ಪರಿಣಾಮ ನಾವು ಏನಾದರೂ ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಮುಂದುವರಿಸಿಕೊಂಡು ಅದೇ ದಿಕ್ಕಿನಲ್ಲಿ ನಾವು ಸಹ ಪ್ರಯತ್ನ ಮಾಡಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳರವರು ಬಹಳ ಚೆನ್ನಾಗಿ ವಿವರಣೆಯನ್ನು ಕೊಟ್ಟಿದ್ದಾರೆ. ಬಸವಣ್ಣನವರು 900 ವರ್ಷಗಳ ಹಿಂದೆ ಬಹು ದೊಡ್ಡ ಜಾತಿ ಮತ್ತು ವರ್ಗ ರಹಿತ ಸಮಾಜವನ್ನು ನಿರ್ಮಾಣ ಮಾಡಬೇಕು. ಸಮ ಸಮಾಜ ನಿರ್ಮಾಣ ಮಾಡಬೇಕು. ಇದರ ಜೊತೆಗೆ ಬಹು ದೊಡ್ಡ ಸಾಮಾಜಿಕ ಕ್ರಾಂತಿ ಮಾಡಿದ ಅಣ್ಣ ಬಸವಣ್ಣನವರ ವಿಚಾರವಾಗಿ, illegitimate child ಬಗ್ಗೆ ಅವರು ಹೇಳಿದರು. 'ಮಾದರ ಚೆನ್ನಯ್ಯನ ಮನೆಯ ದಾಸನ ಮಗ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಡೋರ ಕಕ್ಕಯ್ಯನ ಮನೆಯ ದಾಸಿಯ ಮಗಳು, ಈರ್ವರು ಕೂಡಿ ಹೊಲದೊಳು ಬೆರಣಿಗೆ ಹೋದಾಗ ಅವರ ಸಹಯೋಗದಿಂದ ನಾನು ಹುಟ್ಟಿದ್ದೇನೆ". ಎಂದು ತನ್ನ ಗುರುತನ್ನು ಹೇಳುತ್ತಾನೆ. 12ನೇ ಶತಮಾನದಲ್ಲಿ 900 ವರ್ಷಗಳಿಂದ ಬಸವಾದಿ ಶರಣರು ಕಂಡಂತಹ ಕನಸು; ಇವತ್ತು ಮಾನ್ಯ ಗೋವಿಂದ ಎಂ.ಕಾರಜೋಳರವರು ಬಹಳ ಸಮೀಪದಿಂದ ವಚನ ಸಾಹಿತ್ಯವನ್ನು ಬಹಳ ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ವಚನ ಸಾಹಿತ್ಯ ಮತ್ತು ಭಾರತದ ಸಂವಿಧಾನ ಈ ಎರಡನ್ನೂ ಜೊತೆ ಜೊತೆಯಾಗಿ ಇಟ್ಟು ಅಧ್ಯಯನ ಮಾಡಿದರೆ ಪೂರ್ಣವಿರಾಮ ಮತ್ತು ಅಲ್ಪ ವಿರಾಮಕ್ಕೂ ಕೂಡ ವ್ಯತ್ಯಾಸ ಇಲ್ಲ. ಎರಡು ಒಂದೇ ಇದೆ. ಮೀಸಲಾತಿಯ ಬಗ್ಗೆ ಇನ್ನು ಬಹಳಷ್ಟು ಮಂದಿಗೆ ಅವರು ಹೇಳಿರುವುದು ಸತ್ಯ. ಅದನ್ನು ಸುಳ್ಳು ಎಂದು ಹೇಳುವುದಿಲ್ಲ. ಇವತ್ತಿನ ದಿವಸ ನಮ್ಮ ಸ್ಥಳೀಯ ಸಂಸ್ಥೆಗಳಿಗೆ ಮೀಸಲಾತಿಯನ್ನು ಕೊಟ್ಟಂತಹ ಸಂದರ್ಭದಲ್ಲಿ ಜಿಲ್ಲಾ ಪರಿಷತ್ ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆ ಜಾರಿಗೆ ಬಂದಾಗ 166 ಮಂಡಲಗಳು ಇದ್ದವು. ಅದರಲ್ಲಿ 166 ಮಂಡಲಗಳ ಪ್ರಧಾನರುಗಳು ಕೂಡ ಮೇಲ್ವರ್ಗದವರೇ ಇದ್ದರು. ಮಾನ್ಯ ಬಸವ ಲಿಂಗಪ್ಪನವರು ಒಂದು ಸಮಿತಿಯನ್ನು ಮಾಡಿ ಎಲ್ಲರನ್ನೂ ಕರೆದಾಗ ಮೀಸಲಾತಿ ಏಕೆ ಮಾಡಬೇಕೆಂದು ಕೇಳಿದಾಗ ಅವರು ಒಂದು ಮಾತನ್ನು ಹೇಳಿದರು. ಅಖಂಡ ವಿಜಾಪುರ ಜಿಲ್ಲೆಯಲ್ಲಿ 166 ಪಂಚಾಯಿತಿ ಮಂಡಲಗಳು ಇದ್ದು, ಅದರಲ್ಲಿ ಒಬ್ಬರಾದರೂ ಹಿಂದುಳಿದವರು, ಮಹಿಳೆಯರು, ಶೋಷಿತರು ಇದ್ದಾರೆಯೇ ಎಂದು ಕೇಳಿದಾಗ, ಅದರಲ್ಲಿ 166 ಮಂಡಲಗಳ ಪಟ್ಟಿಯನ್ನು ನೋಡಿದಾಗ ಒಬ್ಬರೂ ಕೂಡ ಇರಲಿಲ್ಲ. ಇದನ್ನೆಲ್ಲಾ ಗಮನಿಸಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಅಧ್ಯಕ್ಷ, ಉಪಾಧ್ಯಕ್ಷ, ಪಂಚಾಯಿತಿ ಸದಸ್ಯರುಗಳಿಗೆ ಅದರಲ್ಲಿಯೂ ಮಹಿಳೆಯರಿಗೆ ವಿಶೇಷವಾಗಿ ಮೀಸಲಾತಿಯನ್ನು ನೀಡಿದಾಗ ಅದನ್ನು ಸಹಿಸಲಾದರೆ ದೊಡ್ಡ ವ್ಯಕ್ತಿಗಳು ಉಚ್ಚ ನ್ಯಾಯಾಲಯಕ್ಕೆ ಹೋದರು. ಅವರ ಹೆಸರುಗಳನ್ನು ಹೇಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಮನಸ್ಥಿತಿ ಬಹಳಷ್ಟು ಬದಲಾವಣೆ ಆಗಬೇಕು.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಒಂದು ವಚನದ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಗೋವಿಂದ ಕಾರಜೋಳರವರು ಹೇಳಿದ ಹಾಗೆ ಮಾನಸೀಕತೆ ಬದಲಾವಣೆ ಆಗಬೇಕು. ಸದನದಲ್ಲಿ 12ನೇ ಶತಮಾನದ ಬಗ್ಗೆ ಪ್ರಸ್ತಾಪ ಆಗುತ್ತಿದೆ. ಮಾತೆ ಅಕ್ಕಮಹಾದೇವಿಯವರು ವಸ್ತ್ರ ತ್ಯಾಗ ಮಾಡಿ, ಅನುಭವ ಮಂಟಪಕ್ಕೆ ಬಂದು ಸೇರಿದಾಗ; ಇದರ ಬಗ್ಗೆ ನಾನು ದೀರ್ಘವಾದ ವಿವರಣೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ಆ ಅನುಭವ ಮಂಟಪದಲ್ಲಿ ಇದ್ದಂತಹವರು ಅಕ್ಕಮಹಾದೇವಿಯವರನ್ನು ಕೇಳುತ್ತಾರೆ. ನೀನು ಈ ರೀತಿ ವಿವಸ್ತ್ರಳಾಗಿ ವಸ್ತ್ರ ತ್ಯಾಗ ಮಾಡಿ ಬಂದಿದ್ದೀಯಾ, ಈ ಸಮಾಜದಲ್ಲಿ ನಿನ್ನನ್ನು ನೀನು ಹೇಗೆ ರಕ್ಷಣೆ ಮಾಡಿಕೊಳ್ಳುತ್ತೀಯಾ ಎನ್ನುವಂತಹ ಅರ್ಥದ ಪ್ರಶ್ನೆಯನ್ನು ಕೇಳಿದಾಗ ಅಕ್ಕಮಹಾದೇವಿಯವರು ಹೇಳಿರುವಂತಹ ವಚನ ಈ ರೀತಿ ಇದೆ:

"ವಿಷದ ಹಲ್ಲನ್ನು ಕಿತ್ತು ಹಾವನಾಡಿಸಬಲ್ಲೆವಾದರೆ,
ಸರ್ಪದ ಸಂಗ ಲೇಸಯ್ಯ"

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇದರಲ್ಲಿ ವಿಷದ ಹಲ್ಲುಗಳು ಯಾವುವೆಂದರೆ, ಮನಸ್ಸಿನಲ್ಲಿರುವಂತಹ ದ್ವೇಷ, ಮೋಸ, ವಂಚನೆ, ಮದ–ಮತ್ಸರ, ಮೋಹ; ಇವತ್ತು ಕೂಡ ಅಸ್ಪೃಶ್ಯತೆಯ ವಿಷಯದಲ್ಲಿ ನಾನು ಅದಕ್ಕೆ ಸಮೀಕರಿಸುತ್ತೇನೆ. ಅಸ್ಪೃಶ್ಯತೆ ಇನ್ನೂ ಜೀವಂತ ಇರಬೇಕಾದರೆ ನಾವು ಮಾತನಾಡುವವರ ಮನಸ್ಸಿನಲ್ಲಿ ಇರುವಂತಹ ವಿಷದ ಹಲ್ಲುಗಳು ಇನ್ನೂ ಕಿತ್ತು ಹೋಗಿಲ್ಲ, ಮೊಂಡೂ ಆಗಲಿಲ್ಲ. ಆ ವಿಷದ ಹಲ್ಲುಗಳು ಜಾತಿಯ ಹೆಸರಿನಲ್ಲಿ ಮತ್ತಷ್ಟು ಚೂಪಾಗಿವೆ. 12ನೇ ಶತಮಾನದ ಅಕ್ಕಮಹಾದೇವಿಯವರ ವಚನ ಇವತ್ತು ಕೂಡ ಪ್ರಸ್ತುತವಾಗಿವೆ. ಹಾಗಾಗಿ 12ನೇ ಶತಮಾನದ ವಚನಗಳೇನಿವೆ, ಅವು ಸಮಾಜ ಸುಧಾರಣೆಯ ಯಾವ ಮುಖದಲ್ಲಿ ಬೇಕಾದರೂ ಅನ್ವಯ ಮಾಡಬಹುದಾದಂತಹ ಅದ್ಭುತವಾದಂತಹ ವಾಕ್ಯಪುಂಜಗಳಾಗಿವೆ.

**ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕದಿಂದ ಎಷ್ಟು ಜನ ಭಾಗವಹಿಸಿದ್ದಾರೆ ಎನ್ನುವುದರ ಬಗ್ಗೆ ಬೆಳಗ್ಗೆ ತಾನೇ ಮಾನ್ಯ ಶ್ರೀಕಂಠೇಗೌಡರವರು ಹೇಳಿದರು. ಅದರ ಬಗ್ಗೆ ನಾನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಕೂರ್ಗ್ ಪ್ರಾಂತ್ಯದಿಂದ ಕೊಡಗಿನ ಮಾನ್ಯ ಸಿ.ಎಂ.ಪೂಣಚ್ಚ ಎಂಬುವವರು ಒಬ್ಬರು, ಬಾಂಬೆ ಕರ್ನಾಟಕದಿಂದ ಮಾನ್ಯ ಎಸ್.ನಿಜಲಿಂಗಪ್ಪರವರು ಮತ್ತು ಮಾನ್ಯ ದಿವಾಕರ್‌ರವರು ಇದ್ದರು. ಅಂದರೆ, ಮಾನ್ಯ ಚಂಗಲರಾಯರೆಡ್ಡಿಯವರು, ಮಾನ್ಯ ಸಿದ್ಧಲಿಂಗಯ್ಯನವರು, ಮಾನ್ಯ ಗುರುದೇವ ರೆಡ್ಡಿಯವರು, ಮಾನ್ಯ ಎಸ್.ವಿ.ಕೃಷ್ಣಮೂರ್ತಿ ರಾವ್‌ರವರು, ಮಾನ್ಯ ಹನುಮಂತಯ್ಯನವರು, ಮಾನ್ಯ ಸಿದ್ಧವೀರಪ್ಪನವರು ಮತ್ತು ಕೋಲಾರ ಜಿಲ್ಲೆ ಮಾನ್ಯ ಟಿ.ಚೆನ್ನಯ್ಯನವರು ಇವರುಗಳು ಭಾಗವಹಿಸಿದ್ದರು. ಏಕೆಂದರೆ, ಈ ಭಾರತ ದೇಶದ ಜನರು ಬಹಳ ಮುಗ್ಧರು, ನಮ್ಮಲ್ಲಿ ಎಷ್ಟೋ ಜನ ಮಹಾನುಭಾವರಿದ್ದಾರೆ. ಇವರಿಗೆ ಅಧಿಕಾರ ಇಲ್ಲದೇ ಇದ್ದರೂ ನಮ್ಮಲ್ಲಿ ಮಹಾತ್ಮ ಎಂದು ಎನಿಸಿಕೊಂಡು ಹೋಗಿದ್ದಾರೆ.

ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೇ, ತಮ್ಮ ಬಗ್ಗೆ ಬಹಳ ಪ್ರೀತಿ ಮತ್ತು ಗೌರವ ಇದೆ. ಈ ದೇಶದಲ್ಲಿ ಮಹಾತ್ಮ ಗಾಂಧಿ ಆದ ನಂತರ ನಮ್ಮ ರಾಜ್ಯದಲ್ಲಿಯೇ ಮಾನ್ಯ ಶಾಂತವೇರಿ ಗೋಪಾಲಗೌಡರು ಯಾವುದೇ ಅಧಿಕಾರವನ್ನು ತೆಗೆದುಕೊಳ್ಳಲಿಲ್ಲ. ಇವತ್ತಿನ ದಿವಸ ಅವರ ಬಗ್ಗೆ ಬಹಳ ಗೌರವದಿಂದ ಮಾತನಾಡುತ್ತೇವೆ. ಮಾನ್ಯ ಜಯಪ್ರಕಾಶ್ ನಾರಾಯಣರವರು ಮಂತ್ರಿಯಾಗಿದ್ದರೋ, ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ಇವತ್ತಿಗೂ ಸಹ ಇಡೀ ನಮ್ಮ ದೇಶದಲ್ಲಿ ಇವರ ಬಗ್ಗೆ ಗೌರವ ಇದೆ. ಆದರೆ, ಅಧಿಕಾರದ ಮುಖಾಂತರ ನಾವು ಒಳ್ಳೆಯ ಕೆಲಸವನ್ನು ಮಾಡಬೇಕು. ಅಧಿಕಾರದಿಂದ ಮಾತ್ರ ನಮಗೆ ಗೌರವ ಬರುತ್ತದೆ ಎಂದರೆ, ಅದು ಶುದ್ಧ ತಪ್ಪು ಎಂದು ಅರ್ಥ ಮಾಡಿಕೊಳ್ಳಬೇಕು. ಈ ದೇಶದ ಜನ ಬಹಳ ಮುಗ್ಧರು ಹಾಗೂ ಬಹಳ ಒಳ್ಳೆಯವರು. ಈ ದೇಶದ ಜನರು ಮಾನ್ಯ ಲಾಲ್ ಬಹದ್ದೂರ್ ಶಾಸ್ತ್ರಿಯವರ ಕರೆಗೆ ಒಂದು ದಿನದ ಊಟವನ್ನು ಬಿಡುತ್ತಾರೆ. ಈ ದೇಶದ ಜನರು ಮಾನ್ಯ ನರೇಂದ್ರ ಮೋದಿಯವರ ಕರೆಗೆ ಎರಡು ಕೋಟಿ ರೂಪಾಯಿಗಳ ಗ್ಯಾಸ್ ಸಬ್ಸಿಡಿಯನ್ನು ಬಿಡುತ್ತಾರೆ. ಅಂದರೆ, ಈ ದೇಶದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜನರಿಗೆ ಈ ದೇಶದ ಬಗ್ಗೆ ಬಹಳ ಪ್ರೀತಿ ಇದೆ. ಆದರೆ, rulers are misguiding the common man, we are misguiding the common man. ಚುನಾವಣಾ ವ್ಯವಸ್ಥೆಯ ಬಗ್ಗೆ ಮಾತನಾಡಬೇಕಾದರೆ ಗಂಟೆಗಟ್ಟಲೆ ಅವಕಾಶ ಬೇಕು. ಇಡೀ ಚುನಾವಣಾ ವ್ಯವಸ್ಥೆಯಿಂದ ನಾವೆಲ್ಲಾ ಸೇರಿ ಮತದಾರರನ್ನು ಭ್ರಷ್ಟರನ್ನಾಗಿ ಮಾಡಿದ್ದೇವೆ. ನೀವೆಷ್ಟು ನಾವೆಷ್ಟು ಎನ್ನುವ ಬಗ್ಗೆ ಈ ಸದನದಲ್ಲಿ ಚರ್ಚೆಯಾಗುವುದು ಬೇಡ. ಮಾನ್ಯ ಶ್ರೀಕಂಠೇಗೌಡರವರ ವಿಷಯಕ್ಕೆ ನಾನು ಹೋಗುವುದಿಲ್ಲ. ಈಗ ಹೋದರೆ ಮತ್ತೆ ಗಲಾಟೆಯಾಗುತ್ತದೆ. ಇದರಲ್ಲಿ ಎಲ್ಲರೂ ಸಹ ಸೇರಿದ್ದೇವೆ. ನನ್ನನ್ನು ನಿಮ್ಮನ್ನು ಸೇರಿ ಇಡೀ ವ್ಯವಸ್ಥೆ ಯಾವ ಮಟ್ಟಕ್ಕೆ ಬಂದಿದೆ ಎಂದರೆ . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, . . .

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇರಲಿ, ತಾವು ಎಷ್ಟು ಕೋಟಿ ಖರ್ಚು ಮಾಡಿದ್ದೀರಾ ಎಂದರೆ, 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಎಂ.ಎಲ್.ಎ., ಆದೆ.

**ಸಭಾಪತಿಯವರು:–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ಇನ್ನು 10 ನಿಮಿಷಗಳಲ್ಲಿ ಮಾತನಾಡುವುದನ್ನು ಮುಗಿಸಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೇಗ ಮುಗಿಸುತ್ತೇನೆ. ಚುನಾವಣೆಯಲ್ಲಿ ನೀವು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಾ ಎಂದರೆ, 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ನಾನು 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ. I don't care anybody ಎಂದು ತನಗೆ ತಾನೇ ಹೆಮ್ಮೆಪಡುತ್ತಾರೆ. ಇದರಲ್ಲಿ ನನಗೆ ಖುಷಿಯಾಗುವುದು ಏನು ಗೊತ್ತಾ, ಈ ಸದನದಲ್ಲಿ ನಮ್ಮ ಸಭಾಪತಿಯವರಾದ ಸನ್ಮಾನ್ಯ ಪ್ರತಾಪ ಚಂದ್ರ ಶೆಟ್ಟಿಯವರು ಮತ್ತು ನಮ್ಮ ಸಭಾನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಯಾರಿಗೂ ಒಂದು ಕಾಫಿಯನ್ನು ಕೊಡಿಸದೇ, ಚುನಾವಣೆಯಲ್ಲಿ ಒಂದು ರೂಪಾಯಿಯನ್ನು ಸಹ ಖರ್ಚು ಮಾಡದೇ ಈ ಸದನಕ್ಕೆ ಮೂರು ಬಾರಿ, ನಾಲ್ಕು ಬಾರಿ ಆಯ್ಕೆಯಾಗಿ ಬಂದಿದ್ದಾರೆ ಎಂದರೆ, ಬಹಳ ಹೆಮ್ಮೆ ಆಗುತ್ತದೆ. ಇದಕ್ಕೆ ನಾವೆಲ್ಲರೂ ಸೇರಿ ಚಪ್ಪಾಳೆಯನ್ನು ಹೊಡೆಯಬೇಕು.

**(ಈ ಹಂತದಲ್ಲಿ ಮಾನ್ಯ ಸದಸ್ಯರೆಲ್ಲರೂ ಮೇಜನ್ನು ತಟ್ಟಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಇದಕ್ಕೆ ಸಂಬಂಧಪಟ್ಟಂತೆ ಒಂದು ಉಲ್ಲೇಖ ಮಾಡುವುದೇನೆಂದರೆ, ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು ಬಹಳ

ಉಪಯೋಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಳ್ಳೆಯವರು. ನಮ್ಮ ಅವಿಭಾಜ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾನ್ಯ ಜನಾರ್ಧನ ಪೂಜಾರಿಯವರನ್ನು ಬಿಟ್ಟರೆ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೊಬ್ಬರೇ ಇಷ್ಟು ಒಳ್ಳೆಯ ಮನುಷ್ಯ ಇರುವುದು, ಇವರಿಬ್ಬರೂ double constituency members. ಅವಿರೋಧವಾಗಿ ಗೆಲ್ಲುತ್ತಾರೆ. ಆದರೆ, ಇವತ್ತಿನ ದಿವಸ ಪರಿಸ್ಥಿತಿ ಹೇಗಿದೆ ಎಂದರೆ, ಇವರನ್ನು ಮಂಗಳೂರಿಗೆ ಮಂತ್ರಿಯನ್ನಾಗಿ ಮಾಡುತ್ತಾರೆ ಎಂದರೆ, ಇವರನ್ನು ಮಂತ್ರಿ ಮಾಡಬಾರದು ಎಂದು ಅವರವರೇ ಒಂದು ಪತ್ರವನ್ನು ಕೊಡುತ್ತಾರೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಈಗ ರಾಜಕೀಯ ವಿಚಾರಗಳ ಬಗ್ಗೆ ಮಾತನಾಡುವುದು ಬೇಡ. ತಮಗೆ ಕೈಮುಗಿಯುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ ತಾವು ಕೈಮುಗಿಯಬೇಡಿ. ನಾನು ಮನಸ್ಥಿತಿಯ ಬಗ್ಗೆ ಹೇಳುತ್ತಿದ್ದೇನೆ. ಇರುವ ವಿಚಾರವನ್ನು ಹೇಳುತ್ತಿದ್ದೇನೆ. ಇವರನ್ನು ಮಂತ್ರಿಯಾಗಿ ಮಾಡಬೇಡಿ ಎಂದು ಅಲ್ಲಿರುವ ಜನರು ಒಂದು ಪತ್ರವನ್ನು ಕೊಡುತ್ತಾರೆ.

(ಗೊಂದಲ)

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರೇ ನಾನು ಬಹಳ ಗೌರವವಾಗಿ . . .

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನೀವು ಬರದೇ ಇದ್ದರೆ ನಾನು ಗೆಲ್ಲುವುದಿಲ್ಲ, ಬಂದು ವೋಟ್ ಹಾಕಿ ಎಂದು ಬಿಲ್ಲವರ ಕಾಲನ್ನು ಹಿಡಿದುಕೊಳ್ಳುತ್ತಾರೆ. ನಾನು ಇರುವ ಪರಿಸ್ಥಿತಿಯನ್ನು ಹೇಳಿದ್ದೇನೆ ಅಷ್ಟೇ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರೇ, ನಾನು ಈ ಸದನದಲ್ಲಿ ಇಷ್ಟು ಭ್ರಷ್ಟಾಚಾರ ವ್ಯವಸ್ಥೆಯಲ್ಲಿಯೂ ಸಹ . . .

**ಸಭಾಪತಿಯವರು:–** ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರೇ ಪತ್ರವನ್ನು ಕೊಟ್ಟಿರುವವರು ಯಾರು?

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅದು ಬೇರೆ ವಿಚಾರ. ಈಗ ಬೇಡ ಬಿಡಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಈ ಹಂತದಲ್ಲಿ ಸದನದಲ್ಲಿ ನಗುವಿನ ಅಲೆ ತೇಲಿ ಬಂತು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈಗ ಆ ವಿಚಾರ ಬೇಡ ಬಿಡಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರೇ ತಾವು ಅದರ ಬಗ್ಗೆ ಸ್ವಲ್ಪ ಹೇಳಿ.

(ಮುಂದು)

**(319) 11/03/2020/4:10/ಎಸ್‌ಪಿಆರ್/ಎಂಡಿ**

**ಡಾ|| ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಧುಗಿರಿ ತಾಲ್ಲೂಕಿನಲ್ಲಿ 2007 ನೇ ಇಸ್ವಿಯಲ್ಲಿ ಉಪ ಚುನಾವಣೆ ನಡೆಯಿತು. ಆಗ ಶ್ರೀ ಚೆನ್ನಿಗಪ್ಪ, ಶ್ರೀಮತಿ ಅನಿತಾ ಕುಮಾರಸ್ವಾಮಿ ಹಾಗೂ ಮಾನ್ಯ ರಾಜಣ್ಣರವರುಗಳು ಚುನಾವಣೆಯ ಅಭ್ಯರ್ಥಿಗಳಾಗಿದ್ದರು. ಮತದಾರರನ್ನು ನಾವು ಯಾವ ರೀತಿಯಾಗಿ ತಯಾರು ಮಾಡಿದ್ದೇವೆ ಎಂದರೆ . . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ರಾಜಕಾರಣ ಮಾತನಾಡುವುದಿಲ್ಲವೆಂದು ಹೇಳಿದಿರಿ. ಆಗ ಅವರಿಗೆ ಅವಕಾಶ ನೀಡಲಿಲ್ಲ. ಈಗ ಏಕೆ ಮಾತನಾಡುತ್ತಿದ್ದೀರಿ?

**ಡಾ|| ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ಹೇಳುತ್ತೇನೆ. ಯಾರ ಹೆಸರನ್ನೂ ಹೇಳುವುದಿಲ್ಲ.

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರಿಗೆ ಮಾತನಾಡಲು ಒಂದು ಅವಕಾಶವನ್ನು ನೀಡಬೇಕಾಗಿತ್ತು.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡಿದ್ದಕ್ಕೆ ನಾನು ಮಾತನಾಡಿದ್ದು ಅಷ್ಟೆ. ಆದರೆ, ನಾನು ಮಾತನಾಡಿದ್ದು ರಾಜಕಾರಣವಾಗಿರಲಿಲ್ಲ. ನಾನು ಮಧ್ಯದಲ್ಲಿ ...

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ವಸ್ತುಸ್ಥಿತಿಯನ್ನು ಮಾತನಾಡಿದರು. ಆದರೆ, ಮಾನ್ಯ ನಾರಾಯಣಸ್ವಾಮಿಯವರು ರಾಜಕೀಯ ಮಾತನಾಡುತ್ತಿದ್ದಾರೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಯಾವ ಕಾರಣಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, . . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣಸ್ವಾಮಿಯವರು ರಾಜಕೀಯ ಮಾತನಾಡಬಾರದು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ರಾಜಕೀಯ ಮಾತನಾಡುವುದಿಲ್ಲ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಧುಗಿರಿ ಚುನಾವಣೆ ನಡೆದಿದ್ದು 2008 ನೇ ಇಸ್ವಿಯಲ್ಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆಗಿನ ಚುನಾವಣೆಯಲ್ಲಿ ಯಾವ ರೀತಿಯಾಯಿತೆಂದರೆ, ...

**ಸಭಾಪತಿಯವರು:–** ನಿಮಗೆ ಇನ್ನು ಎಷ್ಟು ಕಾಲಾವಕಾಶ ಬೇಕು?

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನಗೆ 10 ನಿಮಿಷಗಳ ಕಾಲಾವಕಾಶ ಬೇಕು. ಜನರು . . .

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ನಾರಾಯಣ ಸ್ವಾಮಿಯವರೂ ಸಹ ಉಪ ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಅವರು ಯಾವ ರೀತಿಯಾಗಿ ಗೆದ್ದು ಬಂದಿದ್ದಾರೆ ಎನ್ನುವುದನ್ನು ಅವರೇ ಅವರ ಆತ್ಮಕ್ಕೆ ಕೇಳಿಕೊಳ್ಳಲಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಆ ಸಂಗತಿಯ ಬಗ್ಗೆ ಹೇಳುತ್ತಿದ್ದೇನೆ. ನಾನು comment ಮಾಡುವುದಕ್ಕೆ ಹೋಗುವುದಿಲ್ಲ. Comment ಮಾಡಿದರೆ, ಮಾನ್ಯ ಮರಿತಿಬ್ಬೇಗೌಡರ ಬಗ್ಗೆಯೂ ಸಹ ಹೇಳುತ್ತೇನೆ. ಈಗ ಹೇಳುವುದು ಬೇಡ. ಮಾನ್ಯ ಸದಸ್ಯರು ದಯಮಾಡಿ ಸುಮ್ಮನೆ ಕುಳಿತುಕೊಳ್ಳಲಿ. ಆ ಊರಿನಲ್ಲಿ ನಾನೂ ಸಹ ಪ್ರಚಾರ ಮಾಡಲು ಹೋಗಿದ್ದೇನು. ನಾನು ಜನರನ್ನು ದೂಷಿಸುತ್ತಿಲ್ಲ. ಅಲ್ಲಿನ ರಸ್ತೆಯ ತುಂಬಾ ಜನಗಳಿದ್ದರು. ಯಾವುದೇ ಒಂದು ಕಾರು ಬರುವ ವೇಳೆಗೆ, ಅವರು ಯಾವ ಪಕ್ಷದ ಅಭ್ಯರ್ಥಿ ಎಂದು ತಿಳಿದುಕೊಂಡು ಆ ಪಕ್ಷದ ಧ್ವಜಗಳನ್ನು ಹಿಡಿದುಕೊಳ್ಳುತ್ತಾರೆ. ನಂತರದಲ್ಲಿ ಮತ್ತೊಂದು ಪಕ್ಷದ ಕಾರು ಪ್ರಚಾರಕ್ಕಾಗಿ ಬರುತ್ತದೆ. ಆ ಪಕ್ಷಕ್ಕೆ ಸಂಬಂಧಪಟ್ಟ ಧ್ವಜಗಳನ್ನು ಹಿಡಿದುಕೊಳ್ಳುತ್ತಾರೆ. ಅಲ್ಲಿನ ಜನ ಮೂರು ಪಕ್ಷದ ಧ್ವಜಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇಟ್ಟುಕೊಂಡಿರುತ್ತಾರೆ. ಆ ಮಟ್ಟಕ್ಕೆ ವ್ಯವಸ್ಥೆಯು ಜನರನ್ನು ಕೆಡಿಸಿದೆ. ವ್ಯವಸ್ಥೆಯು ಭಾರಿ ಅಧ್ವಾನವಾಗಿಬಿಟ್ಟಿದೆ. ಇದಕ್ಕೆ ನಾವೇ ಕಾರಣರಾಗಿದ್ದೇವೆ ಹೊರತು ಜನರಲ್ಲ. ಮಾನ್ಯ ಸಭಾಪತಿಯವರು ಮತ್ತು ಸಭಾನಾಯಕರು ಹಣ ಖರ್ಚು ಮಾಡದೇ ಯಾವ ರೀತಿಯಾಗಿ ಗೆಲ್ಲಲು ಸಾಧ್ಯ ಎನ್ನುವುದನ್ನು ತೋರಿಸಿ ಕೊಟ್ಟಿದ್ದಾರೆ. ಆದರೆ, ಬಹಳಷ್ಟು ಅಭ್ಯರ್ಥಿಗಳಿಗೆ ಹಣ ಖರ್ಚು ಮಾಡದೇ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲವೆನ್ನುವುದು ಅಷ್ಟೇ ಸತ್ಯವಾಗಿದೆ. ಆದ್ದರಿಂದ ಚುನಾವಣೆ ವ್ಯವಸ್ಥೆಗೆ ನಾವು ಈ ಸದನದ ಮುಖಾಂತರ . . .

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ದಿನಮಾನಗಳಲ್ಲಿ ಇವರಿಬ್ಬರನ್ನು ನಾವು ಹೊಗಳಲೇಬೇಕು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ಕಾರಣಕ್ಕಾಗಿ ಅವರಿಗೆ ಚಪ್ಪಾಳೆ ತಟ್ಟುವಂತೆ ನಾನು ಹೇಳಿದ್ದೇನೆ. ಆದ್ದರಿಂದ ನಾವು ಈ ಚುನಾವಣಾ ಪದ್ಧತಿಯ ಬಗ್ಗೆ ಬಹಳ ಗಂಭೀರವಾದ ಚರ್ಚೆಯನ್ನು ಮಾಡಬೇಕು. ಮತದಾನದ ಪದ್ಧತಿಯನ್ನು ಬದಲಾವಣೆ ಮಾಡುತ್ತೀರೋ? ಆನ್‌ಲೈನ್ ಮತದಾನ ಮಾಡುತ್ತೀರೋ ಅಥವಾ ಮತದಾರರು ಮನೆಯಲ್ಲಿಯೇ ಕುಳಿತುಕೊಂಡು ಮತದಾನ ಮಾಡುವ ವ್ಯವಸ್ಥೆ ಇದೆಯೇ? ಚುನಾವಣಾ ಪ್ರಚಾರದ ಪದ್ಧತಿಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಸರ್ಕಾರದ ಮುಖಾಂತರ ಚುನಾವಣಾ ಪದ್ಧತಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿದೆಯೇ? ಮಾನ್ಯ ಸದಸ್ಯರು ಅಡ್ಡಿಪಡಿಸುವುದು ಬೇಡ. ಅವರಿಗೆ ಅವಕಾಶ ದೊರೆತಾಗ ಮಾತನಾಡಲಿ. ಇಂತಹ ವಿಷಯಗಳನ್ನು ಚರ್ಚೆಗೊಳಪಡಿಸಿ, ಚುನಾವಣಾ ಪದ್ಧತಿಯನ್ನು ತಿಳಿಗೊಳಿಸದೇ ಹೋದರೆ, ರಾಜಕೀಯ ಭ್ರಷ್ಟಾಚಾರ ಕಡಿಮೆಯಾಗುವುದಕ್ಕೆ ಸಾಧ್ಯವಿಲ್ಲ. ರಾಜಕೀಯ ಭ್ರಷ್ಟಾಚಾರ ಯಾವಾಗ ಕಡಿಮೆಯಾಗುವುದಕ್ಕೆ ಸಾಧ್ಯವಿಲ್ಲವೋ ಆಗ ನಾವು ತೆಗೆದುಕೊಂಡ ನಿರ್ಧಾರಗಳು ರಾಜ್ಯದ ಅಭಿವೃದ್ಧಿಗೆ ಮಾರಕವಾಗುತ್ತವೆ. ಈ ಕಾರಣಕ್ಕಾಗಿ ನಮ್ಮ ದೇಶವು ಇನ್ನೂ ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿದೆ. ಸರ್ಕಾರ ಮಾಡುವ ಆಯವ್ಯಯವು ಯಾರ ಪರವಾಗಿರಬೇಕು? ಸಮಾಜದ ಕಟ್ಟ ಕಡೆಯ ಹಾಗೂ ದಟ್ಟ ದರಿದ್ರನ ಅಗತ್ಯಕ್ಕನುಗುಣವಾಗಿ, ರಾಜ್ಯದ ರೈತರ ಬೇಡಿಕೆಗಳಿಗೆ ಅನುಗುಣವಾಗಿ, ಕಾರ್ಮಿಕರ ಕಲ್ಯಾಣಕ್ಕನುಗುಣವಾಗಿ, ವಿದ್ಯಾರ್ಥಿಗಳ ಹಿತರಕ್ಷಣೆಗನುಗುಣವಾಗಿ, ಪದವೀಧರ ನಿರುದ್ಯೋಗಿಗಳ ಜೀವನ ಭದ್ರತೆಗನುಗುಣವಾಗಿ ಆಯವ್ಯಯ ಇರಬೇಕೇ ಹೊರತು ಕಂಪೆನಿಯ ಮಾಲೀಕರ, ಗುತ್ತಿಗೆದಾರರ, ಬಂಡವಾಳ ಶಾಹಿಗಳ ಮತ್ತು ರಾಜಕೀಯ ವ್ಯಕ್ತಿಗಳ ಪರವಾಗಿ ಅಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಆಯವ್ಯಯವು ಮಠಾಧೀಶರ ಪರವಾಗಿಯೂ ಸಹ ಇರಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರಿಗೆ ಮಾತನಾಡಲು ಅವಕಾಶ ದೊರೆತಾಗ ಎಲ್ಲವನ್ನೂ ಹೇಳಲಿ. ನಾನು ಬಿಟ್ಟಿರುವ ಅಂಶಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪಿಸಲು ಅವಕಾಶವಿದೆ. ಹೀಗಾಗಿ ಮಾನ್ಯ ಸದಸ್ಯರು ದಯಮಾಡಿ ಅಡಚಣೆ ಮಾಡಬಾರದು. ಇವತ್ತಿನ ದಿವಸ ರೈತ ಯಾವ ರೀತಿಯ ಗೊಬ್ಬರವನ್ನು ಹಾಕಬೇಕೆನ್ನುವುದನ್ನು ಫ್ಯಾಕ್ಟರಿಯ ಮಾಲೀಕ ಹೇಳುತ್ತಾನೆ. ಇಂತಹ ವಿಷಯಗಳ ಬಗ್ಗೆ ನಾವು ಹೆಚ್ಚು ಗಮನಹರಿಸಿದರೆ ಮಾತ್ರವೇ, ಮಂಡನೆಯಾಗಿರುವ ಆಯವ್ಯಯಕ್ಕೆ ಎಲ್ಲಿಯೋ ಒಂದು ಕಡೆ ಶೇಕಡಾ 70 ರಷ್ಟು ಫಲ ಸಿಗುವುದಕ್ಕೆ ಸಾಧ್ಯವಾಗುತ್ತದೆ. Delivery system close ಆಗಿದೆ. In the entire system, the governance has become zero. ನಾನು ಯಾವುದೇ ಪಕ್ಷದ ಸರ್ಕಾರವನ್ನು ದೂಷಿಸುತ್ತಿಲ್ಲ. Delivery system ಇದ್ದಿದ್ದರೆ, ಅಂಗವಿಕಲರು, ವೃದ್ಧಾಪ್ಯರು, ಬಡವರು ಮಾನ್ಯ ಮುಖ್ಯಮಂತ್ರಿಗಳ ಮನೆಗೆ ಹೋಗುತ್ತಿರಲಿಲ್ಲ. ಮುಖ್ಯಮಂತ್ರಿಗಳ ಮನೆಗೆ ಏಕೆ ಅಷ್ಟೊಂದು ಜನರು ಭೇಟಿ ನೀಡಬೇಕು? ಮುಖ್ಯಮಂತ್ರಿಗಳ ಮನೆಗೆ ಜನತಾ ದರ್ಶನ ಕಾರ್ಯಕ್ರಮಕ್ಕೆ ಬರುತ್ತಾರಲ್ಲ . . .

**ಶ್ರೀ ವಿವೇಕ್‌ರಾವ್ ವಸಂತರಾವ್ ಪಾಟೀಲ್:-** ಮಾನ್ಯ ಸಭಾಪತಿಯವರೇ, 1990 ನೇ ಸಾಲಿನಲ್ಲಿ ನಡೆದ ಚುನಾವಣೆಯನ್ನು ನೋಡಿದವರು ಅಥವಾ ಆ ಚುನಾವಣೆಗಳಲ್ಲಿ ಪ್ರಚಾರ ಮಾಡಿದ ಸುಮಾರು 10-12 ಸದಸ್ಯರುಗಳು ಈ ಸದನದಲ್ಲಿದ್ದಾರೆ. ಆಗ ಶ್ರೀ ಟಿ.ಎನ್.ಶೇಷನ್ ಎಂಬುವವರು ಚುನಾವಣಾ ಆಯುಕ್ತರಾಗಿದ್ದರು. ಅವರ ಅಧಿಕಾರಾವಧಿಯಲ್ಲಿ ಚುನಾವಣೆಗಳು ಯಾವ ರೀತಿಯಾಗಿ ನಡೆಯುತ್ತಿದ್ದವು ಎನ್ನುವುದರ ಬಗ್ಗೆ ಹಿರಿಯ ಸದಸ್ಯರುಗಳು ಬೆಳಕನ್ನು ಚೆಲ್ಲಿದರೆ, ಎಲ್ಲರಿಗೂ ಮಾಹಿತಿ ತಿಳಿಯುತ್ತದೆ ಮತ್ತು ಅನುಕೂಲವಾಗುತ್ತದೆ. ಎಲ್ಲಾ ಉತ್ತರಗಳು ಅಲ್ಲಿ ಸಿಗುತ್ತವೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವುದು ಸರಿಯಾಗಿದೆ. ಶ್ರೀ ಟಿ.ಎನ್.ಶೇಷನ್‌ರವರು 1994 ರಿಂದ 1999 ರ ಅವಧಿಯಲ್ಲಿ ನಡೆದ ಚುನಾವಣೆಗಳ ಸಂದರ್ಭದಲ್ಲಿ ಚುನಾವಣಾ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ್ದರು. ಆಗ ನಾವುಗಳೆಲ್ಲರೂ ಗಡಗಡ ನಡುಗುತ್ತಿದ್ದೆವು. ಈ ದೇಶದ ದುರಂತವೇಂದರೆ, ಅವರ ನಂತರ ಅಂತಹ ಅಧಿಕಾರಿಗಳು ಯಾರೂ ಚುನಾವಣಾ ಸುಧಾರಣಾ ವ್ಯವಸ್ಥೆಯಲ್ಲಿ ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಅಂತಹ ಅಧಿಕಾರಿಗಳು ಅಧಿಕಾರಕ್ಕೆ ಬರಬೇಕು. ಇತ್ತೀಚೆಗೆ ಆ ಅಧಿಕಾರಿಯು ವಿಧಿವಶರಾದರು. ಆದರೆ ಅವರ ಹೆಸರನ್ನು ನಾವು ಇನ್ನೂ ಸಹ ಜ್ಞಾಪಿಸಿಕೊಳ್ಳುತ್ತೇವೆ. ಏಕೆಂದರೆ ಅವರು ಅಂತಹ ಸುಧಾರಣೆಗಳನ್ನು ತಂದರು. ಇದರ ಬಗ್ಗೆ ನಾವು ಚರ್ಚೆಯನ್ನು ಮಾಡುತ್ತಿದ್ದೇವೆ. ಇವತ್ತಿನ ದಿವಸ ಬಹಳ ಪ್ರಮುಖವಾಗಿ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ಸರಿಯಾಗಿ ಕರ್ತವ್ಯ ನಿರ್ವಹಿಸಬೇಕು. ಆದರೆ ಇವುಗಳ ಮಧ್ಯೆ ಬಹಳ ದೊಡ್ಡ ಪ್ರಮಾಣದಲ್ಲಿ ಘರ್ಷಣೆ ನಡೆಯುತ್ತಿದೆ. ನಾನು ನಿಮಗಿಂತ ದೊಡ್ಡವನು, ನೀವು ಅವರಿಗಿಂತ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದೊಡ್ಡವರು ಮತ್ತು ಎಲ್ಲರಿಗಿಂತ ನಾನೇ ದೊಡ್ಡವನು ಎನ್ನುವ ಮನೋಭಾವನೆ ಎಲ್ಲರಲ್ಲಿದೆ. ನ್ಯಾಯಾಂಗವೇ ದೊಡ್ಡದು ಎಂದು ನ್ಯಾಯಾಲಯವು ಹೇಳುತ್ತದೆ. ಅದಕ್ಕಿಂತಲೂ ಶಾಸಕಾಂಗ ದೊಡ್ಡದು ಎಂದು ನಾವು ಇಲ್ಲಿ ಹೇಳುತ್ತೇವೆ. ಸರ್ವೋಚ್ಚ ನ್ಯಾಯಾಲಯಕ್ಕಿಂತ ತಾನು ದೊಡ್ಡವನು ಎಂದು ಸಂಸತ್ತು ಹೇಳುತ್ತದೆ. ಸಂಸತ್ತು ಮಾಡಿದ ಕಾನೂನನ್ನು ಸರ್ವೋಚ್ಚ ನ್ಯಾಯಾಲಯವು ಪರಾಮರ್ಶೆ ಮಾಡುತ್ತದೆ. ಇಂತಹ ಮಟ್ಟದಲ್ಲಿ ಪ್ರತಿಷ್ಠೆಗೆ ನಾವುಗಳೆಲ್ಲರೂ ಜೋತುಬಿದ್ದಿದ್ದೇವೆ. ನಾನು ರಾಜ; ನಾನು ಹೇಳಿದ್ದೇ ನಡೆಯಬೇಕು ಎನ್ನುವ ಮನೋಭಾವನೆ ಇದೆ. ಈ ವಿಚಾರದಲ್ಲಿ ಅಧಿಕಾರಿಗಳು ಅಷ್ಟೇ. ನಮಗೆ ಬೋಧಿಸಲಾಗುವ ಪ್ರತಿಜ್ಞಾ ವಿಧಿಯನ್ನು ನಾನು ಇಲ್ಲಿ ತೆಗೆದುಕೊಂಡು ಬಂದಿದ್ದೇನೆ. ಸಮಯಾವಕಾಶ ನೀಡಿದರೆ, ನಾನು ಅದನ್ನು ಓದುತ್ತೇನೆ. ಮಾನ್ಯ ಸಭಾಪತಿಯವರು ಅದನ್ನು ನಮಗೆ ಬೋಧಿಸುತ್ತಾರೆ. ಅದರಲ್ಲಿ ಸತ್ಯ, ನಿಷ್ಠೆಗೆ ಬದ್ಧರಾಗಿರುತ್ತೇವೆ. ಮಂತ್ರಿಗಳು ಯಾರೂ ಬೇರೆ ವಿಚಾರಕ್ಕೆ ಹೋಗುವುದಿಲ್ಲ; ಗೌಪ್ಯತೆಯನ್ನು ಕಾಪಾಡುತ್ತೇವೆ ಎಂಬುದಾಗಿ ಹೇಳುತ್ತಾರೆ. ಆದರೆ ಇವತ್ತಿನ ದಿವಸ ಏನಾಗುತ್ತಿದೆ? ಯಾವುದೂ ಅನುಷ್ಠಾನಗೊಳ್ಳುತ್ತಿಲ್ಲ. ಆಯಾ ಮಂತ್ರಿಗಳ ಕಛೇರಿಯಲ್ಲಿ ಅದೇ ಜಾತಿಯವರು ಕರ್ತವ್ಯ ನಿರ್ವಹಿಸಬೇಕು. ಇದು ನಮ್ಮ ಅಲಿಖಿತ ಕಾನೂನು ಆಗಿದೆ. ಮಂತ್ರಿಗಳ ಸಂಬಂಧಿಕರೇ ಅವರ ಕಛೇರಿಯಲ್ಲಿರಬೇಕು. ಮತ್ತೊಬ್ಬರು ಅಲ್ಲಿ ಕರ್ತವ್ಯ ನಿರ್ವಹಿಸುವಂತಿಲ್ಲ. ಮಂತ್ರಿಗಳ ಎಲ್ಲಾ ರೀತಿಯ ಸಿಬ್ಬಂದಿಗಳು ಅಂದರೆ, ಅವರ ಆಪ್ತ ಸಹಾಯಕ, ವಿಶೇಷ ಕರ್ತವ್ಯಾಧಿಕಾರಿ, ಚಾಲಕ ಇವರುಗಳೆಲ್ಲರೂ ಅವರ ಜಾತಿಯವರೇ ಆಗಿರಬೇಕು. ಇದಕ್ಕೆ ಕಾರಣವೇನೆಂದರೆ, ರಾಜಕಾರಣಿಗಳು ಸ್ವಾರ್ಥಕ್ಕೆ ಬಲಿಯಾಗಿದ್ದಾರೆ. ಸ್ವಜನ ಪಕ್ಷಪಾತವನ್ನು ಅನುಸರಿಸುತ್ತಿದ್ದೇವೆ. ನಾವು ಧರ್ಮ ರಾಜಕಾರಣ ಮಾಡುತ್ತಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ರಾಜಕಾರಣಿಗಳು ಸ್ವಜನ ಪಕ್ಷಪಾತದ ಜೊತೆಗೆ ಮಂತ್ರಿಗಳ 'ಬಾರಹ್ ಬಾಂಧ್ಗಡಿ' ಹೊರಗಿನವರಿಗೆ ತಿಳಿಯಬಾರದು ಎನ್ನುವ ಉದ್ದೇಶವಿದೆ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಕಾರ್ಯಾಂಗದ ಬಗ್ಗೆ ಹೇಳುವುದಾದರೆ, ನಿನ್ನೆಯ ದಿವಸ ನಾನು ಪದವಿಪೂರ್ವ ಶಿಕ್ಷಣ ಇಲಾಖೆಗೆ ಹೋಗಿದ್ದೆನು. ಅಲ್ಲಿ ಮಾಜಿ ಶಾಸಕ ಶ್ರೀ ಎಂ.ಸಿ.ಮನಗೂಳಿರವರು ಬಂದಿದ್ದರು. ಅವರು ಹಿರಿಯರಾಗಿದ್ದು, ಬಹಳ ವಯಸ್ಸು ಆಗಿದೆ. ಮೊನ್ನೆಯವರೆಗೆ ಅವರು ಮಂತ್ರಿಗಳಾಗಿದ್ದರು. ಆಗ ನಾವು ಅವರನ್ನು ವಿಚಾರಿಸಿದೆ. ಆಗ ಅವರು "ಅಲ್ಲ ಮಾರಾಯ್ರೇ! ಫೋನಿನಲ್ಲಿ ಹೇಳಿ ಕೆಲಸ ಮಾಡಿಸಿಕೊಳ್ಳುವಂತಹ ಕಾಲ ಹೋಗಿ ಬಹಳ ದಿನಗಳಾಗಿವೆ. ಆ ಕಾರಣಕ್ಕಾಗಿ ನಾನೊಬ್ಬನೇ ಬರುತ್ತಿದ್ದೇನೆ" ಎಂಬುದಾಗಿ ನನಗೆ ಹೇಳಿದರು. ಅಂದರೆ ಇದರರ್ಥ ಶಾಸಕರೊಬ್ಬರು ಹತ್ತುತ್ತು ಬಾರಿ ಸರ್ಕಾರಿ ಕಛೇರಿಗಳಿಗೆ ಹೋದರೂ ಸಹ ಯಾವುದೇ ಕೆಲಸಗಳನ್ನು ಅಧಿಕಾರಿಗಳು ಮಾಡುವುದಕ್ಕಾಗುತ್ತಿಲ್ಲ. ಸರ್ಕಾರಿ ಕೆಲಸದಲ್ಲಿ ಅಧಿಕಾರಿಗಳಿಗೂ ಸಹ ಕೆ.ಸಿ.ಎಸ್.ಆರ್. ಎನ್ನುವಂತಹ ಒಂದು ನಿಯಮವಿದೆ. ಅವರು ನ್ಯಾಯಾಂಗಕ್ಕೆ ಹಾಗೂ ನಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವ್ಯವಸ್ಥೆಗೆ ಬದ್ಧರಾಗಿ ಕೆಲಸವನ್ನು ಮಾಡಬೇಕು ಸರಿ. ಆದರೆ, ಯಾರೂ ಸಹ ಅದನ್ನು ಪರಿಪಾಲಿಸುತ್ತಿಲ್ಲ. ಹೀಗಾಗಿ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆಯುವುದನ್ನು ನಾವುಗಳು ಕಲೆತುಕೊಂಡಿದ್ದೇವೆ. ಈ ಕಾರಣದಿಂದಾಗಿ ಇವತ್ತಿನ ದಿವಸ ಈ ಸಂವಿಧಾನದ ವ್ಯವಸ್ಥೆಯ ಬಗ್ಗೆ ಎಲ್ಲರಿಗೂ ಅರಿವನ್ನು ಮೂಡಿಸುವ ಅವಶ್ಯಕತೆ ಇದೆ. ಭ್ರಷ್ಟಾಚಾರ ತೊಲಗಬೇಕಾದರೆ, ಸಂವಿಧಾನದ ಬಗ್ಗೆ ಹೆಚ್ಚು ಅರಿವು ಇರಬೇಕು. ಸಾಮಾನ್ಯವಾಗಿ ಅಧಿಕಾರಿಗಳು ಮಂಗಳೂರಿಗೆ ಕರ್ತವ್ಯದ ಮೇಲೆ ಹೋಗಲು ನಿರಾಕರಿಸುತ್ತಾರೆ. ಅದು ಆರ್.ಟಿ.ಓ., ಉಪ ನೊಂದಣಾಧಿಕಾರಿ ಅಥವಾ ಕಂದಾಯ ಅಧಿಕಾರಿ ಯಾರೆ ಇರಲಿ. ಏಕೆಂದರೆ, ಮಂಗಳೂರಿನ ಜನರು ಬುದ್ಧಿವಂತರಿದ್ದಾರೆ. ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಭ್ರಷ್ಟಾಚಾರಕ್ಕೆ ಒತ್ತಾಯ ಪಡಿಸಿದಾಗ, ಅವರುಗಳು ಎ.ಸಿ.ಬಿ. ಅಥವಾ ಲೋಕಾಯುಕ್ತಕ್ಕೆ ದೂರು ನೀಡುತ್ತಾರೆ. ಹೀಗಾಗಿ ಆ ಜನಗಳ ಸಹವಾಸ ಬೇಡವೆಂದು ಹೇಳುತ್ತಾರೆ. ಆದರೆ, ಶ್ರೀ ಎಸ್.ಆರ್.ಪಾಟೀಲ್‌ರವರು ಪ್ರತಿನಿಧಿಸುವ ಊರುಗಳಿಗೆ ಅಂದರೆ ಉತ್ತರ ಕರ್ನಾಟಕದ ಪ್ರದೇಶಗಳಿಗೆ ಹೋಗಲು ಸಿದ್ಧರಿರುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ದಯಮಾಡಿ ತಪ್ಪು ತಿಳಿದುಕೊಳ್ಳಬಾರದು. ಏಕೆಂದರೆ ಆ ಊರುಗಳಲ್ಲಿ ಆ ರೀತಿಯಾದ ವ್ಯವಸ್ಥೆ ಇದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಮ್ಮನ್ನು ದಡ್ಡರೊಳಗೆ ಸೇರಿಸಿದ್ದಾರೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ನಾನು ತಮಾಷೆಗಾಗಿ ಹೇಳಿದ್ದೇನೆ. With due respect I am quoting your name.

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ದಡ್ಡರಲ್ಲ; ಮುಗ್ಧರು.

**ಶ್ರೀ ಕಾಂತರಾಜ್(ಬಿಎಂಎಲ್):-** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರ ಊರಿಗೆ ಯಾರೂ ಸಹ ಹೋಗುವುದಿಲ್ಲ. ಕೇವಲ ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಭಾಗಕ್ಕೆ ಸರ್ಕಾರಿ ಅಧಿಕಾರಿಗಳು ಮೊದಲು ಹೋಗುತ್ತಾರೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಬಗ್ಗೆ ಯಾರಿಗೆ ತಿಳುವಳಿಕೆ ಇಲ್ಲವೋ ಅಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ರಾಜಕಾರಣಿಗಳು ಜನರನ್ನು ಯಾಮಾರಿಸಿ, ಅವರಿಗೆ ಬೇಕಾದ ಎಲ್ಲಾ ರೀತಿಯ ಬೇಳೆಗಳನ್ನು ಬೇಯಿಸಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಮಂಗಳೂರು, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಯಾರ ಆಟವೂ ನಡೆಯುವುದಿಲ್ಲ. ರಾಜಕಾರಣಿಗಳು ಅಧಿಕಾರವನ್ನು ತಮ್ಮ ಜವಾಬ್ದಾರಿ ಎನ್ನುವುದನ್ನು ಮರೆತಿದ್ದಾರೆ. ಜನರ ಸೇವೆ ಮಾಡುವುದಕ್ಕಾಗಿ ಅಧಿಕಾರ ದೊರೆತಿದೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎನ್ನುವ ಮನೋಭಾವನೆಯನ್ನು ಮರೆತಿದ್ದು, ಅಧಿಕಾರಿಗಳು ಮತ್ತು ರಾಜಕಾರಣಿಗಳಿಬ್ಬರೂ ಸಹ ಮಾಫಿಯಾ ಆಗಿ, ಇವತ್ತಿನ ದಿವಸ ಎಲ್ಲಾ ಯೋಜನೆಗಳನ್ನು ಹಳ್ಳ ಹಿಡಿಸುತ್ತಿದ್ದಾರೆ.

**(ಮುಂದು)**

(320)/11-3-2020/4-20/ಎಲ್ಎಂ/ಎಂಡಿ

**ಡಾ: ವೈ.ಎ.ನಾರಾಯಣ ಸ್ವಾಮಿ**(ಮುಂದು):

ಹೀಗಾಗಿ ಇನ್ನು ದಲಿತ್ತೋದ್ಧಾರಕ ವ್ಯವಸ್ಥೆಯಾಗಲಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅಂಬೇಡ್ಕರ್ ನಿಗಮದಲ್ಲಿ 10 ವರ್ಷಗಳಿಂದ ಯಾರ್ಯಾರಿಗೆ ಸಾಲವನ್ನು ಕೊಟ್ಟಿದ್ದಾರೆ ಎನ್ನುವುದನ್ನು ತೆಗೆದು ನೋಡಿದರೆ ಒಂದೇ ಮನೆಗೆ 5 ಸಾಲವನ್ನು ಕೊಟ್ಟಿದ್ದಾರೆ. ವಸತಿ ಸಚಿವರಾದ ಶ್ರೀ ವಿ.ಸೋಮಣ್ಣನವರು ಇಲ್ಲೆ ಇದ್ದಾರೆ ಅವರೇ ಹೇಳಬೇಕು ಒಂದೇ ಕುಟುಂಬಕ್ಕೆ ಮೂರು ಮನೆಗಳನ್ನು ಕೊಟ್ಟಿದ್ದಾರೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಬಲಾಢ್ಯನಾಗಿರುವವನು ದ್ರಾಷ್ಟ್ಯವನ್ನು ತೋರಿಸಿ, ಬೆದರಿಸಿ ಎಲ್ಲ ಸವಲತ್ತುಗಳನ್ನು ಹೊಡೆದುಕೊಂಡು ಹೋಗುತ್ತಿದ್ದಾರೆ. ಇದು ಆಗಬಾರದು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಪತ್ರಿಕೆಗಳು ಇವತ್ತು ಬಡವರ ಕೈಯಲ್ಲಿ ಇಲ್ಲ. ಬಂಡವಾಳ ಶಾಹಿಗಳ ಕೈಯಲ್ಲಿ ಇದೆ. ಕೋಟ್ಯಾಂತರ ರೂ.ಗಳನ್ನು ಹಾಕಿ ಚಾನೆಲ್ ಪ್ರಾರಂಭ ಮಾಡುತ್ತಾರೆ, ಆ ಚಾನೆಲ್ ಮುಖಾಂತರ ಬರಿ negative, ಕ್ರೈಮ್, ಅತ್ಯಾಚಾರ ಪ್ರಕರಣಗಳನ್ನು, ಕೊಲೆಗಳನ್ನೇ ತೋರಿಸುತ್ತಾರೆ. ಇವುಗಳನ್ನು ತೋರಿಸಿದರೆ ಟಿಆರ್‌ಪಿ ಜಾಸ್ತಿಯಾಗುತ್ತದೆ ಎಂದು ಪತ್ರಿಕಾ ನೀತಿಯನ್ನೆ ಮರೆತು ವ್ಯಾಪಾರದ ಮಾಧ್ಯಮಗಳಾಗಿ ಕೆಲಸ ಮಾಡುತ್ತಿವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಗಳೆ, ಒಂದು correction ಇದೆ. ಎಲ್ಲಾ ಪತ್ರಿಕೆಗಳು ಆ ರೀತಿ ಇಲ್ಲ. ಕೆಲವು ಎಂದು ಹೇಳಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಯಾವ ಚಾನೆಲ್ ಹಾಕಿ ನೋಡಿದರು ಅಲ್ಲಿ ಆ ಚಾನೆಲ್ ಮಾಲೀಕರ ಪರವಾಗಿಯೇ ಸುದ್ದಿಗಳು ಬರುತ್ತಿರುತ್ತವೆ.

**ಡಾ: ತೇಜಸ್ವಿನಿ ಗೌಡ:-** ಇಲ್ಲಿ generalize ಮಾಡುವುದನ್ನು ನಾನು ಒಪ್ಪುವುದಿಲ್ಲ. ಎಲ್ಲಾ field ಗಳಲ್ಲಿ ಕೆಟ್ಟಿರುವ ತರಹ ಸ್ವಲ್ಪ ಭಾಗ ಕೆಟ್ಟಿದೆ. ಎಲ್ಲವು ಅದೇ ರೀತಿ ಇಲ್ಲ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, ನಾನು Print Media ಬಗ್ಗೆ ಮಾತನಾಡಲಿಲ್ಲ. Electronic Media ಬಗ್ಗೆ ಹೇಳುತ್ತಿದ್ದೇನೆ. ನಿನ್ನೆ ಕರೋನಾ ವೈರಸ್ ಬಗ್ಗೆ ವೈಭವಿಕರಿಸುತ್ತಿದ್ದರು. ರಾತ್ರಿ 8ಗಂಟೆಗೆ ಚಾನೆಲ್ ಹಾಕಿ ನೋಡಿದರೆ ಬರಿ ರೌಡಿ ಗ್ಯಾಂಗ್ ಬಗ್ಗೆ, ಕಾಲಿಗೆ ಗುಂಡು ಹೊಡೆದರು, ಅತ್ಯಾಚಾರವಾಗಿದೆ ಇದನ್ನೆ ತೋರಿಸುತ್ತಾರೆ. ಆ ಚಾನೆಲ್ ಮಾಲೀಕರು negative ತೋರಿಸಿ *TRP* (Target Rating Point) ಜಾಸ್ತಿ ಬರುತ್ತದೆ ಎಂದು ಹೇಳುತ್ತಾರಂತೆ. ಪತ್ರಿಕಾ ಪಾವಿತ್ರತ್ಯೆಯನ್ನು ಕಳೆದುಕೊಂಡು ದುಡ್ಡು ಮಾಡಲು ಇವತ್ತು ಬಂದು ನಿಂತಿದೆ.

ಇಡೀ ಶಾಲಾ–ಕಾಲೇಜುಗಳಲ್ಲಿ ಬರೀ ಸಂವಿಧಾನದ ಪೀಠಿಕೆಯನ್ನು ಮಾತ್ರ ಓದಿಸಿದರೆ ಸಾಲದು. ಎಷ್ಟೋ ವಿಚಾರಗಳನ್ನು ಪಠ್ಯ–ಪುಸ್ತಕದಲ್ಲಿ ಸೇರಿಸಲಾಗುತ್ತಿದೆ. ಇತಿಹಾಸವನ್ನು ಸೇರಿಸಲಾಗುತ್ತದೆ. ಹಾಗೆಯೇ ಸರ್ಕಾರದಲ್ಲಿ ನನ್ನ ಒಂದು ಮನವಿ ಎಂದರೆ, 7ನೇ ತರಗತಿಯಿಂದ 10ನೇ ತರಗತಿವರೆಗೆ ಈ ಸಂವಿಧಾನವನ್ನು ಒಂದು ಪಠ್ಯಕ್ರಮವಾಗಿ ಸೇರಿಸಬೇಕು. 50 ಅಂಕಗಳಿಗೆ ಪರೀಕ್ಷೆ ಇಡಬೇಕು. ಆ ಅಂಕಗಳನ್ನು ಅಂಕಪಟ್ಟಿಯಲ್ಲಿ ಎಂಟ್ರಿ ಮಾಡಿಸಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಗಳೆ, ಡಾ: ವೈ.ಎ.ನಾರಾಯಣಸ್ವಾಮಿಯವರು ಸಮಯೋಚಿತವಾಗಿ ಒಳ್ಳೆಯ ವಿಚಾರವನ್ನು ಸದನದ ಮುಂದೆ ಇಟ್ಟಿದ್ದಾರೆ. ಅದನ್ನು ನಮ್ಮ ಮಕ್ಕಳಿಗೆ ತಿಳಿಯಬೇಕು. 'ಸಂವಿಧಾನ ದಿನ' ಎನ್ನುವುದೇ ನಮ್ಮ ಮಕ್ಕಳಿಗೆ ಗೊತ್ತಿಲ್ಲ. ನಾವೆಲ್ಲರೂ ಒಟ್ಟಿಗೆ ಸೇರಿ ಸಂವಿಧಾನದ ದಿನವನ್ನು ಆಚರಿಸಿರುವ ಉದಾಹರಣೆಗಳು ಇಲ್ಲ. ಹೀಗಾಗಿ ಸಂವಿಧಾನದ ಬಗ್ಗೆ ತಿಳುವಳಿಕೆ ಬರಬೇಕಾದರೆ, ನಮ್ಮ ಮಕ್ಕಳಿಗೆ ಹೇಳಬೇಕಾದರೆ 8ನೇ ತರಗತಿಯ ನಂತರದಲ್ಲಿ ಸ್ವಲ್ಪ ತಿಳುವಳಿಕೆ ಬಂದ ನಂತರ ಹೇಳಬೇಕು. 4ನೇ 5ನೇ ತರಗತಿಯಲ್ಲಿ ಸಂವಿಧಾನವನ್ನು ಕಲಿಸಲು ಆಗುವುದಿಲ್ಲ. ಸಂವಿಧಾನದ preamble ನ್ನು ಹೇಳಬೇಕಾದರೆ, it is very tough. ಹೀಗಾಗಿ 8ನೇ ತರಗತಿಯಿಂದ ಅರ್ಧ ಗಂಟೆ ಸಂವಿಧಾನದ ಬಗ್ಗೆ ಪಾಠ ಮಾಡುವ ಪದ್ಧತಿಯನ್ನು ಜಾರಿಗೆ ತರಬಹುದು.

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೆ, 10ನೇ ತರಗತಿ ಪಠ್ಯಕ್ರಮದಲ್ಲಿ ಸೇರಿಸಿ, ಕನಿಷ್ಠ 50 ಅಂಕಗಳ ಪರೀಕ್ಷೆಯನ್ನು ಸಂವಿಧಾನದ ಬಗ್ಗೆ ಮಕ್ಕಳು ಬರೆಯುವಂತೆ ವ್ಯವಸ್ಥೆ ಮಾಡಬೇಕು. ಇದರಿಂದ ಪ್ರತಿಯೊಂದು ಮಗು ಸಂವಿಧಾನವನ್ನು ಓದಿ ನನಗೆ ಈ ಹಕ್ಕು ಇದೆ, ಇಂತಹ ಕರ್ತವ್ಯ ಇದೆ, ಈ ಜವಾಬ್ದಾರಿ ಇದೆ ಎನ್ನುವುದನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಈಗ ತಾವು ಹುಟ್ಟು ಹಾಕಿರುವ ಈ ಸಂವಿಧಾನದ ಮೇಲಿನ ಚರ್ಚೆ ಅತ್ಯಂತ ಪವಿತ್ರವಾದದ್ದು. We really respect you, hats off to you. ಆ ಪೀಠಕ್ಕೆ ನಾವು ಬಹಳ ಗೌರವವನ್ನು ಸಲ್ಲಿಸುತ್ತೇವೆ. ಉತ್ಕೃಷ್ಟವಾದ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ತಾವು ಕೊನೆಯಲ್ಲಿ conclusion ಭಾಷಣ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುವಾಗ ಮಾನ್ಯ ಶಿಕ್ಷಣ ಸಚಿವರಿಗೆ ಮತ್ತು ಸರ್ಕಾರಕ್ಕೆ ನಿರ್ದೇಶನ ಕೊಟ್ಟು ಇದರ ಬಗ್ಗೆ ಚಿಂತನೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಒಂದೇ ಮಾತು ಹೇಳಿ ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ, " ನಿಸ್ವಾರ್ಥ ಸೇವೆಯೇ ನಮ್ಮ ಪರಮ ಗುರಿ ಎನ್ನುವ ಧ್ಯೇಯ ವ್ಯಾಕ್ಯವನ್ನು ಯಾರು ಅಧಿಕಾರಸ್ಥರೆಲ್ಲರೂ ಇದನ್ನು ಗಮನಿಸಿದಾಗ ಮಾತ್ರ ರಾಮರಾಜ್ಯ ಸ್ಥಾಪನೆಯಾಗಲು ಸಾಧ್ಯ" ಎಂದು ಹೇಳಿ, ಮಾತನಾಡಲು ನನಗೆ ಬಹಳಷ್ಟು ಸಮಯವನ್ನು ಕೊಟ್ಟಿದ್ದೀರಿ ಅದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ನಮಸ್ಕಾರಗಳು.

**ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ತಾವು ಸಂವಿಧಾನದ ಕುರಿತು ವಿಶೇಷ ಚರ್ಚೆಗೆ ಪ್ರಸ್ತಾಪವನ್ನು ತಂದಿರುವುದು ಅತ್ಯಂತ ಅಮೂಲ್ಯವಾದ ವಿಚಾರ. ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಮ್ಮ ಸಂವಿಧಾನವು ಶ್ರೀ ಬಸವಣ್ಣನವರ ಅನುಭವ ಮಂಟಪದ ಆಧಾರದ ಮೇಲೆ ರಚಿತವಾಗಿದೆ ಎನ್ನುವುದನ್ನು ಅನೇಕ ಸಭೆಗಳಲ್ಲಿ ಹಿರಿಯರು ಮಾತನಾಡಿರುವುದನ್ನು ನಾನು ಕೇಳಿದ್ದೇನೆ. ಇದರಲ್ಲಿ ನನಗೆ ಒಂದು ಹೆಮ್ಮೆಯ ವಿಚಾರ ಎಂದರೆ, ನಮ್ಮ ತಂದೆಯವರಾದ ಶ್ರೀ ಎನ್.ರಾಚಯ್ಯನವರು ಈ ಸಂವಿಧಾನ ರಚನೆಯಾದ ಮೇಲೆ ಮೊದಲನೆಯ ಪಾರ್ಲಿಮೆಂಟ್ ಸದಸ್ಯರು. ಯಾರಾದರೂ ಬಂದು ನೀವು ಮೊದಲನೆಯ ಪಾರ್ಲಿಮೆಂಟ್ ಸದಸ್ಯರು ಎಂದು ಹೇಳಿದರೆ ಅವರು ಒಪ್ಪಿಕೊಳ್ಳುತ್ತಿರಲಿಲ್ಲ."I am a constitutional member" ಎಂದು ಹೇಳುತ್ತಿದ್ದರು. ನಿನ್ನೆ ನಮ್ಮ ಕಾನೂನು ಸಚಿವರು ಸಂವಿಧಾನ ಬಗ್ಗೆ ಮಾತನಾಡುತ್ತಾ ಧರ್ಮದ ವಿಚಾರವನ್ನು ಹೇಳಿದರು. ಸಂವಿಧಾನ ಬರುವುದಕ್ಕಿಂತ ಮುಂಚೆ ರಾಜಧರ್ಮ ಇತ್ತು ಎಂದು ಹೇಳಿದರು. ಆದರೆ ನಮ್ಮ ದೇಶದಲ್ಲಿ ಧರ್ಮದ ಆಧಾರದ ಮೇಲೆ ಜಾತಿಗಳನ್ನು ಮಾಡಿ, ಧರ್ಮದ ಹೆಸರಿನಲ್ಲಿಯೇ ಹಲವಾರು ಜನರನ್ನು ತುಳಿದಿರುವುದು ಬಹಳ ನೋವಿನ ಸಂಗತಿ.

ಕಾನೂನು ಸಚಿವರು ಯಾವ ರೀತಿ ಹೇಳಿದರು ನನಗೆ ಗೊತ್ತಿಲ್ಲ, ಅದನ್ನು ಅವರಿಗೆ ಮನವರಿಕೆ ಮಾಡಿಕೊಡಲು ನಾನು ಇಷ್ಟಪಡುತ್ತೇನೆ. ಈ ದೇಶದಲ್ಲಿ 4,635 ಜಾತಿಗಳು ಇವೆ ಎಂದು ಮಾನ್ಯ ಸಭಾಪತಿಯವರು ಹೇಳಿದರು. ಲೋಕಸಭೆಯಲ್ಲಿ ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು 9000 ಜಾತಿಗಳಿವೆ ಎಂದು ಹೇಳಿರುವುದನ್ನು ನಾನು ಮಾಧ್ಯಮದಲ್ಲಿ ನೋಡಿದ್ದೇನೆ. ಈ 9000 ಜಾತಿಗಳಲ್ಲಿ ಕ್ರಿಶ್ಚಿಯನ್ ಇರಬಹುದು ಮುಸ್ಲಿಂ ಇರಬಹುದು ಅತಿ ಹೆಚ್ಚು ಇಸ್ಲಾಂ ಧರ್ಮವನ್ನು ಅನುಸರಿಸುತ್ತಿರುವವರು ಹೆಚ್ಚಿನವರು ನಮ್ಮ ದೇಶದ ಜನರೇ. ಹಿಂದು ಧರ್ಮದ ಹೆಸರಿನಲ್ಲಿ ತುಳಿತಕ್ಕೆ ಒಳಗಾಗುತ್ತಿರುವವರು ಬೇರೆ–ಬೇರೆ ಧರ್ಮಗಳನ್ನು ಅನುಸರಿಸಿಕೊಂಡು ಹೋಗುತ್ತಾರೆ. ಸಂವಿಧಾನ ಬಂದ ನಂತರವೂ ಕೂಡಾ ಸಾಕಷ್ಟು ತುಳಿತಕ್ಕೆ ಒಳಗಾಗಿದ್ದಾರೆ. ಡಾ: ಬಿ.ಆರ್.ಅಂಬೇಡ್ಕರ್‌ರವರು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಟ್ಟಿರುವಂತಹ ಸಂವಿಧಾನವನ್ನು ಈ ದೇಶದ ಮೇಲ್ವರ್ಗದ ಜನರು ಲೆಕ್ಕಕೆ ಇಟ್ಟುಕೊಳ್ಳುತ್ತಿಲ್ಲ. ಇದೆಲ್ಲವನ್ನು ನೋಡಿದರೆ ಸನಾತನ ಧರ್ಮದವರೇ ಒಳ್ಳೆಯವರು ಎಂದು ನನಗೆ ಕಾಣುತ್ತದೆ. ಅವರು ಬ್ರಾಹ್ಮಣರು, ವೈಶ್ಯರು, ಕ್ಷತ್ರಿಯರು, ಶೂದ್ರರು ಎಂದು ನಾಲ್ಕು ವರ್ಣಗಳನ್ನು ಮಾತ್ರ ಇಟ್ಟುಕೊಂಡಿದ್ದರು. ಆದರೆ ಇವರು ನಮ್ಮ ಪ್ರಧಾನ ಮಂತ್ರಿಗಳ ಬಾಯಿಯಲ್ಲಿ ಲೋಕಸಭೆಯಲ್ಲಿ 9000 ಜಾತಿಗಳಿವೆ ಎಂದು ಹೇಳಿಸಲಾಗಿದೆ. ನಮ್ಮ ಮಾನ್ಯ ಸಭಾಪತಿಯವರು 4635 ಜಾತಿಗಳಿವೆ ಎಂದು ಹೇಳಿದ್ದಾರೆ. ಇಷ್ಟೆಲ್ಲಾ ಸಂವಿಧಾನ ಕೊಟ್ಟು, ಶಿಕ್ಷಣವನ್ನು ಪಡೆದುಕೊಂಡರೂ ಜಾತಿಗಳು ಕಡಿಮೆಯಾಗಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂತು, ಸಂವಿಧಾನ ಬಂತು ಆದರೂ ಅಸ್ಪೃಶ್ಯತೆ ಹೋಗಲಿಲ್ಲ. ಸಂವಿಧಾನ ಬಂದು, ಹಲವಾರು ವರ್ಷಗಳಾದರೂ ಅಸ್ಪೃಶ್ಯತೆ ನಡೆಯುತ್ತಲೇ ಇತ್ತು. ಇವರ ಬಗ್ಗೆ ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಬರೆದಿದ್ದಾರೆ ಎನ್ನುವುದು ನಮ್ಮ ಜನಾಂಗಕ್ಕೆ ತಿಳಿಯುವಷ್ಟರಲ್ಲಿ ಡಾ: ಬಿ.ಆರ್.ಅಂಬೇಡ್ಕರ್‌ರವರೇ ತೀರಿಕೊಂಡುಬಿಟ್ಟರು.

ಶಿಕ್ಷಣ ವಿಚಾರದಲ್ಲಿ ಸ್ವಾತಂತ್ರ್ಯ ಬಂದ ಮೇಲೆ 17% ಇರುವುದು ಈಗ 85%ಗೆ ಹೋಗಿದೆ. ಅಸ್ಪೃಶ್ಯ ಜನಾಂಗದಲ್ಲಿ ಶಿಕ್ಷಣದಿಂದ ವಂಚಿತರಾದವರು ದಲಿತರು, ಇಡೀ ದೇಶದಲ್ಲಿ ಮದ್ಯಪಾನವನ್ನು ನಿಷೇಧ ಮಾಡಬೇಕೆಂದು ಅಂಬೇಡ್ಕರ್‌ರವರು ಹೇಳಿದ್ದಾರೆ. ಅಂದಿನ ಮೈಸೂರು ರಾಜ್ಯದಲ್ಲಿ ಮಾನ್ಯ ಬಿ.ಡಿ.ಜತ್ತಿಯವರ ಸರ್ಕಾರದ ಸಮಯದಲ್ಲಿ ನಮ್ಮ ತಂದೆಯವರು ಇಡೀ ದೇಶದಲ್ಲಿ ಮೈಸೂರು ರಾಜ್ಯದಲ್ಲಿ ಪ್ರಪಥಮವಾಗಿ ಮದ್ಯಪಾನವನ್ನು ನಿಷೇಧ ಮಾಡುತ್ತಾರೆ. ಅದರ ಪ್ರತಿಫಲ ಎಂದರೆ ಮುಂದಿನ ಚುನಾವಣೆಯಲ್ಲಿ ನಮ್ಮ ತಂದೆಯವರನ್ನು ಸೋಲಿಸುತ್ತಾರೆ. ಇನ್ನೊಂದು ವಿಚಾರ ಎಂದರೆ, ದಲಿತರಲ್ಲಿ ಯಾರಾದರೂ ಮುಂದೆ ಬರುತ್ತಾರೆ ಎಂದರೆ ಅವರನ್ನು ರಾಜಕೀಯವಾಗಿ ಮುಗಿಸಿ ಬಿಡುತ್ತಾರೆ. ಯಾರನ್ನು ಬಿಟ್ಟಿರುವುದಿಲ್ಲ. 10 ವರ್ಷಗಳ ಮೀಸಲಾತಿ Double Member Constituency ಇತ್ತು ಅದನ್ನು ಮುಂದುವರೆಸಬೇಕಾಗಿತ್ತು. ಡಾ: ಅಂಬೇಡ್ಕರ್‌ರವರು ಇನ್ನು ಮುಂದೆ ಹೋಗಿ ಒಂದು ಮಾತನ್ನು ಹೇಳುತ್ತಾರೆ, ದಲಿತರ ಪ್ರತಿನಿಧಿಗಳನ್ನು ದಲಿತರೇ ಆಯ್ಕೆ ಮಾಡಿಕೊಳ್ಳುವಂತಹ ಅವಕಾಶವನ್ನು ಕೊಡಿ ಎನ್ನುವ ಮಾತನ್ನು ಮುಂದೆ ಇಡುತ್ತಾರೆ. ಆದರೆ ಅದಕ್ಕೆ ಅವಕಾಶವನ್ನು ಕೊಡುವುದಿಲ್ಲ.

(ಮುಂದು)

321/11-03-2020/04-30/ಬಿಎಸ್‌ಡಿ-ಎಕೆ

**ಶ್ರೀ ಆರ್.ಧರ್ಮಸೇನಾ (ಮುಂದು)**

ಆದರೆ ಕೊಟ್ಟಿರುವ Double Member Constituency ಅನ್ನು 10 ವರ್ಷಗಳಲ್ಲಿ ರದ್ದು ಮಾಡಿದ ಪ್ರತಿಫಲವಾಗಿ ಅಂಬೇಡ್ಕರ್‌ರವರು ಸೋಲನ್ನು ಅನುಭವಿಸಬೇಕಾಗುತ್ತದೆ. ಬಹಳಷ್ಟು ಜನ ಬಿಜೆಪಿ ಸದಸ್ಯರು ಕಾಂಗ್ರೆಸ್‌ನವರು ಅನ್ಯಾಯ ಮಾಡಿಬಿಟ್ಟಿದ್ದಾರೆ ಎಂದು ಹೇಳುತ್ತಿರುತ್ತಾರೆ. ನಾನು ಒಂದು ಮಾತನ್ನು ಹೇಳುವುದಾದರೆ, ಇವತ್ತು ವಿಶ್ವಮಾನವರಾಗಿ ಡಾ॥ ಬಿ.ಆರ್. ಅಂಬೇಡ್ಕರ್ ಇರುವಾಗ ಕಾಂಗ್ರೆಸ್‌ನವರು ಅರ್ಥಮಾಡಿಕೊಳ್ಳಬೇಕು. ಅವರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹತ್ತಿರ ಸಂವಿಧಾನವನ್ನು ಬರೆಸಿ, ಪ್ರಪಂಚಕ್ಕೆ ತೋರಿಸದಿದ್ದರೆ ಅಂಬೇಡ್ಕರ್‌ರವರು ವಿಶ್ವಮಾನವರಾಗಿ ಹೊರಹೊಮ್ಮುತ್ತಿರಲಿಲ್ಲ. ಮಾನ್ಯ ಸಭಾಪತಿಯವರೇ, ನನ್ನ ಹೆಸರು ಧರ್ಮಸೇನಾ ಎಂದು ಬರುವುದಕ್ಕೆ ಡಾ॥ ಬಿ.ಆರ್. ಅಂಬೇಡ್ಕರ್ ಕಾರಣ. ನನ್ನ ತಂದೆಯವರು ಅಂಬೇಡ್ಕರ್‌ರವರ ಅನುಯಾಯಿಗಳಾಗಿದ್ದರು. ಈ ಸಂದರ್ಭದಲ್ಲಿ ನಾನು ಒಂದು ಘಟನೆಯನ್ನು ಹೇಳಬೇಕಾಗುತ್ತದೆ. ನಮ್ಮ ತಂದೆಯವರು ನೆಹರೂರವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷದಿಂದ ಲೋಕಸಭೆಗೆ ಆಯ್ಕೆಯಾಗಿ ಹೋಗುತ್ತಾರೆ. ನಮ್ಮ ತಂದೆಯವರ ಭಾಷಣದಿಂದ ಅಂಬೇಡ್ಕರ್‌ರವರು ಬಹಳ ಪ್ರೇರಿತರಾಗಿರುತ್ತಾರೆ. ನನ್ನ ತಂದೆಯವರು ರಾತ್ರಿಯಿಂದ ಬೆಳಗಿನ ಜಾವ ನಾಲ್ಕೈದು ಗಂಟೆಯವರೆಗೆ ಡಾ॥ ಬಿ.ಆರ್. ಅಂಬೇಡ್ಕರ್ ಜೊತೆ ಇರುತ್ತಿದ್ದರು. ನನ್ನ ತಾಯಿ ಅವಿದ್ಯಾವಂತರಾಗಿದ್ದು, ಈ ವಿಚಾರ ಅವರಿಗೆ ಗೊತ್ತಿರಲಿಲ್ಲ. ನನ್ನ ತಾಯಿಯವರು ' ನನ್ನ ಗಂಡ ಲೋಕಸಭಾ ಸದಸ್ಯರಾಗಿ, ದೆಹಲಿಯಲ್ಲಿ ಯಾರನ್ನೋ ಇಟ್ಟುಕೊಂಡು ಬಿಟ್ಟಿದ್ದಾರೆ' ಎಂಬ ಅನುಮಾನ. ಆಗ ನೆಂಟರಿಷ್ಟರ ಬಳಿ ನನ್ನ ತಾಯಿಯವರು ' ನೋಡಪ್ಪ, ನಿಮ್ಮ ಮಾವ ಮನೆಯಲ್ಲಿ ಇರುವುದಿಲ್ಲ, ರಾತ್ರಿಯಲ್ಲಾ ಎಲ್ಲೋ ಹೋಗುತ್ತಾರೆ' ಎಂದು ಹೇಳುತ್ತಾರೆ. ಈಗಲೂ ಕೆಲವು ನೆಂಟರಿಷ್ಟರು ಇನ್ನೂ ಬದುಕಿದ್ದಾರೆ. ಆ ನಮ್ಮ ನೆಂಟರಿಷ್ಟರು ಹುಡುಕಿಕೊಂಡು ಹೋಗಿ ನೋಡಿದಾಗ ಅಂಬೇಡ್ಕರ್ ರವರ ಮನೆಯಲ್ಲಿ ಇರುತ್ತಾರೆ. ಆಗ ನಮ್ಮ ನೆಂಟರಿಷ್ಟರು "ಏ ಕಿಸ್ಕಾ ಘರ್" ಎಂದು ಕೇಳಿದಾಗ "ಏ ದೇಶ್‌ಕ ಬಹುತ್ ಬಡಾ ನೇತಾ ಅಂಬೇಡ್ಕರ್ ಕ ಘರ್" ಯಾರೋ ಹೇಳುತ್ತಾರೆ. ಆಗ ನಮ್ಮ ಸಂಬಂಧಿಕರು ನನ್ನ ತಾಯಿಯ ಬಳಿ ಬಂದು ಸಮಾಧಾನ ಮಾಡುತ್ತಾರೆ. ರಾತ್ರಿ ಅವರು ಬಹಳ ದೊಡ್ಡ ವ್ಯಕ್ತಿ ಜೊತೆಯಲ್ಲಿ ಇರುತ್ತಿದ್ದಾರೆ ಎಂದು ಹೇಳುತ್ತಾರೆ.

**ಸಭಾಪತಿಯವರು:–** ತಮಗೆ ನಾಳೆ ಅವಕಾಶ ಕೊಡುತ್ತೇನೆ, ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

**ಶ್ರೀ ವಿ. ಸೋಮಣ್ಣ (ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ, ನಾನು ತಮಗೆ ವಿನಂತಿ ಮಾಡುತ್ತೇನೆ ಮತ್ತು ಪತ್ರವನ್ನು ಕೊಟ್ಟಿದ್ದೇನೆ. ನನ್ನ ಚೆನ್ನಗಿರಿ ತಾಲ್ಲೂಕಿನ ಸುಮಾರು 50–60 ಜನರು ಬಸ್ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ನಮ್ಮ ಇಲಾಖೆಯಿಂದ ಒಂದು ತೊಂದರೆಯಾಗಿ, ಮತ್ತೆ ಅವರು ವಾಪಸ್ಸು ಊರಿಗೆ ಹೋಗಬೇಕಾಗಿರುತ್ತದೆ. ದಯಮಾಡಿ ನನ್ನ ಎರಡು ಪ್ರಶ್ನೆಗಳು ಹಾಗೂ ಒಂದು ತಡೆಹಿಡಿಯಲಾದ ಪ್ರಶ್ನೆ ಸೇರಿ ಒಟ್ಟು ಮೂರು ಪ್ರಶ್ನೆಗಳನ್ನು ಮೊದಲ ಆದ್ಯತೆಯಾಗಿ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 2. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 840**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದು, ಮಾನ್ಯ ಸಚಿವರು ಬಹಳ urgent ನಲ್ಲಿದ್ದು, ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಕೇಂದ್ರ ಸರ್ಕಾರದ ಯೋಜನೆಯಡಿ ಸುಮಾರು 22 ಯೋಜನೆಗಳನ್ನು ಮಾಡುತ್ತಿದ್ದು, ಅವುಗಳಲ್ಲಿ ಸಾಧಾರಣವಾಗಿ ನೂರಕ್ಕೆ ಐವತ್ತು ಅಥವಾ ಅವರತ್ತರಷ್ಟು ಅನುದಾನ ಬರುತ್ತದೆ. ಅದನ್ನು ಸರಿಯಾದ ರೀತಿ ಬಳಕೆ ಮಾಡದಿರುವುದು ನನ್ನ ಆತಂಕವಾಗಿದೆ. ಕಟ್ಟಿರುವ ಮನೆಗಳ ಕಾಮಗಾರಿಯ ಉಸ್ತುವಾರಿ ಮಾಡಲು Consultant appoint ಮಾಡುತ್ತಿದ್ದು, ಅವರು ಸರಿಯಾದ ರೀತಿಯಲ್ಲಿ ನಿಗಾ ವಹಿಸುವುದಿಲ್ಲ ಹಾಗೂ ಅಧಿಕಾರಿಗಳು ಸರಿಯಾಗಿ ನಿಗಾ ವಹಿಸುತ್ತಿಲ್ಲ. ಮೂರನೆಯದಾಗಿ ಗುಜರಾತ್ ಮತ್ತು ರಾಜಸ್ಥಾನಕ್ಕೆ compare ಮಾಡಿದರೆ ಪ್ರಧಾನ ಮಂತ್ರಿಗಳ ಆವಾಜ್ ಯೋಜನೆಯಲ್ಲಿ ಸಾಕಷ್ಟು ರಡಿಚಿಟಿಣ ಅನ್ನು ನಮ್ಮ ಖಣಚಿಣಜ ತೆಗೆದುಕೊಂಡಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಅನುಮತಿ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ಹಿರಿಯರಾದ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ನಮಗೆಲ್ಲರಿಗೂ ಮಾರ್ಗದರ್ಶಕರಾಗಿದ್ದಾರೆ. ವಿಶೇಷವಾಗಿ Public Works Department ಇರಬಹುದು, ಈ ಇಲಾಖೆಗೆ ಇರುವ ಚಿಂತನೆಯನ್ನು ನ್ಯಾವ್ಯಾರು ಅಲ್ಲಗಳೆಯುವುದಿಲ್ಲ. ಕರ್ನಾಟಕ ಕೊಳಗೇರಿ ಮಂಡಳಿ ಸಾಕಷ್ಟು ದೂರುಗಳಿರುವ ಆಗರವಾಗಿದೆ. ಅದನ್ನು ಸರಿಪಡಿಸುವ ಕೆಲಸವನ್ನು ಹಂತಹಂತವಾಗಿ ನಾನು ಮತ್ತು ಇಲಾಖೆಯ ಮುಖ್ಯಸ್ಥರು ಸೇರಿ ಮಾಡುತ್ತಿದ್ದೇವೆ. ಮಾನ್ಯ ಸಭಾಪತಿಯವರೇ, ತಮ್ಮ ಅನುಮತಿ ಮೇರೆಗೆ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ. ನಾಳೆಯಿಂದ ಮಾನ್ಯ ಸದಸ್ಯರು ಮಾಡುವ ಮಾರ್ಗದರ್ಶನದಂತೆ ಕೊಳಚೆ ಅಭಿವೃದ್ಧಿ ಮಂಡಳಿಯಲ್ಲಿ ನಡೆಯುತ್ತಿರುವ ಕಾಮಗಾರಿ ಮತ್ತು ಅವುಗಳ ಗುಣಮಟ್ಟವನ್ನು ಸರಿಪಡಿಸುವುದಕ್ಕೆ ಮತ್ತು ಮಾನ್ಯ ಸದಸ್ಯರು ಒಪ್ಪುವುದಾದರೆ ಅವರನ್ನೂ ಸಮಿತಿಯಲ್ಲಿ ಸೇರಿಸಿಕೊಳ್ಳುವ ಬಗ್ಗೆ ಅಧಿಕೃತವಾಗಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸರ್ಕಾರದ ಆದೇಶ ಹೊರಡಿಸುತ್ತೇನೆ. ಬೇರೆ ಬೇರೆ ರಾಜ್ಯಗಳಲ್ಲಿ ಗುಣಮಟ್ಟದ ವ್ಯವಸ್ಥೆ ಏನೇನು ಮಾಡಿದ್ದಾರೋ, ಅದೇ ರೀತಿ ಕರ್ನಾಟಕ ರಾಜ್ಯದ ಬಡವರಿಗೂ ಆಗಬೇಕು ಎಂದು ನನ್ನ ಮತ್ತು ಮಾನ್ಯ ಸದಸ್ಯರ ಬಯಕೆಯಾಗಿದೆ. ಆದ್ದರಿಂದ ನಾನು, ಪ್ರಧಾನ ಕಾರ್ಯದರ್ಶಿ ಅಥವಾ ನಮ್ಮ ಸರ್ಕಾರ ಎಷ್ಟರಮಟ್ಟಿಗೆ ಒತ್ತನ್ನು ಕೊಡಬಹುದೋ, ಅದರಂತೆ ಒತ್ತಾಯಪೂರ್ವಕವಾಗಿ ಕೆಲಸಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಆದರೂ ಗುಣಮಟ್ಟ ಬೇಕಾಗಿದೆ. ಮಾನ್ಯ ಸದಸ್ಯರು ಒಪ್ಪುವುದಾದರೆ ಇದರ supervision ಗೆ ಅವರನ್ನು ನೇಮಕ ಮಾಡುವುದಕ್ಕೆ ತೊಂದರೆಯಿಲ್ಲ. ಅವರ ಸಲಹೆ ಸೂಚನೆಗಳನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ. ಅನುಬಂಧ 1,2,3 ರಲ್ಲಿ ಲೋಪ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುವುದನ್ನು ಮಾನ್ಯ ಸದಸ್ಯರು ತಿಳಿಸಿದರೆ ತೀಕ್ಷ್ಣವಾಗಿ ತೆಗೆದುಕೊಂಡು, ಕಾಮಗಾರಿಗಳಲ್ಲಿನ ಅನಾನುಕೂಲತೆಗಳನ್ನು ಸರಿಪಡಿಸಲು ಸರ್ಕಾರ ಬದ್ಧವಾಗಿದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿಃ–** ಮಾನ್ಯ ಸಭಾಪತಿಯವರೇ, ನನ್ನ ಸಲಹೆ ಏನೆಂದರೆ, ಕೇಂದ್ರ ಸರ್ಕಾರವು ನೀಡಿರುವ ಮಾರ್ಗದರ್ಶನದಂತೆ ಕೆಲಸ ಮಾಡಿದರೆ ಸಾಕು, ಅವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಾಕಷ್ಟು ಣಡುಛಿಣ ಆಗಿ ಮಾಡಿದ್ದಾರೆ. ಸುಮಾರು 25 scheme ಗಳಿದ್ದು, ಅವುಗಳನ್ನು convergence ಮಾಡಬೇಕು. ಅವುಗಳನ್ನು ಕೇಂದ್ರೀಕೃತ ಮಾಡಿ ಒಂದರಲ್ಲಿ ಮಾಡಬೇಕು. ಅದಕ್ಕೆ ಒಂದು Directorate ಮಾಡುತ್ತಾರೆಯೇ? Housing Department ನಲ್ಲಿ ಒಂದು Directorate ಮಾಡಬೇಕು. ಏಕೆಂದರೆ ರಾಜೀವ್‌ಗಾಂಧಿ ವಸತಿ ನಿಗಮದವರು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಯಾವುದಾದರೂ proposal Line Department/Housing Department ನಿಂದ ಹೋಗಬೇಕು. ಅದಕ್ಕಾಗಿ ಒಂದು Directorate create ಮಾಡಿ ಎಂದು ಸಲಹೆ ಮಾಡುತ್ತೇನೆ.

**ಶ್ರೀ ವಿ. ಸೋಮಣ್ಣಃ–** ಖಂಡಿತವಾಗಿಯೂ ಅದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆಃ 793**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡಃ–** ಮಾನ್ಯ ಸಭಾಪತಿಯವರೇ, ನಾನು ನಿರ್ಗತಿಕರ ಬಗ್ಗೆ ಪ್ರಶ್ನೆ ಕೇಳಿದ್ದು, ಅಂಗಡಿ ಮತ್ತು ರಸ್ತೆ ಬದಿಗಳಲ್ಲಿ ನಿರ್ಗತಿಕರು, ಅಂಗವಿಕಲರು, ಊಖಗಿ ಸೋಂಕಿತರು, ತೃತೀಯ ಲಿಂಗಿಗಳು ಸೇರಿದಂತೆ 14 ವರ್ಗದ ಜನರಿಗೆ ವಸತಿ ಸೌಲಭ್ಯ ಕೊಡುವ ಬಗ್ಗೆ ಕೇಳಿದ್ದೇನೆ. ಮಾನ್ಯ ಸಚಿವರು 10,963 ಮನೆಗಳು ಪ್ರಾರಂಭವಾಗಿಲ್ಲ ಎಂದು ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ. ಬಹಳ ಜನರಿಗೆ payment ಆಗಿಲ್ಲ. ಅವರು ದಡ್ಡರು ನೋಡಿ. ಎಲ್ಲಾ ಸರಿ ಇರುವವರಿಗೆ ಒಂದು ರೀತಿ ಸರಿ. ನಾನು ಸಾಮಾನ್ಯವಾಗಿ ಬಸ್ಸಿನಲ್ಲಿ ಓಡಾಡುತ್ತೇನೆ. Bus stand ನಿಂದ ಮನೆಗೆ ಹೋಗುವಾಗ ಎರಡೂ ಕಡೆಯ ಅಂಗಡಿಗಳ ಚಪ್ಪಡಿಗಳ ಮೇಲೆ ಇನ್ನೂ ಜನರು ಮಲಗುತ್ತಿದ್ದಾರೆ. ಇವರಿಗೆ ಮನೆ ಕಟ್ಟಿಸಿಕೊಡುವ ವಿಚಾರದಲ್ಲಿ agent ಗಳ ಹಾವಳಿ ದೊಡ್ಡ ಪ್ರಮಾಣದಲ್ಲಿ ಇದೆ. ಮಾನ್ಯ ಸಚಿವರು ಇಲ್ಲ ಎಂದು ಹೇಳುತ್ತಾರೆ. ಫಲಾನುಭವಿಗಳು ಹಣ ಕೊಟ್ಟರೆ ಮಾತ್ರ ಅವರ account ಗೆ cheque ಹಣ ಬರುತ್ತದೆ, ಇಲ್ಲವೆಂದರೆ ಬರುವುದಿಲ್ಲ. ಈ ವರ್ಗದ ಜನರಿಗೆ ಇನ್ನು 11 ಸಾವಿರ ಮನೆಗಳನ್ನು ಪ್ರಾರಂಭಿಸಿಲ್ಲ ಮತ್ತು ಕೆಲವರಿಗೆ ಕಟ್ಟುತ್ತಿರುವ ಮನೆಗಳು ಅರ್ಧ ಹಂತದಲ್ಲಿವೆ. ಪೂರ್ಣವಾಗಿರುವವರಿಗೂ ಪೂರ್ಣವಾದ ಮನೆ ಕಟ್ಟಿಕೊಟ್ಟಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಯಮಾಡಿ ಈ ವರ್ಗದ ಜನರಿಗೆ ಆದ್ಯತೆ ಮೇಲೆ ಮನೆ ಕೊಡಬೇಕು. ಮಾನ್ಯ ಸಚಿವರು ಸಮರ್ಥರಿದ್ದು, ಅವರ ಶಕ್ತಿ ಗೊತ್ತಿದೆ. ಈ ವರ್ಗದ ಜನರ ನೋವು ನಿವಾರಣೆ ಮಾಡಿ, ಪೂರ್ಣ ಪ್ರಮಾಣದ ಮನೆಗಳನ್ನು ನಿರ್ಮಾಣ ಮಾಡಿ, ಚಿರಂಜಟಣ ಗಳನ್ನು ಹೊರತುಪಡಿಸಿ ನೇರವಾಗಿ ಕೊಡಿಸುವ ವ್ಯವಸ್ಥೆ ಮಾಡಬೇಕು.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ವಿಕಲಚೇತನರು, ಕುಷ್ಠರೋಗದಿಂದ ಗುಣಮುಖರಾದವರು, ಊಖಗಿ ಸೋಂಕಿತರು, ಮಂಗಳ ಮುಖಿಯರು, ಲೈಂಗಿಕ ಕಾರ್ಯಕರ್ತೆಯರು, ದೇವದಾಸಿಯರು, ವಿಧವೆಯರು, ಜೀತದಿಂದ ಮುಕ್ತರಾದವರು, ಸಫಾಯಿ ಕರ್ಮಚಾರಿಗಳು, ದೌರ್ಜನ್ಯಕ್ಕೆ ಒಳಗಾದವರು, ಅಲೆಮಾರಿಗಳು, ಕುಶಲಕರ್ಮಿಗಳು, ಅಂಗಡಿ ಜಗಲಿಗಳ ಮೇಲೆ ರಾತ್ರಿ ವೇಳೆ ಮಲಗುತ್ತಿರುವ ನಿರ್ಗತಿಕರೆಲ್ಲರಿಗೂ ವಸತಿ ಸೌಲಭ್ಯ ಕಲ್ಪಿಸಲು ವಿಶೇಷ ಯೋಜನೆಯಡಿಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಮಾನವೀಯತೆಗೆ ಸವಾಲಾಗಿದೆ. ಈ ಕೆಲಸ ಮಾಡಲು ಸಾಕಷ್ಟು ಹಣ ಖರ್ಚು ಮಾಡುತ್ತಿದ್ದೇವೆ. ಇಲ್ಲಿಗೆ ಬರುವುದಕ್ಕಿಂತ ಮುಂಚೆ ಪಿರಿಯಾಪಟ್ಟಣದ ಶಾಸಕರು ನನ್ನ ಕಛೇರಿಗೆ ಬಂದಿದ್ದರು. ನಾನು ಎಲ್ಲಾ ಕಡೆ ಜಿಲ್ಲಾಧಿಕಾರಿಗಳೊಡನೆ ಸಭೆ ಮಾಡುತ್ತಿದ್ದು, ನಿರ್ವಸತಿಕರಿಗೆ ಜಿಲ್ಲಾಧಿಕಾರಿ, ಮುಖ್ಯ ಇಂಜನಿಯರ್ ಮತ್ತು ಕೆಲವು ಇಲಾಖೆಗಳ ಸಮನ್ವಯದೊಡನೆ ಮಾಡುತ್ತಿದ್ದೇನೆ. ಇದನ್ನು ಒಂದು ಕಡೆಯೂ ಮಾಡಿರಲಿಲ್ಲ. ನಾನು ಸಚಿವನಾದ ಮೇಲೆ ಚಾಲನೆ ಕೊಟ್ಟಿದ್ದೇನೆ. ಈ ರೀತಿ ಜನರಿಗೆ ಎಲ್ಲಿದ್ದರೂ ಆದ್ಯತೆ ಮೇಲೆ ಕೊಡುತ್ತೇನೆ. ಇದರ ಜೊತೆಗೆ ಗೊಲ್ಲರ ಹಟ್ಟಿಗಳಿಗೂ ಕೊಡಬೇಕಾಗಿದೆ. ಶಿರಾ ತಾಲ್ಲೂಕಿನ ಹಿರಿಯೂರಿನ ಕೆಲವು ಭಾಗಗಳಲ್ಲಿ ಇದೆ. ಪಾವಗಡಕ್ಕೂ ಹೋಗಿದ್ದೇನೆ. ಇವತ್ತು ಸಂವಿಧಾನದ ಬಗ್ಗೆ ಮಾತನಾಡುವಾಗ ಕೆಲವು ಸದಸ್ಯರು ಅವರ ಭಾವನೆಗಳನ್ನು ವ್ಯಕ್ತಮಾಡಿದರು.

(ಮುಂದು)

(322)/11.03.2020/4.40/ಹೆಚ್‌ವಿ–ಎಕೆ

**ಶ್ರೀ ವಿ.ಸೋಮಣ್ಣ(ಮುಂದುವರೆದದ್ದು):**

ಈ ಕೆಲಸವನ್ನು ಕೈಗೆತ್ತಿಕೊಳ್ಳುವುದಕ್ಕಾಗಿ ನಾವು ಈಗಾಗಲೇ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ನಾನು ಈ ಸದನಕ್ಕೆ ಬರುವುದಕ್ಕೂ ಮುಂಚೆ ಪಿರಿಯಾಪಟ್ಟಣದ ಶಾಸಕರು ನನ್ನ ಕಛೇರಿಗೆ ಬಂದಿದ್ದರು, 'ನಾನು ಹೋದ ಕಡೆಗಳಲ್ಲಿ ಜಿಲ್ಲಾಧಿಕಾರಿಗಳ ಸಭೆಯನ್ನು ನಡೆಸುತ್ತಿದ್ದೇನೆ' ಎನ್ನುವ ಮಾತನ್ನು ಹೇಳಿದರು. ನಿರ್ಗತಿಕರಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡುವುದಕ್ಕಾಗಿ ರಚನೆ ಮಾಡಿರುವಂತಹ ಸಮಿತಿಗೆ ಜಿಲ್ಲಾಧಿಕಾರಿಗಳೇ ಅಧ್ಯಕ್ಷರಾಗಿದ್ದಾರೆ. ಇವರ ಜೊತೆಗೆ ಮುಖ್ಯ ಇಂಜಿನಿಯರ್ ಮತ್ತು ಕೆಲವು ಇಲಾಖೆಗಳ ಸಮನ್ವಯತೆಯಿಂದ ಈ ಸಮಿತಿ ನಡೆಯುತ್ತಿದೆ. ಹಿಂದೆ ಒಂದು ಕಡೆಯೂ ಈ ಸಮಿತಿಯನ್ನು ರಚನೆ ಮಾಡಿರಲಿಲ್ಲ. ನಾನು ಮಂತ್ರಿಯಾಗಿ ಈ ಖಾತೆಯನ್ನು ವಹಿಸಿಕೊಂಡ ಮೇಲೆ ಇದಕ್ಕೆ ಚಾಲನೆ ಕೊಟ್ಟಿದ್ದೇವೆ. ಈ ರೀತಿಯ ಜನರಿಗೆ ವಿಶೇಷ ಆದ್ಯತೆಯನ್ನು ನೀಡಲಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೇ, ಸಿರಾ, ಹಿರಿಯೂರು ಮತ್ತು ಪಾವಗಡದಲ್ಲಿರುವ ಗೊಲ್ಲರಹಟ್ಟಿಗಳಿಗೆ ನಾನು ಭೇಟಿ ನೀಡಿದ್ದೆ. ಸಂವಿಧಾನದ ಮೇಲೆ ಈ ಮನೆಯಲ್ಲಿ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಅನೇಕ ಸದಸ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದರು. ಅಂತಹ ವ್ಯವಸ್ಥೆಯಲ್ಲಿ ಮೊದಲನೆಯ ಆದ್ಯತೆಯನ್ನು ಇವರಿಗೆ ಕೊಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮುಂದಿನ ಒಂದು–ಒಂದೂವರೆ ತಿಂಗಳೊಳಗಾಗಿ, ಬಿಡುಗಡೆ ಮಾಡಬೇಕಾಗಿರುವ ಅನುದಾನದ ಮೊತ್ತವೆಷ್ಟು ಎನ್ನುವುದನ್ನು ನೋಡಿ, ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ, ಆದ್ಯತೆಯ ಮೇರೆಗೆ ಹಣವನ್ನು ಬಿಡುಗಡೆ ಮಾಡುವುದರ ಜೊತೆಗೆ ಜಿಲ್ಲಾಧಿಕಾರಿಗಳಿಗೆ ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಯಾವುದೇ ಜಿಲ್ಲಾಧಿಕಾರಿ ಆ ಜಿಲ್ಲೆಯ, ತಾಲೂಕು, ಪಂಚಾಯಿತಿ ಮತ್ತು ಹೋಬಳಿ ಮಟ್ಟದಲ್ಲಿ ಇರುವಂತಹ ಇಂತಹ ಜನರನ್ನು ಆದ್ಯತೆಯ ಮೇರೆಗೆ ಪರಿಗಣಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಅನುದಾನ ನೀಡುವುದಕ್ಕೆ ನಮಗೆ ಯಾವುದೇ ಅಡೆತಡೆಗಳಿಲ್ಲ. ಯಾವುದೇ ಕಾರಣಕ್ಕೂ ಆತ್ಮವಂಚನೆ ಮಾಡಿಕೊಳ್ಳದಂತೆ ಆ ವರ್ಗದ ಜನರನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಜನವರಿ 30ನೇ ತಾರೀಖಿನಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಇದರ ಬಗ್ಗೆ ವಿವರವಾದ ವರದಿ ಪ್ರಕಟವಾಗಿದೆ. ನಾನು ಅದನ್ನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಅವರು ಅದರ ಮೇಲೆ ಗಮನಹರಿಸಿದರೆ, ಇರುವಂತಹ ಲೋಪಗಳೆಲ್ಲ ಅವರಿಗೆ ಗೊತ್ತಾಗುತ್ತದೆ. ಆಗ ಅವರು ಅವುಗಳನ್ನು ಪರಿಹರಿಸಲು ಕ್ರಮ ತೆಗೆದುಕೊಳ್ಳಬಹುದಾಗಿದೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:800**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆಕಾರ್‌ಬಂದ್ ಮತ್ತು 'ಟಿಪ್ಪಣಿಗಳ ರಕ್ಷಣಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು '......2010ನೇ ಸಾಲಿನಲ್ಲಿಯೇ ರಾಜ್ಯಾದ್ಯಂತ ಭೂದಾಖಲೆಗಳ ಸ್ಕ್ಯಾನಿಂಗ್ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. ಸುಮಾರು ನಾಲ್ಕು ಕೋಟಿ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಸಂರಕ್ಷಿಸಲಾಗಿರುತ್ತದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. 'ಸಾರ್ವಜನಿಕರಿಗೆ ಆರ್.ಟಿ.ಸಿ.ಗಳನ್ನು ವಿತರಿಸುವ ರೀತಿ ಆಕಾರ್‌ಬಂದ್ ಟಿಪ್ಪಣಿಗಳನ್ನು ವಿತರಿಸಲಾಗುತ್ತಿದೆಯೇ ಇಲ್ಲದಿದ್ದಲ್ಲಿ, ಈ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎನ್ನುವ ನನ್ನ ಎರಡನೆಯ ಪ್ರಶ್ನೆಗೆ ಮಾನ್ಯ ಸಚಿವರು,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

'ಸ್ಕ್ಯಾನಿಂಗ್ ಆಗಿರುವ ಭೂ ದಾಖಲೆಗಳನ್ನು ಸ್ಟೇಟ್ ಡಾಟಾ ಸೆಂಟರ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಸಾರ್ವಜನಿಕರ ಕೋರಿಕೆ ಮೇರೆಗೆ ಆರ್.ಟಿ.ಸಿ.ಗಳನ್ನು ವಿತರಿಸುವ ರೀತಿಯಲ್ಲಿ ರಾಜ್ಯದ ಎಲ್ಲಾ ಕಂದಾಯಾಧಿಕಾರಿಗಳ ಕಛೇರಿ, ನಾಡ ಕಛೇರಿ, ಅಟಲ್ ಜನಸ್ನೇಹಿ ಕೇಂದ್ರಗಳ ಕೌಂಟರ್ ಮೂಲಕ ವಿತರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ' ಎನ್ನುವ ಉತ್ತರವನ್ನು ನೀಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಆಕಾರ್‌ಬಂದ್ ಮತ್ತು ಟಿಪ್ಪಣಿಗಳು ಭೂಮಾಪನ ಇಲಾಖೆಗೆ ಬೆನ್ನೆಲುಬು ಇದ್ದಂತೆ. ಇದರಿಂದ ಜಮೀನುಗಳ ಮಾಹಿತಿಯನ್ನು ಪಡೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನನಗಿರುವಂತಹ ಮಾಹಿತಿಯ ಪ್ರಕಾರ ಹೇಳುವುದಾದರೆ, ಭೂಮಾಪನ ಇಲಾಖೆಗೆ ಸೀಮಿತವಾದಂತೆ ಆಕಾರ್‌ಬಂದ್ ಮತ್ತು ಟಿಪ್ಪಣಿಗಳನ್ನು 2005ನೇ ಸಾಲಿನವರೆಗೆ ಸ್ಕ್ಯಾನಿಂಗ್ ಮಾಡಿ ಸಂರಕ್ಷಣೆ ಮಾಡಲಾಗಿದೆ. ಅದರಲ್ಲೂ ಮನೀಶ್ ಮೌದ್ಗಿಲ್‌ರವರು, ಆಯುಕ್ತರಾಗಿ ಈ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಂತಹ ಕಾಲದಲ್ಲಿ ಕೆಲವು ದಿಟ್ಟವಾದ ಕ್ರಮಗಳನ್ನು ಕೈಗೊಂಡು, ದಾಖಲೆಗಳನ್ನು ಸಂರಕ್ಷಣೆ ಮಾಡುವಲ್ಲಿ ಉತ್ತಮವಾದ ಕೆಲಸವನ್ನು ಮಾಡಿದ್ದಾರೆಂದು ಕೇಳಿ ತಿಳಿದುಕೊಂಡಿದ್ದೇನೆ. 2005ನೇ ಇಸವಿಯ ನಂತರ ಭೂಮಾಪನ ಇಲಾಖೆಯಲ್ಲಿ ಆಗಿರುವಂತಹ ಆಕಾರ್‌ಬಂದ್ ದುರಸ್ತು ಮತ್ತು ಬದಲಾವಣೆಗಳನ್ನು ಸ್ಕ್ಯಾನಿಂಗ್ ಮಾಡಿಲ್ಲ ಎನ್ನುವುದು ಮೊದಲನೆಯ ಅಂಶ. ಇನ್ನೂ ಎರಡನೆಯದಾಗಿ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ತಹಸೀಲ್ದಾರ್ ಅವರ ಕಛೇರಿಯಲ್ಲಿರುವ ದಾಖಲೆಗಳನ್ನು ಸಂರಕ್ಷಣೆ ಮಾಡುವ ಕಾರ್ಯವನ್ನು ಮಾಡಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಈಗ ಸರ್ಕಾರ ಸಂರಕ್ಷಣೆ ಮಾಡಿರುವುದು ಭೂಮಾಪನ ಇಲಾಖೆಗೆ ಸೀಮಿತವಾಗಿ 2005ನೇ ಸಾಲಿನವರೆಗಿನ ಆಕಾರ್‌ಬಂದ್ ಮತ್ತು ಟಿಪ್ಪಣಿಗಳನ್ನು ಸ್ಕ್ಯಾನಿಂಗ್ ಮಾಡಿ ಸಂರಕ್ಷಣೆ ಮಾಡಲಾಗಿದೆ. ಕಂದಾಯ ಇಲಾಖೆಯ ಭೂ ಮಂಜೂರಾತಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಒಂದು ವೇಳೆ ಕ್ರಮ ಕೈಗೊಂಡಿದ್ದರೆ, ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ನೀಡಬೇಕಾಗಿದೆ. ಈಗ ಲಭ್ಯವಿರುವ ದಾಖಲೆಗಳನ್ನು ಮಾತ್ರ ಸ್ಕ್ಯಾನಿಂಗ್ ಮಾಡಲಾಗಿದೆ. ಆದರೆ, ಶೇಕಡಾ 20 ರಿಂದ 30ರಷ್ಟು ಆಕಾರ್‌ಬಂದ್, ಟಿಪ್ಪಣಿಗಳು ಮತ್ತು ನಕಾಶೆ ಇವುಗಳು ಶಿಥಿಲಗೊಂಡಿವೆ. ಇವುಗಳ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

ಇದರ ಜೊತೆಗೆ ಕಂದಾಯ ಇಲಾಖೆಯಲ್ಲಿ ಭೂ ಮಂಜೂರಾತಿ ಮಾಡಿರುವ ದಾಖಲೆಗಳನ್ನು ಒಳಗೊಂಡಿರುವ ಫೈಲ್‌ಗಳ ಪರಿವಿಡಿ ಮತ್ತು ವಿಷಯಪಟ್ಟಿ(Index and Catalogue) ಗಳನ್ನು ಸಂರಕ್ಷಣೆ ಮಾಡುವುದಕ್ಕೆ ಸರ್ಕಾರ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವ ಕ್ರಮವನ್ನು ಕೈಗೊಂಡಿದೆ; ಇಲ್ಲಿಯವರೆಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಮುಂದೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ತಾಲ್ಲೂಕು ಆಫೀಸಿನ ರೆಕಾರ್ಡ್ ರೂಂನಲ್ಲಿ ದಾಖಲಾತಿಗಳನ್ನು ಸಂರಕ್ಷಣೆ ಮಾಡುವ ಸಂದರ್ಭದಲ್ಲಿ ಯಾರೋ ಹೋಗಿ ಅಲ್ಲಿ ಕುಳಿತಿದ್ದು, ಸಹಿ ಮಾಡದೇ ಆಕಾರ್‌ಬಂದ್ ಅಥವಾ ಟಿಪ್ಪಣಿಯನ್ನು ತೆಗೆದುಕೊಂಡು ಹೋದರೆ ಕಥೆ ಮುಗಿದಂತೆ. ಆಗ ನನಗೂ ಹಾಗೂ ನನ್ನ ನೆರೆಯವನಿಗೂ ಜಮೀನಿನ ತಕರಾರು ಜೀವಮಾನ ಮುಗಿಯುವವರೆಗೂ ಶಾಶ್ವತವಾಗಿ ಇರುತ್ತದೆ. ಆದ್ದರಿಂದ ಸಂಬಂಧಪಟ್ಟವರ ಸಹಿ ಇಲ್ಲದೇ ದಾಖಲಾತಿ ಹೊರಹೋಗದಂತೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎನ್ನುವುದರ ಮಾಹಿತಿಯನ್ನು ನೀಡಬೇಕಾಗಿದೆ. ರೆಕಾರ್ಡ್ ರೂಂಗೆ ಸಿಸಿ ಟಿವಿ ಅಳವಡಿಸುವ ಯೋಜನೆ ಸರ್ಕಾರದ ಮುಂದಿದ್ದರೆ, ಅದರ ಬಗ್ಗೆ ತಿಳಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಮುಖ್ಯವಾಗಿರುವಂತಹ ಪ್ರಶ್ನೆಯಾಗಿದೆ. ಇದರ ಮೇಲೆ ಅರ್ಧಗಂಟೆ ಕಾಲಾವಧಿಯ ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟರೆ ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮ ತಾತ ಮುತ್ತಾತನ ಕಾಲದಲ್ಲಿ ಸರ್ವೆ ಮತ್ತು ರೀ–ಸರ್ವೆಗಳಾಗಿವೆ. ನಮ್ಮ ಜಿಲ್ಲೆಗೆ ಹೋಗಿ, 'ಯಾರು ಸರ್ವೆ ಮಾಡಿದ್ದರು' ಎನ್ನುವ ಪ್ರಶ್ನೆಯನ್ನು ಕೇಳಿದರೆ, 'ಮೊದಲ ಬಾರಿಗೆ ಮರಾಠರು ಬಂದು 1860ರಲ್ಲಿ ಮೊಸರು ಮಡಿಕೆ ಇಟ್ಟುಕೊಂಡು ಸರ್ವೆ ಮಾಡುತ್ತಿದ್ದರು' ಎಂದು ನಮ್ಮ ತಾತ ನಾನು ಚಿಕ್ಕ ಹುಡುಗನಾಗಿದ್ದಾಗ ಹೇಳುತ್ತಿದ್ದರು.

**ಶ್ರೀ ಎನ್. ಅಪ್ಪಾಜಿಗೌಡಃ–** ಸನ್ಮಾನ್ಯ ಸಭಾಪತಿಯವರೇ, ದಾಖಲೆಗಳು ಇರುವುದು ಸಹ ಮರಾಠಿ ಭಾಷೆಯಲ್ಲಿಯೇ.

**ಶ್ರೀ ಎಸ್. ರವಿಃ–** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡಿ ಮುಗಿದ ಮೇಲೆ ಮಾನ್ಯ ಅಪ್ಪಾಜಿಗೌಡರಿಗೆ ಮಾತನಾಡಲು ಅವಕಾಶವನ್ನು ನೀಡಿ.

ಸನ್ಮಾನ್ಯ ಸಭಾಪತಿಯವರೇ, 1860ರಲ್ಲಿ ಸರ್ವೆ ಕಾರ್ಯ ಪ್ರಾರಂಭ ಮಾಡಿದ್ದಾರೆ. 'ಸರ್ವೆ ಕೈಪಿಡಿ' ಯಲ್ಲಿ 30 ವರ್ಷಕ್ಕೊಮ್ಮೆ ರೀ–ಸರ್ವೆ ಮಾಡಬೇಕೆಂದು ಹೇಳಿದ್ದಾರೆ. ಇದುವರೆವಿಗೂ ರೀ–ಸರ್ವೆ ಕಾರ್ಯ ಆಗಿಲ್ಲ. 1960ರಲ್ಲಿ ಹಿಸ್ಸಾಗೆ ಸಂಬಂಧಪಟ್ಟಂತೆ ಮಾತ್ರ ಸರ್ವೆ ಆಗಿದೆ, ಸಂಪೂರ್ಣ ರೀ–ಸರ್ವೆ ಆಗಿಲ್ಲ. ಇದುವರೆವಿಗೂ ಯಾವುದೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡಿಲ್ಲ. ಈಗ ಬೆಂಗಳೂರಿನ ವಿಸ್ತಾರ ಹೆಚ್ಚಾಗಿದೆ, ರಾಷ್ಟ್ರೀಯ ಹೆದ್ದಾರಿಗಳು ನಿರ್ಮಾಣವಾಗಿವೆ. ಲೇಔಟ್‌ಗಳಾಗಿವೆ. ಕೆರೆ–ಜಲಾಶಯಗಳು ನಿರ್ಮಾಣಗೊಂಡಿವೆ. ಕಂದಾಯ ಇಲಾಖೆಯ ವ್ಯಾಪ್ತಿಯಲ್ಲಿ ಇದ್ದಂತಹ ಸರ್ಕಾರಿ ಗೋಮಾಳಗಳು, ಅರಣ್ಯ ಜಮೀನುಗಳಾಗಿ ಮತ್ತು ಸಾಮಾಜಿಕ ಅರಣ್ಯಗಳಾಗಿ ಪರಿವರ್ತನೆಗೊಂಡಿವೆ. ರಸ್ತೆಗಳು, ಕಾಲ್ದಾರಿಗಳು ದೊಡ್ಡದೊಡ್ಡ ರಸ್ತೆಗಳಾಗಿ ಪರಿವರ್ತನೆಗೊಂಡಿವೆ. ಆಟದ ಮೈದಾನಗಳು, ಸ್ಮಶಾನಗಳಾಗಿವೆ. ಇವುಗಳಲ್ಲದೆ, ಬೇರೆಬೇರೆ ಕಾರ್ಯಕ್ರಮಗಳಿಗೆ ಭೂಮಿಯನ್ನು ಮಂಜೂರು ಮಾಡಲಾಗಿದೆ. ಇವು ಯಾವುದರ ಬಗ್ಗೆಯೂ ಈಗ ಸರ್ವೆ ಆಗಿಲ್ಲ. ಹಿಂದೆ ಬ್ರಿಟಿಷ್ ಮತ್ತು ಮರಾಠರ ಕಾಲದಲ್ಲಿ ಆಗಿರುವ ಸರ್ವೆಯನ್ನೇ ಇವತ್ತಿಗೂ ಇಟ್ಟುಕೊಂಡಿದ್ದಾರೆ. ಮಾನ್ಯ ಕಂದಾಯ ಸಚಿವರು ಉಪ ಮುಖ್ಯಮಂತ್ರಿಗಳಾಗಿದ್ದವರು ಮತ್ತು ಪ್ರಭಾವಿಗಳಾಗಿರುವವರು. ಅವರ ಕಾಲದಲ್ಲಿ ಇದಕ್ಕೆ ಸಮರ್ಥವಾಗಿರುವ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ಬಹಳಷ್ಟು ಪ್ರಶ್ನೆಗಳಿವೆ. ಆದರೆ, ಇದು ಪ್ರಶ್ನೋತ್ತರ ವೇಳೆಯಾಗಿರುವುದರಿಂದ ಹೆಚ್ಚು ಬೆಳೆಸುವುದಕ್ಕೆ ಹೋಗದೇ ಇದಕ್ಕೆ ಸೂಕ್ತವಾಗಿರುವ ಉತ್ತರವನ್ನು ಮಾನ್ಯ ಕಂದಾಯ ಸಚಿವರಿಂದ ಬಯಸುತ್ತಿದ್ದೇನೆ.

**ಶ್ರೀ ಆರ್.ಅಶೋಕ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರು ಹೇಳಿರುವಂತಹ ಎಲ್ಲ ಅಂಶಗಳನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಸುಮಾರು 150 ವರ್ಷಗಳ ಹಿಂದೆ ತಯಾರು ಮಾಡಿರುವಂತಹ ದಾಖಲೆಗಳು ನಮ್ಮ ಇಲಾಖೆಯಲ್ಲಿವೆ. ಅದರಲ್ಲಿ ಶೇಕಡಾ 20ರಷ್ಟು ಬಹಳ ಹಳೆಯ ದಾಖಲೆಗಳಾಗಿವೆ. ಅವು ತುಂಡುತುಂಡಾಗಿವೆ. ಇವುಗಳನ್ನು ಸಂರಕ್ಷಣೆ ಮಾಡಬೇಕು ಮತ್ತು ಭದ್ರಪಡಿಸಬೇಕೆನ್ನುವ ಉದ್ದೇಶದಿಂದ ಈ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಲಾಗುತ್ತಿದೆ. ಮಾನ್ಯ ಸದಸ್ಯರು ಆಕಾರ್‌ಬಂದ್ ಮತ್ತು ಟಿಪ್ಪಣಿಗಳ ರಕ್ಷಣೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಜಮೀನಿನ ಮೂಲ ಟಿಪ್ಪಣಿ, ಮೂಲ ಪಕ್ಕಾ, ಮೂಲ ಪ್ರತಿ, ಹಿಸ್ಸಾ ಸರ್ವೆ, ಹಿಸ್ಸಾ ಸರ್ವೆ ಪಕ್ಕಾ, ಅಟ್ಲಾಸ್ ಮತ್ತು ಸ್ಕೆಚ್ ಈ ರೀತಿಯ 9 ದಾಖಲೆಗಳನ್ನು ಒಳಗೊಂಡ 3.83 ಕೋಟಿ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಿ ಈಗಾಗಲೇ ಸಂರಕ್ಷಣೆ ಮಾಡಲಾಗಿದೆ. ಇವುಗಳನ್ನು ಆರ್.ಟಿ.ಸಿ. ರೀತಿಯಲ್ಲಿ ವಿತರಿಸಲಾಗುತ್ತದೆಯೇ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ನಾನು ಮೇಲೆ ತಿಳಿಸಿರುವ 9 ರೀತಿಯ ದಾಖಲೆಗಳನ್ನು ರಾಜ್ಯದ ಎಲ್ಲಾ ಕಂದಾಯಾಧಿಕಾರಿಗಳ ಕಚೇರಿ, ನಾಡಕಚೇರಿ, ಅಟಲ್ ಜನಸ್ನೇಹಿ ಕೇಂದ್ರಗಳ ಕೌಂಟರ್ ಮೂಲಕ ವಿತರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

**ಶ್ರೀ ಎಸ್.ರವಿ:–** ಸನ್ಮಾನ್ಯ ಸಭಾಪತಿಯವರೇ, ಅಟ್ಲಾಸ್‌ಗೂ ಪಾಣಿಗೂ ತಾಳೆಯಾಗುವುದಿಲ್ಲ. ಅದೇ ಸಮಸ್ಯೆಯಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್. ಅಶೋಕ್:–** ಸನ್ಮಾನ್ಯ ಸಭಾಪತಿಯವರೇ, ಆ ದಾಖಲೆಗಳನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಈ ಕ್ರಮವನ್ನು ತೆಗೆದುಕೊಳ್ಳಲಾಗಿದೆ. 2010ನೇ ಇಸವಿಯಿಂದ ಭೂ ದಾಖಲೆಗಳ ಸ್ಕ್ಯಾನಿಂಗ್ ಕಾರ್ಯ ಪ್ರಾರಂಭಗೊಂಡಿದ್ದು, ಇಲ್ಲಿಯವರೆಗೆ 32 ಸಾವಿರ ಗ್ರಾಮಗಳ ಪೈಕಿ 26,812 ಗ್ರಾಮಗಳ ಆಕಾರಬಂದ್ ಸ್ಕ್ಯಾನಿಂಗ್ ಕಾರ್ಯ ಪೂರ್ಣಗೊಂಡಿದೆ. ಇದರ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಇದನ್ನು ಮುಂದಿನ 6 ತಿಂಗಳೊಳಗಾಗಿ ಪೂರ್ಣಗೊಳಿಸಲು ಸರ್ಕಾರವು ಕ್ರಮಕೈಗೊಂಡಿದೆ. ತದನಂತರ ಈ ದಾಖಲೆಗಳನ್ನು ಗಣಕಯಂತ್ರದ ಮೂಲಕ ಕೂಡಲೇ ವಿತರಿಸುವಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಎಸ್. ರವಿ:–** ಸನ್ಮಾನ್ಯ ಸಭಾಪತಿಯವರೇ, ಶಿಥಿಲಗೊಂಡಿರುವ ದಾಖಲೆಗಳನ್ನು ಯಾವ ರೀತಿಯಲ್ಲಿ ಸಂರಕ್ಷಣೆ ಮಾಡಲಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕಾಗಿದೆ. ಈಗ ಅವರು ಮಾಹಿತಿ ನೀಡುತ್ತಿರುವುದು ಭೂಮಾಪನ ಇಲಾಖೆಗೆ ಸಂಬಂಧಪಟ್ಟಿರುವುದಾಗಿದೆ. ಕಂದಾಯ ಇಲಾಖೆಗೆ ಸಂಬಂಧಪಟ್ಟ ದಾಖಲೆಗಳ ಸ್ಕ್ಯಾನಿಂಗ್ ಮಾಡುವ ಕಾರ್ಯವನ್ನು ಇಲ್ಲಿಯವರೆಗೆ ಪ್ರಾರಂಭಿಸಿಲ್ಲ. ಆ ದಾಖಲೆಗಳು ಎಷ್ಟಿವೆ ಎನ್ನುವುದು ಸಹ ಇವರಿಗೆ ಗೊತ್ತಿಲ್ಲ. 2005ನೇ ಇಸವಿಯ ನಂತರ ಆಗಿರುವಂತಹ ದರಖಾಸ್ತು ಪೋಡಿಯ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎನ್ನುವುದರ ಬಗ್ಗೆ ನಾನು ಸ್ಪಷ್ಟವಾಗಿರುವ ಉತ್ತರವನ್ನು ಬಯಸುತ್ತಿದ್ದೇವೆ.

**ಶ್ರೀ ಆರ್. ಅಶೋಕ:–** ಸನ್ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆಯಲ್ಲಿ ಈಗಾಗಲೇ ಇರುವಂತಹ ಗ್ರಾಂಟ್ ರೆಕಾರ್ಡ್‌ಗಳನ್ನು ಸ್ಕ್ಯಾನ್ ಮಾಡುವ ಕೆಲಸವನ್ನು ಕೆಲವು ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ. ಉಳಿದಂತಹ ಜಿಲ್ಲೆಗಳಲ್ಲಿ ಮುಂದಿನ 6 ತಿಂಗಳುಗಳಲ್ಲಿ ಸ್ಕ್ಯಾನ್ ಮಾಡುವ ಕಾರ್ಯವನ್ನು ತೆಗೆದುಕೊಳ್ಳಲಾಗುವುದು. ಇತ್ತೀಚೆಗೆ ಸರ್ವೆ ಮಾಡಬೇಕೆನ್ನುವುದರ ಬಗ್ಗೆಯೂ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. 1940ರಲ್ಲಿ ಸರ್ವೆ ಆಗಿದೆ.

**ಶ್ರೀ ಎಸ್. ರವಿ:–** ಸನ್ಮಾನ್ಯ ಸಭಾಪತಿಯವರೇ, 1940 ಅಲ್ಲ 1960ರಲ್ಲಿ ಹಿಸ್ಸಾಗೆ ಸಂಬಂಧಪಟ್ಟಂತೆ ರೀ–ಸರ್ವೆ ಕಾರ್ಯ ಆಗಿದೆ, ಇದು ಸಂಪೂರ್ಣ ಸರ್ವೆ ಅಲ್ಲ.

**ಶ್ರೀ ಆರ್. ಅಶೋಕ್:–** ಸನ್ಮಾನ್ಯ ಸಭಾಪತಿಯವರೇ, ಡ್ರೋಣ್ ಮುಖಾಂತರ ಸರ್ವೆ ಮಾಡುವ ವ್ಯವಸ್ಥೆಯನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ರೀ–ಸರ್ವೆ ಮಾಡುವುದಕ್ಕೆ ಈಗಾಗಲೇ ಕ್ರಮಕೈಗೊಳ್ಳಲಾಗಿದೆ. ಮಾನ್ಯ ಸದಸ್ಯರು ಹೇಳಿದಂತೆ, ಕೋರ್ಟ್‌ಗಳಲ್ಲಿ ಕೇಸ್ ಬಂದಾಗ ಅಥವಾ ಬೇರೆಬೇರೆ ಜಿಲ್ಲಾಧಿಕಾರಿಗಳ ಮುಂದೆ ಕೇಸ್ ಬಂದಾಗ ಸರ್ಕಾರಿ ದಾಖಲೆಗಳು ಕಾಣೆಯಾಗಿವೆ. ಹರಿದು ಹೋಗಿವೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಮುಂದುವರಿದಿದೆ)

(323) 11.3.2020 4.50 ಪಿಕೆ:ಆರ್‌ಎನ್

**ಶ್ರೀ ಆರ್.ಅಶೋಕ್(ಮುಂದುವರೆದಿದೆ)**

ಒಟ್ಟು ಶೇಕಡ 20 ರಷ್ಟು ಶಿಥಿಲವಾಗಿವೆ. ಅಷ್ಟೆಲ್ಲವನ್ನೂ ಪುನರ್ನಿರ್ಮಾಣ ಮಾಡುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತಿದ್ದೇವೆ. 6 ತಿಂಗಳ ಅವಧಿಯೊಳಗೆ ಇಡೀ ನಮ್ಮ ರಾಜ್ಯದ ಶಿಥಿಲಗೊಂಡಿರುವಂತಹ, ಕಂದಾಯ ಇಲಾಖೆ ಮತ್ತು ಸರ್ವೇ ಇಲಾಖೆಯ ಎಲ್ಲಾ ಕಾಗದ ಪತ್ರಗಳ ಪುನರ್ನಿರ್ಮಾಣ ಮಾಡುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಎಸ್.ರವಿ:–** ನಾನು ಸಿಸಿ ಟಿವಿ ಅಳವಡಿಸುವುದರ ಬಗ್ಗೆ ಕೇಳಿದೆ. ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಟ್ಟರೆ ಈ ವಿಚಾರದ ಮೇಲೆ ಹೆಚ್ಚು ಬೆಳಕು ಚೆಲ್ಲಬಹುದು.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಕೇಳುವುದಕ್ಕೆ ಮುಂಚೆ ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಹಾಕಿಕೊಳ್ಳಿ ಎಂದು ಹೇಳಿದ್ದರೆ ಸರಿಯಾಗುತ್ತಿತ್ತು. ಆದರೆ, ಈಗ ಎಲ್ಲಾ ರೀತಿಯಲ್ಲೂ ಪ್ರಶ್ನೆಗಳನ್ನು ಕೇಳಿಬಿಟ್ಟಿದ್ದಾರೆ.

(ಗೊಂದಲ)

**ಶ್ರೀ ಟಿ.ಎ.ಶರವಣ:–** ನೀವು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ ಎಂದು, ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನೋಟಿಸ್ ಕೊಡುತ್ತೇವೆ. ಮಾನ್ಯ ಸಭಾಪತಿಯವರೇ, ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಎಸ್.ರವಿ:–** ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಹಾಕಿಕೊಂಡರೆ ಇನ್ನೂ ಹೆಚ್ಚಿನ ಮಾಹಿತಿ ಸಿಗುತ್ತದೆ, ಅಧಿಕಾರಿಗಳಿಗೂ ಅದರ ಅರಿವು ಆಗುತ್ತದೆ, ಇದರ ಮಹತ್ವ ಎಲ್ಲರಿಗೂ ಅರ್ಥವಾಗುತ್ತದೆ. ಒಳ್ಳೆಯ ಕೆಲಸ ಮಾಡಲು ಹೊರಟಿರುವ ನಿಮಗೂ ಪೂರಕವಾಗುತ್ತದೆ. ದಯಮಾಡಿ ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆರ್.ಅಶೋಕ್:–** ಮಾನ್ಯ ಸದಸ್ಯರು ಮಾತನಾಡುತ್ತಾ, ಸಿಸಿ ಟಿವಿ ಅಳವಡಿಸುವುದರ ಬಗ್ಗೆ ಪ್ರಸ್ತಾಪ ಮಾಡಿದರು. ಈ ಕುರಿತು ಮಾತನಾಡಲು ನಾನು ಅಧಿಕಾರಿಗಳ ಸಭೆಯನ್ನು ಕರೆದಿದ್ದೇನೆ. ನಾನು ಕಳೆದ 6 ತಿಂಗಳಿನಿಂದ ಈ ಇಲಾಖೆಗೆ ಮಂತ್ರಿಯಾಗಿದ್ದೇನೆ. ಬ್ರಿಟಿಷರ ಕಾಲದಿಂದಲೂ ಕಂದಾಯ ಇಲಾಖೆ ಮಾತೃ ಇಲಾಖೆಯಂತಿದೆ. ಕಂದಾಯ ಇಲಾಖೆಯಲ್ಲಿ ನೂರಾರು ಸಮಸ್ಯೆಗಳಿವೆ. ಕಂದಾಯ ಇಲಾಖೆಯೆಂದರೆ ಅಲೆಸುವಂತಹ ಇಲಾಖೆ ಎಂಬುದು ಜಗಜ್ಜಾಹೀರಾದ ಮಾತಾಗಿದೆ. ಕಚೇರಿಗಳಿಗೆ ಹೋದರೆ ತಹಸೀಲ್ದಾರರು ಸಿಗುವುದಿಲ್ಲ, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಸಿಗುವುದಿಲ್ಲ, ವಿಲೇಜ್ ಅಕೌಂಟೆಂಟ್‌ಗಳನ್ನು ನೋಡಿ ತಿಂಗಳಾನುಗಟ್ಟಲೆ ಆಗಿರುತ್ತದೆ, ಕಚೇರಿಗೆ ಬರುವುದೇ ಇಲ್ಲ, ಮನೆಯಲ್ಲೇ ಕುಳಿತುಕೊಂಡು ಕೆಲಸ ಮಾಡುತ್ತಾರೆ ಎನ್ನುವಂತಹ ಮಾತುಗಳನ್ನು ನಿರಂತರವಾಗಿ ಕೇಳುತ್ತಿರುತ್ತೇವೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಅವರು ಸಿಗುವಂತಹ ಜಾಗ ಬೇರೆಯೇ ಇದೆ. ಬೇರೆ ತರಹ ಹೋದರೆ ಸಿಗುತ್ತಾರೆ, ನೇರವಾಗಿ ಹೋದರೆ ಸಿಗುವುದಿಲ್ಲ ಅಷ್ಟೆ. ಇಂತಹದ್ದು ನನಗೆ ಅನುಭವವಾಗಿದೆ, ಅದಕ್ಕೋಸ್ಕರ ಹೇಳುತ್ತಿದ್ದೇನೆ.

**ಶ್ರೀ ಆರ್.ಅಶೋಕ್:–** ಮಾನ್ಯ ರವಿಯವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಇಲಾಖೆಯವರು ಈ ನಿಟ್ಟಿನಲ್ಲಿ ಪ್ಲ್ಯಾನ್ ಮಾಡಿದ್ದಾರೆ. ಪ್ರತಿ ವಿಲೇಜ್ ಅಕೌಂಟೆಂಟ್ ಮುಂದೆ ಸಿಸಿ ಟಿವಿ ಯನ್ನು ಅಳವಡಿಸಿದರೆ ಆತ 8 ಗಂಟೆಗಳ ಕಾಲ ಕೆಲಸ ಮಾಡುತ್ತಾನೆಯೇ ಅಥವಾ ಮಧ್ಯದಲ್ಲಿ ಎದ್ದು ಹೋಗುತ್ತಾನೆಯೇ ಎನ್ನುವುದನ್ನು ನೋಡಬಹುದು. ಕರೆಂಟ್, ಬ್ಯಾಟರಿ, ಸಿಸ್ಟಮ್‌ಗಳ ವ್ಯವಸ್ಥೆ ಮಾಡುತ್ತೇವೆ; ಮೊಬೈಲ್ ಲಿಂಕ್ ಕೊಟ್ಟಿರುತ್ತೇವೆ. ಕನೆಕ್ಷನ್ ಕಟ್ ಮಾಡುವ ಸಾಧ್ಯತೆ ಇರುತ್ತದೆ, ಆದರೆ ಅದಕ್ಕೂ ಬೇರೆ ವ್ಯವಸ್ಥೆ ಮಾಡುತ್ತೇವೆ. ನಮ್ಮ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕುಳಿತು, ಕಂಪ್ಯೂಟರ್ ಮೂಲಕ ಆತನ ಮೊಬೈಲ್ ಲಿಂಕ್ ತೆಗೆದುಕೊಂಡರೆ ಆತ ಕಂಪ್ಯೂಟರ್‌ನಲ್ಲಿ ಕಾಣಿಸುವ ವ್ಯವಸ್ಥೆ ಆಗುತ್ತದೆ. ಮತ್ತೆ, ಎಲ್ಲೆಲ್ಲಿ ಯಾವ ಯಾವ ನೆಟ್‌ವರ್ಕ್ ಕೆಲಸ ಮಾಡುತ್ತದೆಯೋ ಅಂದರೆ, ಅದು ಬಿಎಸ್‌ಎನ್‌ಎಲ್ ಇರಬಹುದು, ವೊಡಾ ಫೋನ್ ಇರಬಹುದು, ಏರಟೆಲ್ ಇರಬಹುದು ಆ ಮೂಲಕ ಅರೆಂಜ್‌ಮೆಂಟ್ ಮಾಡುತ್ತೇವೆ. ಒಟ್ಟಿನಲ್ಲಿ ಆತ ಲಿಂಕ್‌ಗೆ ಸಿಗಬೇಕು, ಜನರಿಗೆ ಸಿಗಬೇಕು. ಹಿಂದೆ ಮಾನ್ಯ ವೀರೇಂದ್ರ ಪಾಟೀಲ್‌ರವರ ಕಾಲದಲ್ಲಿ ಮಾನ್ಯ ರಾಜಶೇಖರ್ ಮೂರ್ತಿಯವರು ಮಂತ್ರಿಗಳಾಗಿದ್ದಾಗ, ವಿಲೇಜ್ ಅಕೌಂಟೆಂಟ್‌ಗಳು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಕಚೇರಿಯಲ್ಲಿ ಸಿಗುತ್ತಿದ್ದರು; ಹೊರಗೆ ಹೋಗುವುದಕ್ಕೆ ಭಯ ಪಡುತ್ತಿದ್ದರು. ನಾವು ಚಿಕ್ಕವರಿದ್ದಾಗ ಇವೆಲ್ಲವನ್ನೂ ನೋಡಿದ್ದೇವೆ. ಆದರೆ ಪರಿಸ್ಥಿತಿ ಈಗ ಬೇರೆ ಇದೆ. ಉದ್ದೇಶಿತ ವ್ಯವಸ್ಥೆ ಜಾರಿಗೆ ತರುವುದರಿಂದ ಈ ಅಧಿಕಾರಿಗಳು ಜನರ ಕೈಗೆ ಸಿಗುತ್ತಾರೆ. ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕುಳಿತು ತಹಸೀಲ್ದಾರ್‌ರವರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಚೇರಿಯಲ್ಲಿ ಎಷ್ಟು ಗಂಟೆ ಕೆಲಸ ಮಾಡುತ್ತಾರೆ ಎಂದು ನೋಡಬಹುದು. ಮಾನ್ಯ ರವಿಯವರು ಏನು ಸಿಸಿ ಟಿವಿ ಬಗ್ಗೆ ಮಾತನಾಡಿದರೋ ಅದನ್ನು ಕಾರ್ಯರೂಪಕ್ಕೆ ತರುವಂತಹ ಪ್ರಯತ್ನ ಇಲಾಖೆಯಲ್ಲಿ ಮಾಡಲಾಗುತ್ತದೆ. ಇನ್ನು ಮುಂದೆ ವಿಲೇಜ್ ಅಕೌಂಟೆಂಟ್ ಕೂಡ ಕಚೇರಿಯಲ್ಲಿ ಬೆಳಿಗ್ಗೆ 10 ಗಂಟೆಯಿಂದ 5 ಗಂಟೆಯವರೆಗೆ ಕೆಲಸ ಮಾಡಬೇಕು. ಆ ರೀತಿಯ ಕಟ್ಟುನಿಟ್ಟಿನ ವ್ಯವಸ್ಥೆ ತರುವ ಸಂಬಂಧ ಪ್ರಾಮಾಣಿಕ ಪ್ರಯತ್ನವನ್ನು ಈಗಾಗಲೇ ಇಲಾಖೆಯಿಂದ ಮಾಡಲಾಗುತ್ತಿದೆ.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಸರ್ವೇಯರ್‌ಗಳ ಹುದ್ದೆ ಭರ್ತಿ ಮಾಡದೇ ಇರುವುದರಿಂದಲೂ ಸರ್ವೇ ಕಾರ್ಯ ವಿಳಂಬವಾಗುತ್ತಿದೆ.

**ಸಭಾಪತಿಯವರು:–** ಈ ಕುರಿತು ಮಾತನಾಡಲು ಕೈ ಎತ್ತಿದವರಿಗೆಲ್ಲಾ ಅವಕಾಶ ಮಾಡಿಕೊಟ್ಟರೆ ಇನ್ನೂ ಅರ್ಧಗಂಟೆ ಆಗುತ್ತದೆ. ಮಾನ್ಯ ಸಚಿವರೇ ಏನು ಹೇಳುತ್ತೀರಿ?

**ಶ್ರೀ ಆರ್.ಅಶೋಕ್:–** ತಾವು ಹೇಗೆ ತೀರ್ಮಾನ ಮಾಡುತ್ತೀರೋ ಅದಕ್ಕೆ ನನ್ನ ಸಹಮತ ಇರುತ್ತದೆ. ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ.

**ಸಭಾಪತಿಯವರು:–** **ಆಯಿತು, ಇದನ್ನು ಅರ್ಧಗಂಟೆ ಚರ್ಚೆಗೆ ಹಾಕಿಕೊಳ್ಳುತ್ತೇವೆ.**

ಪ್ರಶ್ನೆ ಸಂಖ್ಯೆ: 823
(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು; ಇದರಲ್ಲಿ ಎಷ್ಟು ಅರ್ಜಿಗಳನ್ನು ವಿಲೇವಾಗಿ ಮಾಡಲಾಗಿದೆ; ಬಾಕಿ ಇರುವ ಅರ್ಜಿಗಳೆಷ್ಟು; ಬಾಕಿ ಇರುವ ಅರ್ಜಿಗಳನ್ನು ವಿಲೇವಾರಿ ಮಾಡುವುದು ಯಾವಾಗ ಎನ್ನುವ ಪ್ರಶ್ನೆಯ ಜೊತೆ ಇನ್ನೂ ಮೂರು ಪ್ರಶ್ನೆಗಳನ್ನು ಕೇಳಿದ್ದೇನೆ. ಮಾನ್ಯ ಸಚಿವರು ಇವುಗಳಿಗೆ ಉತ್ತರ ಕೊಟ್ಟಿದ್ದಾರೆ. ಬಾಕಿ ಇರುವುದು 11467, ಇದರಲ್ಲಿ ಚೆನ್ನರಾಯಪಟ್ಟಣದಲ್ಲಿ ಬಾಕಿ ಇರುವುದು 3294 ಎಂದು ಹೇಳಿದ್ದಾರೆ. ಪೋಡಿ ಬಗ್ಗೆ, ದುರಸ್ತಿ ಬಗ್ಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ತಕರಾರು ಇರುವ ಜಮೀನುಗಳ ಪೋಡಿಯನ್ನು ಮಾಡುತ್ತಿಲ್ಲ ಎನ್ನುವ ಬಗ್ಗೆ ಸಾಕಷ್ಟು ದೂರುಗಳಿವೆ. ತಕರಾರು ಇರುವ ಜಮೀನಿಗಳಿಗೆ ಪೋಡಿ ಮಾಡಿಕೊಡಲು ಸರ್ಕಾರ ಅವಕಾಶ ಮಾಡಿಕೊಡುವುದೇ? ಸರ್ಕಾರಿ ಯೋಜನೆಗಳಿಗೆ ಮಂಜೂರಾದ, ಅಂದರೆ ದರಖಾಸ್ತು ಆದ ಜಮೀನುಗಳ ಸರ್ವೇ ಕಾರ್ಯ ಮಾಡಲು ಸಾಕಷ್ಟು ವಿಳಂಬ ಮಾಡುತ್ತಿರುವುದನ್ನು ತಡೆಯಲು ಕ್ರಮ ಕೈಗೊಳ್ಳುವುದೇ? ಸರ್ಕಾರಿ ಯೋಜನೆಗಳು ಹಾಗೂ ರೈತರಿಗೆ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅನುಕೂಲವಾಗುವಂತಹ ನೀರಾವರಿ ಯೋಜನೆಗಳು ಕುಂಠಿತವಾಗಿ ಸಾಗುತ್ತಿರುವ ಪ್ರಕರಣಗಳನ್ನು ಶೀಘ್ರ ಇತ್ಯರ್ಥಪಡಿಸಲು ಸರ್ಕಾರ ಅವಕಾಶ ಕಲ್ಪಿಸುತ್ತದೆಯೇ? ದರಖಾಸ್ತು ಮುಖಾಂತರ ಮಂಜೂರಾದ ಜಮೀನುಗಳನ್ನು ಏಕಮುಕ್ತ ಪೋಡಿ ಮಾಡಿಕೊಡಲು ತಹಸೀಲ್ದಾರರಿಗೆ ಅಧಿಕಾರ ನೀಡಿದ್ದರೂ ಸಹ, Deputy Director of Land Records and Regional Commissioner ಕಛೇರಿಗೆ ಸುತ್ತಿಸುವ ಕೆಲಸ ಆಗುತ್ತದೆ. ಅದೂ ಕುಡ ಆಗಬಾರದು, ಅದು ತಹಸೀಲ್ದಾರರ ಹಂತದಲ್ಲೇ ಆಗಬೇಕು. ಸಾರ್ವಜನಿಕರು ಸರ್ಕಾರಿ ಕಚೇರಿಗೆ ಹೋದಂತಹ ಸಂದರ್ಭದಲ್ಲಿ ಅಧಿಕಾರಿ ನಿಯಮ 125 ಅಡಿಯಲ್ಲಿ ಪೋಡಿ ವಗೈರೆ ಮಾಡಲು O.M ಕಾಪಿ ಇದೆಯೇ ಅಥವಾ ಸ್ಕೆಚ್ ಇದೆಯೇ ಎಂದು ಕೇಳುತ್ತಾರೆ ಮತ್ತು ಸುಮ್ಮನೆ ವಿಳಂಬ ಮಾಡುತ್ತಾರೆ. ಆದರೆ ಖಾಸಗಿ ಜಮೀನು ಎಂದರೆ, ಪಿತ್ರಾರ್ಜಿತ ಆಸ್ತಿಯನ್ನು ಮಾಡತಕ್ಕಂಥ ಕೆಲಸ ಮಾಡುತ್ತಾರೆ. ದರಖಾಸ್ತು ಆಗಿರುವ ಸರ್ಕಾರಿ ಜಮೀನು ಎಂದರೆ ವಿಳಂಬ ಮಾಡುತ್ತಾರೆ. ತತ್ಕಾಲ್‌ನಲ್ಲಿ ಮಾಡಿದರೂ ಕೂಡ ಫೀ ಜಾಸ್ತಿ ಇರುತ್ತದೆ, ಇಲ್ಲವೇ ಲಂಚಾ ಕೇಳುತ್ತಾರೆ, ಸುಮ್ಮನೆ ಸುತ್ತಿಸುವಂಥದ್ದು ಆಗುತ್ತದೆ. ಮಾನ್ಯ ರವಿಯವರು ಹೇಳಿದ ಹಾಗೆ ಸರ್ವೇ ಇಲಾಖೆ ಎನ್ನುವುದು ಬೆನ್ನೆಲುಬಾಗಿದೆ, ಅದು ನೂರಕ್ಕೆ ನೂರು ಸತ್ಯ. ಈ ಕುರಿತು ಚರ್ಚೆ ಮಾಡುವುದಕ್ಕೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಇದು ಕೂಡ ಅರ್ಧಗಂಟೆ ಕಾಲಾವಧಿ ಚರ್ಚೆಯ ಅಡಿಯಲ್ಲಿಯೇ ಬರುತ್ತದೆ. ಶ್ರೀಮತಿ ಜೈಮಾಲ ರಾಮಚಂದ್ರ ನಿಮ್ಮ ಪ್ರಶ್ನೆ 869ಕ್ಕೆ ಕಾಲಾವಕಾಶ ಕೇಳಿದ್ದಾರೆ. ಮಾನ್ಯ ಹೆಚ್.ಎಂ.ರೇವಣ್ಣನವರೇ, ನಿಮ್ಮ ಪ್ರಶ್ನೆ ಸಂಖ್ಯೆ: 812 ವರ್ಗಾವಣೆಯಾಗಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು ರಿಕ್ರಿಯೇಷನ್ ಕ್ಲಬ್‌ಗಳ ಬಗ್ಗೆ ಕೇಳಿದ್ದೆ. ಮಾನ್ಯ ಸಚಿವರು ಇಲ್ಲೇ ಇದ್ದಾರೆ.

**ಸಭಾಪತಿಯವರು:–** ಈಗ ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಂತರ ನಿಮ್ಮ ಪ್ರಶ್ನೆ ತೆಗೆದುಕೊಳ್ಳಲಾಗುವುದು.

**ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ: 446**

(ಉತ್ತರ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗಳಿಗೆ ಕಂದಾಯ ಇಲಾಖೆಯ ಅಧಿಕಾರಿಗಳು ಬಹಳ ಜಾಣತನದಿಂದ ಉತ್ತರ ಕೊಟ್ಟಿದ್ದಾರೆ.

(ಮುಂದು...)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(324)11–03–2020 5.00 ಡಿಎಸ್–ಆರ್‌ಎನ್

**ಶ್ರೀ ಎನ್.ಅಪ್ಪಾಜಿಗೌಡ(ಮುಂದು):**

ನನ್ನ ಪ್ರಶ್ನೆ ಏನೆಂದರೆ, ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಮ/441/ಗ್ರಾಪಂಅ/2016 ದಿನಾಂಕ:28.10.2016ರ ಪ್ರಕಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಠಾಣ ಗಡಿ ತುಂಬಾ ಹಿಂದೆ ನಿಗದಿಪಡಿಸಿದ್ದು, ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ ಗ್ರಾಮಠಾಣವನ್ನು ಪುನರ್ ನಿಗದಿಪಡಿಸಿರುವ ಪ್ರಕರಣಗಳೆಷ್ಟು; ಜಿಲ್ಲಾವಾರು, ತಾಲ್ಲೂಕುವಾರು, ಹೋಬಳಿವಾರು ಗ್ರಾಮಗಳ ಮಾಹಿತಿ ನೀಡಬೇಕೆಂದು ಕೇಳಿದ್ದೆ. ಮತ್ತೊಂದು ಪ್ರಶ್ನೆ ಏನೆಂದರೆ, ಮೇಲ್ಕಂಡ ಸುತ್ತೋಲೆ ಪ್ರಕಾರ ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮಠಾಣಕ್ಕೆ ಹೊಂದಿಕೊಂಡಿರುವ ಗ್ರಾಮಗಳ ಬೆಳವಣಿಗೆಯಾಗಿದ್ದು, ಅಭಿವೃದ್ಧಿಗೊಂಡ ಈ ಪ್ರದೇಶಗಳನ್ನು ಗ್ರಾಮ ಠಾಣ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಗ್ರಾಮಠಾಣಗಳ ವಿಸ್ತರಣೆ ಕಾರ್ಯವನ್ನು ಪೂರ್ಣಗೊಳಿಸಲು ಯಾವ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ ಎಂದು ಪ್ರಶ್ನೆ ಕೇಳಿದ್ದೆ. ಅದರ ಜೊತೆಗೆ, ಸದರಿ ಕಾರ್ಯವು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕಾರ್ಯವನ್ನು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ಎಂದು ಪ್ರಶ್ನೆಯನ್ನು ಕೇಳಿದ್ದೆ. ಇಲ್ಲಿ ಎಲ್ಲರೂ ಮಾನ್ಯ ಕಂದಾಯ ಸಚಿವರು ಸೇರಿದ ಹಾಗೆ, ಮಾನ್ಯ ಕಂದಾಯ ಸಚಿವರ ಗ್ರಾಮ ಸುಮಾರು 30 ವರ್ಷಗಳ ಹಿಂದೆ ಜಾಲಹಳ್ಳಿಯಾಗಿತ್ತು. ಈಗ ಬಿಬಿಎಂಪಿ ವ್ಯಾಪ್ತಿಗೆ ಬಂದಿದೆ. ಅದೇ ರೀತಿ ಇಲ್ಲಿ ಎಲ್ಲರೂ ಶಾಸಕರು, ಅಧಿಕಾರಿಗಳು ಇದ್ದಾರೆ. ಗಮನಿಸಬೇಕಾದ ಅಂಶವೇನೆಂದರೆ, ಒಂದು ಮನೆಯಲ್ಲಿ ಆರು ಜನ ಮಕ್ಕಳು ಹುಟ್ಟಿ ಎಲ್ಲೆಲ್ಲಿ ಅವರ ಜಮೀನುಗಳಿದ್ದವೋ ಅಲ್ಲಿ ಎಲ್ಲರೂ ಕೂಡ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದು ಸ್ವಾತಂತ್ರ್ಯ ಪೂರ್ವದಲ್ಲಿ ನಿಗದಿಪಡಿಸಿರುವ ಗ್ರಾಮಠಾಣ ಗಡಿ. ಈಗ ಬಿಬಿಎಂಪಿ, ಬಿಡಿಎ, ಇದೆ. ಹತ್ತು ವರ್ಷಕ್ಕೆ ಒಂದು ಸಲ ಬಿಡಿಎ ನಲ್ಲಿ ಮಹಾನಕ್ಷೆಯನ್ನು ತಯಾರು ಮಾಡುತ್ತೇವೆ. ಎಲ್ಲೆಲ್ಲಿ ಟೌನ್ ಪ್ಲಾನಿಂಗ್ ಅಥಾರಿಟಿ ಇದೆ ಅಲ್ಲಿ ಹತ್ತು ವರ್ಷಕ್ಕೆ ಒಂದು ಸಲ ಈ ಯೋಜನೆಯನ್ನು ನಾವು ಪರಿಷ್ಕೃತ ಮಾಡುತ್ತೇವೆ. ಅದೇ ರೀತಿ ಸ್ವಾತಂತ್ರ್ಯ ಪೂರ್ವದಲ್ಲಿ ಆಗಿರುವ ಗ್ರಾಮಠಾಣ ಗಡಿಯನ್ನು ಯಾರು ಕೂಡ ವಿಸ್ತರಣೆ ಮಾಡುವಂತಹ ಕೆಲಸ ಮಾಡಲಿಲ್ಲ. ಪಂಚಾಯಿತಿಯ ಇಲಾಖೆ, ಕಂದಾಯ ಇಲಾಖೆ ಎರಡೂ ಸೇರಿ 2016 ರಲ್ಲಿ ಸುತ್ತೋಲೆ ಹೊರಡಿಸಿತು. ಆ ಸುತ್ತೋಲೆ ಪ್ರಕಾರ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ನನ್ನ ಸಲಹೆ ಏನೆಂದರೆ, ಮಾನ್ಯ ರವಿಯವರು ಹೇಳಿದ ಹಾಗೆ ಇವೆಲ್ಲಾ ಒಂದಕ್ಕೊಂದು ಸಂಬಂಧಪಡುವಂತಹ ಇಲಾಖೆಗಳು. ಆದ್ದರಿಂದ ಕಂದಾಯ ಇಲಾಖೆಯನ್ನು ಸರಿಪಡಿಸಬೇಕು. ನಮ್ಮ ರೈತರು ನೆಮ್ಮದಿಯಾಗಿ ಕೃಷಿ ಜೀವನ ನಡೆಸಬೇಕಾದರೆ ಆರ್.ಟಿ.ಸಿ., ಪೋಡಿ, ಸರ್ವೆ, ಟಿಪ್ಪಣಿ ಮತ್ತು ಅಟ್ಲಾಸ್ ಇದು ಬಹಳ ಮುಖ್ಯ. ಹಾಗಾಗಿ ತಮ್ಮ ಮುಖಾಂತರ ಮಾನ್ಯ ಕಂದಾಯ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಮೂರು ಪ್ರಶ್ನೆಗಳನ್ನು ಸಮೀಕರಿಸಿ ಅರ್ಧ ಗಂಟೆ ಚರ್ಚೆಗೆ ತೆಗೆದುಕೊಂಡು ಈ ಸಮಸ್ಯೆಯನ್ನು ಬಗೆಹರಿಸಿದರೆ ನಿಜವಾಗಿಯೂ ಕೂಡ ಮಾನ್ಯ ಕಂದಾಯ ಸಚಿವರಿಗೆ ಬಹಳ ಒಳ್ಳೆಯ ಹೆಸರು ಬರುತ್ತದೆ. ರೈತರು ಮಾನ್ಯ ಕಂದಾಯ ಸಚಿವರನ್ನು ನೆನಪಿಸಿಕೊಳ್ಳುತ್ತಾರೆ ಎನ್ನುವುದು ನನ್ನ ಭಾವನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಎಲ್ಲಾ ಮರ್ಜ್ ಮಾಡಿ ಎಂದು ಹೇಳುತ್ತಿದ್ದಾರೆ, ನನ್ನದೇನು ಅಭ್ಯಂತರವಿಲ್ಲ. ಈ ಪ್ರಶ್ನೆಗೂ ನಾವು ತಯಾರಿದ್ದೇವೆ. ಒಂದು ಗಂಟೆ ಕಾಲ ಚರ್ಚೆಗೆ ಹಾಕಿಬಿಡಿ.

**ಚುಕ್ಕೆ ಪ್ರಶ್ನೆ ಸಂಖ್ಯೆ: 635**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಕೆ.ಸಿ.ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ನಾನು ನಿರ್ದಿಷ್ಟವಾದ ಪ್ರಶ್ನೆಯನ್ನು ಕೇಳಿದ್ದೆ. ಬಳ್ಳಾರಿ ನಗರ ಹಾಗೂ ಬಳ್ಳಾರಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಯೋಜನೆಗಳಿಗೆ ಹೆಚ್ಚುವರಿ ಅನುದಾನ ಒದಗಿಸಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ಎಸ್‌ಸಿಪಿ ಹಾಗೂ ಟಿಎಸ್‌ಪಿ ಸುಮಾರು 25,000-30,000 ಕೋಟಿ ರೂಪಾಯಿಗಳು ಮಾನ್ಯ ಸಚಿವರ ಇಲಾಖೆಗೆ ಬರುತ್ತದೆ. ಯಾವ ಮಾನದಂಡದಿಂದ ಹಂಚಿಕೆಯನ್ನು ಮಾಡುತ್ತಾರೆ? ಏಕೆಂದರೆ, ಇವತ್ತು ನಮ್ಮ ಬಳ್ಳಾರಿ ನಗರ ಸಾಕಷ್ಟು ಬೆಳೆಯುತ್ತಿದೆ, ನಮ್ಮಲ್ಲಿ 2 ಎಸ್‌ಸಿ, 5 ಎಸ್‌ಟಿ ಒಟ್ಟು 7 ರಿಸರ್ವೇಶನ್‌ಗಳಿವೆ. ಅಂದರೆ, ಜನಸಂಖ್ಯೆಯಲ್ಲಿ ಅತ್ಯಂತ ಹೆಚ್ಚಿದೆ. ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಕೊಟ್ಟರೆ ಹಳ್ಳಿಗಳಾಗಲಿ ಅಥವಾ ನಗರವಾಗಲಿ ಅಭಿವೃದ್ಧಿಯಾಗುತ್ತದೆ. ಮುಂದೆ ಬರುವಂತಹ ದಿನಗಳಲ್ಲಿ ಹೆಚ್ಚಿನ ಅನುದಾನವನ್ನು ಬಳ್ಳಾರಿ ಜಿಲ್ಲೆಗೆ ಒದಗಿಸಬೇಕೆನ್ನುವುದು ನನ್ನ ಆಗ್ರಹ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಗೆ ಬರತಕ್ಕಂಥ -SCP/TSP ಹಣ ಏನಿದೆ 39 ಇಲಾಖೆಗಳಿಗೆ ನಾವು ಹಂಚಿಕೆ ಮಾಡುತ್ತೇವೆ. ಆಯಾಯ ಇಲಾಖೆಗೆ ಅವಶ್ಯಕತೆಗೆ ಅನುಗುಣವಾಗಿ ಹಂಚಿಕೆ ಮಾಡುತ್ತಿರುತ್ತೇವೆ. ಸಮಾಜ ಕಲ್ಯಾಣ ಇಲಾಖೆಯಲ್ಲಿರತಕ್ಕಂಥ residential schools, ಹಾಸ್ಟೆಲ್‌ಗಳು, ಆಶ್ರಮ ಶಾಲೆಗಳು, ಇವುಗಳ ನಿರ್ವಹಣೆಗೆ ಮತ್ತು ಕಟ್ಟಡಗಳಿಗೆ ಹೆಚ್ಚಿನ ಹಣವನ್ನು ನಾವು ಕೊಡುತ್ತಿರುತ್ತೇವೆ. ಮಾನ್ಯ ಸದಸ್ಯರೇನು ಸಲಹೆ ಮಾಡಿದ್ದಾರೆ ಜನಸಂಖ್ಯೆಗೆ ಅನುಗುಣವಾಗಿ ಕೊಡಬೇಕು ಎನ್ನುವುದು ಮಾನ್ಯ ಸದಸ್ಯರ ಬೇಡಿಕೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಎಸ್‌ಸಿ-ಎಸ್‌ಟಿ ಜನಾಂಗದ ಸಂಖ್ಯೆ ಬಹುಶಃ ರಾಜ್ಯದಲ್ಲೇ ಹೆಚ್ಚಿರತಕ್ಕಂಥದ್ದು. ಖಂಡಿತವಾಗಿಯೂ ನಾವು ಅದನ್ನು ಪರಿಗಣಿಸುತ್ತೇವೆ.

**ಚುಕ್ಕೆ ಪ್ರಶ್ನೆ ಸಂಖ್ಯೆ:634**

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಯು.ಬಿ.ವೆಂಕಟೇಶ್‌ರವರ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಚುಕ್ಕೆ ಪ್ರಶ್ನೆ ಸಂಖ್ಯೆ: 868**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಈಗ ಮೇ॥ನಂದಿ ಹೈವೆ ಡೆವಲಪರ್ಸ್ ಲಿಮಿಟೆಡ್ ರವರಿಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ದಿನನಿತ್ಯ ಅಪಘಾತಗಳಾಗುತ್ತಿವೆ. ಅವರು ಮಾಡಬೇಕು, ಇವರು ಮಾಡಬೇಕೆನ್ನುವ ಮಾತನ್ನು ಹೇಳುತ್ತಾರೆ. ಈ ಹೈವೆ ಪ್ರಾರಂಭವಾದಾಗಿನಿಂದಲೂ 392 ಜನರು ಸತ್ತಿದ್ದಾರೆ. ಮಾನ್ಯ ಸಚಿವರಿಗೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದಾರೆಯೋ ಇಲ್ಲವೋ, ಜನವರಿ 26 ರಂದು ಕುಂದಗೋಳದ ಶ್ರೀ ಬಸವಾನಂದ ಸ್ವಾಮಿಗಳು ತೀರಿಕೊಂಡರು. ನಾವು ಮದುವೆಗೆ ಹೊರಟಿದ್ದೆವು. ನಮ್ಮ ಎದುರಿಗೆ ಒಂದು ಗಂಟೆಗೆ ಅಪಘಾತವಾಯಿತು. ನಾಲ್ಕು ಮಂದಿ ಸತ್ತರು. ಈ ರೀತಿ ದಿನನಿತ್ಯ ಅಪಘಾತಗಳಾಗುತ್ತಿವೆ. ಸರ್ಕಾರ ಸಾರ್ವಜನಿಕರಿಗೆ ಮಹತ್ವ ಕೊಡುತ್ತದೆಯೋ ಅಥವಾ ಮೆ॥ನಂದಿ ಹೈವೆ ಡೆವಲಪರ್ಸ್ ಲಿಮಿಟೆಡ್‌ನವರಿಗೆ ಮಹತ್ವ ಕೊಡುತ್ತದೆಯೋ? ಇನ್ನು ಎಷ್ಟು ಮಂದಿ ಸಾಯಬೇಕು? ದಾವಣಗೆರೆ ಚನ್ನಬಸಪ್ಪ ಅಂಡ್ ಸನ್ಸ್ ಅವರ ಸಂಬಂಧಿಕರ ಪೈಕಿ 18–20 ವಯಸ್ಸಿನ ನಾಲ್ಕು ಹುಡುಗರು ಸ್ಥಳದಲ್ಲೇ ಸತ್ತಿದ್ದಾರೆ. ಹೈವೆಯಲ್ಲಿ ಬೆಳಗಾವಿಯಿಂದ ಬರುತ್ತಾರೆ, ಗಬ್ಬೂರಿನಿಂದ ಅದೇ ವೇಗದಲ್ಲಿ ಬರುತ್ತಾರೆ. ದಿನನಿತ್ಯ ಅಪಘಾತಗಳಾಗುತ್ತಿವೆ. ನಿನ್ನೆಯೂ ಕೂಡ ಅಪಘಾತವಾಗಿದೆ. ಈಗ ಷರತ್ತು ಇದೆ, ದಿನಾಂಕ:05–05–2024 ರವರೆಗೆ ಸುಂಕ ವಸೂಲಾತಿಗಾಗಿ ನೀಡಲಾಗಿದೆ ಎಂದು ಹೇಳಿದ್ದಾರೆ. ಮೆ॥ನಂದಿ ಹೈವೆ ಡೆವಲಪರ್ಸ್ ಲಿಮಿಟೆಡ್, ಹುಬ್ಬಳ್ಳಿ, ಇವರು ಇಷ್ಟು ಹಣವನ್ನು ಸಂಗ್ರಹ ಮಾಡಿದ್ದಾರೆ, ಸಾಕು, ಈಗ ಸರ್ಕಾರವೇ ಹಣ ಕೊಡಲಿ. ಇನ್ನು ಎರಡು ರಸ್ತೆ ಒನ್–ವೇ ಮಾಡಿದರೆ ಒಳ್ಳೆಯದು. ಇದು ಜನರ ಜೀವಕ್ಕಿಂತ ಮುಖ್ಯವೇ? ಇವತ್ತು ನಾವು ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದೇವೆ. ಜನವರಿ 26 ರಂದು ಸಂವಿಧಾನದ ಬಗ್ಗೆ ಮಕ್ಕಳಿಗೆಲ್ಲಾ ಅವರು ಪಾಠ ಮಾಡಿ ಬಾವುಟ ಹಾರಿಸಿ ಹೋಗಿದ್ದರು. ಸಾವಿರಾರು ಮಕ್ಕಳಿಗೆ ಅನ್ನ, ಅಕ್ಷರ ದಾಸೋಹ ಕೊಡುವಂಥವರನ್ನು ಕಳೆದುಕೊಂಡಿದ್ದೇವೆ. ಕಾನೂನುಗಳನ್ನು ನಾವು ಮಾಡಿಕೊಂಡಿರುವಂಥದ್ದು. ಅವರು ಕೋರ್ಟ್‌ಗೆ ಹೋಗುತ್ತಾರೆಯೋ ಬೇಕಾದನ್ನು ಮಾಡಲಿ. ಅವರನ್ನು ಕರೆದು ಮಾತನಾಡಿ, ತಕ್ಷಣ ಏನಾದರೂ ಮಾಡಿ ಇದನ್ನು ಒನ್–ವೇ ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಅಪಘಾತಗಳಾಗುತ್ತಿರುವುದು ಸರ್ಕಾರದ ಗಮನಕ್ಕೂ ಬಂದಿದೆ. ಈಗಾಗಲೇ ನಾವು ನಾಲ್ಕು ಪಥ, ಆರು ಪಥ ರಸ್ತೆಗಳನ್ನು ಮಾಡಬೇಕೆಂದು NHAI (National Highway Authority of India) ಅವರಿಗೆ ಪತ್ರ ಬರೆದಿದ್ದೇವೆ. ಖಂಡಿತವಾಗಿಯೂ ಆ ಕಾಮಗಾರಿಯನ್ನು ಸ್ಪೀಡಪ್ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ದಿನನಿತ್ಯ ಅಪಘಾತಗಳಾಗುತ್ತಿವೆ. ಅದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಗಬ್ಬೂರಿನ ಕಡೆ ಆರು ಪಥ ರಸ್ತೆ ಮಾಡುತ್ತಿದ್ದಾರೆ. ದಿನನಿತ್ಯ ಜನ ಸಾಯುತ್ತಿದ್ದಾರೆ ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಅಪಘಾತ ತಪ್ಪಿಸುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಬೇಕಲ್ಲವೇ? NHAI ಅವರಿಗೆ ಹೇಳಿದ್ದೇವೆ ಎಂದು ಹೇಳುತ್ತಿದ್ದಾರೆ. ಜನರ ಜೀವ ಮುಖ್ಯವಲ್ಲವೇ? ಈಗ ಕೇಂದ್ರದಲ್ಲಿ ಅವರದ್ದೇ ಸರ್ಕಾರ ಇದೆ. ಏನೇನೋ ಮಾಡಿಸಿಕೊಳ್ಳುತ್ತಾರೆ ಇದನ್ನು ಮಾಡಿಸಿಕೊಳ್ಳುವುದಿಲ್ಲವೇ?

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರಗಳನ್ನು ಬರೆದಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅವರಂಥವರು ಈ ರೀತಿಯ ಉತ್ತರ ಹೇಳಿದರೆ ನನಗೆ ಬೇಸರವಾಗುತ್ತದೆ.

(ಮುಂದು)

325/11-3-2020/5-10/bkp-vk
**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):**

ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಈ ವಿಚಾರದಲ್ಲಿ ತಾವು ಏನಾದರೂ ಒಂದು ಕ್ರಮ ತೆಗೆದುಕೊಳ್ಳಬೇಕು. ಕುಂದಗೋಳ ಸ್ವಾಮೀಜಿಯವರು ಪ್ರತಿನಿತ್ಯ ಸಾವಿರಾರು ಮಕ್ಕಳಿಗೆ ಅನ್ನದಾಸೋಹ ಮತ್ತು ಅಕ್ಷರ ದಾಸೋಹ ಮಾಡುತ್ತಿದ್ದರು. ಅಂತಹವರನ್ನು ಈ ರೀತಿಯ ಅಪಘಾತಗಳಿಂದ ಕಳೆದುಕೊಂಡಿದ್ದೇವೆ. ಮತ್ತೆ ಚೆನ್ನಬಸಪ್ಪ ಅಂಡ್ ಸನ್ಸ್ ದಾವಣಗೆರೆ ಇಲ್ಲಿ ಅಪಘಾತವಾಗಿ ಸ್ಥಳದಲ್ಲಿಯೇ ಶಾಲೆಯ 4 ಮಕ್ಕಳು ದಿನಾಂಕ: 18, 19 ರಂದು ಸತ್ತು ಹೋಗಿದ್ದಾರೆ. ಪ್ರತಿದಿನ ಒಬ್ಬರು ಸಾಯುತ್ತಾರೆ. ಅಲ್ಲಿ ಬೈಪಾಸ್‌ನಿಂದ ಹೋಗುವಂತಿಲ್ಲ. ಏಕೆಂದರೆ ಅಷ್ಟೊಂದು traffic ಇರುತ್ತದೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಹೇಳಬೇಕು. ಈ ವಿಚಾರವಾಗಿ ನೀವು ಹೈವೇ ರವರಿಗೆ ಹೇಳುತ್ತೀರೋ ಅಥವಾ ಮತ್ತೊಬ್ಬರಿಗೆ ಹೇಳುತ್ತಿರೋ ಗೊತ್ತಿಲ್ಲ. ಏನಾದರೂ ಮಾಡಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಕೇವಲ ಉತ್ತರವನ್ನು ಕೊಟ್ಟರೆ ಸಾಕಾಗುವುದಿಲ್ಲ. ಜನರ ಹಿತದೃಷ್ಟಿಯಿಂದ ಇದರ ಬಗ್ಗೆ ಸರ್ಕಾರ ಗಂಭೀರ ಚಿಂತನೆ ಮಾಡಬೇಕು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಾನು ಇದಕ್ಕೆ ಪೂರಕವಾಗಿ ಹೇಳಲಿಕ್ಕೆ ಬಯಸುತ್ತೇನೆ. ಹುಬ್ಬಳ್ಳಿ–ಧಾರವಾಡದಲ್ಲಿ ಏನು ಬೈಪಾಸ್ ಇದೆ, ಇದಕ್ಕೆ ಬದಲಿಯಾಗಿ National Highways Authority of India ಕೂಡ ಒಂದು ರಿಂಗ್ ರೋಡ್ ಮಾಡಬೇಕೆಂದು ಒಂದು study ಆಗಿದೆ. ಬಹುಶಃ ಇವರ ಹತ್ತಿರ ಇರುವ agreement ಸಲುವಾಗಿ National Highways Authority of India ರವರಿಂದ ಅದನ್ನು ತೆಗೆದುಕೊಳ್ಳಲಿಕ್ಕೆ ಆಗಿರುವುದಿಲ್ಲ. ಈ ವಿಚಾರದಲ್ಲಿ ಕೋರ್ಟ್‌ಗೆ ಹೋಗಿ ತಡೆಯಾಜ್ಞೆಯನ್ನು ತರುವುದು, ಇತ್ಯಾದಿಯಾಗಿ ಮಾಡುತ್ತಾರೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೇಳಿದ ಹಾಗೆ ಅಲ್ಲಿ ಬಹಳಷ್ಟು ಅಪಘಾತಗಳಾಗುತ್ತಿವೆ. ಈ ನಗರಗಳು ಬೆಳೆಯುತ್ತಿರುವಂತಹ ಹವಳಿ ನಗರಗಳಾಗಿವೆ. ಅದಕ್ಕೆ ಪೂರಕವಾಗಿ National Highways Authority of India ನಿಂದ ಕಳೆದ ಬಾರಿಯೂ ಸಹ ಶ್ರೀ ನಿತಿನ್ ಗಡ್ಕರಿಯವರು ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ಈ ಒಂದು ಪ್ರಸ್ತಾವನೆಯನ್ನು ಅವರ ಮುಂದಿಟ್ಟಿದ್ದೆವು. ಈ ಸಂಬಂಧ draft Detailed Project Report ಸಹ ಸಿದ್ಧವಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ Nandi Highway Developers Limited ರವರು ಏನಿದ್ದಾರೆ, ಅವರನ್ನು ಕರೆದು 3 ಬಾರಿ ಸಭೆಯನ್ನು ಮಾಡಿದ್ದೇವೆ. ಈ ಸಂಬಂಧ ಮಾನ್ಯ ಕೇಂದ್ರ ಸಚಿವರರಾದ ಪ್ರಹ್ಲಾದ್ ಜೋಷಿಯವರು ಹಾಗೂ ಸಚಿವರಾದ ಶ್ರೀ ಜಗದೀಶ್ ಶೆಟ್ಟರರವರ ಜೊತೆ ಚರ್ಚೆ ಮಾಡಲಾಗಿದೆ. ಜೊತೆಗೆ ಈಗಾಗಲೇ ಶ್ರೀ ಖೇಣಿಯವರನ್ನೂ ಸಹ ಕರೆದು ಮಾತನಾಡಿದ್ದೇವೆ. ಅವರಿಗೆ ಈ ಬಗ್ಗೆ ಮಾತನಾಡಿ, ನಾವು ಇದನ್ನು ಅಭಿವೃದ್ಧಿ ಮಾಡಲಿಕ್ಕೆ ತಮ್ಮ ಒಪ್ಪಿಗೆ ಪತ್ರವನ್ನು ಕೊಡಿ ಎಂದು ಹೇಳಿ ಈಗಾಗಲೇ ಹೇಳಿದ್ದೇವೆ. ಏಕೆಂದರೆ, 2024ರವರೆಗೂ ಸಹ ಅವರ ಜೊತೆ agreement ಆಗಿದೆ. ಅಂದರೆ, ಅದು ಫೆಬ್ರವರಿ 1998 ರಲ್ಲಿ agreement ಆಗಿದೆ. ಈ ಕೆಲಸ 2000 ರಿಂದ ಪ್ರಾರಂಭವಾಗಿದೆ. ನಾವು ಈಗಾಗಲೇ ಅವರಿಗೆ ನಾವು ಮನವರಿಕೆ ಮಾಡಿಕೊಟ್ಟಿದ್ದೇವೆ. ಈ ವಿಚಾರವಾಗಿ ಬರೆದುಕೊಡುತ್ತೇವೆಂದು ಹೇಳಿ ಈಗಾಗಲೇ ಅವರು ಒಪ್ಪಿಕೊಂಡಿದ್ದಾರೆ. ಬರೆದುಕೊಟ್ಟ ಕೂಡಲೇ ಈ ಕೆಲಸ ಪ್ರಾರಂಭ ಮಾಡಲಿಕ್ಕೆ ಕೇಂದ್ರ ಸರ್ಕಾರಕ್ಕೂ ಕೂಡ ಪ್ರಸ್ತಾವನೆಯನ್ನು ಕಳುಹಿಸಲಿದ್ದೇವೆ. ಶ್ರೀಮಾನ್ ನಿತಿನ್ ಗಡ್ಕರಿಯವರು ಮೊನ್ನೆ ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿಯೂ ಸಹ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ಈ ಬಗ್ಗೆ ನಾವು ಗಂಭೀರವಾಗಿ ಕೆಲಸ ಮಾಡುತ್ತಿದ್ದೇವೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಇವರಿಗೆ ಈ ಕೆಲಸವನ್ನು ಕೊಟ್ಟು ಸುಮಾರು 20 ವರ್ಷಗಳಾಗಿದೆ. ಇವರು ಈ ಕೆಲಸದಲ್ಲಿ ಸಾಕಷ್ಟು ದುಡ್ಡು ಮಾಡಿದ್ದಾರೆ. ಹೆಚ್ಚಿಗೆ ಅವರಿಗೆ ದುಡ್ಡು ಬಂದಿದೆ. ಈ ಕೆಲಸವನ್ನು ಬಿಟ್ಟುಕೊಡಿ ಎಂದು ಅವರಿಗೆ ಹೇಳಿ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸಾಕಷ್ಟು ಹಣ ಅಲ್ಲ, 5079 ಕೋಟಿ ರೂಪಾಯಿಗಳ toll collection ಆಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಇಷ್ಟೊಂದು ಹಣ ಬಂದ ಮೇಲೆ ಅವರಿಗೆ ಮತ್ತೇನು ಬೇಕು?

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ನಾವು ಅವರಿಗೆ ಇನ್ನು ಏನು ಬೇಕೆಂದು ಹೇಳಲಿಕ್ಕೆ ಆಗುವುದಿಲ್ಲ. ಈ ಬಗ್ಗೆ ಅವರೊಂದಿಗೆ ಒಪ್ಪಂದ ಪತ್ರವನ್ನು ಮಾಡಿಕೊಂಡಿದ್ದೇವೆ. ದಿನಾಂಕ:5–5–2024 ರವರೆಗೆ ಅವರ ಕೆಲಸ ಅವಧಿ ಇದೆ. ಆ ಒಂದು ಒಪ್ಪಂದ ಪತ್ರದ ಪ್ರಕಾರ ಅವರನ್ನು ನಾವು terminate ಮಾಡಲಿಕ್ಕೆ ಆಗುವುದಿಲ್ಲ. ಅವರ ಕೆಲಸಗಾರರನ್ನು terminate ಮಾಡಬಹುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಅವರ ಜುಟ್ಟು ಸರ್ಕಾರದ ಕೈಯಲ್ಲಿದೆ. ಅದರ ಬಗ್ಗೆ ಹೇಳಲಿಕ್ಕೆ ಹೋಗಬೇಡಿ. ಜನರ ಜೀವಕ್ಕಿಂತ ಅವರಿಗೆ ಕೆಲಸ ಮುಂದುವರಿಸುವುದು ಮುಖ್ಯವೇ?

**ಶ್ರೀ ಗೋವಿಂದ ಎಂ.ಕಾರಜೋಳ:–** ಈ ವಿಚಾರವನ್ನು ನಾವು ಗಂಭೀರವಾಗಿ ತೆಗೆದುಕೊಂಡು ಈಗಾಗಲೇ 3 ಬಾರಿ ಸಭೆಯನ್ನು ಮಾಡಿದ್ದೇವೆ. ನಿಜವಾಗಿಯೂ ಸಹ ಈ ದಿಸೆಯಲ್ಲಿ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಕಾಂತರಾಜ್ (ಬಿಎಂಎಲ್):–** ಮಾನ್ಯ ಸಭಾಪತಿಯವರೇ, ಸಚಿವರಿಗೆ ಮಾಹಿತಿಯನ್ನು ಕೊಡಲಿಕ್ಕೋಸ್ಕರ ನನ್ನದು ಮತ್ತೊಂದು ಪ್ರಶ್ನೆ ಇದೆ. ನ್ಯಾಷನಲ್ ಹೈವೇ ನಲ್ಲಿ ನಾವು ಎಲ್ಲಿಯೇ ಪೆಟ್ರೋಲ್ ಬಂಕ್ ಮಾಡಿದರೆ ಸರ್ವೀಸ್ ರೋಡ್ ಮಾಡಿ ಪೆಟ್ರೋಲ್ ಬಂಕ್ ಮಾಡಬೇಕೆಂದು ಕಾನೂನು ಮಾಡಿದ್ದಾರೆ. ಆದರೆ ಏನಾಗಿದೆ ಎಂದರೆ ಹೊಸದಾಗಿ ಹೈವೇ ಮಾಡಿದಂತಹ ಸಂದರ್ಭದಲ್ಲಿ ರಸ್ತೆಗಳ ಪಕ್ಕದಲ್ಲಿ ಹೋಟೆಲ್‌ಗಳಾಗಿವೆ. ಅವುಗಳಿಗೂ ಸಹ ಸರ್ವೀಸ್ ರೋಡ್ ಇರುವುದಿಲ್ಲ. ಹೀಗಾಗಿ ತುಂಬಾ ಅಪಘಾತಗಳಾಗುತ್ತಿವೆ. ನಮ್ಮ ತುಮಕೂರು ರಸ್ತೆಯಲ್ಲಿ, ಕುಣಿಗಲ್ ಭಾಗದ ರಸ್ತೆಯಲ್ಲಿ ಹೆಚ್ಚು ಅಪಘಾತಗಳಾಗುತ್ತಿವೆ, ಈ ಭಾಗದಲ್ಲಿ ಹೋಟೆಲ್‌ಗಳು ಜಾಸ್ತಿಯಾಗಿವೆ. ಹೀಗಾಗಿ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ ಯಾವುದೇ ಕಾರಣಕ್ಕೂ ಸಹ ಅವರುಗಳು ಸರ್ವೀಸ್ ರೋಡ್‌ಗೆ provision ಮಾಡಿಕೊಂಡು ಹೋಟೆಲ್‌ಗಳನ್ನು ಮಾಡಬೇಕು. ಆದರೆ, ಈ ಒಂದು ಕೆಲಸವನ್ನು ಅವರುಗಳು ಮಾಡಿಕೊಂಡಿರುವುದಿಲ್ಲ. ದಯಮಾಡಿ ಈ ರೀತಿಯ ಕೆಲಸಗಳಿಗೆ ಸರ್ಕಾರದ ವತಿಯಿಂದ ಕ್ರಮ ತೆಗೆದುಕೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಾಜ್ಯ ಸರ್ಕಾರದವರು ನ್ಯಾಷನಲ್ ಹೈವೇ ರವರ ಅನುಮತಿಯನ್ನು ಏನೂ ಕೇಳಬೇಕಾಗಿಲ್ಲ. ರಾಜ್ಯ ಸರ್ಕಾರದವರೇ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬಹುದು. ಆದ್ದರಿಂದ, ಮಾನ್ಯ ಸಚಿವರು ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ನನ್ನ ಒಂದೇ ಒಂದು ಸಲಹೆ ಏನೆಂದರೆ ಆ litigant company ಏನಿದೆ, ಇಲ್ಲಿಯೂ ಕೂಡ Bangalore-Mysore infrastructure ಬಗ್ಗೆ ನಾವು ನೋಡುತ್ತಿದ್ದೇವೆ. ಹುಬ್ಬಳ್ಳಿಯಲ್ಲಿಯೂ ಕೂಡ ಇದೇ ಕಂಪನಿ ಈ ಕೆಲಸವನ್ನು ನಿರ್ವಹಣೆ ಮಾಡುತ್ತಿದೆ. ಯಾರು project opponents ಇದ್ದಾರೆ. ನನ್ನ ಸಲಹೆ ಏನೆಂದರೆ entire project ಅನ್ನ as is where is National Highway Authority of India ಗೆ hand over ಮಾಡಿ. As they will be capable to handle this project and they can take over it.

**ಶ್ರೀ ಗೋವಿಂದ ಎಂ. ಕಾರಜೋಳ:–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಸುಮಾರು 900 ಕೋಟಿ ರೂಪಾಯಿಗಳಷ್ಟು National Highway Authority of India ದವರು DPR ready ಮಾಡಿದ್ದಾರೆ. ಈ ವಿಚಾರದಲ್ಲಿ correspondence ನಡೆಯುತ್ತಿದೆ.

**ಶ್ರೀ ಹೆಚ್.ಎಂ. ರಮೇಶ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳೂ ಹಾಗೂ ಲೋಕೋಪಯೋಗಿ ಸಚಿವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. National Highway and State Highway ಈ ಎರಡು ಕಡೆಯೂ ಸಹ ತೊಂದರೆ ಇದೆ. ದೊಡ್ಡಬಳ್ಳಾಪುರ ಮಾರ್ಗವಾಗಿ ನೀವು ಟೋಲ್ ಹಾಕಿದ್ದೀರಿ. ಸರ್ವೀಸ್ ರಸ್ತೆಯೇ ಇಲ್ಲದೇ ನೀವು ಏನು ಟೋಲ್ ಸಂಗ್ರಹ ಮಾಡುತ್ತಿದ್ದೀರಿ, ಇದು ಸರಿಯೇ ಎನ್ನುವುದು ಒಂದು ವಿಚಾರ. ಎರಡನೆಯದಾಗಿ, ನಿಮ್ಮ agreements ಯಾವ ರೀತಿಯಲ್ಲಿ ಇದೆಯೋ ನಮಗೆ ಗೊತ್ತಿಲ್ಲ. ಈ ಬಗ್ಗೆ ನಾವು ಈ ಹಿಂದೆಯೂ ಸಹ ಪ್ರಸ್ತಾಪ ಮಾಡಿದ್ದೆವು. ಆಗ ಸರ್ಕಾರದವರು ಇದರ ಬಗ್ಗೆ ಪರಿಶೀಲನೆ ಮಾಡಿ ಸರಿಪಡಿಸುತ್ತೇವೆಂದು ಹೇಳಿದ್ದರು. ಆದರೆ, ಆ ಒಂದು ಕೆಲಸ ಇದುವರೆವಿಗೂ ಆಗಿರುವುದಿಲ್ಲ. ಏರ್‌ಪೋರ್ಟ್‌ಗೆ ಹೋಗುವಂತಹ ಜಾಗದಲ್ಲಿ ಮುಂಚೆ ಒಂದು ಕಡೆಯಲ್ಲಿ ಟೋಲ್ ಸಂಗ್ರಹ ಮಾಡುತ್ತಿದ್ದರು. ಬೆಂಗಳೂರು ಸಿಟಿಯಿಂದ ಏರ್‌ಪೋರ್ಟ್‌ಗೆ ಹೋಗಲಿಕ್ಕೆ ಎರಡು ಕಡೆ ಟೋಲ್ ಸಂಗ್ರಹ ಮಾಡುತ್ತಿದ್ದಾರೆ. ಜೊತೆಗೆ ಸರ್ವೀಸ್ ರಸ್ತೆಯಿರುವುದಿಲ್ಲ. ಮತ್ತೆ, ದೊಡ್ಡಬಳ್ಳಾಪುರದ್ದು ಅಷ್ಟೆ. ಯಾರೋ ಒಬ್ಬರು ಈ ವಿಚಾರವಾಗಿ ಕೋರ್ಟ್‌ಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದರು. ಅದರ ಬಗ್ಗೆ ಏನಾಯಿತು ಗೊತ್ತಿಲ್ಲ. ಅಲ್ಲಿಯೂ ಸಹ ರಸ್ತೆಯೂ ಸಹ ಪೂರ್ಣ ಪ್ರಮಾಣದಲ್ಲಿ ಮುಕ್ತಾಯವಾಗಿರುವುದಿಲ್ಲ. ಆದರೆ, ಅಲ್ಲಿ ಟೋಲ್ ಸಂಗ್ರಹ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುತ್ತಿದ್ದಾರೆ. ಇದರಿಂದ ಬಹಳ ಜನರಿಗೆ ತೊಂದರೆಯಾಗುತ್ತಿದೆ. ಸರ್ವೀಸ್ ರಸ್ತೆ ಇಲ್ಲದೆಯೇ ಟೋಲ್ ಸಂಗ್ರಹ ಮಾಡುವುದು ತಮ್ಮ ವ್ಯಾಪ್ತಿಯಲ್ಲಿ ಬರುವುದರಿಂದ ಸರಿಯಾದ ರೀತಿಯಲ್ಲಿ ಸಂಬಂಧಪಟ್ಟವರಿಗೆ ನಿರ್ದೇಶನವನ್ನು ಕೊಟ್ಟು, ಸರ್ವೀಸ್ ರೋಡ್ ಇಲ್ಲದೆಯೇ ಟೋಲ್ ಸಂಗ್ರಹ ಮಾಡುವುದನ್ನು ಕೈಬಿಡಬೇಕೆಂದು ಸನ್ಮಾನ್ಯ ಸಭಾಪತಿಯವರ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಇನ್ನೊಂದು ಕೆಲಸದ ವಿಚಾರವಾಗಿ ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ನನ್ನ ಹತ್ತಿರ ಇರುವಂತಹ limited ಆದಂತಹ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕೆ ಸಾಧ್ಯವಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದು ಸಾರ್ವಜನಿಕ ಹಿತದೃಷ್ಟಿಯಿಂದ ಕೇಳುತ್ತಿರುವ ಪ್ರಶ್ನೆಯಾದ್ದರಿಂದ ನನಗೆ ಕೇಳಲಿಕ್ಕೆ ಅವಕಾಶ ಮಾಡಿಕೊಡಬೇಕು. National Highway ಏನು ಮಾಡಿದ್ದಾರೆ, ಅಂದರೆ divider ನಲ್ಲಿ ಗಾರ್ಡನ್ ನಿರ್ವಹಣೆ ಮಾಡುತ್ತಿದ್ದಾರೆ. ನಮ್ಮಲ್ಲಿ ಮಧ್ಯೆದಲ್ಲಿ ಗಾರ್ಡನ್ ಏತಕ್ಕೆ ನಿರ್ವಹಣೆ ಮಾಡುತ್ತಾರೆಂದರೆ ನಮ್ಮಲ್ಲಿ rainfall ಚೆನ್ನಾಗಿದೆ. ಗಾರ್ಡನ್ ಬೇಗ ಬರುತ್ತದೆ. Bushy garden ಏತಕ್ಕೆ ಮಾಡುತ್ತಾರೆಂದರೆ, ಆ ಕಡೆ ಎದುರುಗಡೆ ಪಕ್ಕದಲ್ಲಿ ಬರುವಂತಹ ವಾಹನಗಳ ಲೈಟ್ ಈ ಭಾಗಕ್ಕೆ ಬೀಳಬಾರದು ಎಂದು ಹೇಳಿ ಅದನ್ನು technical concept ಆಗಿ ಮಾಡಿರುವಂತಹದ್ದಾಗಿದೆ. ಹೀಗಾಗಿ bushy garden ಅನ್ನು ಅಭಿವೃದ್ಧಿ ಪಡಿಸಲಿಕ್ಕೆ ಟೋಲ್‌ನವರು ಗುತ್ತಿಗೆಯನ್ನು ತೆಗೆದುಕೊಳ್ಳುತ್ತಾರೆ. ಆದರೆ, ಆ ಒಂದು ಕೆಲಸವನ್ನು ಅವರು ಸರಿಯಾಗಿ ಮಾಡುವುದಿಲ್ಲ. ಉತ್ತರ ಭಾರತದಲ್ಲಿ ಏನಾಗುತ್ತದೆ ಎಂದರೆ ಮಳೆ ಕಡಿಮೆ ಇರುವ ಜಾಗದಲ್ಲಿ ಪ್ಲಾಸ್ಟಿಕ್‌ನಲ್ಲಿ ಕ್ರಾಸಿಂಗ್ ಕ್ರಾಸಿಂಗ್ ಅನ್ನು ಜಿಗ್‌ಜಾಗ್ ರೂಪದಲ್ಲಿ ಹಾಕುತ್ತಾರೆ. ಜಿಗ್‌ಜಾಗ್ ಹಾಕವುದರಿಂದ, ಆ ಕಡೆಯಿಂದ ಈ ಕಡೆ ಲೈಟ್ ಪಾಸ್ ಆಗುವುದಿಲ್ಲ. ಆದರೆ, ನಮ್ಮಲ್ಲಿ bushy garden ಅನ್ನು ಮುಖ್ಯವಾಗಿ ಹಾಕಿಕೊಂಡು ಹೂವುಗಳನ್ನು, ಗಿಡಗಳನ್ನು ಬೆಳೆಸಲಾಗುತ್ತಿದೆ. ಹಲವಾರು ಕಡೆ, ಅಂದರೆ majority ಕಡೆ ಆ ಕಡೆಯಿಂದ ಲೈಟ್ ಬಂದರೆ ಈ ಕಡೆ ಬರುವ ವಾಹನಗಳಿಗೆ ನೇರವಾಗಿ ಲೈಟ್ ಹೊಡೆದು ರಾತ್ರಿ ಸಮುಯದಲ್ಲಿ ತುಂಬಾ ತೊಂದರೆಯಾಗುತ್ತದೆ. ಎರಡು ಕಡೆಯಿಂದ ಬರುವ ವಾಹನಗಳಿಗೆ ತೊಂದರೆಯಾಗುತ್ತದೆ. ಆ ದೃಷ್ಟಿಯಿಂದ garden ಅನ್ನು ಖಂಡಿತವಾಗಿಯೂ ನಿರ್ವಹಣೆ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಪೂರಕವಾಗಿ ಇನ್ನೊಂದು ವಿಚಾರವನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ತಾವು ಹೈವೇ ಅನ್ನು ಮಾಡಿದ್ದೀರಿ. ಹೈವೇ ಮಾಡುವುದು ಏತಕ್ಕೆಂದರೆ ಸಾರ್ವಜನಿಕರು ಬೇಗ ಒಂದು ಕಡೆಯಿಂದ ಮತ್ತೊಂದು ಕಡೆ ಹೋಗಬೇಕೆಂದು ಮಾಡಲಾಗುತ್ತದೆ. ಏನು ಟೋಲ್ ಇದೆ, ಆ ಟೋಲ್‌ಗಳಲ್ಲಿ 100 ಮೀಟರ್‌ಗಿಂತ ಹೆಚ್ಚು traffic jam ಆಗಬಾರದು ಎಂದು ನಿಯಮ ಇದೆ. ನೀವು ಯಾವುದೇ ಟೋಲ್‌ಗಳನ್ನು ನೋಡಿ. ಅಲ್ಲಿ ಸಿಸಿಟಿವಿ.ಗಳನ್ನು ಹಾಕಿಕೊಂಡಿದ್ದಾರೆ. 2–3 ಪ್ರಕರಣಗಳನ್ನು ನೋಡಿದ್ದೇವೆ. ಆ ಪ್ರಕರಣಗಳ ವಿಚಾರವಾಗಿ ನೋಡುವುದಾದರೆ, ಅಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ಒಂದು ರೀತಿಯಲ್ಲಿ ರೌಡಿಸಂ ರೀತಿಯಲ್ಲಿ ವರ್ತನೆ ಮಾಡುತ್ತಾರೆ. ಅಲ್ಲಿಯೇ 30 ನಿಮಿಷ, 45 ನಿಮಿಷ ಕಾಲ ಸಮಯವನ್ನು ಕಳೆಯಬೇಕಾಗುತ್ತದೆ. ಈ ವಿಚಾರವಾಗಿ ಕೇಳಲಿಕ್ಕೆ ಹೋದರೆ, ದೌರ್ಜನ್ಯ ಮಾಡುತ್ತಾರೆ. ಇದು ಸಾರ್ವಜನಿಕರಿಗೆ ಆಗುತ್ತಿರುವಂತಹ ತೊಂದರೆಯಾಗಿದೆ. ದಯಮಾಡಿ, ಏನು ನಿಯಮಗಳಿವೆ, ನಿಯಮಗಳನ್ನು ಪಾಲನೆ ಮಾಡಬೇಕಾಗುತ್ತದೆ. ಆದ್ದರಿಂದ, ಈ ನಿಟ್ಟಿನಲ್ಲಿ ಟೋಲ್‌ನಲ್ಲಿರುವ ವ್ಯವಸ್ಥಾಪಕರಿಗೆ, ಸಿಬ್ಬಂದಿಗಳಿಗೆ ಸೂಚನೆ ಕೊಡಬೇಕು. ಈ ವಿಚಾರದಲ್ಲಿ ಶ್ರೀ ರಜನೀಶ್ ಗೋಯಿಲ್‌ರವರು ಒಂದು ಮೀಟಿಂಗ್ ಕರೆದು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದರು. ಆಗ ಮಾಡಿದಾಗ 15 ದಿವಸಗಳು ಮಾತ್ರ ಟೋಲ್ ಸಿಬ್ಬಂದಿ ಸರಿಯಾಗಿ ಕೆಲಸ ಮಾಡಿದರು. ಮತ್ತೆ ನಾಯಿ ಬಾಲ ಡೊಂಕು ಎನ್ನುವ ರೀತಿಯಲ್ಲಿ ಅದೇ ವರ್ತನೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ವಿಚಾರ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೂ ಬಂದಿರುತ್ತದೆ. ಆದ್ದರಿಂದ, ಈ ದಿಸೆಯಲ್ಲಿ ಕೂಡಲೇ ಗಮನಹರಿಸಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸದಸ್ಯರುಗಳಾದ ಶ್ರೀ ಎಸ್.ಎಚ್.ಭೋಜೇಗೌಡರು ಮತ್ತು ಶ್ರೀ ಹೆಚ್.ಎಂ. ರಮೇಶ್‌ಗೌಡ ರವರು ಹೇಳಿರುವಂತಹ ಸಲಹೆಗಳನ್ನು ನಮ್ಮ ಅಧಿಕಾರಿಗಳ ಮೂಲಕ ಜಾರಿಗೊಳಿಸಲಿಕ್ಕೆ ತಿಳಿಸುತ್ತೇನೆ.

(ಮುಂದು...)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(326) 11.03.2020 05.20 ಎಸ್‌ವಿ–ವಿಕೆ**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 844**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯಲ್ಲಿ 'ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಚೆಕ್‌ಡ್ಯಾಂಗಳ ನಿರ್ಮಾಣವಾಗಿತ್ತು? ಅದನ್ನು ನಿರ್ಮಿಸಬೇಕಾದರೆ ಅನುಸರಿಸಬೇಕಾದ

ಮಾನದಂಡಗಳೇನು?' ಎಂದು ಕೇಳಿದ್ದೆನು. ಮಾನ್ಯ ಕೃಷಿ ಸಚಿವರು ಸುದೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ಇದರ ಜೊತೆಯಲ್ಲಿ Karnataka Transparency in Public Procurement *Act* ಪ್ರಕಾರ ರೂ.5 ಲಕ್ಷಗಳಿಗಿಂತ ಕಡಿಮೆ ಇರುವುದಕ್ಕೆ ಟೆಂಡರ್ ಅಗತ್ಯವಿಲ್ಲದೆ ಇರುವುದರಿಂದ ಟೆಂಡರ್ ಇಲ್ಲದೆಯೇ ಮಾಡಿದ್ದೇವೆ ಎಂದು ಸಮಜಾಯಿಷಿಯನ್ನು ಕೊಟ್ಟಿದ್ದಾರೆ. ಅಧಿಕಾರಿಗಳು ತಮ್ಮ ಅನುಕೂಲಕ್ಕಾಗಿ ಟೆಂಡರ್ ಅನ್ನು avoid ಮಾಡುವುದಕ್ಕಾಗಿ ರೂ.5 ಲಕ್ಷಗಳಿಗೆ restriction ಮಾಡುತ್ತಿರುವುದು ಇಡೀ ಕರ್ನಾಟಕ ರಾಜ್ಯದಲ್ಲಿರುವ ವಸ್ತುಸ್ಥಿತಿ ಎಂದು ತಮ್ಮನ್ನೂ ಸೇರಿದಂತೆ ಎಲ್ಲರೂ ಒಪ್ಪುತ್ತಾರೆಂದು ನಾನಾದರೂ ಭಾವಿಸಿದ್ದೇನೆ. ಈಗ ಕೃಷಿ ಸಚಿವರು ಇಲ್ಲಿ ಇದ್ದಾರೆ. ಇನ್ನು ಮುಂದಾದರೂ ಅವರು ಟೆಂಡರ್ ಅನ್ನು ಕರೆದು, ಪಾರದರ್ಶಕವಾಗಿ ಆ ಪ್ರಕ್ರಿಯೆಗಳನ್ನು ಮಾಡಿ ಗುಣಮಟ್ಟದ ಕಾಮಗಾರಿಯನ್ನು ಮಾಡಬೇಕೆಂದು ತಮ್ಮ ಮುಖಾಂತರ ನಾನು ಮನವಿ ಮಾಡುತ್ತೇನೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಅಪ್ಪಾಜಿಗೌಡರವರು ಕೊಟ್ಟಿರುವ ಸಲಹೆಯಂತೆ KTPP ಕಾಯ್ದೆಯನ್ನು ಬದಲಾಯಿಸಬೇಕಾಗುತ್ತದೆ, ಇಲ್ಲವೇ ಅದಕ್ಕೆ amendment ಅನ್ನು ತರಬೇಕಾಗುತ್ತದೆ. ಏಕೆಂದರೆ ರೂ.5 ಲಕ್ಷದೊಳಗಿರುವ ಕಾಮಗಾರಿಗಳಿಗೆ ಟೆಂಡರ್ ಮಾಡಬಾರದೆಂದು ಇದೆ. ನಮ್ಮ ಇಲಾಖೆಯಲ್ಲಿ ರೂ.5 ಲಕ್ಷದೊಳಗೆ ಇರುವುದಕ್ಕೆ ಮೂರು ಜನರಿಂದ quotation ಅನ್ನು ತೆಗೆದುಕೊಂಡು, ಯಾರು ಅರ್ಹರಿದ್ದಾರೆಯೋ ಅವರಿಗೆ ಕೊಡಲಾಗುವುದು.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಚಿವರೇ, ಒಬ್ಬ ವ್ಯಕ್ತಿಯು ಮೂರು quotation ಗಳನ್ನು ತಂದು ಕೊಡಬಹುದು. ಅಂದರೆ, colluded quotation ಬರುತ್ತದೆ. ಎಲ್ಲರಿಗೂ ಇದರ ಅನುಭವ ಇರುತ್ತದೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಜಲಾನಯನ ಅಭಿವೃದ್ಧಿ ಯೋಜನೆಗಳಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯಾಗಿದೆ. ರಾಜ್ಯದಲ್ಲಿ ಅಂತಹ 1500 ಸಮಿತಿಗಳಿವೆ. ಆ ಸಮಿತಿಗಳ ಮೂಲಕ ಅಧಿಕಾರಿಗಳು quotations ಕರೆದು ಆಯ್ಕೆ ಮಾಡುತ್ತಾರೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 624**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅಜ್ಜಂಪುರ ತಾಲ್ಲೂಕು ಹೊಸ ತಾಲ್ಲೂಕಾಗಿದ್ದು, ಹಣಕಾಸಿನ ತೊಂದರೆಯಿದೆ ಎಂಬುದು ನಮಗೂ ಮನವರಿಕೆಯಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದು ಪೂರ್ಣ ಬಯಲುಸೀಮೆಯ ಭಾಗ. ಬಯಲುಸೀಮೆಯ ಭಾಗದಲ್ಲಿ 17 ಎಕರೆಯನ್ನು ಗುರುತಿಸಲಾಗಿದೆ ಎಂದು ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ. ಅದರಲ್ಲಿ ನಮಗೆ ಸ್ವಲ್ಪ ಗೊಂದಲವಿದೆ. ಅದೇ ಜಾಗವನ್ನು ತೆಗೆದುಕೊಳ್ಳಲಾಗುತ್ತಿದೆಯೇ ಅಥವಾ ಬೇರೆ ಜಾಗವನ್ನು ತೆಗೆದುಕೊಳ್ಳಲಾಗುತ್ತದೆಯೇ? ಆ ಊರಿನ ಕೊನೆಯ ಭಾಗದಲ್ಲಿ dispute ಇರುವುದರಿಂದ ಅಜ್ಜಂಪುರ ಮತ್ತು ಪಕ್ಕದ ಊರಿನ ಮಧ್ಯದಲ್ಲಿ ಜಾಗವನ್ನು ಗುರುತಿಸಲಾಗಿದೆ ಎಂದು ಹೇಳಲಾಗುತ್ತಿದೆ. ಅಜ್ಜಂಪುರ ಪಟ್ಟಣ ಪಂಚಾಯ್ತಿಯಾಗಿದೆ. ಅಜ್ಜಂಪುರ ಪಕ್ಕದಲ್ಲಿಯೇ ತಾಲ್ಲೂಕು ಕಛೇರಿ, ತಾಲ್ಲೂಕು ಪಂಚಾಯ್ತಿ ಮುಂತಾದ civic communities ಗಳನ್ನು ಪ್ರಾರಂಭ ಮಾಡಿದರೆ ನಗರ ಬೆಳೆಯುವುದಕ್ಕೂ ಅನುಕೂಲವಾಗುತ್ತದೆ ಮತ್ತು ಜನಸಾಮಾನ್ಯರಿಗೂ ಅನುಕೂಲವಾಗುತ್ತದೆ. ತಾವು ದಯಮಾಡಿ ಇದರ ಬಗ್ಗೆ ತಮ್ಮ ಅಧಿಕಾರಿವರ್ಗದವರಿಂದ ತಿಳಿದುಕೊಂಡು ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳಬೇಕು. ಈಗಾಗಲೇ ಜಿಲ್ಲಾಧಿಕಾರಿಯವರು ರೂ.10 ಲಕ್ಷ, ರೂ.5 ಲಕ್ಷಗಳನ್ನು ನೀಡಿದ್ದಾರೆ. ಅದು ಯಾವುದಕ್ಕೂ ಸಾಲುವುದಿಲ್ಲ. ಈಗ ಕಾಮಗಾರಿಗಳು ಬಹಳ ಮಂದಗತಿಯಲ್ಲಿ ಸಾಗುತ್ತಿದ್ದು, ತ್ವರಿತಗತಿಯಲ್ಲಿ infrastructure ಅನ್ನು ಮಾಡಿದರೆ ಒಳ್ಳೆಯದು. ಈಗ ಇರುವಂತಹ ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅಲ್ಲಿರುವಂತಹ infrastructure ಬಹಳ ಕಳಪೆಯಾಗಿವೆ ಎಂದು ಹೇಳಬಯಸುತ್ತೇನೆ.

**ಶ್ರೀ ಆರ್. ಅಶೋಕ:–** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆ ಅಜ್ಜಂಪುರ ತಾಲ್ಲೂಕು ದಿನಾಂಕ 11.01.2018ರಂದು ಹೊಸ ತಾಲ್ಲೂಕಾಗಿ ಅಸ್ತಿತ್ವಕ್ಕೆ ಬಂದಿದೆ. ಈ ತಾಲ್ಲೂಕಿನಲ್ಲಿ 3 ಹೋಬಳಿ, 135 ಗ್ರಾಮಗಳು ಸೇರ್ಪಡೆಯಾಗಿವೆ. ಅಜ್ಜಂಪುರ ತಾಲ್ಲೂಕಿನ ತಹಶೀಲ್ದಾರ್ ಕಛೇರಿಯು ಪ್ರಸ್ತುತ ತಾಲ್ಲೂಕು ಪಂಚಾಯ್ತಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈಗಾಗಲೇ ಅಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಮಾಡುವುದಕ್ಕಾಗಿ ಅಲ್ಲಿನ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದು ಸರ್ಕಾರಕ್ಕೆ ಬಂದಿದೆ. ಅಂದಾಜು ಪಟ್ಟಿ ಸಿದ್ಧವಾದ ತಕ್ಷಣ ಅಲ್ಲಿ ಮಿನಿ ವಿಧಾನ ಸೌಧವನ್ನು ಕಟ್ಟುವುದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇಲಾಖೆಯಿಂದ ಈಗಾಗಲೇ ಅಲ್ಲಿರುವ ಕಛೇರಿ ನಡೆಯುವುದಕ್ಕೆ ಪ್ರತಿ ವರ್ಷ ರೂ.25 ಲಕ್ಷ ಅನುದಾನವನ್ನು ನೀಡಲಾಗುತ್ತಿದೆ. ಆದಷ್ಟು ಶೀಘ್ರವಾಗಿ ಉಳಿದಂತಹ ಇಲಾಖೆಗಳು ಅಲ್ಲಿ ಬಂದು ಅಲ್ಲಿ ಕಾರ್ಯನಿರ್ವಹಿಸಬೇಕು ಎಂಬುದು ಕೂಡ ಸರ್ಕಾರದ ಇಚ್ಛೆ ಇರುವುದರಿಂದ ಉಳಿದ ಇಲಾಖೆಗಳ ಜೊತೆಯಲ್ಲಿ ಮಾತನಾಡಿ ಪೂರ್ಣ ಪ್ರಮಾಣದ ಒಂದು ವ್ಯವಸ್ಥೆಯನ್ನು ಮಾಡಲಾಗುವುದು.

**ಶ್ರೀ ಎಸ್.ಎಲ್.ಭೋಜೇಗೌಡ:–** ಧನ್ಯವಾದಗಳು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 828**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಮಾನ್ಯ ಉಪಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಹಣ ಬಳಕೆಯಲ್ಲಿ ನಮ್ಮ ರಾಜ್ಯ ಹಿಂದುಳಿದಿರುವ ಬಗ್ಗೆ ನಮಗೆ ಸ್ಪಷ್ಟವಾದ ಮಾಹಿತಿಯು ಲಭಿಸಿದೆ. ಅದರ ಆಧಾರದ ಮೇಲೆ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ಶೇ.74 ಹಣವನ್ನು ಈಗಾಗಲೇ ಬಳಕೆ ಮಾಡಿದ್ದೇವೆಂದು ಉತ್ತರದಲ್ಲಿ ತಿಳಿಸಿದ್ದಾರೆ. ನನಗೆ ಬಂದಿರುವ ಮಾಹಿತಿಯ ಪ್ರಕಾರ ಶೇ.39 ರಷ್ಟು ಹಣ ವಾಪಸ್ ಹೋಗಿದೆ. ಪೂರ್ಣ ಪ್ರಮಾಣದಲ್ಲಿ ಅನುದಾನವನ್ನು ಬಳಕೆ ಮಾಡಿಕೊಂಡಿಲ್ಲ. ಅನುದಾನವನ್ನು ವೆಚ್ಚ ಮಾಡದಿರುವುದರಿಂದ ಇಡೀ ರಾಜ್ಯದಲ್ಲಿ ಅಭಿವೃದ್ಧಿಗಳು ಕುಂಠಿತಗೊಳ್ಳುತ್ತಿವೆ. ಆದರೂ ಸಹ ಇಲಾಖೆಯಲ್ಲಿ ಇದುವರೆಗೂ ಆಗಿರುವ ಖರ್ಚುಗಳ ಬಗ್ಗೆ ಮಾನ್ಯ ಮಂತ್ರಿಯವರು ವಿವರಣೆಯನ್ನು ನೀಡಿದ್ದಾರೆ. ನಾವಿನ್ನೂ ಮಾರ್ಚ್ ತಿಂಗಳಿನಲ್ಲಿದ್ದೇವೆ. ಯಾವುದೇ ಹಣ ಖರ್ಚಾಗದೆ ವಾಪಸ್ ಹೋಗುವುದರಿಂದ ಏನಾಗುತ್ತದೆ? ಮುಂದಿನ ವರ್ಷಕ್ಕೆ ಅದನ್ನು ಬಳಕೆ ಮಾಡಿಕೊಳ್ಳಲಾಗುವುದು ಎಂದು ಸಹ ಉತ್ತರದಲ್ಲಿ ತಿಳಿಸಲಾಗಿದೆ. ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಇಡೀ ದೇಶದಲ್ಲಿ ನಮ್ಮ ರಾಜ್ಯ ಕಳಪೆ ಸಾಧನೆ ಮಾಡಿದೆ ಎಂದು ಹಲವಾರು ಪತ್ರಿಕೆಗಳಲ್ಲಿ ಬಂದಿರುವುದನ್ನು ಸಹ ನಾನು ಗಮನಿಸಿದ್ದೇನೆ. ಇದು ಮರುಕಳಿಸದಂತೆ ಎಚ್ಚರವನ್ನು ವಹಿಸುವುದು ಒಂದು ಅಂಶವಾದರೆ, ಅಧಿಕಾರಿಗಳು ಸ್ಪಷ್ಟ ಆದೇಶವಿದ್ದರೂ ಸಹ ಜಾರಿಗೊಳಿಸುವಲ್ಲಿ ವಿಫಲರಾಗಿದ್ದಾರೆ. ಮಾನ್ಯ ಸಚಿವರು ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ಕೊಟ್ಟಿದ್ದರೂ ಕ್ರಮವನ್ನು ಕೈಗೊಳ್ಳದೆ ಇಂದು ಈ ರೀತಿಯ ವ್ಯವಸ್ಥೆಗೆ ನಾವೆಲ್ಲರೂ ಬಲಿಯಾಗುತ್ತಿದ್ದೇವೆ. ಇದರಿಂದ ರಾಜ್ಯದ ಜನತೆಗೆ ಮೋಸ ಮಾಡಿದಂತೆ ಆಗುವುದಿಲ್ಲವೆ ಎಂಬುದಕ್ಕೆ ಮಾನ್ಯ ಸಚಿವರು ಉತ್ತರವನ್ನು ನೀಡಬೇಕು.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣ ಅವರಿಗೆ ಯಾರೋ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಶೇ.74 ಅನ್ನು ನಾವು ಫೆಬ್ರವರಿಯ ಅಂತ್ಯಕ್ಕೆ ಖರ್ಚು ಮಾಡಿದ್ದೇವೆ. ಉಳಿದಂತಹ ಹಣ ಈ ತಿಂಗಳಿನಲ್ಲಿ ಆಗುತ್ತದೆ. ನಮ್ಮ ಇಲಾಖೆಯಿಂದ ಬಹಳ ಪ್ರಮುಖವಾಗಿ 824 ವಸತಿ ಶಾಲೆಗಳನ್ನು, 2309 ವಿದ್ಯಾರ್ಥಿ ನಿಲಯಗಳನ್ನು, 190 ಆಶ್ರಮ ಶಾಲೆಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ಅದಲ್ಲದೆ, 43,28,000 ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡುತ್ತಿದ್ದೇವೆ. ಆದ್ದರಿಂದ ನಮ್ಮಲ್ಲಿ ಖರ್ಚುವೆಚ್ಚ ಆಗದೆ ಇರುವುದಕ್ಕೆ ಯಾವುದೇ ಹಿನ್ನಡೆಯಾಗುವುದಕ್ಕೆ ಸಾಧ್ಯವಿಲ್ಲ.

ಮಾನ್ಯ ಸದಸ್ಯರು ಶೇ.50ಕ್ಕಿಂತ ಕಳಪೆ ಸಾಧನೆ ಮಾಡಿರುವ ಇಲಾಖೆಗಳು ಯಾವುವು ಎಂದು ಕೇಳಿದ್ದಾರೆ. ಅದಕ್ಕೆ ಉತ್ತರ ಎರಡನೆಯ ಪುಟದಲ್ಲಿದೆ. ಒಂದು ಅರಣ್ಯ ಇಲಾಖೆ, ಮತ್ತೊಂದು ಕೌಶಲ್ಯಾಭಿವೃದ್ಧಿ ಇಲಾಖೆ. ಅಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗ್ರ್ಯಾಂಟ್ ಇರುವುದು ಬಹಳ ಕಡಿಮೆ. ಅವು ರೂ.5–6 ಕೋಟಿ ಗ್ರ್ಯಾಂಟ್ ಇರುವಂತಹ ಇಲಾಖೆಗಳು. ಅಲ್ಲಿನ ಕಾರ್ಯಕ್ರಮಗಳಲ್ಲಿ ಏನಾದರೂ ಹೆಚ್ಚು ಕಡಿಮೆ ಆಗಿರಬಹುದು. ಅವರ ಇಲಾಖೆಯೊಳಗೆ ಮಾಡಿಕೊಳ್ಳುತ್ತಾರೆ. ಈ ಮೊದಲು ಪ್ರತಿ ವರ್ಷ ಅರಣ್ಯ ಪ್ರದೇಶದಲ್ಲಿರತಕ್ಕಂತಹ ಆದಿವಾಸಿಗಳಿಗೆ ಮತ್ತು ಕೆಲವು ಎಸ್‌ಸಿ/ಎಸ್‌ಟಿ ಜನಾಂಗದವರಿಗೆ ಎಲ್.ಪಿ.ಜಿ.ಗ್ಯಾಸ್ ಸಿಲಿಂಡರ್‌ಗಳನ್ನು ನೀಡಲಾಗುತ್ತಿತ್ತು. ಕೇಂದ್ರ ಸರ್ಕಾರ ಈಗ ಪುಕ್ಕಟೆಯಾಗಿ ಕೊಡುತ್ತಿರುವುದರಿಂದ ಅವರು ನಿಲ್ಲಿಸಿದ್ದಾರೆ. ಆದ್ದರಿಂದ ಅವರಲ್ಲಿ ಉಳಿದ ಸ್ವಲ್ಪ ಹಣವನ್ನು ನಾವು ವಾಪಸ್ ಪಡೆದುಕೊಂಡು ಅದನ್ನು ನಮ್ಮಲ್ಲಿಯೇ ಖರ್ಚು ಮಾಡುತ್ತೇವೆ. ಯಾರೂ ಆತಂಕ ಪಡಬೇಕಾಗಿಲ್ಲ ಮತ್ತು ಇದರಿಂದ ಯಾರಿಗೂ ಮೋಸ ಆಗುವುದಿಲ್ಲ. ಖಂಡಿತವಾಗಿಯೂ ಸರ್ಕಾರ ಎಸ್‌ಸಿ/ಎಸ್‌ಟಿ ಜನಾಂಗದ ಅಭಿವೃದ್ಧಿಯ ಸಲುವಾಗಿ ಹೆಚ್ಚಿನ ಗಮನವನ್ನು ಕೊಡುತ್ತದೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಶರವಣ ಅವರೇ, ಕಳೆದ ಸರ್ಕಾರದ್ದೇನಾದರೂ ಕೇಳಿದ್ದಿರಾ?

**ಶ್ರೀ ಟಿ.ಎ.ಶರವಣ:–** ಮಾನ್ಯ ರವಿಕುಮಾರ್ ಅವರೇ, ಕಳೆದ ಡಿಸೆಂಬರ್ ತಿಂಗಳು 15ನೇ ತಾರೀಖು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆಯೆಂದರೆ ಅದು ಯಾವ ಸರ್ಕಾರ? ನೀವೇ ಹೇಳಿ. ಮಂತ್ರಿ ಮಾಡಿಬಿಟ್ಟರೆ ಸರಿಹೋಗುತ್ತದೆ. ಅಲ್ಲಿ ಇನ್ನೇನೂ ಆಗುವುದಿಲ್ಲ.

**(ಮುಂದು)**

(327) 5.30 11.03.2020 KG BNS

**ಶ್ರೀ ಕೆ.ಟಿ.ಶ್ರೀಕಂಠೇಗೌಡ:** ಮಾನ್ಯ ಸಭಾಪತಿಯವರೇ, ನನ್ನ ಗ್ರಾಮ ಮತ್ತು ಅಕ್ಕ ಪಕ್ಕದ ಗ್ರಾಮಗಳಿಗೆ ಮೂರುವರೆ ಕೋಟಿ ರೂಪಾಯಿಗಳು ಮಂಜೂರಾಗಿತ್ತು. ಟೆಂಡರ್ ಕರೆದರು. ಒಂದು ಕೋಟಿ ರೂಪಾಯಿಗಳ ಕಾಮಗಾರಿಗಳಿಗೆ ನಾನು ಪೂಜೆ ಮಾಡಿದೆ. ಅದು ಅರ್ಧ ಕೆಲಸ ಮುಗಿದು ಹೋಗಿದೆ. ಇನ್ನೂ ಎರಡೂವರೆ ಕೋಟಿ ರೂಪಾಯಿಗಳ ಟೆಂಡರ್ ಆಗಿದೆ. ಮಾನ್ಯ ಸಚಿವರು ಕೊಡಲೇ ಬಿಡುಗಡೆ ಮಾಡಿ ಎಂದು ಪತ್ರ ಬರೆದಿದ್ದಾರೆ. ಅದರ ಬಗ್ಗೆ ಯಾವುದೇ ಕ್ರಮ ಆಗಲಿಲ್ಲಿಲ್ಲ. ಆ ಹಣ ಈ ತಿಂಗಳಿನಲ್ಲಿ ಖರ್ಚು ಆಗಬೇಕು ಅಲ್ಲವೇ,

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಕೆಲವು ಕಾಮಗಾರಿಗಳು ಪೂರ್ಣವಾಗಿದ್ದರೆ, spill over ಎಂದು ಮುಂದಿನ ವರ್ಷದಲ್ಲಿ ನಾವು ಕೊಡುತ್ತೇವೆ. ಯಾವುದೇ ಒಂದು ರೂಪಾಯಿಯೂ ಸಹ lapse ಆಗುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, SCP-TSP ಯೋಜನೆಯಡಿಯಲ್ಲಿ ಸಾಕಷ್ಟು ಅನುದಾನ ಇಲಾಖೆಯಲ್ಲಿದೆ. ಬೇರೆ ಬೇರೆ ಯೋಜನೆಗಳು ಈ ಅನುದಾನವನ್ನು ಬಳಕೆ ಮಾಡಿಕೊಳ್ಳುವುದರ ಜೊತೆಗೆ ಸರ್ಕಾರಿ ಶಾಲೆಗಳಿಗೆ ಅಂದರೆ, ಪ್ರಾಥಮಿಕ ಶಾಲೆಗಳಾಗಿರಬಹುದು ಅಥವಾ ಪ್ರೌಢ ಶಾಲೆಗಳ ಕಟ್ಟಡಗಳಿಗೆ ಮತ್ತು ಕಾಂಪೌಂಡ್‌ಗಳಿಗೆ ತೊಂದರ ಇವೆ. SCP-TSP ಅನುದಾನವನ್ನು ಸಹ ಪ್ರಾಥಮಿಕ ಶಾಲೆಗಳಿಗೆ, ಪ್ರೌಢ ಶಾಲೆಗಳಿಗೆ, ಪದವಿ ಪೂರ್ವ ಕಾಲೇಜುಗಳಿಗೆ ಉಪಯೋಗ ಮಾಡಿಕೊಳ್ಳಲು ಕಾನೂನಿನಲ್ಲಿ ಅವಕಾಶ ಮಾಡಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆ ಶಾಲೆಗಳಲ್ಲಿಯೂ ಸಹ ಎಸ್.ಸಿ. ಮತ್ತು ಎಸ್.ಟಿ. ಜನಾಂಗದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ. ಇವತ್ತಿಗೂ ಸಹ ಎಸ್.ಸಿ. ಮತ್ತು ಎಸ್.ಟಿ. ಜನಾಂಗದ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ ಪ್ರತ್ಯೇಕವಾಗಿ ಅನುದಾನವನ್ನು ಕೊಡುತ್ತಿದ್ದಾರೆ. ಸರ್ಕಾರಿ ಶಾಲೆಗಳಿಗೆ ಸಹ ಈ ಅನುದಾನದಲ್ಲಿ ಖರ್ಚು ಮಾಡುವುದಕ್ಕೆ ಶಾಲೆ ಕಟ್ಟಡಗಳನ್ನು ದುರಸ್ಥಿ ಮಾಡುವುದಕ್ಕೆ ಮತ್ತು ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರದಲ್ಲಿ ಏನಾದರೂ ನಿಯಮಗಳನ್ನು ಮಾಡಿಕೊಂಡು ಆ ಅನುದಾನವನ್ನು ಬಳಕೆ ಮಾಡಿಕೊಳ್ಳಬೇಕೆಂದು ಈ ಸದನದ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, 2013ರ Act ಬಂದ ಮೇಲೆ, ನಮಗೆ diversion ಮಾಡುವುದಕ್ಕೆ ಅಥವಾ mis-application ಮಾಡುವುದಕ್ಕೆ, misuse ಮಾಡುವುದಕ್ಕೆ ಅವಕಾಶ ಇಲ್ಲ. ಈಗ ಮಾನ್ಯ ಸದಸ್ಯರು ಕೇಳುತ್ತಿರುವಂತಹ ...

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳುವುದು ಏನೆಂದರೆ, ಪದವಿ ಪೂರ್ವ ಮಹಾ ವಿದ್ಯಾಲಯಗಳಲ್ಲಿ ಎಲ್ಲಾ ಜಾತಿ ಜನಾಂಗಗಳ ಮಕ್ಕಳು ಇರುತ್ತಾರೆ. ಅಲ್ಲಿ ಎಸ್.ಸಿ. ಮತ್ತು ಎಸ್.ಟಿ. ಮಕ್ಕಳು ಇರುತ್ತಾರೆ. ಎಲ್ಲಾ ಜನರಲ್ ಕ್ಯಾಟಗರಿ ಮಕ್ಕಳೇ ಇರುವುದಿಲ್ಲ. ಮಾನ್ಯ ಸಚಿವರು ಈ ಬಗ್ಗೆ ಚಿಂತನೆ ಮಾಡಬೇಕು. ನಾವು ಹಾಸ್ಟೆಲ್‌ಗಳನ್ನು segregation ಮಾಡಿದ್ದೇವೆ. ಎಸ್.ಸಿ. ಹಾಸ್ಟೆಲ್, ಎಸ್.ಟಿ. ಹಾಸ್ಟೆಲ್, backward class ಹಾಸ್ಟೆಲ್‌ಗಳೆಂದು ಬೇರೆ ಮಾಡಿದ್ದೇವೆ. ಈ ಎಲ್ಲಾ ಹಾಸ್ಟೆಲ್‌ಗಳನ್ನು ಜೊತೆಗೆ ಮಾಡಬೇಕು. ಇದು ನನ್ನ ಚಿಂತನೆ. ಎಸ್.ಸಿ. ಮಕ್ಕಳಿಗೆ ಎಷ್ಟು admission ಕೊಡಬೇಕು, ಎಸ್.ಟಿ. ಮಕ್ಕಳಿಗೆ ಎಷ್ಟು admission ಕೊಡಬೇಕು. Backward class ಗೆ ಎಷ್ಟು admission ಕೊಡಬೇಕು, ಆ ರೀತಿ proportionately, common ಆಗಿ ಮಾಡಿದರೆ ಈ secularism ಏನಿದೆಯಲ್ಲ, ನಮ್ಮ ಸಂವಿಧಾನದ Preamble ನಲ್ಲಿ, "India is a secular, democratic, sovereign Country" ಎಂಬುದಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದೆ. ಆಗ 'secular' ಎಂಬ ಶಬ್ದಕ್ಕೆ ಏನಾದರೂ ಅರ್ಥ ಬರುತ್ತದೆಯೇ ಎಂದು, ಒಂದು ಹಾಸ್ಟೆಲ್‌ನಲ್ಲಿ ಜನರಲ್ ಕ್ಯಾಟಗರಿ ಮಕ್ಕಳು ಇರಲಿ, ಎಸ್.ಸಿ.ಯವರು ಇರಲಿ, ಎಸ್.ಟಿ.ಯವರು ಇರಲಿ, backward class ನವರು ಇರಲಿ, percentage-wise ನಾವು ಏಕೆ ಮಾಡಬಾರದು? ಆ ಬಗ್ಗೆ ಚಿಂತನೆ ಮಾಡಿದರೆ ಸಾಧ್ಯವಿದೆಯೋ ಹೇಗೋ ಎಂಬುದನ್ನು ಮಾನ್ಯ ಸಚಿವರು ವಿಚಾರ ಮಾಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, Social Welfare ಮತ್ತು Backward Classes Welfare ಈ ಎರಡೂ ಇಲಾಖೆಗಳು ಮೊದಲು ಜೊತೆಗೆ ಇದ್ದವು. ಈಗ ಹಾಸ್ಟೆಲ್‌ಗಳ ಪರಿಸ್ಥಿತಿ ಏನಿದೆ ಎಂದು ತಮಗೂ ಗೊತ್ತಿದೆ. ಒಂದು ಹಾಸ್ಟೆಲ್‌ನಲ್ಲಿ ಜಾಗ ಸಿಗಲಿಲ್ಲವೆಂದರೆ ಮತ್ತೊಂದು ಹಾಸ್ಟೆಲ್‌ನಲ್ಲಿ adjust ಮಾಡುವುದಕ್ಕೆ ಆಗುತ್ತದೆ. ಈಗ ಯಾರೋ ಒಬ್ಬರನ್ನು ಮಂತ್ರಿ ಮಾಡಬೇಕೆಂದು, ಈ ಇಲಾಖೆಗಳನ್ನು ಬೇರೆ ಬೇರೆ ಮಾಡಿದರೆ, ಇಡೀ Social Welfare Department ಒಂದು ತರಹ funky ಆಗುತ್ತದೆ. ಸದನದ ನಮ್ಮ feelings ಏನೆಂದರೆ, ಈ ಹಿಂದೆ ಈ ಇಲಾಖೆಗಳು ಯಾವ ರೀತಿ ಇತ್ತೋ, ಅದೇ ರೀತಿ ಒಂದು ಕಡೆ ಇದ್ದರೆ ಮಾತ್ರ ಏನಾದರೂ adjustment ಮಾಡಬಹುದು. ಇಲ್ಲಿ ಹೆಚ್ಚು ಹಣ ಇದ್ದರೆ, ಅಲ್ಲಿಗೆ ತೆಗೆದುಕೊಳ್ಳಬಹುದು. ಅಲ್ಲಿ ಇದ್ದರೆ ಇಲ್ಲಿಗೆ ತೆಗೆದುಕೊಳ್ಳಬಹುದು. ಈಗ ಮಕ್ಕಳಿಗೆ ಯಾವ ಪರಿಸ್ಥಿತಿ ಇದೆ ಎಂದು ಅವರಿಗೆ ಗೊತ್ತಿದೆ. ಮಕ್ಕಳಿಗೆ ಒಂದೊಂದು ಬಾರಿ ಸರಿಯಾಗಿ ಸೌಲಭ್ಯ ಸಿಗುವುದಿಲ್ಲ. ಏಕೆಂದರೆ, ಒಂದು ಕಡೆ excess ಇದ್ದಾರೆ. ಇನ್ನೊಂದು ಕಡೆ ಕಡಿಮೆ ಇರುತ್ತಾರೆ. ಈಗ ಇಲಾಖೆಗಳು ಬೇರೆ ಬೇರೆ ಇರುವುದರಿಂದ ಅವರ ಅನುಮತಿ ಕೇಳಬೇಕಾಗುತ್ತದೆ. ಅದಕ್ಕೆ ನನ್ನ ಸಲಹೆ ಏನೆಂದರೆ, ನಾನು ಇಲ್ಲಿಯವರೆಗೆ ಈ ಸದನದಲ್ಲಿದ್ದು ನೋಡಿಕೊಂಡು ಬಂದಿರುವುದು ಏನೆಂದರೆ, ಈ ಎರಡು ಇಲಾಖೆಗಳು ಒಟ್ಟಿಗೆ ಇದ್ದರೆ ಅನುಕೂಲ ಎನ್ನುವುದು ನನ್ನ ಸಲಹೆ. ಏಕೆಂದರೆ, ಎಲ್ಲಾ ಮಕ್ಕಳಿಗೂ ಸರಿಯಾಗಿ ನ್ಯಾಯ ಸಿಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಚಿಂತನೆ ಮಾಡಬೇಕು. ಮಾನ್ಯ ಸಭಾನಾಯಕರು ಇವುಗಳನ್ನು ನೋಡಿಕೊಳ್ಳಬೇಕು. ಅವರು ಓಡಾಡುತ್ತಿರುತ್ತಾರೆ. ಅವರು ಸರಿಯಾಗಿ ಕುಳಿತುಕೊಂಡು ಸಲಹೆ ಕೇಳಿ ಅದನ್ನು ಮಾನ್ಯ ಮುಖ್ಯ ಮಂತ್ರಿಯವರಿಗೆ ಹೇಳಬೇಕು. ನಾವು ಬಹಳ ಸೂಕ್ಷ್ಮವಾದಂತಹ ವಿಚಾರವನ್ನು ಬಹಳ ತಿಳಿದುಕೊಂಡು ಹೇಳುತ್ತಿದ್ದೇವೆ. ದಯಮಾಡಿ ಇದನ್ನು ಸರ್ಕಾರ ಮಾಡಬೇಕೆಂದು ಒತ್ತಾಯ ಮಾಡುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಹೇಳಿದಂತಹ ಸಲಹೆಯನ್ನು ಯಾಕೆ ಈ ಬಗ್ಗೆ ಚಿಂತನೆ ಮಾಡಬಾರದು? ಎಷ್ಟು percentage ಇದೆಯೋ ಅಷ್ಟು percentage ಕೊಡುವುದು. ಎಸ್.ಸಿ. ಮತ್ತು ಎಸ್.ಟಿ. ಕೂಡಿ 24.01% ಆ ಮಕ್ಕಳಿಗೆ ಅಷ್ಟು admission ಕೊಡುವುದು. General category ಗೆ ಎಷ್ಟು ಇದೆಯೋ ಅಷ್ಟು ಕೊಟ್ಟು ಬಿಡುವುದು. General category ಗೆ 1% ಇರಲಿ ಅಷ್ಟು ಕೊಟ್ಟುಬಿಡಿ. ಅಂದರೆ,

common ಆಗಿ ಎಲ್ಲಾ ಮಕ್ಕಳು ಒಂದೇ ಕಡೆ ಇರುವುದರಿಂದ ಈ secular, ಜಾತ್ಯತೀತ ಎನ್ನುವಂತಹ ವಿಚಾರ ಅಲ್ಲಿ ಬರಬಹುದಲ್ಲವೇ? ಅಲ್ಲದೇ ಎಲ್ಲರೂ ಜೊತೆಗೆ ಒಟ್ಟಿಗೆ ಬೆಳೆಯಲಿ.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಇತ್ತು. ಈಗ ಇಲ್ಲ. ಮಾನ್ಯ ರವಿಕುಮಾರ್‌ರವರೇ ನಿಮ್ಮ ಸರ್ಕಾರ ಬಂದು ಬದಲಾಗಿದ್ದು, ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಇತ್ತು. ಅವರು ಬಂದು ಬದಲು ಮಾಡಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಯಾರು ಇದ್ದಾಗಲಾದರೂ ಆಗಲಿ, ಈ ರೀತಿಯಾಗಿ ಎಲ್ಲರೂ ಒಟ್ಟಾಗಿ ಬೆಳೆಯುತ್ತಾರೆ. ಶೋಷಿತ ವರ್ಗದವರು, ಹಿಂದುಳಿದವರು ಮತ್ತು ಮುಂದುವರಿದವರು ಎಲ್ಲರೂ ಒಂದು ಕಡೆ ವಾಸಿಸುವುದರಿಂದ ಅವರಲ್ಲಿ ಭಾವನಾತ್ಮಕವಾದಂತಹ ಸಂಬಂಧ, ಸಹೋದರತ್ವ ಬೆಳೆಯುತ್ತದೆ. ಭಾತೃತ್ವ, ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವಂತಹದ್ದು ಆಗಬಹುದು ಎನ್ನುವುದಕ್ಕೆ ಇದು. ಅದರ ಅರ್ಥ ಎಸ್.ಸಿ., ಎಸ್.ಟಿ. ಮಕ್ಕಳಿಗೆ ಇದರಿಂದ ಅನ್ಯಾಯವಾಗುತ್ತದೆ ಎಂದು ದಯಮಾಡಿ ಭಾವಿಸಬೇಡಿ. ಪ್ರತ್ಯೇಕಿಸುವುದಕ್ಕೆ ಹೋಗಬೇಡಿ. ಎಲ್ಲರನ್ನು ಕೂಡಿಸಿ ಕೊಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು 1:1 Programme. ಇದರಲ್ಲಿ ಇದೇ ವರ್ಷದಲ್ಲಿಯೇ ಖರ್ಚು ಮಾಡದಿದ್ದರೆ, ಮುಂದಿನ ವರ್ಷಕ್ಕೆ ಅಂದರೆ, ಎರಡನೆ ವರ್ಷಕ್ಕೂ ಇಲ್ಲವೇ ಮೂರನೇ ವರ್ಷಕ್ಕೂ ಬರುತ್ತದೆ. ದಯಮಾಡಿ ensure that 24.01% ಏನಿದೆ ಅದೇ ವರ್ಷದಲ್ಲಿ ಆಗಬೇಕು. ಅದೇ ವರ್ಷದಲ್ಲಿ ಆ ಸಮುದಾಯಕ್ಕೆ ಅಭಿವೃದ್ಧಿಯಾಗುವಂಥದ್ದು ಒಂದು. ಮಾನ್ಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರು ಮತ್ತು ವಿರೋಧ ಪಕ್ಷದ ನಾಯಕರು ಅದರಲ್ಲಿ ಏನು ಕೇಳಿದ್ದಾರೆಂದರೆ, 40% ರವರೆಗೂ ಎಸ್.ಸಿ. ಮತ್ತು ಎಸ್.ಟಿ. ಜನಾಂಗ ಇದೆ ಅಲ್ಲಿ deemed expenditure ಅಂತ ಮಾಡಬಹುದು. ಅದು compound ಆಗಬಹುದು, ಅದು school building ಆಗಬಹುದು, ಅದನ್ನು ಮಾಡಬಹುದು. ನಾನು Scheduled Castes and Scheduled Tribes Welfare Committee ಯಲ್ಲಿ ಇದ್ದೇನೆ. ನಾವು ಮಾಡಿದಾಗ ಏನಾಯಿತು ಅಂದರೆ, ನಮ್ಮ ಅಧ್ಯಕ್ಷರು ಅವರೆಲ್ಲರೂ ಮಾಡಬಾರದು ಎಂದು, ಒಂದು resolution ಮಾಡಿದ್ದೆವು. ಯಾವುದೇ ಕಾರಣಕ್ಕೂ deviate ಮಾಡಬಾರದು ಎಂದು ಮಾಡಿದ್ದೆವು. ಆದರೆ, ಅಲ್ಲಿ deemed expenditure ಅಂತ ಮಾಡುವುದು ಒಳ್ಳೆಯದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸದಸ್ಯರಾದ ನಿರಾಣಿಯವರು ಶಾಲೆಗಳಿಗೆ ಎಸ್.ಸಿ. ಮತ್ತು ಎಸ್.ಟಿ. Fund ಕೊಡಬೇಕೆಂದು ಕೇಳಿದರು. ನಾನು ಮೊದಲೇ ಹೇಳುವಾಗಲೇ ಹೇಳಿದ್ದೇನೆ. 39 ಇಲಾಖೆಯಲ್ಲಿ SCP-TSP ಹಣವನ್ನು allocation ಮಾಡಿರುತ್ತೇವೆ. ಆ ಹಣದಲ್ಲಿ ಅವರು ಶಾಲೆಗಳ ರಿಪೇರಿ ಮಾಡಿಕೊಳ್ಳಬಹುದು, ಕಾಂಪೌಂಡ್‌ಗಳನ್ನು ಕಟ್ಟಿಕೊಳ್ಳಬಹುದು ಮತ್ತು ಮೂಲಭೂತ ಸೌಕರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಯಾವುದೇ ತೊಂದರೆ ಇರುವುದಿಲ್ಲ. ಏಕೆಂದರೆ, ಆ ಇಲಾಖೆಯಲ್ಲಿರುವಂತಹ ಹಣ ಅದು. ಅವರಲ್ಲಿ 24.01% ಇದ್ದೆ ಇರುತ್ತದೆ. ಮತ್ತೆ ಮಾನ್ಯ ಪ್ರತಿಪಕ್ಷದ ನಾಯಕರು ಹಾಸ್ಟೆಲ್‌ಗಳಲ್ಲಿ ಎಲ್ಲಾ ವರ್ಗದವರಿಗೂ ಕೊಡಿ ಎಂದು ಹೇಳಿದ್ದಾರೆ. ನಮ್ಮ ವ್ಯವಸ್ಥೆಯು ಈಗ ಖಂಡತವಾಗಿಯೂ ಹಾಗೆಯೇ ಇದೆ. ಈಗ ಇರುವಂತದ್ದರಲ್ಲಿ ಎಸ್.ಸಿ. ಹಾಸ್ಟೆಲ್ ಇರಲಿ, ಎಸ್.ಟಿ. ಹಾಸ್ಟೆಲ್ ಇರಲಿ, ಓ.ಬಿ.ಸಿ. ಹಾಸ್ಟೆಲ್ ಇರಲಿ, ಆಯಾ ಹಾಸ್ಟೆಲ್‌ಗಳಲ್ಲಿ ಎಸ್.ಸಿ., ಎಸ್.ಟಿ. ಮತ್ತು ಜನರಲ್ ಕ್ಯಾಟಗರಿಯವರಿಗೂ ಕೊಡುತ್ತೇವೆ. Proportionately ನಾವು ಕೊಡುತ್ತೇವೆ. ಈಗ ಎಸ್.ಸಿ. ಮಕ್ಕಳಿಗೆ 50%, ಎಸ್.ಟಿ. ಮಕ್ಕಳಿಗೆ 25% ಮತ್ತು ಇತರೆಯವರಿಗೆ 25% ಈ ರೀತಿಯಾದ ನಮ್ಮ admission system ಇದೆ. ಇದರಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ. ಎಲ್ಲಾ ವರ್ಗದವರಿಗೂ ಕೊಡುತ್ತೇವೆ. ಆದರೆ, percentage ಹೆಚ್ಚು ಕಡಿಮೆ ಇರುತ್ತದೆ ಅಷ್ಟೆ. ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಹೇಳಿದ್ದು ಏನೆಂದರೆ, 1:1 ಇರುತ್ತದೆ. ಇದೇ ವರ್ಷದಲ್ಲಿ 99% ಖರ್ಚು ಮಾಡುತ್ತೇವೆ. ಯಾವುದು ಉಳಿಯುವುದಿಲ್ಲ. ಯಾವುದೋ ಒಂದೋ, ಎರಡೂ ಇಲಾಖೆಗಳದ್ದು ಉಳಿದಿದ್ದರೆ, ಅದನ್ನು re-appropriation ಮಾಡಿಕೊಂಡು ಖರ್ಚು ಮಾಡುತ್ತೇವೆ. ಯಾವುದೇ ತೊಂದರೆ ಇಲ್ಲ. ಕೆಲವು ಇಲಾಖೆಗಳಲ್ಲಿ ಬೇಡಿಕೆ ಹೆಚ್ಚು ಇದೆ. ಮಾನ್ಯ ಸಭಾಪತಿಯವರೇ, ಈ ವರ್ಷ ಹೆಚ್ಚು ಹಾಸ್ಟೆಲ್‌ಗಳನ್ನು ಮತ್ತು residential schools ಅನ್ನು ಕಟ್ಟುತ್ತಿದ್ದೇವೆ. ನಮ್ಮಲ್ಲಿ 824 residential schools ಇದ್ದರೆ, ಅದರಲ್ಲಿ 451 ನಮ್ಮ ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿತ್ತು. ಅದಾದ ನಂತರ ಈಗ ನಾವು ಮತ್ತೆ 190 ಹಾಸ್ಟೆಲ್‌ಗಳನ್ನು ಮತ್ತು ಶಾಲಾ ಕಟ್ಟಡಗಳನ್ನು ಕಟ್ಟುತ್ತಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದೇವೆ. ನಾವು ಮೊದಲನೆಯದಾಗಿ, ಹಾಸ್ಟೆಲ್‌ಗಳನ್ನು ಮತ್ತು school complex ಗಳನ್ನು ಕಟ್ಟುವುದಕ್ಕೆ ಹೆಚ್ಚಿಗೆ ಹಣವನ್ನು ಕೊಡುತ್ತಿದ್ದೇವೆ. ಎರಡನೆದಾಗಿ, land purchase scheme ಗೆ ಹೆಚ್ಚು ಹಣವನ್ನು ಕೊಡುತ್ತಿದ್ದೇವೆ. ಮೂರನೆಯದಾಗಿ, ಗಂಗಾ ಕಲ್ಯಾಣಕ್ಕೆ ಹೆಚ್ಚು ಆದ್ಯತೆಯನ್ನು ಕೊಡುತ್ತಿದ್ದೇವೆ. ನಮ್ಮ ಉದ್ದೇಶವೇನೆಂದರೆ, ನಾವು ಕೊಡುವಂತಹ ಹಣ asset ಆಗಿ ಪರಿವರ್ತನೆಯಾಗಬೇಕು. Asset create ಆಗಬೇಕು ಎನ್ನುವ ಉದ್ದೇಶದಿಂದ ಸಾಕಷ್ಟು ಅದಕ್ಕೆ ಒತ್ತು ಕೊಡುತ್ತಿದ್ದೇವೆ. ತಮ್ಮೆಲ್ಲರ ಸಲಹೆಯನ್ನು ಖಂಡಿತವಾಗಿ ಸ್ವೀಕಾರ ಮಾಡುತ್ತೇವೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(328)11–03–2020(5–40)ಎಂವಿ–ಬಿಎನ್ಎಸ್

**ಪ್ರಶ್ನೆ ಸಂಖ್ಯೆ 857**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2016 ರಲ್ಲಿ ಕುಲಶಾಸ್ತ್ರೀಯ ಅಧ್ಯಯನ ವರದಿ ಮಾಡಲು ಸರ್ಕಾರ ಒಂದು ನಿಯಮವನ್ನು ಕೈಗೊಂಡಿತ್ತು. ಆದರೆ, ಇಲ್ಲಿ ಕೊಟ್ಟ ವಿಚಾರದಲ್ಲಿ ಕೊಡಗು ಜಿಲ್ಲೆಯಲ್ಲಿ ಕೆಲವರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಎಂದು ಇತ್ತು. ಬಹುಶಃ ಈಗ ಆ ವಿರೋಧವಿಲ್ಲವೆಂದು ಅನಿಸುತ್ತಿದೆ. ಹಾಗಾಗಿ ಮುಂದುವರೆದ ಭಾಗವಾಗಿ ಸರ್ಕಾರದ ಸುತ್ತೋಲೆಯಲ್ಲಿ ಕೆಲವು ವಿಷಯಗಳನ್ನು ಪರಿಗಣಿಸಬೇಕೆಂದು ಕೊಟ್ಟಿದ್ದಾರೆ. ಅದು ಅಧೀಮ ಕಾಲದ ಗುಣಲಕ್ಷಣಗಳು, ವಿಭಿನ್ನ ಸಂಸ್ಕೃತಿ, ಭೌಗೋಳಿಕ ಪ್ರತ್ಯೇಕತೆ ಹಾಗೂ ಹಿಂದುಳಿದ ವರ್ಗ ಎಂದು ಇದೆ. ಕೊಡವ ಸಮುದಾಯದ ಕುಲಶಾಸ್ತ್ರ ಅಧ್ಯಯನದ ಪ್ರಸ್ತಾವನೆಯಲ್ಲಿ ಪ್ರಮುಖವಾದ ಪ್ರಶ್ನಾವಳಿಯನ್ನು ಬಿಟ್ಟಿದ್ದಾರೆ. ಕೊಡವರು ಕಾಡನ್ನು ಸಂರಕ್ಷಿಸುವ ಮೂಲಕ, ಉತ್ಕೃಷ್ಟ ಅರಣ್ಯ ಸಂಪತ್ತನ್ನು ಇಂದಿಗೂ ಕಾಪಾಡುತ್ತಾ ಬಂದಿದ್ದಾರೆ. ಹಿಂದೂಸ್ತಾನದಲ್ಲಿ ಎಲ್ಲೂ ಕಂಡುಬರದಂತಹ ಸಪ್ತಪದಿ ಇಲ್ಲದೇ ಇರುವ ವಿವಾಹದ ಸಂಪ್ರದಾಯ ಪದ್ಧತಿ ಬಗ್ಗೆ. ಅಂದರೆ, ಕೊಡವರು ಮದುವೆಯಾಗುವಾಗ, ಸಪ್ತಪದಿ ತುಳಿಯುವುದಿಲ್ಲ. ಜೊತೆಗೆ ತಾಳಿ ಕಟ್ಟುವುದು ಹೆಣ್ಣು. ಅದನ್ನು ಗಂಡು ಕಟ್ಟುವುದಿಲ್ಲ. ಹಾಗೆಯೇ ಹುಟ್ಟಿನಿಂದ ಸಾವಿನವರೆಗೆ ಎಲ್ಲಾ ಸಂದರ್ಭ ಹಾಗೂ ಎಲ್ಲಾ ರೀತಿಯ ಹಬ್ಬ ಮತ್ತು ಆಚರಣೆಯ ಸಂದರ್ಭದಲ್ಲಿ, ಮಾಂಸ ಸೇವನೆ ಕೊಡಗಿನವರಲ್ಲಿ ಇಂದಿಗೂ ಪರಂಪರೆಯಾಗಿ ಉಳಿದಿರುವ ಬಗ್ಗೆಯಾಗಲಿ, ಬಂದೂಕು ಅಂದರೆ ಕೋವಿ ಹೊಂದಿರುವುದು ಧಾರ್ಮಿಕ ಆಚರಣೆ ಹಾಗೂ ಪರಂಪರೆಯಾಗಿ ಕೊಡವರಲ್ಲಿ ಇಂದಿಗೂ ಉಳಿದಿರುವ ಬಗ್ಗೆಯಾಗಲಿ, ದೇಶದ ರಕ್ಷಣೆಗಾಗಿ ಮಹಾನ್ ಯೋಧರನ್ನು ನೀಡಿದ, ಕೊಡವರ ಅಪ್ರತಿಮ ದೇಶಭಕ್ತಿ ಬಗ್ಗೆಯಾಗಲಿ, ದ್ರಾವಿಡ ಮೂಲದ ಕೊಡವರು ತಮ್ಮದೇ ಆದ ಕೊಡವ ಭಾಷೆಯನ್ನು ಹೊಂದಿರುವ ಬಗ್ಗೆಯಾಗಲಿ, ಇಷ್ಟೆ ಅಲ್ಲದೇ ವಿಭಿನ್ನ ಆಚಾರ, ವಿಚಾರ, ಕಲೆ, ಸಂಸ್ಕೃತಿ, ಮತ್ತು ಸಂಪ್ರದಾಯವನ್ನು ಕೊಡವರು ಅಂದಿನಿಂದಲೂ ಆಚರಿಸಿಕೊಂಡು ಬಂದಿದ್ದು ಅದರ ಬಗ್ಗೆಯಾಗಲಿ, ಅಧ್ಯಯನ ನಡೆಸದೆ, ಅದರ ಮಾಹಿತಿ ಕಲೆ ಹಾಕುವುದರಿಂದ ಏನು ಪ್ರಯೋಜನ ಆಗುವುದಿಲ್ಲ. ಕೇವಲ ಆರ್ಥಿಕ ಸ್ಥಿತಿಗಳನ್ನು ಅಧ್ಯಯನ ಮಾಡುತ್ತಿದ್ದು, ಜೊತೆಗೆ ಲೋಕೂರ್ ಸಮಿತಿಯ ಮಾನದಂಡಗಳಾದ, ಭೌಗೋಳಿಕ ಪ್ರತ್ಯೇಕತೆ, ವಿಭಿನ್ನ ಸಂಸ್ಕೃತಿ, ಅಧೀಮ ಕಾಲದ ಗುಣಲಕ್ಷಣಗಳನ್ನು ಮರೆಮಾಚಬಾರದು ಎಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ. ಈಗ ಯಾವುದೇ ಕುಲಶಾಸ್ತ್ರೀಯ ಅಧ್ಯಯನ ಮಾಡುವಾಗ, ಮಾನವ ಶಾಸ್ತ್ರದ ಸಿದ್ಧಾಂತದ ಮೇಲೆ ಮಾಡಲಾಗುತ್ತದೆ. ಆದರೆ, ಪ್ರಸ್ತುತದ ಅಧ್ಯಯನ ಅರ್ಥಶಾಸ್ತ್ರದ ಅಧ್ಯಯನದ ಮಾದರಿಯಲ್ಲಿ ನಡೆಯುವುದು ಬೇಡವೆನ್ನುವುದು ನನ್ನ ಮನವಿ. ಆದ್ದರಿಂದ ಕೊಡವ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನವನ್ನು ನುರಿತ ಮಾನವ ಶಾಸ್ತ್ರಜ್ಞರು ಮತ್ತು ಸಮಾಜ ಶಾಸ್ತ್ರಜ್ಞರನ್ನು ಒಳಗೊಂಡ ಸಮಿತಿಯನ್ನು ಲೋಕೂರ್ ಸಮಿತಿಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನದಂಡದ ಆಧಾರದ ಮೇಲೆ ರಚನೆ ಮಾಡಿ, ದಯವಿಟ್ಟು ಆದಷ್ಟು ಶೀಘ್ರದಲ್ಲಿ ಇದನ್ನು ಕೈಗೆತ್ತಿಕೊಳ್ಳಬೇಕೆಂದು ಮನವಿಯನ್ನು ಮಾಡುತ್ತೇನೆ.

**ಶ್ರೀ ಗೋವಿಂದ ಎಂ ಕಾರಜೋಳ:–** ಮಾನ್ಯ ಸಭಾಪತಿಯವರೇ, ಇತ್ತೀಚಿನ ದಿನಗಳಲ್ಲಿ ನಮ್ಮನ್ನು ಎಸ್.ಸಿ. ಮತ್ತು ಎಸ್.ಟಿ. ವರ್ಗಗಳಿಗೆ ಸೇರಿಸಿ ಎಂದು ಭಯಂಕರ ಬೇಡಿಕೆಗಳು ಬರುತ್ತಿವೆ. ಬಹುಶಃ ನನಗೆ ಅನಿಸುವಂತೆ, ಮುಂದಿನ ದಿನಗಳಲ್ಲಿ ಸಾಮಾನ್ಯ ವರ್ಗದಲ್ಲಿ ಜನರು ಉಳಿಯುತ್ತಾರೋ ಇಲ್ಲವೋ ಎಂದು ನನಗೆ ಅನುಮಾನ ಬರುತ್ತಿದೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಸದಸ್ಯರಾದ ಮಾನ್ಯ ಸುನೀಲ್ ಸುಬ್ರಮಣಿಯವರು ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳುತ್ತಾರೆ. ತಾವು ಎರಡೂ ಪ್ರಶ್ನೆಗಳಿಗೂ ಉತ್ತರ ಹೇಳುವುದಕ್ಕೆ ಅನುಕೂಲವಾಗುತ್ತದೆ.

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮ ಕೊಡಗು ಜಿಲ್ಲೆ ತುಂಬ ಪುಟ್ಟ ಜಿಲ್ಲೆ. ಅಲ್ಲಿ ಕೇವಲ ಮೂರು ತಾಲ್ಲೂಕುಗಳು ಮಾತ್ರ ಇರುವುದು. ನಮ್ಮ ಕೊಡವರ ಜನಸಂಖ್ಯೆ ತೀರಾ ಕಡಿಮೆ ಇದೆ. ನಾವು ಈ ಮನವಿಯನ್ನು ಕೊಟ್ಟು ಮೂರು ವರ್ಷವಾಗಿದೆ. ಈ ಮೂರು ವರ್ಷದಲ್ಲಿ ಇದುವರೆಗೆ ಒಂದು ವರದಿಯನ್ನು ನೀಡಿಲ್ಲ. ಆದಷ್ಟು ಬೇಗ ವರದಿಯನ್ನು ನೀಡಬೇಕು ಹಾಗೂ ಕೊಡಗಿನ ಜನರಿಗೆ ನ್ಯಾಯವನ್ನು ಒದಗಿಸಿಕೊಡಬೇಕು. ಈಗಾಗಲೇ ಗೌರವಾನ್ವಿತ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರು ಕೊಡವರ ಸಂಸ್ಕೃತಿಯ, ಕೊಡವರ ಆಚಾರ, ವಿಚಾರ ಮತ್ತು ಪದ್ಧತಿಗಳ ಬಗ್ಗೆ ಹೇಳಿದ್ದಾರೆ. ಅದು ಮಾನ್ಯ ಸಚಿವರಿಗೂ ಸಹ ಗೊತ್ತಿದೆ ಎಂದು ತಿಳಿದುಕೊಳ್ಳುತ್ತೇನೆ. ಕೊಡಗಿನ ಜನರಿಗೆ ಮಾನ್ಯ ಸಚಿವರು ಸಹಕಾರ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಈಗ ಅಧ್ಯಯನ ನಡೆಸುವುದಕ್ಕೆ ಹೊರಟು ಸುಮಾರು ಮೂರು ವರ್ಷವಾಗಿದೆ. ಈಗ ನಾನು ಹೇಳಿರುವಂತಹ ಅಂಶಗಳನ್ನು ಒಳಗೊಂಡಂತೆ ಅಧ್ಯಯನ ನಡೆಸಬೇಕು. ಅದರ ಕರಡು ಪ್ರತಿ ರೆಡಿಯಾದ ಮೇಲೆ, ಏನಾಗುತ್ತದೆ ಎಂದು ಮುಂದೆ ನೋಡೋಣ. ಅದಕ್ಕೆ ಸಂಬಂಧಪಟ್ಟಂತೆ ಕೊಡವರಿಗೆ ಯಾವ ರೀತಿ ಹೋರಾಟ ಮಾಡಬೇಕೆಂದು ಗೊತ್ತಿದೆ, ನಾವು ಹೋರಾಟ ಮಾಡುತ್ತೇವೆ. ದಯವಿಟ್ಟು ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ ಕಾರಜೋಳ:–** ಮಾನ್ಯ ಸಭಾಪತಿಯವರೇ, ಈಗ ಕುಲಶಾಸ್ತ್ರೀಯ ಅಧ್ಯಯನ ಮಾಡುವುದಕ್ಕೆ ಒಂದು ಸಂಸ್ಥೆ ಇದೆ. ಅದು ಭಾರತ ಸರ್ಕಾರದ ಇಲಾಖೆ. ಅವರು ಆ ಕೆಲಸವನ್ನು ಮಾಡುತ್ತಾರೆ. ಇದನ್ನು ಅವರಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಹಿಸಬೇಕಾಗುತ್ತದೆ. ಅದನ್ನು ಖಾಸಗಿಯವರಿಗೆ ಕೊಟ್ಟು ಮಾಡಿಸುವುದಕ್ಕೆ ಆಗುವುದಿಲ್ಲ. ಎರಡನೆಯದಾಗಿ, ಈಗ ಎಸ್.ಸಿ., ಮತ್ತು ಎಸ್.ಟಿ. ವರ್ಗಗಳಿಗೆ ಸೇರಿಸಬೇಕಾದರೆ ಕೆಲವು ಮಾನದಂಡಗಳಿವೆ. ಅವರು ಎಸ್.ಸಿ. ಎಂದು ಹೇಳಬೇಕಾದರೆ, untouchability mandatory. ನಾವು ಎಸ್.ಸಿ. ಮತ್ತು ಎಸ್.ಟಿ.ಯವರ community character ಏನಿದೆ ಎಂಬುದು ಕುಲಶಾಸ್ತ್ರೀಯ ಅಧ್ಯಯನದಲ್ಲಿ ಬರುತ್ತದೆ. ಅವರು ಅದನ್ನು ನೋಡಿ ವರದಿ ನೀಡುತ್ತಾರೆ. ಅದನ್ನು ನೋಡಿ ಕೊಡದ ಹೊರತು, ನಾವು ಯಾವುದೇ ನಿರ್ಣಯವನ್ನು ಕೈಗೊಳ್ಳುವುದಕ್ಕೆ ಆಗುವುದಿಲ್ಲ. ಆದುದರಿಂದ ಆ ವರದಿ ಬರಲಿ. ಆ ವರದಿ ಬಂದ ನಂತರ ಖಂಡಿತವಾಗಿ ಅದನ್ನು ನೋಡುತ್ತೇನೆ.

**ಶ್ರೀ ಪ್ರಕಾಶ್. ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅಸ್ಪೃಶ್ಯತೆಯ ಆಧಾರದ ಮೇಲೆಯೇ ಪರಿಶಿಷ್ಟ ಜಾತಿಯನ್ನು ಪರಿಗಣಿಸಬೇಕು ಮತ್ತು ಯಾವುದೇ ಮೀಸಲಾತಿಯನ್ನು ಕೊಡಬೇಕು ಎಂದು ಸಂವಿಧಾನದಲ್ಲಿ ಎಲ್ಲಿಯೂ ಇಲ್ಲ. ಏನು ಡಾ|| ಬಿ.ಆರ್.ಅಂಬೇಡ್ಕರ್‌ರವರು ಸಂವಿಧಾನವನ್ನು ರಚನೆ ಮಾಡಿದಾಗ, ರಾಜ ಮಹಾರಾಜರ ಕಾಲದಲ್ಲಿ ಯಾರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿಸಬೇಕಾಗಿತ್ತೋ ಅದನ್ನು ಸೇರಿಸಿದ್ದಾರೆಯೇ ಹೊರತು, ಅಸ್ಪೃಶ್ಯತೆಯನ್ನೇ ಮಾನದಂಡವಾಗಿ ಇಟ್ಟುಕೊಂಡು ಯಾರಿಗೂ ಸಂವಿಧಾನದಲ್ಲಿ ಪರಿಶಿಷ್ಟ ಜಾತಿಗೆ ಸೇರಿಸಿಲ್ಲ. ಅದು ಸಚಿವರ ಗಮನಕ್ಕೆ ಇರಲಿ. ಏಕೆಂದರೆ, ತಾವು ಮಂತ್ರಿಗಳು ತಾವು ಹೇಳಿದ ಮೇಲೆ, ಅದೇ ಆಗುತ್ತದೆ. ನನಗಿಂತ ನಿಮಗೆ ಚೆನ್ನಾಗಿ ಗೊತ್ತಿದೆ. ಆದರೂ ನಾನು ನಿಮಗೆ ಹೇಳುವುದೇನೆಂದರೆ, ಇದರ ಮೇಲೆ ಎಲ್ಲೂ ಸಹ ಆಗಿಲ್ಲ ಮತ್ತು ಸಂವಿಧಾನದಲ್ಲಿ ಎಲ್ಲೂ ಸಹ ಹೇಳಿಲ್ಲ.

**ಶ್ರೀ ಗೋವಿಂದ ಎಂ ಕಾರಜೋಳ:-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರು ಯಾವ ವಿಚಾರಕ್ಕೆ ಈ ಮಾತನ್ನು ಹೇಳಿದ್ದಾರೆಂದು ನನಗೆ ಗೊತ್ತಾಗಿದೆ. ಆದರೆ, ಖಂಡಿತವಾಗಿಯೂ ಅಸ್ಪೃಶ್ಯತೆಯೇ ಮೊದಲನೆ ಮಾನದಂಡ.

**ಶ್ರೀ ಪ್ರಕಾಶ್. ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅದು ಎಲ್ಲೂ ಇಲ್ಲ.

**ಶ್ರೀ ಗೋವಿಂದ ಎಂ ಕಾರಜೋಳ:-** ಮಾನ್ಯ ಸಭಾಪತಿಯವರೇ, ಅದನ್ನು ನಾನು ತಂದು ತೋರಿಸುತ್ತೇನೆ.

**ಶ್ರೀ ಪ್ರಕಾಶ್. ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಆಯಿತು, ಮಾನ್ಯ ಸಚಿವರು ಅದನ್ನು ತಂದು ತೋರಿಸಲಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಅಸ್ಪೃಶ್ಯತೆಯ ಮಾನದಂಡದ ಆಧಾರದ ಮೇಲೆ ಪರಿಶಿಷ್ಟ ಜಾತಿಗಳನ್ನು ವಿಂಗಡಣೆ ಮಾಡಿರುವುದು.

**ಪ್ರಶ್ನೆ ಸಂಖ್ಯೆ: 812**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕಂದಾಯ ಸಚಿವರಿಗೆ ಕೇಳಿದ್ದೆ. ಆದರೆ, ಈ ಪ್ರಶ್ನೆಯನ್ನು ಸಹಕಾರ ಸಚಿವರಿಗೆ ವರ್ಗಾವಣೆ ಮಾಡಿದ್ದಾರೆ. ಮಾನ್ಯ ಸಹಕಾರ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಅದರಲ್ಲಿ ಎಷ್ಟು ವ್ಯತ್ಯಾಸಗಳಿವೆಯೆಂದರೆ, ಬೆಂಗಳೂರಿನಲ್ಲಿ ಎಷ್ಟು ಕ್ಲಬ್‌ಗಳಿವೆ. ಒಂದೊಂದು ಕ್ಲಬ್‌ಗೂ ಒಂದೊಂದು...

**ಶ್ರೀ ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸ್ಪಷ್ಟವಾಗಿ ಕ್ಲಬ್ ಎಂದರೆ, Residential Club, Golf Club, Cricket Association ಆ ತರಹ ಹೇಳಲಿ. ಈಗ ಕ್ಲಬ್‌ಗಳು ಎಂದರೆ, recreation club ಗಳು ಮತ್ತು ಬೇರೆ ಬೇರೆ ಕ್ಲಬ್‌ಗಳು ಸೇರಿಕೊಳ್ಳುತ್ತವೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಾನೊಬ್ಬ ಕ್ರೀಡಾಪಟು, ಆದುದರಿಂದ ಕ್ರೀಡೆಯನ್ನು ಸೇರಿಸಿಯೇ ಹೇಳುತ್ತೇನೆ. ಏಕೆಂದರೆ ನಾನು ಕ್ರೀಡೆಯಿಂದ ಬಂದಿದ್ದೇನೆ. ನೀಡಿರುವ ಉತ್ತರದಲ್ಲಿ ಕ್ರೀಡೆಗೆ ಕೊಟ್ಟಿರುವಂತಹವು ಸಹ ಇವೆ. ಇದರಲ್ಲಿ ಹಾಕಿ ಕ್ರೀಡೆ ಇದೆ. ಬ್ಯಾಡ್ಮಿಂಟನ್ ಕ್ರೀಡೆ ಇದೆ. ಕ್ರಿಕೆಟ್ ಇದೆ. ಗಾಲ್ಫ್ ಇದೆ. ಆದರೆ, recreation club ಗಳಿಗೆ ಕೊಟ್ಟಿರುವ ಜಾಗಗಳು ಗುತ್ತಿಗೆ ಆಧಾರದ ಮೇಲೆ ವಾರ್ಷಿಕವಾಗಿ ಕೊಟ್ಟಿರುವುದನ್ನು ನೋಡಿದಾಗ ಬಹಳಷ್ಟು ವ್ಯತ್ಯಾಸ ಕಾಣುತ್ತಿದೆ. ಈಗ ಉದಾಹರಣೆಗೆ, ನಂದಿನಿ ಲೇಔಟ್ ಕ್ಲಬ್‌ಗೆ 30 ವರ್ಷಗಳಿಗೆ, 1,80,600/– ರೂಪಾಯಿಗಳು ಎಂದು ಹೇಳುತ್ತಾರೆ. ಅದೇರೀತಿ ಇಂಜಿನಿಯರ್ಸ್ ಕ್ಲಬ್‌ಗೆ 7,84,848/– ರೂಪಾಯಿಗಳು ಇದು ವಾರ್ಷಿಕ. ಅದೇರೀತಿ Gymkhana Club ಗೆ ಕೇವಲ ಆರು ಲಕ್ಷಗಳಿಗೆ ನೇರವಾಗಿ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ. ಅಲ್ಲಿ ಹೆಚ್ಚಿಗೆ ಮಾಡುವಂತಿಲ್ಲ ಮತ್ತು ವ್ಯತ್ಯಾಸವನ್ನು ಸಹ ಮಾಡುವಂತಿಲ್ಲ. ಇಷ್ಟು ವರ್ಷಗಳಿಗೆ ಎಂದು ಕೊಟ್ಟುಬಿಡುತ್ತಾರೆ. ಈ ತರಹದ ವ್ಯತ್ಯಾಸಗಳಿವೆ. ಇವತ್ತು ಬೆಂಗಳೂರಿನಲ್ಲಿ ಕೆಲವು ಇನ್‌ಸ್ಟಿಟ್ಯೂಟ್‌ಗಳಿವೆ. ಅಲ್ಲಿಗೆ ಹೋಗಬೇಕಾದರೆ, ಡ್ರೆಸ್ ಕೋಡ್ ಎಂದರೆ, ಅಲ್ಲಿಗೆ ಸೂಟ್ ಹಾಕಿಕೊಂಡು ಹೋಗಬೇಕು. ಚಪ್ಪಲಿ ಹಾಕಿಕೊಂಡು ಹೋಗಬಾರದು. ಉದಾಹರಣೆಗೆ, ಸದಸ್ಯರಾದ ಮಾನ್ಯ ಕೆ.ಸಿ.ಕೊಂಡಯ್ಯನವರು ರಾಷ್ಟ್ರೀಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಸ್ತ್ರವಾದ white dress ಹಾಕಿಕೊಂಡು ಹೋಗುತ್ತಾರೆ. ಆದರೆ, ನಾನು ಸ್ವಲ್ಪ ಕಲರ್ ಡ್ರೆಸ್ ಅನ್ನು ಹಾಕುತ್ತಿರುತ್ತೇನೆ. ಆದರೆ, ಅಲ್ಲಿ white dress ಅನ್ನು allow ಮಾಡುವುದಿಲ್ಲ. White dress ರಾಜಕಾರಣಿಗಳಿಗೆ ಶುಭ್ರತೆ ಮತ್ತು ಅದಕ್ಕೆ ಅದರದೆ ಆದಂತಹ ಗೌರವವಿದೆ. ಮಹಾತ್ಮ ಗಾಂಧೀಜಿಯವರು ಪ್ರತಿಪಾದಿಸಿದಂತಹ ಭಾರತ ರಾಷ್ಟ್ರದಲ್ಲಿ. ನಾನು ಬೆಂಗಳೂರಿನ ಬೌರಿಂಗ್ ಇನ್‌ಸ್ಟಿಟ್ಯೂಟ್ ಮತ್ತು ಇನ್ನಿತರ ಕ್ಲಬ್‌ಗಳ ಡ್ರೆಸ್ ಕೋಡ್ ಬಗ್ಗೆ ಹೇಳುತಿದ್ದೇನೆ. ಅಲ್ಲಿಗೆ ಹೋಗಬೇಕಾದರೆ, ಶೂ ಮತ್ತು ಸೂಟ್ ಹಾಕಿಕೊಂಡು ಹೋಗಬೇಕು. ಇಲ್ಲದಿದ್ದರೆ ಹೊರಗಡೆಗೆ ಕಳುಹಿಸುತ್ತಾರೆ. ಈಗ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರು ಇದಕ್ಕೆ ಸಂಬಂಧಪಟ್ಟಂತೆ ಪೊಲೀಸರಿಗೆ ದೂರು ನೀಡಿದ್ದಾರಂತೆ. ಸದಸ್ಯರಾದ ಮಾನ್ಯ ಕೆ.ಸಿ.ಕೊಂಡಯ್ಯನವರು ಹೊರಗಡೆಗೆ ಬಂದಿದ್ದಾರೆ. ನಾಲ್ಕು ಜನ ಎಂ.ಎಲ್.ಸಿ.ಗಳು ಗಾಲ್ಫ್ ಕ್ಲಬ್‌ಗೆ ಹೋದಾಗ ಅವರನ್ನು ಹೊರಗಡೆ ಹೋಗಿ ಎಂದು ಹೇಳಿದ್ದಾರೆ.

**(ಮುಂದು...)**

(329) 11.03.2020 05.50 LL-KS
**ಶ್ರೀ ಹೆಚ್.ಎಂ. ರೇವಣ್ಣ(ಮುಂದುವರೆದಿದ್ದು)**

ಜಾಗ ನಮ್ಮದು. ಈ ರೀತಿಯ ಕ್ಲಬ್‌ಗಳಿಗೆ ನಾವು ಸರ್ಕಾರಿ ಜಾಗ ಕೊಟ್ಟಿರುತ್ತೇವೆ. ಅದಕ್ಕೆ ಸದರಿ ಕ್ಲಬ್‌ನವರು ವಾರ್ಷಿಕ ಮತ್ತು ಮಾಸಿಕ ಬಾಡಿಗೆ ಆಧಾರದ ಮೇರೆಗೆ ಹಣ ನಿಗದಿ ಮಾಡುತ್ತಾರೆ. ಅದರಲ್ಲಿಯೂ ತಾರತಮ್ಯ ಇದೆ. ಬಿಡಿಎ ಮತ್ತು ಕಾರ್ಪೋರೇಷನ್‌ನಿಂದ ಕ್ಲಬ್‌ಗಳಿಗೆ ಸರ್ಕಾರಿ ಜಾಗವನ್ನು ಕೊಟ್ಟಿದ್ದಾರೆ. ಜೊತೆಗೆ, ಹೌಸಿಂಗ್ ಬೋರ್ಡ್‌ನಿಂದಲೂ ಸಹ ಜಾಗ ಕೊಟ್ಟಿರುತ್ತಾರೆ. ಬೆಂಗಳೂರು ಕ್ಲಬ್ ಇದರಲ್ಲಿ ಇರುವುದೇ ಇಲ್ಲ. ಈ ಬೆಂಗಳೂರು ಕ್ಲಬ್ ವಿಶೇಷ ಏನೆಂದರೆ, ಅವರು ಯಾವುದೇ ಜನಪ್ರತಿನಿಧಿಗಳನ್ನು ಒಳಗಡೆ ಬಿಡುವುದಿಲ್ಲ. ಅದು ರಿಜಿಸ್ಟ್ರರ್ ಕೂಡ ಆಗಿರುವುದಿಲ್ಲ. ಅದಕ್ಕಾಗಿಯೇ, ಸರ್ಕಾರದಿಂದ ನೀಡಿರುವ ಉತ್ತರದಲ್ಲಿ ಮಾಹಿತಿ ನೀಡಿರುವುದಿಲ್ಲ. ಈ ಬೆಂಗಳೂರು ಕ್ಲಬ್‌ಗೆ ಜಾಗ ಕೊಟ್ಟಿರುವವರು ಯಾರು; ನೀರು ಕೊಟ್ಟಿರುವವರು ಯಾರು; ವಿದ್ಯುತ್ ಸೌಲಭ್ಯ ಕೊಡುತ್ತಿರುವವರು ಯಾರು; ಇದರ ಬಗ್ಗೆ ಕೂಡ ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಒಂದು ಸಮಿತಿ ರಚನೆ ಮಾಡಬೇಕು.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ನಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ಮುಂದಿನ ಪ್ರಶ್ನೆ ಕೇಳೋಣ. **(ಗೊಂದಲ)** ಮಾನ್ಯ ಸಚಿವರು ಕೂಡ ಈ ಹಿಂದೆ ನಮ್ಮ ಪಕ್ಷದಲ್ಲಿ ನಮ್ಮ ಜೊತೆಯಲ್ಲಿ ಬಹಳಷ್ಟು ಕ್ಲಬ್‌ಗಳಿಗೆ ಬಂದಿರುತ್ತಾರೆ... **(ಗೊಂದಲ)** ಆ ನಂತರ ಕೆಲವು ಕ್ಲಬ್‌ಗಳವರು ಸರ್ಕಾರಿ ಜಾಗವನ್ನು ತೆಗೆದುಕೊಂಡು ಅದನ್ನು ಕಮರ್ಷಿಯಲ್ ಮಾಡುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ತಮಗೆ ಮಾನ್ಯ ಹೆಚ್.ಎಂ. ರೇವಣ್ಣನವರ ಪ್ರಶ್ನೆ ಅರ್ಥವಾಯಿತೇ? ಏಕೆಂದರೆ, ಎಲ್ಲಾ ಸದಸ್ಯರುಗಳ ಪ್ರಶ್ನೆ ಕೂಡ ಅದೇ ಆಗಿರುತ್ತದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಈ ಕ್ಲಬ್‌ಗಳಿಗೆ ಬೇರೆ ಕಡೆಯಿಂದ ಜನ ಬಂದು ಸೇರಿಕೊಂಡಿರುತ್ತಾರೆ. ನಾನು ಒಬ್ಬ ಕ್ರೀಡಾಪಟುವಾಗಿ ಬಂದಂಥವನು, ಈಗ ಕ್ರೀಡಾ ಪ್ರೋತ್ಸಾಹಕನಾಗಿದ್ದೇನೆ. ಆದರೆ, ಈ ಕ್ಲಬ್‌ನವರು ಸರ್ಕಾರಿ ಜಾಗದಲ್ಲಿ ಬಿಲ್ಡಿಂಗ್‌ಗಳನ್ನು ಕಟ್ಟಿ, ಅವುಗಳನ್ನು ಬಾಡಿಗೆಗೆ ಕೊಟ್ಟು, ಲಕ್ಷಾಂತರ ರೂಪಾಯಿಗಳ ಬಾಡಿಗೆ ಹಣ ದುಡಿಯುತ್ತಿದ್ದಾರೆ. **(ಗೊಂದಲ)** ಹಾಗಾದರೆ, ನಾನು ಕ್ರೀಡಾಪಟು ಅಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ. ರೇವಣ್ಣನವರು ಸತ್ಯ ಹೇಳುತ್ತಿದ್ದಾರೆಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಕಬಡ್ಡಿ ಕ್ರೀಡೆಯಲ್ಲಿ, ನಾನು ಬೆಂಗಳೂರು ವಿಶ್ವವಿದ್ಯಾಲಯದಿಂದ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ, ಆಲ್ ಇಂಡಿಯಾ ರನ್ನರ್ಸ್ ಆಗಿದ್ದೇವೆ. ಚೈನಾ ದೇಶಕ್ಕೂ ಸಹ ಹೋಗಿ ಬಂದಿದ್ದೇನೆ.

**(ಗೊಂದಲ)**

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಹೆಚ್.ಎಂ. ರೇವಣ್ಣನವರೇ, ಮೊದಲು ವಿಷಯದ ಬಗ್ಗೆ ಮಾತನಾಡಿ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ನನ್ನ ಕ್ರೀಡೆ ಬಗ್ಗೆ ಮಾನ್ಯ ಸದಸ್ಯರು ಹಾಸ್ಯ ಮಾಡಿದರು.

**(ಗೊಂದಲ)**

**ಡಾ|| ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಹೆಚ್.ಎಂ. ರೇವಣ್ಣನವರು ಈಗಲೂ ಕಬಡ್ಡಿ ಆಟ ಆಡುತ್ತಾರೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಹೌದು. ಆದರೆ, ಈಗ ನಾನು ಯಾರ ಕಾಲು ಎಳೆಯುವುದಕ್ಕೆ ಆಗುವುದಿಲ್ಲ. **(ಗೊಂದಲ)** ಇದರ ಜೊತೆಗೆ, ಬೆಂಗಳೂರಿನಲ್ಲಿ ಒಳ್ಳೆಯ ಜಾಗದಲ್ಲಿರುವ ಬಹಳಷ್ಟು ಕ್ಲಬ್‌ಗಳು ಸರ್ಕಾರಿ ಜಾಗದಲ್ಲಿ ಕಮರ್ಷಿಯಲ್ ಮಾಡಿಕೊಂಡು ಪ್ರತಿ ತಿಂಗಳಿಗೆ ಲಕ್ಷಾಂತರ ಹಣ ಸಂಪಾದನೆ ಮಾಡುತ್ತಿದ್ದಾರೆ. ಆ ಕ್ಲಬ್‌ಗಳು ತೆಗೆದುಕೊಳ್ಳುವಂತಹ ಹಣದ ಮಾಹಿತಿಯನ್ನು ನಾನು ಪೂರ್ಣವಾಗಿ ಹೇಳುವುದಿಲ್ಲ. ಏಕೆಂದರೆ, ಈ ವಿಷಯದ ಬಗ್ಗೆ ಇನ್ನೂ ಅನೇಕ ಸದಸ್ಯರುಗಳು ಮಾತನಾಡುವವರಿದ್ದಾರೆ. ಅದಕ್ಕಾಗಿ, ಈ ಸಮಸ್ಯೆಯನ್ನು ಸರಿಪಡಿಸಬೇಕು. ಏಕೆಂದರೆ, ಇಂತಹ ಕ್ಲಬ್‌ಗಳಿಗೆ ಯಾವುದೋ ಕಾಲದಲ್ಲಿ ಲೀಸ್‌ಗೆ ಕೊಟ್ಟಿದ್ದೇವೆಂದು ಹೇಳುವುದಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇನ್ನೊಂದು ಕಡೆ ನೋಡುವುದಾದರೆ, ಒಂದು ಕ್ಲಬ್‌ಗೆ ವಾರ್ಷಿಕ 432/– ರೂಪಾಯಿ ಹಣ ಹೆಚ್ಚಾಗುತ್ತದೆಯೆಂದು ಹೇಳಿದ್ದಾರೆ. 432/– ರೂಪಾಯಿ ಎಂದರೆ ಅದು ಯಾವ ಮಾನದಂಡ? ಒಂದು ಕ್ಲಬ್‌ಗೆ ವಾರ್ಷಿಕ 7 ಲಕ್ಷ ಅಥವಾ 8 ಲಕ್ಷ ರೂಪಾಯಿ ಬಾಡಿಗೆಗೆ ಕೊಡುವುದು, ಮತ್ತೊಂದು ಕ್ಲಬ್‌ಗೆ ವಾರ್ಷಿಕ ಕೇವಲ 30 ಸಾವಿರ ರೂಪಾಯಿ ಬಾಡಿಗೆ ಕೊಡುವುದೆಂದರೆ ಹೇಗೆ? ಇವುಗಳನ್ನು ಯಾವ ಮಾನದಂಡದ ಮೇಲೆ ಬಾಡಿಗೆ ಕೊಡಲಾಗುತ್ತದೆ? ಬೌರಿಂಗ್ ಇನ್‌ಸ್ಟಿಟ್ಯೂಟ್ ಕ್ಲಬ್‌ಗೆ 30 ರೂಪಾಯಿಗೆ ಗುತ್ತಿಗೆ ಆಧಾರದ ಮೇರೆಗೆ ನೀಡಲಾಗಿರುತ್ತದೆ. ಅದರಲ್ಲೂ ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್ ಕ್ಲಬ್ ಹೌಸ್‌ಗೆ ವಾರ್ಷಿಕ ಕೇವಲ 19 ಸಾವಿರ ರೂಪಾಯಿಗಳಿಗೆ ನೀಡಲಾಗಿರುತ್ತದೆ. ಅದು ಕೂಡ ಎಷ್ಟು ವರ್ಷಗಳ ಅವಧಿ ಎಂದು ನಮೂದು ಮಾಡಿರುವುದಿಲ್ಲ. ಪಾಪ! ಅವರು ಬಹಳ ಬಡವರು. ಕೆಲವು ಕ್ಲಬ್‌ಗಳಿಗೆ 99 ವರ್ಷ, ಇನ್ನೂ ಕೆಲವು ಕ್ಲಬ್‌ಗಳಿಗೆ 30 ವರ್ಷಗಳ ಅವಧಿಗೆ ಬಾಡಿಗೆಗೆ ನೀಡಲಾಗಿರುತ್ತದೆ. ಇದರಲ್ಲಿ ಒಂದು ಮಾನದಂಡ ಇರುವುದಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಎಲ್ಲಾ ಸದಸ್ಯರುಗಳ ಪ್ರಶ್ನೆಗಳನ್ನು ಕೇಳಿ ನಂತರ ತಮ್ಮ ಉತ್ತರ ನೀಡಿ.

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಗೊಂದಲ)**

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಸದನ ಸಮಿತಿ ರಚನೆ ಮಾಡಬೇಕೆಂದು ನಾನು ಸಲಹೆ ನೀಡುತ್ತೇನೆ.

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಎಲ್ಲಾ ಮಾನ್ಯ ಸದಸ್ಯರುಗಳ ಭಾವನೆಯನ್ನು ನಾವು ಅರ್ಥ ಮಾಡಿಕೊಂಡಿದ್ದೇನೆ. ಈ ಕ್ಲಬ್‌ಗಳಿಗೆ ಕೊಟ್ಟಿರತಕ್ಕಂಥದ್ದು, ಬಿಡಿಎ(ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ)ದ ಕೆಲವು ಸಿ.ಎ. ಜಾಗಗಳು, ಕೆಲವು ಕಾರ್ಪೋರೇಷನ್‌ಗೆ ಸಂಬಂಧಪಟ್ಟಂತಹ ಜಾಗಗಳು. ಹೌಸಿಂಗ್ ಬೋರ್ಡ್‌ನ ಜಾಗಗಳು ಕಡಿಮೆ. ಬಿಡಿಎ ಮತ್ತು ಕಾರ್ಪೋರೇಷನ್‌ನ ಜಾಗಗಳೇ ಜಾಸ್ತಿ ಇರುತ್ತವೆ. ನನಗೆ ತಿಳಿದಮಟ್ಟಿಗೆ ಬಿಡಿಎ ನಲ್ಲಿ ಬಹುಶಃ ಈ 30 ವರ್ಷದ ಅವಧಿಯ ಲೀಸ್ ಏನಿದೆ, ಅದರ ನವೀಕರಣ ಬಂದಾಗ ಶೇಕಡ 100ರಷ್ಟು enhance ಮಾಡಿದ್ದಾರೆ. ಆದರೆ, ಅದು include ಆಗಿದೆಯೋ ಇಲ್ಲ ಎಂದು ಗೊತ್ತಿಲ್ಲ. ಮಾನ್ಯ ಸದಸ್ಯರುಗಳು ಈ ಬಗ್ಗೆ ಹೇಳಿರುವುದರಿಂದ ನಾನು ಅದನ್ನು ವಿಚಾರಣೆ ಮಾಡುತ್ತೇನೆ. ಕಾರ್ಪೋರೇಷನ್‌ನಲ್ಲಿ ಕ್ಲಬ್‌ಗಳಿಗೆ ಸರ್ಕಾರ ಜಾಗವನ್ನು ಕೊಡುವುದಕ್ಕೆ ಅವರದ್ದೇ ಆದಂತಹ ಮಾನದಂಡ ಇರುತ್ತದೆ. ಆ ಮಾನದಂಡದ ಆಧಾರದ ಮೇರೆಗೆ ಬಾಡಿಗೆ ಹಣವನ್ನು ನಿಗದಿಗೊಳಿಸುತ್ತಾರೆ. ಬಿಡಿಎ ನಲ್ಲಿ ಕೆಲವು ಕ್ಲಬ್‌ಗಳಿಗೆ ಮಾತ್ರ, ಅಂದರೆ ಟರ್ಫ್ ಕ್ಲಬ್ ಹಾಗೂ ಯಾವ ಕ್ಲಬ್‌ಗಳು ಕಮರ್ಷಿಯಲ್ ಬರುತ್ತವೆ ಅವುಗಳಿಗೆ ಈಗಾಗಲೇ enhance ಮಾಡಿರುತ್ತಾರೆ. ಅದರಂತೆ, ಕೆಲವು ಕ್ಲಬ್‌ಗಳು ಮಾನ್ಯ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಚ್ಚ ನ್ಯಾಯಾಲಯದಲ್ಲಿ enhance ಮಾಡಿದ್ದಾರೆಂದು ಮೇಲ್ಮನವಿ ಮಾಡಿರುತ್ತಾರೆ. ಕಾರ್ಪೋರೇಷನ್‌ನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅದರ ಮಾಹಿತಿ ಪಡೆಯುವಂತಹ ಕೆಲಸ ಮಾಡುತ್ತೇನೆ. ಕೆಲವು ಕ್ಲಬ್‌ಗಳು ಮಾನ್ಯ ಸದಸ್ಯರು ಹೇಳಿದ ಹಾಗೆ, ಉದಾಹರಣೆಗೆ ಕರ್ನಾಟಕ ಸ್ಟೇಟ್ ಹಾಕಿ ಅಸೋಸಿಯೇಷನ್ ಅನುಮತಿ ಪಡೆದಿರುವಂಥದ್ದು ಬೇರೆ ಉದ್ದೇಶಕ್ಕೆ, ಆದರೆ ರಾತ್ರಿ 2 ಗಂಟೆಯವರೆಗೆ ಬೇರೆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ತನಿಖೆ ಮಾಡುತ್ತೇವೆ. ಇನ್ನೊಂದು ಬೆಂಗಳೂರು ಕ್ಲಬ್ ಈ ಪಟ್ಟಿಯಲ್ಲಿ ಸೇರಿಲ್ಲವೆಂದು ಹೇಳಿದ್ದಾರೆ...

**ಶ್ರೀ ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಸದರಿ ಕ್ಲಬ್‌ನ excise licence ನ್ನು ಕ್ಯಾನ್ಸಲ್ ಮಾಡಿದರೆ ಅವರು ದಾರಿಗೆ ಬರುತ್ತಾರೆ.

**(ಗೊಂದಲ)**

**ಶ್ರೀ ಎಸ್.ಟಿ. ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಸದರಿ ಕ್ಲಬ್‌ನ excise licence ಕ್ಯಾನ್ಸಲ್ ಮಾಡುವುದಕ್ಕೆ ಮೊದಲು ಈ ಬಗ್ಗೆ ತನಿಖೆ ಮಾಡಬೇಕು. ಇನ್ನೂ ಕೆಲವು ಕ್ಲಬ್‌ಗಳಲ್ಲಿ ಡ್ರೆಸ್ ಕೋಡ್ ಮತ್ತಿತರ ವಿಷಯಗಳ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಮಾನ್ಯ ಸಭಾಪತಿಯವರಾದ ತಾವು ಒಪ್ಪಿದರೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಸದಸ್ಯರುಗಳನ್ನು ಒಳಗೊಂಡಂತೆ ಒಂದು ಸಮಿತಿ ರಚನೆ ಮಾಡಿ, ಮಾನ್ಯ ಸದಸ್ಯರುಗಳು ಯಾವ residential area ದಲ್ಲಿ ಇರುತ್ತಾರೆ, ಅಲ್ಲಿ ಕ್ಲಬ್‌ಗಳ ಸದಸ್ಯತ್ವವನ್ನು ಕೊಡುವಂತಹ ಪ್ರಯತ್ನ ಮಾಡೋಣ. ಆ ನಂತರ ಎಂ.ಎಲ್.ಎ., ಎಂ.ಎಲ್.ಸಿ. ಮತ್ತು ಎಂ.ಪಿ.ಗಳು...

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಕ್ಲಬ್‌ನವರು ಯಾರು ಕೂಡ ನಮ್ಮ ಮಾತುಗಳನ್ನು ಕೇಳುವುದಿಲ್ಲ. ನಾನು ಈ ಹಿಂದೆ ಅರ್ಜಿ ಸಮಿತಿಯಲ್ಲಿ ಸದಸ್ಯನಾಗಿದ್ದು, ಕರ್ನಾಟಕ ಸ್ಟೇಟ್ ಹಾಕಿ ಅಸೋಸಿಯೇಷನ್ ಬಗ್ಗೆ ಅರ್ಜಿ ಹಾಕಿ ಸುಮಾರು 20 ಸಭೆಗಳಲ್ಲಿ ಚರ್ಚೆ ಮಾಡಿ, ನಂತರ ಸಭೆಗೆ ಬಿ.ಬಿ.ಎಂ.ಪಿ. ಆಯುಕ್ತರು ಬಂದು, ಆ ಕ್ಲಬ್‌ಗೆ ನೀಡಿರುವ ಲೈಸೆನ್ಸ್ ಅನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರೂ ಸಹ, ಆ ಕ್ಲಬ್‌ನವರು ಅದಕ್ಕೆ ಕಿಮ್ಮತ್ತು ಬೆಲೆ ಕೊಟ್ಟಿರುವುದಿಲ್ಲ. ಹಾಗಾಗಿ, ಮಾನ್ಯ ಸಚಿವರು ಈ ವಿಷಯವನ್ನು ಹಗುರವಾಗಿ ತೆಗೆದುಕೊಳ್ಳದೇ, ಬಹಳ ಗಂಭೀರವಾಗಿ ಈ ವಿಷಯದ ಬಗ್ಗೆ ಚರ್ಚೆ ಮಾಡಿದರೆ ಮಾತ್ರ ಆ ಕ್ಲಬ್‌ನವರು ದಾರಿಗೆ ಬರುತ್ತಾರೆ. ಇಲ್ಲವಾದರೆ ಅವರು ದಾರಿಗೆ ಬರುವುದಿಲ್ಲ.

**(ಗೊಂದಲ)**

**ಶ್ರೀ ಕೆ. ಗೋವಿಂದರಾಜ್:-** ಮಾನ್ಯ ಸಭಾಪತಿಯವರೇ, ಸಮಿತಿ ರಚನೆ ಮಾಡಿದರೆ ಎಲ್ಲಾ ಸರಿಹೋಗುತ್ತದೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈ ಕ್ಲಬ್‌ಗಳ ವ್ಯವಸ್ಥೆ ಎಲ್ಲಿಯವರೆಗೆ ಬಂದಿದೆ ಅಂದರೆ, ನಾವು ಖಾದಿ ಬಟ್ಟೆಯನ್ನು ಧರಿಸಿ ಆ ಕ್ಲಬ್‌ಗೆ ಹೋದರೆ, they are not allowing us to enter the Club. ಕ್ಲಬ್‌ಗೆ ಹೋಗುವುದಕ್ಕೆ ಬಿಡುವುದಿಲ್ಲ. ಒಂದು ವೇಳೆ ಸ್ಯಾಂಡಲ್ಸ್ ಹಾಕಿದರೆ, ಆ ಸ್ಯಾಂಡಲ್ಸ್‌ಗೆ ಹಿಂದೆ buckle ಇರಬೇಕೆಂದು ಹೇಳುತ್ತಾರೆ. ಕೆಲವು ಕ್ಲಬ್‌ಗಳಲ್ಲಿ 'Tie' ಧರಿಸಬೇಕೆಂದು ಹೇಳುತ್ತಾರೆ. ಬೌರಿಂಗ್ ಇನ್‌ಸ್ಟಿಟ್ಯೂಟ್ ಕ್ಲಬ್‌ನಲ್ಲಿ tie ಧರಿಸಿಲ್ಲವೆಂದರೆ ನಮ್ಮನ್ನು ಒಳಗಡೆ ಬಿಡುವುದಿಲ್ಲ. ಕಾರ್ ಪಾರ್ಕಿಂಗ್ ಇರುವುದಿಲ್ಲ; ಕಾರ್ ಡ್ರೈವರ್‌ಗಳಿಗೆ ಊಟ ಇರುವುದಿಲ್ಲ; ಕ್ಲಬ್‌ನ ಒಳಗಡೆ ನಮಗೆ ಪ್ರವೇಶ ಇರುವುದಿಲ್ಲ; ಮಾನ್ಯ ಶಾಸಕರುಗಳಿಗಂತೂ ಪ್ರವೇಶ ಇಲ್ಲವೇ ಇಲ್ಲ. ಇಂತಹ ಕ್ಲಬ್‌ಗಳಿಗೆ ಸರ್ಕಾರ ಜಾಗ ಕೊಡುವುದು; ಅದರಲ್ಲೂ ಪುಕ್ಕಟೆಯಾಗಿ ಕೊಡುವುದು; ಅದರಲ್ಲಿ ಆ ಕ್ಲಬ್‌ನವರು ಕಮರ್ಷಿಯಲ್ ವ್ಯಾಪಾರ ಮಾಡುವುದು; ಬಾರ್ ಲೈಸೆನ್ಸ್ ಪಡೆಯುವುದು; ಎಲ್ಲಾ ದಂಧೆಗಳನ್ನು ನಡೆಸುವುದು; ಈ ರೀತಿ ಸರ್ಕಾರದ ಜಾಗದಲ್ಲಿ ಎಲ್ಲಾ ದಂಧೆಗಳನ್ನು ನಡೆಸುವಂತಹ ಕ್ಲಬ್‌ನವರು ಆ ಭಾಗದ ಶಾಸಕರಿಗೆ ಕನಿಷ್ಠ ಗೌರವ ಕೊಡುವುದು ಗೊತ್ತಿರುವುದಿಲ್ಲ. ಅಂದರೆ, ಇದು ಪುಕ್ಕಟೆ ವ್ಯಾಪಾರವೇ? ಈ ರೀತಿ ಧರ್ಮಕ್ಕೆ ಬಂದಿದೆಯೇ ಸರ್ಕಾರದ ಆಸ್ತಿ? ಅಲ್ಲದೇ, ಇಂತಹ ಕ್ಲಬ್‌ಗಳಿಗೆ ಸರ್ಕಾರ ಕನಿಷ್ಠ ದರದಲ್ಲಿ excise license ಅನ್ನು ಕೊಡುತ್ತದೆ. ಆ ಕ್ಲಬ್‌ನವರು ಇದರಿಂದಾಗಿ 24 ಗಂಟೆ ಅವ್ಯವಹಾರ ಮಾಡುತ್ತಾರೆ. ಸಮಯ ಮೀರಿ ಬಾರ್‌ಗಳನ್ನು ನಡೆಸುತ್ತಾರೆ. ಇಷ್ಟು ಇದ್ದರೂ ಕೂಡ ಮಾನ್ಯ ಶಾಸಕರನ್ನು ಒಳಗಡೆ ಬಿಡುವುದಿಲ್ಲ. ಆದರೆ, ವಿಧಾನ ಮಂಡಲದ ಸದಸ್ಯರುಗಳಿಗೆ ಸದರಿ ಕ್ಲಬ್‌ಗಳಲ್ಲಿ ಸದಸ್ಯತ್ವ ಕೊಡುವ ಪ್ರಸ್ತಾವನೆ ಇಲ್ಲವೆಂದು ಮಾನ್ಯ ಸಚಿವರು ಉತ್ತರ ನೀಡಿರುವುದು ನಮಗೆ ಬಹಳ ನೋವಾಗಿದೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಈ ರೀತಿಯ ಕೆಲಸಗಳನ್ನು ಮಾಡುತ್ತೇವೆಂದೇ ವಿಧಾನ ಮಂಡಲದ ಸದಸ್ಯರುಗಳಿಗೆ ಕ್ಲಬ್ ಒಳಗಡೆ ನಮಗೆ ಪ್ರವೇಶ ನಿರಾಕರಿಸುತ್ತಾರೆ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಮ್ಮ ಜೊತೆಯಲ್ಲಿ ಯಾರಾದರೂ ಇದ್ದು, ಅವರ ಜೊತೆ ನಾವು ಸದರಿ ಕ್ಲಬ್‌ಗಳಿಗೆ ಹೋದರೆ ಆ ಕ್ಲಬ್‌ನವರು ನಮ್ಮನ್ನು ಒಳಗಡೆ ಬಿಡುವುದಿಲ್ಲವೆಂದು ಹೇಳಿದರೆ ಹೇಗೆ? ನನ್ನ ಮಾಹಿತಿ ಪ್ರಕಾರ ಎಂ.ಎಲ್.ಎ., ಎಂ.ಎಲ್.ಸಿ., ಮತ್ತು ಮಾನ್ಯ ಮಂತ್ರಿಗಳಿಗೂ ಸಹ ಕ್ಲಬ್‌ನ ಒಳಗಡೆ ಬಿಡುವುದಿಲ್ಲ. ಹಾಗಾಗಿ, ಈ ವಿಷಯದ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಲೇಬೇಕು. ಇದು ಎಲ್ಲಾ ಶಾಸಕರುಗಳಿಗೆ ಅನ್ವಯವಾಗುವಂಥದ್ದು. ಈ ಸದನದಲ್ಲಿ ನಾವು ಇವೊತ್ತಿನ ದಿವಸ ಇರುತ್ತೇವೆ ಅಥವಾ ನಾಳೆಯ ದಿವಸ ಇರುವುದಿಲ್ಲ. ಅದು ಬೇರೆ ವಿಚಾರ. ಆದರೆ, ಶಾಸಕರುಗಳು ಅಥವಾ ಯಾರೇ ಜನಪ್ರತಿನಿಧಿಗಳು ಸದರಿ ಕ್ಲಬ್‌ಗಳಿಗೆ ಹೋದಾಗ ಆ ಕ್ಲಬ್‌ನವರು ಕನಿಷ್ಠ ಗೌರವ ಕೊಡುವಂಥದ್ದಾದರು ಕಲಿಯಬೇಕು. ಇನ್ನೂ ಡ್ರೆಸ್‌ಕೋಡ್ ವಿಚಾರದಲ್ಲಿ, ಇಂಡಿಯನ್ ಡ್ರೆಸ್‌ಕೋಡ್ ಖಾದಿಯನ್ನು ಅಲೋ ಮಾಡದೇ ಇದ್ದರೆ, ಆ ಕ್ಲಬ್‌ನವರು ಕರ್ನಾಟಕದಲ್ಲಿ ಏತಕ್ಕೆ ಇರಬೇಕು? ಭೂಮಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕರ್ನಾಟಕದ್ದು, ನೀರು ಕರ್ನಾಟಕದ್ದು, ಕಾನೂನು ಕರ್ನಾಟಕದ್ದು, ಜಾಗ ಕರ್ನಾಟಕದ್ದು, ಎಕ್ಸೈಸ್ ಲೈಸೆನ್ಸ್ ಕರ್ನಾಟಕದ್ದು, ಆದರೆ, ನಾವು ಕ್ಲಬ್‌ಗಳಿಗೆ ಖಾದಿ ಡ್ರೆಸ್‌ನಲ್ಲಿ ಹೋದರೆ you are not allowed, ಎಂದು ಹೇಳುತ್ತಾರೆ. **(ಗೊಂದಲ)** Whether they are above the Law?

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ:-** ಮಾನ್ಯ ಸಭಾಪತಿಯವರೇ, ಈ ರೀತಿಯ ಕ್ಲಬ್‌ಗಳಿಗೆ ಗುತ್ತಿಗೆ ಆಧಾರದ ಮೇಲೆ ಸರ್ಕಾರಿ ಜಾಗವನ್ನು ಕಡಿಮೆ ಬಾಡಿಗೆ ದರದಲ್ಲಿ ನೀಡುತ್ತಾರೆ. ಆದರೆ, ಬೇರೆ ಉದ್ದೇಶಗಳಿಗೆ ಮಾತ್ರ ಹೆಚ್ಚಿನ ಬಾಡಿಗೆ ದರದಲ್ಲಿ ನೀಡುತ್ತಾರೆ. ಏತಕ್ಕೆ ಈ ರೀತಿ ಮಾಡುತ್ತಾರೆ?

**(ಗೊಂದಲ)**

**ಡಾ|| ವೈ.ಎ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಗಂಭೀರವಾದ ವಿಷಯವಾಗಿದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇಂತಹ ಕ್ಲಬ್‌ಗಳಿಗೆ ಏತಕ್ಕೆ ಅವಕಾಶ ಕೊಡಬೇಕು?

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಕೆ.ಸಿ. ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಪೂರಕವಾಗಿ ನಾನು ಮಾತನಾಡುತ್ತೇನೆ. ಅದೇನೆಂದರೆ, ಈ ಕ್ಲಬ್‌ಗಳ ಬಗ್ಗೆ ಮಾನ್ಯ ಹೆಚ್.ಎಂ. ರೇವಣ್ಣನವರು ಇವೊತ್ತಿನ ದಿವಸ ಪ್ರಶ್ನೆ ಮಾಡಿದ್ದಾರೆ. ಇದಕ್ಕಿಂತಲೂ ಮೊದಲು 2-3 ಬಾರಿ ಇದೇ ಸದನದಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗಿದೆ. ಉದಾಹರಣೆಗೆ, ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್ ಕ್ಲಬ್‌ನ ಬಗ್ಗೆ ಹಕ್ಕುಚ್ಯುತಿ ಮಂಡನೆ ಮಾಡಿದ್ದೆವು.

**ಸಭಾಪತಿಯವರು:-** ಈ ವಿಷಯದ ಬಗ್ಗೆ ಕೆಳಮನೆಯಲ್ಲಿ ರಚನೆ ಮಾಡಿದ್ದರು ಅಲ್ಲವೇ?

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಹೌದು. ಕೆಳಮನೆಯಲ್ಲಿ ಈ ವಿಷಯದ ಬಗ್ಗೆ 'ಹ್ಯಾರಿಸ್ ಕಮಿಟಿ' ರಚನೆ ಮಾಡಿದ್ದರು. ಆದರೆ, ಅದು ಲಾಗು ಆಗಿರುವುದಿಲ್ಲ. ಆ ಬಗ್ಗೆ ನಮ್ಮ ಹಕ್ಕುಬಾಧ್ಯತಾ ಸಮಿತಿಯಲ್ಲಿ ಚರ್ಚೆ ಮಾಡಿ, ಸಹಕಾರ ಇಲಾಖೆಯವರು ಆಕ್ಟ್ ಮಾಡುತ್ತೇವೆಂದು ಹೇಳಿದ್ದು, ಇದುವರೆವಿಗೂ ಆ ಬಗ್ಗೆ ಮಾಹಿತಿ ಇರುವುದಿಲ್ಲ.

**ಸಭಾಪತಿಯವರು:-** ಹಾಗಾದರೆ, ಈಗ ಇದರಲ್ಲಿ ಸಮಿತಿ ರಚನೆ ಮಾಡಿ ಏನು ಮಾಡುತ್ತೀರಿ?

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ.ಸಿ. ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಈ ಕ್ಲಬ್‌ಗಳ ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದಕ್ಕೆ ಒಂದು ಉದಾಹರಣೆ ನೀಡುತ್ತೇನೆ. ಅದೇನೆಂದರೆ, 1964ರಲ್ಲಿ ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್ ಕ್ಲಬ್‌ನವರು ಸುಮಾರು 17 ಎಕರೆ ಜಮೀನು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಇತ್ತು. ಲೋಕೋಪಯೋಗಿ ಇಲಾಖೆಯವರು ಆ ಕ್ಲಬ್‌ನವರಿಗೆ ಜಮೀನು ಹಸ್ತಾಂತರ ಮಾಡುವಾಗ ಎಜುಕೇಷನ್ ಡಿಪಾರ್ಟ್‌ಮೆಂಟ್, ಜೊತೆಗೆ ಈ ಜಾಗ ಕಮಾಂಡ್ ಏರಿಯಾದಲ್ಲಿ ಬರುವುದರಿಂದ ಡಿಫೆನ್ಸ್‌ನವರು ಸೇರಿದಂತೆ, ಅದಕ್ಕೆ ನಾಲ್ಕು ಮಂದಿ ಅಡ್ವೈಸರ್ ಇರುತ್ತಾರೆ. ಆದರೆ, ಸದರಿ ಕ್ಲಬ್‌ನವರು *'Karnataka Societies Registration* Act' ಕೆಳಗೆ ರಿಜಿಸ್ಟ್ರೇಷನ್ ಮಾಡಿ, ಈ ಅಡ್ವೈಸರಿ ಕಮಿಟಿಯನ್ನು ಬದಲಿಗೆ ಸರಿಸಿದರು. ಆ ಸೊಸೈಟಿನಲ್ಲಿ ಇದ್ದವರನ್ನು ಮೆಂಬರ್ ಮಾಡಿಕೊಂಡರು. ಆ ಸೊಸೈಟಿ ಆಕ್ಟ್ ಕೆಳಗೆ ಅವರಿಗೆ ಮೆಂಬರ್‌ಶಿಪ್‌ಗಳನ್ನು ನೀಡಿ, ಅವರದ್ದೇ ಆದಂತಹ ಕಾನೂನು ಹಾಗೂ ಬೈಲಾಗಳನ್ನು ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಸದನ ಸಮಿತಿ ಮುಂದೆ ಚರ್ಚೆ ಮಾಡಿದ್ದರಿಂದ ಎಲ್ಲಾ ವಿಷಯಗಳು ಹೊರಗೆ ಬಂದಿರುತ್ತವೆ.

(ಮುಂದುವರೆದಿದೆ)

(330)11.03.2020/6.00/ವೈಎಲ್–ಕೆಎಸ್
**ಶ್ರೀ ಕೆ.ಸಿ.ಕೊಂಡಯ್ಯ(ಮುಂದು):**

ಸಂಬಂಧಪಟ್ಟಂತಹ ಸುಮಾರು 20 ಇಲಾಖೆಗಳವರನ್ನು ಕರೆಸಿ, ಅದೆಲ್ಲದರ ಬಗ್ಗೆ ಸದನ ಸಮಿತಿಯಲ್ಲಿ ಚರ್ಚೆ ಮಾಡಿದಾಗ ಅಲ್ಲಿರತಕ್ಕಂಥವರೆಲ್ಲಾ ಹೊರಗಿನವರು ಎಂಬುದು ಗೊತ್ತಾಯಿತ್ತು. ಏಕೆಂದರೆ, cricket matches ನಡೆಯುವಾಗ diamond block ಎಂದಿರುತ್ತದೆ, ಅಲ್ಲಿ liquor ಸರಬರಾಜು ಮಾಡುತ್ತಾರೆ. Excise Commissioner ರವರು ಅನುಮತಿ ನೀಡಿರುವುದಿಲ್ಲ, ಅವರು ಸಹ ನಮ್ಮಲ್ಲಿ ಅನುಮತಿ ತೆಗೆದುಕೊಂಡಿರುವುದಿಲ್ಲ ಎಂದು ಹೇಳಿದ್ದರು. ಅದೇ ರೀತಿ ಪೊಲೀಸ್ ಕಮೀಷನ್‌ರಾದ ಶ್ರೀ ಶಂಕರ್ ಬಿದರಿಯವರನ್ನು ಕೇಳಿದಾಗ ಅವರು ಸಹ 'ಐಪಿಎಲ್ ಪಂದ್ಯಾವಳಿಗಳನ್ನು ಆಯೋಜಿಸುವುದು ಕಮರ್ಷಿಯಲ್ ಸಂಸ್ಥೆಗಳು. ನಾವು ಕೊಡುವುದಿಲ್ಲ, ದುಡ್ಡು ಕಟ್ಟಿದರೆ ಕೊಡುತ್ತೇವೆ' ಎಂದು ಹೇಳಿದರು. ನಂತರ ಕಮರ್ಷಿಯಲ್ ಟ್ಯಾಕ್ಸ್‌ರವರನ್ನು ಸಹ ಕರೆಸಿ ಕೇಳಿದಾಗ ಅವರು... ಎಂ.ಎಲ್.ಎ. ಗಳಿಗೆ ರೂ. 110.00/– ಗೆ ಟಿಕೇಟನ್ನು ಮುದ್ರಿಸಿ ನೀಡಿದ್ದರು.

**ಡಾ|| ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎಂ.ಎಲ್.ಎ., ಎಂ.ಎಲ್.ಸಿ., ಎಂ.ಪಿ. ಗಳಿಗೆ last category ಪಾಸ್ ನೀಡುತ್ತಾರೆ, ನಾಚಿಕೆಯಾಗುತ್ತದೆ.

**ಶ್ರೀ ಕೆ.ಸಿ.ಕೊಂಡಯ್ಯ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಇಲಾಖೆಯವರನ್ನೆಲ್ಲಾ ಕರೆಸಿ ಚರ್ಚೆ ಮಾಡಿ, ವರದಿಯಲ್ಲಿ ಇರುವುದನ್ನು ಮಾನ್ಯ ರೇವಣ್ಣನವರು ಹೇಳಿರುತ್ತಾರೆ. ಒಮ್ಮೆ ನಮ್ಮ ಸಮಿತಿಗೆ ಅಂದಿನ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಎಸ್.ವಿ.ರಂಗನಾಥ್‌ರವರನ್ನು ಕರೆಸಿ recommendations ನ್ನು ನೀಡಲಾಗಿತ್ತು, ಈ ಕ್ಲಬ್‌ನಿಂದ ಬರತಕ್ಕಂಥ ಆದಾಯ ಏನಿದೆ, ಅದರಲ್ಲಿ ಶೇಕಡಾ 25 ರಷ್ಟು ಮೊತ್ತವನ್ನು ಸರ್ಕಾರದಿಂದ ಭರಿಸಲಾಗುತ್ತಿದೆ. ಮೈಸೂರು ರೇಸ್ ಕ್ಲಬ್ ಮಾಡಿದ್ದು, ಇದರಲ್ಲಿ ಅದನ್ನು ಕಾರ್ಯರೂಪಕ್ಕೆ ತಂದಿಲ್ಲ. ಸರಿಯಾಗಿ streamline ಮಾಡಬೇಕೆಂದು ಸದನ ಸಮಿತಿ ಮಾಡಿ, ಎಷ್ಟು ವರ್ಷಕ್ಕೆ lease ಗೆ ನೀಡಲಾಗಿದೆ, Balance sheet ನ ಮಾಹಿತಿ ಹಾಗೂ ಯಾವ ರೀತಿಯಲ್ಲಿ ಮಾಡಿದರೆ ಕ್ಲಬ್‌ನವರ ಮೇಲೆ ಕಡಿವಾಣ ಹಾಕುವುದಕ್ಕೆ ಸಾಧ್ಯ ಎಂಬುದನ್ನು ನೋಡಬಹುದು. ಆ ಹಣವನ್ನು ನಮ್ಮ Education Department ನ sports ಗೆ ಬಳಸಬಹುದು.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ತುಂಬಾ ಜನ ಕ್ರೀಡಾ ಸಾಧಕರು ಹಾಗೂ ಕ್ರೀಡೆಗೆ ಪ್ರೋತ್ಸಾಹ ನೀಡುವಂಥ ಅನೇಕ ಮಂದಿ ಇದ್ದೇವೆ. ಯಾವುದೇ ಒಂದು ಕ್ರೀಡೆ ಬಗ್ಗೆ ಪಾಲಿಸಿ ಆಗಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳ ಎದುರುಗಡೆ ಆಡಳಿತ ಪಕ್ಷ, ವಿರೋಧ ಪಕ್ಷ ಎನ್ನುವಂಥ ಬೇದವನ್ನು ಮರೆತು, ಆ ಕ್ಷೇತ್ರದ ಬಗ್ಗೆ ಒತ್ತಡ ತರುವ ನಿಟ್ಟಿನಲ್ಲಿ ನಾವು ಚರ್ಚೆ ಮಾಡಿದ್ದೇವೆ. ಸಹಕಾರ ಸಚಿವರಾದ ಮಾನ್ಯ ಎಸ್.ಟಿ.ಸೋಮಶೇಖರ್‌ರವರ ಬಗ್ಗೆಯು ನನಗೆ ತಿಳಿದಿದೆ. ಅವರು ಹೊಸದಾಗಿ ಬಂದಿರುವ ಸಚಿವರಾಗಿರಬಹುದು, ಆದರೆ ಅವರು ಬಹಳ determination ಇರುವ political leader ಇದ್ದಾರೆ. ಈ ಮಾತನ್ನು ಕೇವಲ ಬಾಯಿಯ ಮಾತಿನಲ್ಲಿ ಹೇಳುತ್ತಿಲ್ಲ. ನಮ್ಮ ವ್ಯಕ್ತಿತ್ವದ ಬಗ್ಗೆ derogatory ಆಗಿ ನಡೆದುಕೊಳ್ಳುವಂಥರಾಗಿದ್ದಾರೆ. ಈಗಾಗಲೇ ಮಾನ್ಯ ಐವನ್ ಡಿ'ಸೋಜಾರವರು ಹೇಳಿದ ಹಾಗೆ ದೇಶೀಯ ಸಂಸ್ಕೃತಿಯ ಬಗ್ಗೆ ಸಂವೇದನಾಶೀಲತೆ ಇಲ್ಲದೇ ಹೋದರೆ ಅವರಿಗೆ ಇನ್ನೂ ಬ್ರಿಟಿಷ್ ಮನಸ್ಥಿತಿ, ದಾಸ್ಯದ ಮನಸ್ಥಿತಿ ಇದ್ದರೆ, ಆ ಕ್ಲಬ್‌ನವರಿಗೂ ಮೊದಲಿಗೆ ತನ್ನ ನೆಲ, ಜಲ, ಸಂಸ್ಕೃತಿಯನ್ನು ಗೌರವಿಸಬೇಕೆಂಬುದರ ಪಾಠವನ್ನು ಹೇಳಿಕೊಡುವುದಕ್ಕೆ ಸ್ವಲ್ಪ ಜನರನ್ನು ಕಳುಹಿಸೋಣ. ಈಗಾಗಲೇ ಬೆಳಗ್ಗೆ ತಾವೂ ಸಹ ಸಂವಿಧಾನದ ಮೇಲೆ ಮಾತನಾಡಲು ಅವಕಾಶ ನೀಡಿದ್ದು, ನಾವೆಲ್ಲಾ ಚರ್ಚೆಯನ್ನು ಮಾಡಿದ್ದೇವೆ.

ಎರಡನೆಯದಾಗಿ, ಈ ಕ್ಲಬ್‌ನವರು ಸರ್ಕಾರದ ಸವಲತ್ತನ್ನು ಪಡೆಯುತ್ತಿದ್ದು ಕ್ರೀಡಾ ಮನೋಭಾವದಿಂದ ಕ್ಲಬನ್ನು ನಡೆಸಬೇಕೇ ಹೊರತು, ಅದು profit oriented ಕ್ಲಬ್ ಆಗಿರಬಾರದು. ಲಾಭಮಾಡಿಕೊಂಡು ದುರ್ಬಳಕೆ ಮಾಡುವವರಿಗೆ ಯಾವ ನಿರ್ಬಂಧ ವಿಧಿಸಬೇಕೆನ್ನುವ ಶಕ್ತಿ ಈ ಸದನಕ್ಕೆ ಇದೆ. ಜನ ಪ್ರತಿನಿಧಿಗಳಿಗೆ 10 ನಿಮಿಷ ಕ್ಲಬ್‌ಗೆ ಹೋಗುವುದಕ್ಕೆ ಸಮಯ ಸಿಗುವುದು ಕಷ್ಟ. ಮಾನ್ಯ ಸಚಿವರಾದ ಎಸ್.ಟಿ.ಸೋಮಶೇಖರ್‌ರವರು ಸಮಾಜದ ಬಗೆಗಿನ ಚಿಂತನೆ ಮಾಡುವ ನಿಟ್ಟಿನತ್ತ ಹೋಗುವುದಕ್ಕೆ ಹೇಳಿದ್ದಾರೆ. Definitely, ಸಮಾಜವನ್ನು represent ಮಾಡುವ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಗ್ಗೆ ಮತ್ತು ಆ ಕ್ಷೇತ್ರದ ಬಗ್ಗೆ ಉನ್ನತೀಕರಣ ಕೊಡಿಸುವುದಕ್ಕೆ contribute ಮಾಡುವುದು ಬಿಟ್ಟರೆ ಅವರ ಭಿಕ್ಷೆ ಯಾರಿಗೂ ಅವಶ್ಯಕವಿಲ್ಲ. ಆದರೆ, ಆ ಕ್ಲಬ್‌ನಲ್ಲಿ ಅಕ್ರಮವಾದರೆ ಅಥವಾ ದುರ್ಬಳಕೆಯಾದರೆ, ಅದನ್ನು ತಡೆಯುವ ಕರ್ತವ್ಯ ನಮ್ಮೆಲ್ಲರಿಗೂ ಇರುವ ಕಾರಣದಿಂದ ವಿಶೇಷವಾಗಿ ಉಡುಗೆಗೆ ಸಂಬಂಧಿಸಿದಂತೆ, ಆ ಕ್ಲಬ್‌ನಲ್ಲಿ ನಡೆದುಕೊಳ್ಳಬೇಕಾದ ಪಾತ್ರದ ಬಗ್ಗೆ ನಿರ್ದಿಷ್ಟವಾದ ಸೂಚನೆಗಳನ್ನು ರಾಜ್ಯ ಸರ್ಕಾರದ ಮೂಲಕ ಹೊರಡಿಸುವುದಕ್ಕೆ ತಮ್ಮ ಪೀಠವು ಒಂದು ಸಮಿತಿಯನ್ನು ರಚಿಸುವುದಕ್ಕೆ ಅನುವು ಮಾಡಿಕೊಡಬೇಕು. ಕೆಳ ಮನೆಯ ರೀತಿಯಲ್ಲಿ ಮೇಲ್ಮನೆಯಲ್ಲಿಯು ಒಂದು ಸಮಿತಿಯನ್ನು ರಚನೆ ಮಾಡಿ, ಆ ಕ್ಷೇತ್ರದ ತಜ್ಞರಾದ ಒಬ್ಬ ಹಿರಿಯ ಗೌರವಾನ್ವಿತ ಸದಸ್ಯರ ನೇತೃತ್ವದಲ್ಲಿ ಒಂದು ಸಮಿತಿ ತಮ್ಮ ಕಾಲದಲ್ಲಿಯೇ ರಚನೆ ಆಗಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಹೆಚ್.ಎಂ.ರೇವಣ್ಣನವರು ಸಾಕಷ್ಟು ಪ್ರಶ್ನೆಗಳನ್ನು ಕೇಳಿದ್ದು, ಹಲವಾರು ಸದಸ್ಯರು ಮಾತನಾಡಿದ್ದಾರೆ. ಕೆಲವು ಕ್ಲಬ್‌ಗಳೇನಿವೆ, ಆ ಕ್ಲಬ್‌ಗಳು ಕ್ರೀಡೆಗಾಗಿ ಕೊಟ್ಟಿರುವಂಥದ್ದಾಗಿದೆ. Hockey, Cricket, Football, Badminton, Tennis and other association ಅಥವಾ ಕ್ಲಬ್‌ಗಳು ಕ್ರೀಡೆಗೆ ಸಂಬಂಧಿಸಿದ್ದು, ಅದರ ಬೆಳವಣಿಗೆಗಾಗಿ ಹಲವಾರು ವರ್ಷಗಳಿಂದ ನೀಡುತ್ತಾ ಬಂದಿದ್ದಾರೆ. ಸುಮಾರು ಕ್ಲಬ್‌ಗಳನ್ನು ಕ್ರೀಡೆಗಾಗಿ ನೀಡಿದ್ದು, ಸಾಕಷ್ಟು ಪ್ರಮಾಣದಲ್ಲಿ ಅದನ್ನು ಕ್ರೀಡೆಗಾಗಿಯೇ ಉಪಯೋಗ ಮಾಡುತ್ತಾರೆ. ಯಾರು ಆ ಕ್ಲಬ್‌ಗಳಲ್ಲಿ recreational activities, drinks or ಇಸ್ಪೀಟ್ ಕಾರ್ಡ್ಸ್ ಆಡುವುದಕ್ಕೆ ಅವಕಾಶ ನೀಡುವುದಿಲ್ಲ. ಜೊತೆಗೆ ಸಂಜೆಯ ಸಮಯದಲ್ಲಿ recreational activities ಮಾಡುವುದಕ್ಕೆ ಅವಕಾಶವಿದ್ದು, ಈ ಅವಕಾಶದಲ್ಲಿ ಕೆಲವರು drinks or ಇಸ್ಪೀಟ್ ಕಾರ್ಡ್ಸ್ ಆಡಲು ಅವರವರ ಮನೋಭಾವಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುತ್ತಾರೆ. ಯಾವ ರೀತಿಯಲ್ಲಿ ಕ್ರಿಕೆಟ್ ಸ್ಟೇಡಿಯಂನಲ್ಲಿ tennis, badminton and football ಆಟ ಆಡುವುದಕ್ಕೂ ಅವಕಾಶ ಇದೆ, ಅದೇ ರೀತಿಯಲ್ಲಿ ಸದಸ್ಯರಿಗೆ ಆಟ ಆಡಲು ಅವಕಾಶ ಮಾಡಿಕೊಡುತ್ತಾರೆ. ಆದರೆ, ಇವತ್ತು ಏನಾಗಿದೆಯೆಂದರೆ, ಕ್ರೀಡೆಗಳಿಗೆ ಸಂಬಂಧಪಟ್ಟಂಥ ಸ್ಟೇಡಿಯಂ ಏನಿದೆ, ಅದನ್ನು ಅವರಿಗೆ ಏನೇನು ಅವಶ್ಯಕತೆಗಳಿಗೆ ಬೇಕಾಗಿದೆ ಅದಕ್ಕೆಲ್ಲಾ ಉಪಯೋಗಿಸಿಕೊಳ್ಳುತ್ತಾರೆ. ಆದರೆ, ರೆಸಿಡೆನ್ಸಿಯಲ್ ಕ್ಲಬ್ ಏನಿದೆ, ಆ ಭಾಗದ residents ಗಳಿಗೆ ಕ್ಲಬ್‌ನಲ್ಲಿ ಸಂಜೆಯ ಸಮಯ ಮನೋರಂಜನೆಗೆ, relax ಮಾಡುವುದಕ್ಕೆ, badminton ಆಡುವುದಕ್ಕೆ ಅಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ, ಈ ನಡುವೆ ಹಲವಾರು ಕ್ಲಬ್‌ಗಳಲ್ಲಿ ಸಂಜೆ ಮಾತ್ರ ಪ್ರವೇಶಕ್ಕೆ ಅವಕಾಶ ಇದ್ದು, ಹಲವಾರು ಜನರು ಸಂಜೆ ಹೋಗಿ drinks ಮಾಡುತ್ತಾರೆ, ಇಸ್ಪೀಟ್ ಆಡುತ್ತಾರೆ. ಅದರ ಜೊತೆಗೆ badminton, tennis ಹಾಗೂ ಇತರೆ ಆಟಗಳನ್ನು ಆಡಲು ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಕೆಲವು ಕ್ಲಬ್‌ಗಳಲ್ಲಿ ಅಂತಹ ವ್ಯವಸ್ಥೆಗಳಿಲ್ಲ, ಬರೀ ಇವುಗಳನ್ನು ಮಾತ್ರ ಮಾಡುತ್ತಾರೆ. ನಾನು ತಮಗೆ ಹೇಳುವುದೇನೆಂದರೆ, ಎಲ್ಲೆಲ್ಲಿ ಈ ರೀತಿ ಕ್ಲಬ್‌ಗಳನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

commercial ಆಗಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಆ ಕ್ಲಬ್‌ಗಳನ್ನು ನಿರ್ಬಂಧಿಸಿ. ನಾನು ಮಾನ್ಯ ಐವನ್ ಡಿ'ಸೋಜಾ ಮತ್ತು ಡಾ॥ ತೇಜಸ್ವಿನಿ ಗೌಡರು ಹೇಳಿದ ಮಾತನ್ನು ಒಪ್ಪಿಕೊಳ್ಳುತ್ತೇನೆ. Collar ಇರುವ ಉಡುಗೆಯನ್ನು ನಾನು ಧರಿಸಿಕೊಂಡು ಹೋದಂತಹ ಸಂದರ್ಭದಲ್ಲಿ ಕ್ಲಬ್ ಒಳಗೆ ಹೋಗಲು ಬಿಡಲಿಲ್ಲ. ಸ್ವಾತಂತ್ರ್ಯ ದಿನಾಚರಣೆಯ ದಿವಸದಂದು ಇಲ್ಲಿಂದ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮವನ್ನು ಮುಗಿಸಿಕೊಂಡು ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ನ ಕ್ಲಬ್‌ಗೆ ಹೋದರೆ ಕ್ಲಬ್ ಒಳಗೆ ಬಿಡುವುದಿಲ್ಲ ಎಂದು ಹೇಳಿದ್ದರು. ಅವತ್ತಿನ ದಿವಸ ನಮ್ಮ ಕುಟುಂಬದವರು ಕ್ಲಬ್ ಒಳಗೆ ಇದ್ದಾರೆ, ನಾನು ಕ್ಲಬ್ ಹೊರಗೆ ಇದ್ದೇನೆ. ಅದೂ ಮಧ್ಯಾಹ್ನ ಊಟದ ಸಮಯದಲ್ಲಿ ಮಾಡಿದ್ದಾರೆ. ಈ ರೀತಿ ಆಗಬಾರದು. ಇದಕ್ಕೆ ಒಂದು ಕಡಿವಾಣ ಹಾಕಬೇಕು.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮನ್ನು ಕ್ಲಬ್ ಒಳಗೆ ಬಿಡದೇ, ನಮ್ಮ ಕುಟುಂಬದವರನ್ನು ಬಿಟ್ಟರೆ; ಅವರಿಗೇನಾದರೂ ಬೇರೆ ಉಡುಗೆಯನ್ನು ನಿಗದಿ ಮಾಡಿದ್ದಾರೆಯೇ ಎಂಬುದನ್ನು ಕೇಳಬೇಕು.

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಹೇಳುತ್ತೇನೆ. ನನ್ನ ಪ್ರಕಾರ ಯಾವುದೇ ಕ್ಲಬ್‌ನಲ್ಲಿ ಹೆಣ್ಣು ಮಕ್ಕಳ ಉಡುಗೆಯಲ್ಲಿ ಯಾವುದೇ ನಿರ್ಬಂಧವಿಲ್ಲ. ನನ್ನ ಪ್ರಕಾರ ಬಹುಶಃ ಎಲ್ಲಾ ಕ್ಲಬ್‌ಗಳಲ್ಲಿ ಸಂಜೆಯ ನಂತರ T-shirt without collar ಧರಿಸದೇ ಮತ್ತು ಸ್ಯಾಂಡಲ್ ಷೂ ಇಲ್ಲದೇ ಕ್ಲಬ್ ಒಳಗೆ ಹೋಗುವಂತಿಲ್ಲ. ಬೆಂಗಳೂರು ಕ್ಲಬ್, ಬೌರಿಂಗ್ ಕ್ಲಬ್ ಏನಿವೆ, ಆ ಕ್ಲಬ್‌ಗಳು ಬ್ರಿಟೀಷರ ಕಾಲದಲ್ಲಿ ಬಂದಿರುವಂಥ ಕ್ಲಬ್‌ಗಳು. ಆಗ ತೆರೆದಂಥ ಕ್ಲಬ್, ...

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಬಹಳ ಸಾಂದರ್ಭಿಕವಾಗಿ ಈ ಪ್ರಶ್ನೆ ಬಂದಿದೆ ಎಂದು ನನಗೆ ಅನ್ನಿಸುತ್ತಿದೆ. ನನಗೆ ಕ್ಲಬ್ ಬಗ್ಗೆ ಮಾಹಿತಿ ಇರುವುದಿಲ್ಲ. ಈ ಸದನದಲ್ಲಿ ಸಂವಿಧಾನದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಸ್ವಾತಂತ್ರ್ಯದ ನಂತರ ಏನೇನು ಹಕ್ಕುಗಳಿವೆ ಎಂಬುದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದ್ಯಾವುದೋ ಕಿತ್ತು ಹೋಗಿರುವ ಕ್ಲಬ್‌ಗಳು. ನಮ್ಮ ಉಡುಗೆಯನ್ನು ನೋಡಿ ಒಳಗೆ ಬಿಡುವುದರ ಬಗ್ಗೆ ತೀರ್ಮಾನ ಮಾಡುವಂಥ ಕ್ಲಬ್‌ಗಳಿವೆ ಎಂದರೆ, ಈ ಕ್ಲಬ್‌ಗಳು ಬ್ರಿಟೀಷರ ಆಳ್ವಿಕೆಗೆ ಸೇರಿರುವುದೇ? ನಾವು ಯಾವ ಉಡುಗೆಯನ್ನು ಧರಿಸಬೇಕೆಂಬುದನ್ನು ನಿರ್ಧಾರ ಮಾಡುವುದಕ್ಕೆ ಅವರ್ಯಾರು? ಸರ್ಕಾರದ ಜಾಗವನ್ನು ತೆಗೆದುಕೊಂಡು, ಸರ್ಕಾರದ ಸವಲತ್ತಿನಲ್ಲಿ ಕ್ಲಬ್ ನಡೆಸುತ್ತಿರುವಾಗ ಆ ಕ್ಲಬ್‌ನವರಿಗೆ ಒಂದು ನೀತಿ ಸಂಹಿತೆಯನ್ನು ಹೊರಡಿಸಬೇಕು. ನಾವು ಪಾರ್ಲಿಮೆಂಟ್, ವಿಧಾನ ಪರಿಷತ್ತಿನ ಒಳಗೆ ಬರುವ ಸಂದರ್ಭದಲ್ಲಿ ನಮ್ಮ ಉಡುಗೆಗೆ ನಿರ್ಬಂಧವಿಲ್ಲ. ದೇವಸ್ಥಾನಕ್ಕೆ ಹೋಗುವಾಗ ಉಡುಗೆಗೆ ನಿರ್ಬಂಧವಿಲ್ಲ. ಯಾರೋ ಒಬ್ಬರಿಗೆ ದೇವಸ್ಥಾನದಲ್ಲಿ ಪಂಚೆ ಧರಿಸುವುದಕ್ಕೆ ಹೇಳಬಹುದು. ಅದೇ ರೀತಿ ಈ ಕ್ಲಬ್‌ಗಳು ಸಹ ದೇವಸ್ಥಾನ ಎಂದು ತಿಳಿದುಕೊಂಡುಬಿಡೋಣ. 70 ವರ್ಷದ ನಂತರ ಸಂವಿಧಾನದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚರ್ಚೆಯಾಗುತ್ತಿದೆ. ಭಾರತದ ಸಂವಿಧಾನ ಶಿಲ್ಪಿಯಾದ ಡಾ॥ ಬಾಬ ಸಾಹೇಬ್ ಅಂಬೇಡ್ಕರ್‌ರವರು ನೀಡಿರುವ ಹಕ್ಕಿನ ಬಗ್ಗೆ ಬೆಳಗ್ಗೆಯಿಂದ ಬಹಳ ಮಾತನಾಡಿದ್ದೇವೆ. ಈಗ ಆ ಹಕ್ಕುಗಳೆಲ್ಲಾ ಜಾರಿಯಾಗಬೇಕಲ್ಲವೇ? ಮಾನ್ಯ ಸದಸ್ಯರು ಆ ಕ್ಲಬಿನ ಸದಸ್ಯರಾಗಿದ್ದು, ಕ್ರಿಕೆಟ್ ಆಟಗಾರರಾಗಿದ್ದೀರಿ. ಯಾವ ಕಾರಣಕ್ಕೂ ಕ್ರಿಕೆಟ್ ಆಟಗಾರನಾಗಿದ್ದೆನು ಎಂಬ ಹಳೆಯ ವ್ಯಾಮೋಹದ ಮೇಲೆ ಪರೋಕ್ಷವಾಗಿಯು ಸಮರ್ಥನೆ ಮಾಡಿಕೊಳ್ಳುವುದು ಬೇಡ.

**ಶ್ರೀ ಪ್ರಕಾಶ್ ಕೆ.ರಾಥೋಡ್**:- ಇಲ್ಲ ಮಾನ್ಯ ಸದಸ್ಯರೇ, ಅದರ ಬಗ್ಗೆಯು ಹೇಳುತ್ತೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಈ ದೇಶದ ನಿಯಮಕ್ಕೆ ಮತ್ತು ಈ ನೆಲದ ನೆಲಮಹಡಿಗೆ ಒಳಪಟ್ಟು ಈ ಕ್ಲಬ್‌ಗಳು ನಡೆಯಲಿ. ಅದನ್ನು ಮೀರಿ ನಡೆಯುವುದು ಬೇಡ ಎಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ದೇಶೀಯ ಉಡುಗೆಯಲ್ಲಿ ಸಚಿವರನ್ನೇ ಕಳುಹಿಸೋಣ.

**ಶ್ರೀ ಪ್ರಕಾಶ್ ಕೆ.ರಾಥೋಡ್**:- ಮಾನ್ಯ ಸಭಾಪತಿಯವರೇ, ಮಾನ್ಯ ಆಯನೂರು ಮಂಜುನಾಥ್‌ರವರು ಒಳ್ಳೆಯ ಸಲಹೆಯನ್ನು ನೀಡಿದ್ದಾರೆ. ಅವರು ಹೇಳಿದ ಹಾಗೆ ಆ ಸಲಹೆಯು ಕಡ್ಡಾಯವಾಗಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಆದರೆ, ಕಟ್ಟುನಿಟ್ಟಿನ ಬಗ್ಗೆ ಪ್ರಸ್ತಾಪ ಮಾಡಿದಾಗ ನಮ್ಮ ಕ್ರಿಕೆಟ್ ಅಸೋಸಿಯೋಷನ್‌ನಲ್ಲಿ ಯಾವುದೇ ಉಡುಗೆಯನ್ನು ಧರಿಸಿಕೊಂಡು ಹೋದರೂ 101% ಕ್ಲಬ್ ಒಳಗೆ ಬಿಡುತ್ತಾರೆ, ಅಲ್ಲಿ ಯಾವುದೇ ರೀತಿಯ ತೊಂದರೆಯಿಲ್ಲ. ನಾನು ಆ ಕ್ಲಬ್‌ನಲ್ಲಿ ಸದಸ್ಯತ್ವವನ್ನು ಹೊಂದಿದ್ದು, ಇದೇ ಬಟ್ಟೆಯಲ್ಲಿ ಪ್ರತಿ ದಿನ ಹೋಗುತ್ತೇನೆ. ಯಾರು ನನ್ನನ್ನು ತಡೆದಿಲ್ಲ. ನಾನು ಕ್ರಿಕೆಟ್ ಪಟು ಎಂದು ಒಳಗೆ ಬಿಡುತ್ತಿಲ್ಲ. ಆ ಕ್ಲಬ್‌ನ ಸದಸ್ಯನಾಗಿದ್ದು, ನನ್ನನ್ನು ಬಿಟ್ಟಿದ್ದಾರೆ, ಮಾನ್ಯ ಕೆ.ಸಿ.ಕೊಂಡಯ್ಯನವರನ್ನು ಏತಕ್ಕೆ ಬಿಟ್ಟಿಲ್ಲ ಎಂಬುದು ಗೊತ್ತಿಲ್ಲ.

**ಶ್ರೀ ಆರ್.ಧರ್ಮಸೇನ:-** ಮಾನ್ಯ ಸಭಾಪತಿಯವರೇ, 5 ವರ್ಷಗಳ ಹಿಂದೆ ಯಾವುದೇ ಉಡುಗೆಯಲ್ಲಿ ಹೋದರೂ ಒಳಗೆ ಬಿಡುತ್ತಿದ್ದರು, ಈಗ ಆ ರೀತಿ ಬಿಡುತ್ತಿಲ್ಲ.

(ಗೊಂದಲ)

**ಶ್ರೀ ಕೆ.ಸಿ.ಕೊಂಡಯ್ಯ:-** ನಾನು ಕ್ಲಬ್‌ಗೆ ಹೋದಾಗ ಈ dress code ಧರಿಸಿದವರನ್ನು ಒಳಗಡೆ ಬಿಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದರು. ನಂತರ ಅಲ್ಲಿಯ ಕಾರ್ಯದರ್ಶಿಯವರನ್ನು ಕರೆಸಿದ್ದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಪ್ರಕಾಶ್ ಕೆ ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಎರಡೇ ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಲ್ಲಿ ಕೆಲವೊಂದು ಬೆಳವಣಿಗೆ ಆಗಿರುವುದರ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಸದನ ಸಮಿತಿ ಅಥವಾ ಬೇರೆ ಒಂದು ಸಮಿತಿ ಮಾಡಿ, ಎಲ್ಲಾ ಕ್ಲಬ್‌ಗಳಿಗೆ ನೀಡುವಂಥ ನಿರ್ದೇಶನ ಏನಿದೆ; ನಾನು ಒಂದು ಕಡೆ ಕ್ರೀಡಾಪಟುವಾಗಿದ್ದೇನೆ, ಮತ್ತೊಂದು ಕಡೆ ಶಾಸಕನಾಗಿ ಇಲ್ಲಿಯು ಕೆಲಸ ಮಾಡುತ್ತಿದ್ದೇನೆ. ಎರಡು ಕಡೆಯಿಂದಲೂ ಹೇಳುತ್ತೇನೆ.

(ಮುಂದು)

(331)/11.03.2020/6.10/ಎಸ್‌ಕೆ-ಜಿಆರ್
**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):**

ಕ್ಲಬ್‌ಗಳ ತಮ್ಮ ನಿಯಮಗಳನ್ನು ಬದಲಾವಣೆಯನ್ನು ಮಾಡಬೇಕು. ಎರಡನೇಯದಾಗಿ, ನಾವು ಕಬ್ಲ್‌ಗೆ ಹೋದಾಗ, ಸರಿಯಾಗಿ ನಮ್ಮ ಡ್ರೆಸ್ ಏನಿದೆ. ಅದೇ ಡ್ರೆಸ್‌ನ್ನು ಹಾಕಿಕೊಂಡು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಎರಡನೇ ಪ್ರಶ್ನೆ ಬಂದಾಗ, ಕೆಲವೊಬ್ಬ ಸದಸ್ಯರು ಪಾಸ್‌ಗಳ ವಿತರಣೆಯ ಬಗ್ಗೆ ಹೇಳಿದರು. ವಿಶೇಷವಾಗಿ ಕ್ರಿಕೆಟ್ ಮ್ಯಾಚ್ ಈ ದೇಶದವರಿಗೆ ಗೊತ್ತಿದೆ. ಕ್ರಿಕೆಟ್ ಆಟವನ್ನು ನೋಡಲು ಲಕ್ಷಾಂತರ ಜನರು ಬರುತ್ತಾರೆ. ಪಾಸ್‌ಗಳನ್ನು ಕೊಡಬೇಕಾದರೆ, ಈಗ...

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಪಾಸ್ ಇತ್ಯಾದಿ ಉಚಿತವಾಗಿ, ಕೊಡುವಂತಹ ಸೌಲಭ್ಯವನ್ನು ಕೇಳಿದರೆ ಅದು ಶಾಸಕರ ಘನತೆ-ಗೌರವಕ್ಕೆ ಧಕ್ಕೆಯಾಗುತ್ತದೆ.

**ಸಭಾಪತಿಯವರು:-** ಇದರ ಬಗ್ಗೆ ಚರ್ಚೆ ಬೇಡ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಅವರ್‍ಯಾರೋ ನಮಗೆ ಪಾಸ್ ಕೊಡಲಿಲ್ಲ. ಅವರು ನಮಗೆ ಪಾಸ್ ಕೊಡಬೇಕೆಂಬುದನ್ನು ಕೇಳುವಂತಹ ಆ ಒಂದು ಸಣ್ಣ ಬೇಡಿಕೆಯನ್ನು ಇಡಬೇಡಿ. ಪಾಸ್‌ಗಾಗಿ ಶಾಸಕರ ಘನತೆ-ಗೌರವಕ್ಕೆ ಧಕ್ಕೆ ತರಬೇಡಿ... **(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನವನ್ನು ಹೊಂದಿದವರು):–** ಇದರ ಬಗ್ಗೆ ಸರ್ಕಾರ ಉತ್ತರ ಕೊಟ್ಟಿದೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ರಮೇಶ್‌ರವರೇ ಒಂದೇ ನಿಮಿಷ ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ತಾವು ಒಂದು ಸದನ ಸಮಿತಿ ಮಾಡಿ. ತಾವು ಲೀಸ್‌ಗಳನ್ನು ಏನು ಕೊಟ್ಟಿದ್ದೀರಿ. ಅದರ ಬಗ್ಗೆ ಮಾನ್ಯ ರೇವಣ್ಣನವರು ಹೇಳಿದ್ದಾರೆ. ಕೆಲವೊಂದನ್ನು 1956 ರಲ್ಲಿ ಕೊಟ್ಟಿದ್ದೀರಿ, 1960 ರಲ್ಲಿ ಕೊಟ್ಟಿದ್ದೀರಿ ಹಾಗೂ ಕೆಲವೊಂದನ್ನು 2000 ರಲ್ಲಿ ಕೊಟ್ಟಿದ್ದೀರಿ. ಅದರ ಬಗ್ಗೆ ತಾರತಮ್ಯವಿದೆ. ಅದನ್ನು ಸರಿಪಡಿಸಿದರೆ ಯಾವುದೇ ತೊಂದರೆ ಇರುವುದಿಲ್ಲ. ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳುತ್ತಾ, ಮುಂದೆ ಇದಕ್ಕೆ ಶಾಶ್ವತವಾದ ... **(ಗೊಂದಲ)** ನಮ್ಮ ಶಾಸಕರಿಗೊಂದು ಕ್ಲಬ್ ಬೇಕಲ್ಲವೇ? ಇಡೀ ಪ್ರಪಂಚದಲ್ಲಿರುವ ಕ್ರೀಡೆಗಳಿಗೆ ಕ್ಲಬ್ ಕೊಟ್ಟಿರುತ್ತೀರಿ. Residents ಗೆ ಕ್ಲಬ್ ಕೊಟ್ಟಿರುತ್ತೀರಿ. ಆದರೆ ಶಾಸಕರಿಗೆ ಕ್ಲಬ್ ಕೊಡಬೇಕೆಂದರೆ, ಸರ್ಕಾರಿ ಜಾಗ ಕೊಡಬೇಕೆಂದು ಹೇಳಿದರೆ, ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್ ಅಧಿಕಾರಿಗಳು ಸಹ ಕ್ಲಬ್ ಮಾಡಿಕೊಂಡಿದ್ದಾರೆ. ಲೇಡಿಸ್‌ನವರು ಕ್ಲಬ್ ಮಾಡಿಕೊಂಡಿದ್ದಾರೆ. ಶಾಸಕರಿಗೆ ಏತಕ್ಕೆ ಕ್ಲಬ್ ಮಾಡುಕೊಡುವುದಿಲ್ಲ? ಶಾಸಕರಿಗೆ ಜಾಗವೇನಾದರೂ ಕೊಟ್ಟರೆ, ನಾಳೆ ಪತ್ರಿಕೆಯಲ್ಲಿ 'ಶಾಸಕರಿಗೆ ಮೋಜು ಮಾಡುವುದಕ್ಕೆ ಕ್ಲಬ್ ಬೇಕು' ಎಂದು ಬರೆಯುತ್ತಾರೆ. ಶಾಸಕರಾದ ನಾವು ವ್ಯಾಯಾಮ ಮಾಡಬಾರದಾ? ಆ ಕ್ಲಬ್ ಹೋಗಿ ಆಟ ಆಡಬಾರದಾ? ಸಂಜೆ ವೇಳೆಯಲ್ಲಿ ಹೋಗಿ ವಿಶ್ರಾಂತಿ ತೆಗೆದುಕೊಳ್ಳಬಾರದಾ? ದಯವಿಟ್ಟು, ಮಾನ್ಯ ಸಭಾಪತಿಯವರ ಮೂಲಕ ಮಾನ್ಯ ಸಚಿವರಿಗೂ ಮತ್ತು ಸರ್ಕಾರದ ಗಮನಕ್ಕೆ ನಾನು ತರುತ್ತೇನೆ. ಮಾನ್ಯ ಸಚಿವರು ಶಾಸಕರಿಗೆ ಒಂದು ಕ್ಲಬ್‌ನ್ನು ಮಾಡಿಕೊಡಬೇಕೆಂದು ನಾವು ಮನವಿಯನ್ನು ಕೊಟ್ಟಿದ್ದೇವೆ. ಅದು ಆಗಿಲ್ಲ.

**ಸಭಾಪತಿಯವರು:–** ಕ್ಲಬ್ ಬೇಡ ಎಂದು ಯಾರು ಹೇಳಿದರು?

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಹೆಚ್. ಎಂ. ರೇವಣ್ಣನವರು ರಿಕ್ರಿಯೇಷನ್ ಕ್ಲಬ್ ಎಂದು ಕೇಳಿರುವಂಥದ್ದು. ಅವರು ಸ್ಪೋರ್ಟ್ಸ್ ಕ್ಲಬ್ ಎಂದು ಕೇಳಿಲ್ಲ. ಸ್ಪೋರ್ಟ್ಸ್ ಕ್ಲಬ್‌ಗೆ ಸೇರಿಸಿ ರಿಕ್ರೀಯೇಷನ್‌ಗೆ ಕೊಟ್ಟುಬಿಟ್ಟಿದ್ದಾರೆ. ಇದಕ್ಕೆ ಜಾಗ ಕೊಡಬೇಕಾದರೆ, ಬಿ.ಡಿ.ಎ., ಬಿ.ಬಿ.ಎಂ.ಪಿ., ಇತರ ಸಂಸ್ಥೆಗಳು ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಈಗ ನಮ್ಮ ಮುಂದೆ ಆ ಅಗ್ರಿಮೆಂಟ್ ಇಲ್ಲ. ಆ ಅಗ್ರಿಮೆಂಟ್‌ನಲ್ಲಿ clause ಹಾಕುತ್ತಾರೆ ಮತ್ತು terms and conditions ಇರುತ್ತದೆ. ಇದಕ್ಕೆ ಯಾವ ಬೆನಿಫಿಟ್ ಮೇಲೆ ಕೊಡಬೇಕು, ಯಾವುದಕ್ಕೆ ಕೊಡಬೇಕು ಮತ್ತು ಏತಕ್ಕೆ ಕೊಡಬೇಕು, ಇದನ್ನು ಯಾವ ತರಹ ಉಪಯೋಗ ಮಾಡಿಕೊಳ್ಳಬೇಕು ಎಂಬುದೊಂದಾಗಿದೆ. ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಏನೆಂದರೆ, ಈ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕ್ಲಬ್‌ಗಳ ಸದಸ್ಯತ್ವ ಹೊಂದಲು ಯಾವ ಅರ್ಹತೆಯನ್ನು ಅನುಸರಿಸಲಾಗುತ್ತಿದೆ ಎಂದು ಪ್ರಶ್ನೆ ಇದೆ. ಇಲ್ಲಿ ಹಾಗಾಗಿ ಬೈಲಾ ಅನ್ವಯ ಅರ್ಹತೆಗಳನ್ನು ಹೊಂದಿದ್ದಲ್ಲಿ ಸದಸ್ಯತ್ವ ಪಡೆಯಬಹುದಾಗಿರುತ್ತದೆ. ಆ ಬೈಲಾದಲ್ಲಿ ತಾವು ಪಡೆಯಬೇಕಾದರೆ, ಫೈನಾನಿಷಿಯಲ್ ಬೆನಿಫಿಟ್ ಹೇಗಿರಬೇಕು ಮತ್ತು ಸದಸ್ಯತ್ವನ್ನು ಪಡೆಯತಕ್ಕಂತಹದ್ದು ಹೇಗಿರಬೇಕು. ನಿಮ್ಮ ಕಾನೂನು ಆಧಾರದ ಮೇಲೆ ಅವರು ಸದಸ್ಯತ್ವವನ್ನು ತೆಗೆದುಕೊಳ್ಳಬೇಕು. ಆದರೆ ಕ್ಲಬ್‌ನಲ್ಲಿ ಒಂದು ಸದಸ್ಯತ್ವವನ್ನು ಪಡೆಯಬೇಕಾದರೆ, ಸುಮಾರು ಐದು ಲಕ್ಷ ರೂಪಾಯಿಗಳು, ಹತ್ತು ಲಕ್ಷ ರೂಪಾಯಿಗಳು, ಇಪ್ಪತ್ತೈದು ಲಕ್ಷ ರೂಪಾಯಿಗಳವರೆಗೆ ಆಗುತ್ತದೆ. ಇದು ಯಾವ ಮಾನದಂಡ ಮತ್ತು ಇದು ಯಾವ ಕಾನೂನಿನಲ್ಲಿದೆ. ಮಾನ್ಯ ಸದಸ್ಯರು ಡ್ರೆಸ್ ಕೋಡ್ ಬಗ್ಗೆ ಹೇಳಿದರು. ಈ ಡ್ರೆಸ್ ಕೋಡ್ ತರುವುದಕ್ಕೆ ಯಾವ ಕಾನೂನಿನಡಿಯಲ್ಲಿ ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದೆ. ಭಾರತ ದೇಶದಲ್ಲಿಯಿದ್ದಾರೋ, ಕರ್ನಾಟಕ ರಾಜ್ಯದಲ್ಲಿದ್ದಾರೆಯೋ ಅಥವಾ ಬೆಂಗಳೂರಿನಲ್ಲಿದ್ದಾರೆಯೋ ಎಂಬುದು ಗೊತ್ತಿಲ್ಲ. ಅವರು ಯಾರೋ ಮೇಲಿದ್ದು, ಒಂದು ರೀತಿಯ ಕಾನೂನನ್ನು ಮಾಡಿದರೆ, ಇದನ್ನು ತೆಗೆದುಕೊಳ್ಳುವಂತಹದ್ದು ಅಗ್ರಿಮೆಂಟ್. ಬೆಂಗಳೂರು ನಗರದಲ್ಲಿ ಸುಮಾರು 39 ರಿಕ್ರಿಯೇಷನ್ ಕ್ಲಬ್‌ಗಳನ್ನು ಕೊಟ್ಟಿದ್ದೀರಿ ಎಂದು ಉತ್ತರದಲ್ಲಿದೆ. ರಿಕ್ರಿಯೇಷನ್ ಕ್ಲಬ್‌ಗಳಲ್ಲಿ ಕ್ರಿಕೆಟ್ ಕ್ಲಬ್ ಸೇರಿ ಬಿಟ್ಟಿತು. ಫುಟ್‌ಬಾಲ್ ಕ್ಲಬ್ ಅಚೆ ಬರುತ್ತದೆ. ಇದರಲ್ಲಿ ಫುಟ್‌ಬಾಲ್ ಕ್ಲಬ್ ಇಲ್ಲ.

**ಶ್ರೀ ಆರ್. ಧರ್ಮಸೇನ:–** ಇದನ್ನು ರಿಕ್ರಿಯೇಷನ್ ಕ್ಲಬ್‌ಗಳಿಗೆ ಒಂದನ್ನೂ ಕೊಟ್ಟಿಲ್ಲ.

**ಶ್ರೀ ಪಿ.ಆರ್. ರಮೇಶ್:–** ಇವತ್ತು ರಿಕ್ರಿಯೇಷನ್ ಕ್ಲಬ್ ಮತ್ತು ಕ್ರೀಡಾ ಕ್ಲಬ್‌ಗೂ ಎರಡಕ್ಕೂ ಕೊಟ್ಟಿದ್ದಾರೆ. ಯಾವ್ಯಾವ ಕ್ಲಬ್‌ಗಳಿಗೆ ಯಾವ್ಯಾವುದನ್ನು ಕೊಟ್ಟಿದ್ದಾರೆಂಬದಷ್ಟನ್ನು ಸೇರಿಸಿ, ಈ ಸದದಲ್ಲಿ ಮಾತನಾಡತಕ್ಕಂತಹದ್ದಾಗಿದೆ. ಇಲ್ಲಿ ಪ್ರಶ್ನೆ ಏನೆಂದರೆ, ಅಗ್ರಿಮೆಂಟ್ ತೆಗೆದುಕೊಳ್ಳುವಂತಹದ್ದು, ಆ ಅಗ್ರಿಮೆಂಟ್‌ನಲ್ಲಿ terms and conditions ನಲ್ಲಿ violation ಏನಾಗಿದೆ ಎಂಬುದನ್ನು ನೋಡಬೇಕು. ಎರಡನೇಯದಾಗಿ, ಕಾನೂನಿನ ಪ್ರಕಾರ ಸದಸ್ಯತ್ವವನ್ನು ತೆಗೆದುಕೊಳ್ಳುವಾಗ ಮಾನದಂಡ ಏನಿದೆ? ಸದಸ್ಯತ್ವವನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಯಾವ ರೀತಿ ಫೈನಾನಿಷಿಯಲ್ ಒಪ್ಪಿಗೆ ಇಟ್ಟಿಕೊಳ್ಳಬೇಕೆಂಬ ಬಗ್ಗೆ ಇವೆರಡನ್ನೂ ನೋಡುವಂತಹದ್ದಾಗಬೇಕು. ಇವೆರಡೂ ನಮ್ಮ ಮುಂದೆ ಇಲ್ಲ. ನಾವು ನೊಡಬೇಕಾದದ್ದು ಒಂದೇ ಒಂದು. ನೀವು ಈಗ ಕೇವಲ ಸಹಕಾರ ಸಂಘಗಳ ಬಗ್ಗೆ ಮಾತ್ರ ಕೇಳಿರುವಂಥದ್ದು. ಅಗ್ರಿಮೆಂಟ್‌ನ್ನು ತರಿಸಿಕೊಂಡು ಇದರ ಬಗ್ಗೆ ಚರ್ಚೆ ಮಾಡುವುದು ಒಳ್ಳೆಯದು. ಇದಕ್ಕೆ ಒಂದು ಸೂಕ್ತವಾದಂತಹ ಒಂದು ಸಮಿತಿ ರಚನೆ ಮಾಡಬೇಕು.

**ಸಭಾಪತಿಯವರು:–** ಮಾನ್ಯ ಕೆ.ಎ. ತಿಪ್ಪೇಸ್ವಾಮಿಯವರೇ ಮಾತನಾಡಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ಇದರಲ್ಲಿ ಸಾಕಷ್ಟು development ಆಗಿದೆ. ಇಲ್ಲಿ ಏನಾಗಿದೆಂದರೆ, ಹಿಂದೆ ಕಂದಾಯ ಇಲಾಖೆಯಲ್ಲಿ District Registrar ರವರು ಬೈಲಾ ತಿದ್ದುಪಡಿ, Memorandum of Association, registration ಇವುಗಳನ್ನು ನೋಡಿಕೊಳ್ಳುತ್ತಿದ್ದರು. ನಿಮ್ಮ ಉತ್ತರದ ಪ್ರಕಾರ ಈ ಕ್ಲಬ್‌ಗಳು the Karnataka Societies Registration Act ಅಡಿಯಲ್ಲಿ register ಆಗಿರುವಂತಹದ್ದು. ಇದರಲ್ಲಿ ತಿದ್ದುಪಡಿ ಏನೇ ಬಂದರೂ ಮತ್ತು ಅಪ್ರೋವಲ್‌ಗೆ ಯಾವುದೇ ಬಂದರೂ ಕಂಟ್ರೋಲ್ ತಮ್ಮಲ್ಲಿಯೇ ಇದೆ. ಲ್ಯಾಂಡ್‌ಗಳ ಬಗ್ಗೆ ಹೇಳುವುದಾದರೆ, ಬೆಂಗಳೂರಿನಲ್ಲಿ ಕೊಟ್ಟಿರುವಂತಹ ಸಂಘ–ಸಂಸ್ಥೆಗಳಾಗಿರಬಹುದು, ರಿಕ್ರಿಯೇಷನ್ ಕ್ಲಬ್‌ಗಳಾಗಿರಬಹುದು. ಇದು ಕಂದಾಯ ಇಲಾಖೆ, ಬಿ.ಬಿ.ಎಂ.ಪಿ., ಬಿ.ಡಿ.ಎ., ಮತ್ತು ಪಿ.ಡಬ್ಲ್ಯೂ.ಡಿ., ಗೆ ಸೇರಿದ್ದು. ಇದೆಲ್ಲ ಕೂಡವೂ ಸರ್ಕಾರಿ ಜಾಗವಾಗಿರುತ್ತದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸರ್ವೇ ಸಾಧರಣವಾಗಿ ಮುಂಚೆಲ್ಲಾ ಸೆಂಚೂರಿ ಕ್ಲಬ್, Bowring Club, ಬೆಂಗಳೂರು ಕ್ಲಬ್‌ಗಳನ್ನೆಲಾ 99 ವರ್ಷಕ್ಕೆ ಲೀಸ್ ಕೊಟ್ಟಿದ್ದಾರೆ. ಈಗ ಕ್ಲಬ್‌ಗಳನ್ನೆಲ್ಲಾ ಮೂವತ್ತು ವರ್ಷ ಲೀಸ್ ಕೊಡುವುದಕ್ಕೆ ಮಾಡಿದ್ದಾರೆ. ಬೆಂಗಳೂರು ಟರ್ಫ್ ಕ್ಲಬ್‌ನ್ನು ರಿಜಿಸ್ಟರ್ ಮಾಡಿ, ಕಂಟ್ರೋಲ್ ಮಾಡುವವರಿಗಿದ್ದರೂ ಕೂಡ ಯಾವ ಇಲಾಖೆಯೂ ಕೂಡ ...

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭಾ ಕ್ಷೇತ್ರ):–** ಇಲ್ಲ, it is not registered under any Act. ತಾವು ಬೆಂಗಳೂರು ಟರ್ಫ್ ಕ್ಲಬ್ ಬಗ್ಗೆ ಹೇಳಿದ್ದರಲ್ಲಾ, ಅದಕ್ಕೆ ಹೇಳಿದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಇಂತಹ ಕ್ಲಬ್ ಎಂದು ನಾನು ಹೇಳುತ್ತಿಲ್ಲ. ನಾನು ಪ್ರೋಸಿಜರ್ ಮಾತ್ರ ಹೇಳುತ್ತಿದ್ದೇನೆ. ಬೆಂಗಳೂರು ಟರ್ಫ್ ಕ್ಲಬ್‌ನ್ನು, ಗೃಹ ಇಲಾಖೆ, ಹಣಕಾಸು ಇಲಾಖೆ, ಕಂಟ್ರೋಲ್ ಮಾಡುತ್ತಾರೆ. ಹಣಕಾಸು ಇಲಾಖೆಯಲ್ಲಿರುವ ಪ್ರಧಾನ ಕಾರ್ಯದರ್ಶಿ ಅಥವಾ ಅಪರ ಕಾರ್ಯದರ್ಶಿ ಯಾರಿದ್ದಾರೋ, ಅಥವಾ ಅಲ್ಲಿಗೆ ಅವರ nominee ಯನ್ನು ಕೂಡ ನೇಮಕ ಮಾಡುತ್ತಾರೆ. ಅಲ್ಲಿಯ ಪೂರ್ಣ ಆಗು–ಹೋಗುಗಳ ಬಗ್ಗೆ ಮತ್ತು ಸದಸ್ಯತ್ವವನ್ನು ಯಾರಿಗೆ ಕೊಡಬೇಕು ಅಥವಾ ಯಾರಿಗೆ ಕೊಡಬಾರದು ಹಾಗೂ ಸರ್ಕಾರದ ಹಿತವನ್ನು ಕಾಪಾಡಬೇಕು. ತೆರಿಗೆಯೂ ಸಹ ಅವರಿಗೆ ಬರುತ್ತದೆ. ಅದನ್ನು ಸಹ ಅವರು ಕಾಪಾಡಬೇಕಾಗುತ್ತದೆ. ಅದೇ ರೀತಿ ಪಿಡಬ್ಲ್ಯೂಡಿ ಇಲಾಖೆಯಿಂದ ಬೆಂಗಳೂರು ಗಾಲ್ಫ್ ಕ್ಲಬ್ ಮತ್ತು ಮೈಸೂರಿನ ರೇಸ್ ಕ್ಲಬ್ ಇವೆರಡೂ ಕೂಡ ಲೋಕೋಪಯೋಗಿ ಇಲಾಖೆಯ ವಶದಲ್ಲಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ಗಾಲ್ಫ್ ಕ್ಲಬ್ ಅದು ಟೂರಿಸಂ ಡಿಪಾರ್ಟ್‌ಮೆಂಟಿಗೆ ಬರುತ್ತದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–**ಮಾನ್ಯ ಸದಸ್ಯರೇ ನಾನು ಹೇಳುತ್ತಿರುವುದು ಸರಿಯಿದೆ.

**ಶ್ರೀ ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ತಪ್ಪು ಇದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–**ನಾನು ಫೈಲ್ ನೋಡಿಕೊಂಡು ಹೇಳುತ್ತಿದ್ದೇನೆ.

**ಶ್ರೀ ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಈ ಸದನಕ್ಕೆ..

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮುಂಚಿತವಾಗಿ ಈ ವಿಷಯ ಮುಗಿಯಲಿ. ಇದು ತುಂಬಾ ಅಭಿವೃದ್ಧಿಯಾಗಿದೆ. ಇದರ ಬಗ್ಗೆ ಕೆಳಮನೆಯಲ್ಲಿ ಚರ್ಚೆಯಾಗಿ ಒಂದು ಕಮಿಟಿಯಾಯಿತು. ಆ ಕಮಿಟಿ ಕೊಟ್ಟಂತಹ ವರದಿಯ ಮೇಲೆ ಕ್ಯಾಬಿನೆಟ್‌ಗೆ ಹೋಗಿ ಅಪ್ರೂವಲ್ ಆಗುತ್ತದೆ. ಸಂಘ–ಸಂಸ್ಥೆಗಳು, ಕ್ಲಬ್‌ಗಳಿಂದ ಏನು ಆದಾಯ ಬರುತ್ತದೆಯೋ, ಅದನ್ನು ಪ್ರತಿ ವರ್ಷ ಹದಿನೈದರಿಂದ ಇಪ್ಪತ್ತು ಪರ್ಸೆಂಟ್ ಕಟ್ಟುತ್ತಾ ಹೋಗಬೇಕು. ಮೂವತ್ತು ವರ್ಷಗಳ ಮೇಲೆ ಲೀಸ್‌ಗೆ ಇರಬಾರದು. ಪ್ರತಿಯೊಂದು ಕ್ಲಬ್‌ಗಳಿಗೂ ಕೂಡ ಸರ್ಕಾರದ nominee ಇರಬೇಕು. ಆ ರೀತಿ ಬರೆದುಕೊಟ್ಟರೆ ಮಾತ್ರ ಅಪ್ರೂವಲ್ ಮಾಡಬೇಕು. ಅದರ ಲೀಸ್‌ನ್ನು ಮುಂದುವರೆಸಬೇಕೆಂದು ಹೇಳಿದೆ. ಇದು ಇಷ್ಟರ ಮಟ್ಟಿಗೆ ಈಗಾಗಲೇ ಇದೆ. ಪ್ರತಿಯೊಂದು ಕ್ಲಬ್‌ಗೂ ಸರ್ಕಾರದ ಲ್ಯಾಂಡ್‌ನ್ನು ಲೀಸ್ ಮಾಡಿದ್ದೇವೆ. ಸರ್ಕಾರದ ಇಲಾಖೆಯ ವತಿಯಿಂದ ಒಬ್ಬ nominee ಇರಬೇಕು. ಯಾರಿಗೆ ಸದಸ್ಯತ್ವವನ್ನು ಕೊಡಬೇಕು? ಇದಕ್ಕೆ ಸಂಬಂಧಪಟ್ಟಂತಹ ಪ್ರತಿನಿಧಿಯೂ ಕೂಡ ಇದರ ಹಿತವನ್ನು ಕಾಪಾಡಬೇಕು. ಇದರಲ್ಲಿ ಎಷ್ಟೊಂದು ಅಭಿವೃದ್ಧಿಯಾಗಿದೆ. ಇದರ ಮೇಲೆ ಸದನ ಸಮಿತಿ ಮಾಡುವುದು. ಎರಡೂ ಮನೆಗಳು ಸೇರಿ ಸದನ ಸಮಿತಿಗಳನ್ನು ಮಾಡುವುದರ ಬಗ್ಗೆ ಏನಾದರೂ ಇದ್ದರೆ ತೀರ್ಮಾನ ಕೈಗೊಳ್ಳಬೇಕು.

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಡ್ರೆಸ್ ಕೋಡ್‌ನ್ನು ಬೆಂಗಳೂರು ನಗರಕ್ಕೆ ಸೀಮಿತ ಮಾಡಬಾರದು. ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳಿಗೂ ಡ್ರೆಸ್ ಕೋಡ್ ಬಗ್ಗೆ ಬಹಳ ಅವಮಾನ ಮಾಡುತ್ತಿದ್ದಾರೆ. ಡ್ರೆಸ್ ಕೋಡ್‌ಗಳ ಬಗ್ಗೆ ಎಲ್ಲಾ ಕ್ಲಬ್‌ಗಳಿಗೂ ಏನೂ ತೀರ್ಮಾನ ತೆಗೆದುಕೊಳ್ಳುತ್ತೀರಾ? ಆ ತಿರ್ಮಾನ ಎಲ್ಲರಿಗೂ ಅನ್ವಯಿಸಬೇಕೆಂಬ ಬಗ್ಗೆ ನಾನು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ತಮ್ಮ ಮಖಾಂತರ ಒತ್ತಾಯ ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅಪ್ಪಾಜಿ ಗೌಡ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಕ್ಲಬ್ ಇದೆ. ಅಲ್ಲಿರುವ ಕ್ಲಬ್‌ಗಳಲ್ಲಿ ಬಹುತೇಕ ಐ.ಎ.ಎಸ್., ಐ.ಪಿ.ಎಸ್., ಮತ್ತು ಐ.ಎಫ್.ಎಸ್., ಅಧಿಕಾರಿಗಳು ಸದಸ್ಯರಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ತಿಪ್ಪೇಸ್ವಾಮಿಯವರು ಗಾಲ್ಫ್ ಕ್ಲಬ್‌ಗೆ ಸಂಬಂಧಪಟ್ಟಂತೆ ಸುಮಾರು 120 ಎಕರೆ ಜಾಗವನ್ನು ಟೂರಿಸಂ ಡಿಪಾರ್ಟ್‌ಮೆಂಟಿನಿಂದ ಕೊಟ್ಟಿದ್ದಾರೆಂದು ಅಧಿಕಾರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಗಾಲ್ಫ್ ಕ್ಲಬ್‌ಗೆ 120 ಎಕರೆ ಜಾಗವನ್ನು ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಿಂದ 120 ಎಕರೆ ಜಾಗವನ್ನು ಕೊಟ್ಟಿದಾರೆ. ಒಂದು ಕಡೆ 120 ಎಕರೆ ಜಾಗ ಎಂದು ಇನ್ನೊಂದು ಕಡೆ 124 ಎಕರೆ ಜಾಗ ಎಂದು ಹೇಳುತ್ತಾರೆ.

(ಮುಂದು)

(332)11.03.2020 6.20 ಟಿಸಿಹೆಚ್–ಜಿಆರ್
**ಶ್ರೀ ಎನ್.ಅಪ್ಪಾಜಿಗೌಡ (ಮುಂದು):**

ಒಂದೇ ವಾಕ್ಯದಲ್ಲಿ ಅಧಿಕಾರಿಗಳು ಕೊಟ್ಟಿರತಕ್ಕಂಥ ಉತ್ತರದಲ್ಲಿ ಒಂದು ಕಡೆ 120 ಇದೆ, ಇನ್ನೊಂದು ಕಡೆ 124 ಎಂದು ಹೇಳಿದ್ದಾರೆ. ಕೆಲವು ಇಲಾಖೆಗಳಿಗೆ ಆರ್ಥಿಕ ಇಲಾಖೆಯವರು, ಅಪರ ಮುಖ್ಯ ಕಾರ್ಯದರ್ಶಿಯವರು, ಗೃಹ ಇಲಾಖೆಯವರು, ಪಿಡಬ್ಲ್ಯೂಡಿ ಇಲಾಖೆಯ ಅಧಿಕಾರಿಗಳೇ ಅದರ ಉಸ್ತುವಾರಿಯನ್ನು ನಡೆಸುತ್ತಿದ್ದಾರೆಂದು ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಹೇಳಿದರು. ಈ ಕ್ಲಬ್‌ಗಳು ಯಾರ್‍ಯಾರ ಅಧೀನದಲ್ಲಿ ಬರುತ್ತವೆ, ಈ ಕ್ಲಬ್‌ಗಳಿಂದ ಬರತಕ್ಕಂಥ ಲಾಭವೇನು? ಅದಕ್ಕೆ ಎಷ್ಟು ವೆಚ್ಚವಾಗುತ್ತದೆ. ಈ ಕ್ಲಬ್‌ಗಳಿಗೆ ಸರಿಯಾದಂತಹ ಆಡಿಟ್ ಆಗುತ್ತಿದೆಯೇ? ನಾವು ಬೌರಿಂಗ್ ಕ್ಲಬ್ ಅನ್ನು ನೋಡಿದ್ದೇವೆ. ಆ ಕ್ಲಬ್‌ನಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ, ಮತ್ತೆ ಒಡೆಯುತ್ತಿದ್ದಾರೆ. ಆ ರೀತಿ ಮಾಡುವುದಕ್ಕೆ ಯಾರು ಕಾರಣಕರ್ತರು. ಅದನ್ನು ಕೆಡವಲು ಅಪ್ರೂವಲ್ ಇದೆಯೇ? ಮುಖ್ಯವಾಗಿ ಬೆಂಗಳೂರು ಗಾಲ್ಫ್ ಕ್ಲಬ್ ಬಗ್ಗೆ ಮತ್ತು ಬೆಂಗಳೂರು ಕ್ಲಬ್ ಬಗ್ಗೆ ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರು ಸಂಪೂರ್ಣವಾದ ಬೆಳಕು ಚೆಲ್ಲಬೇಕು ಎಂದು ಕೇಳಿಕೊಳ್ಳುತ್ತೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಡಾ॥ವೈ.ಎ.ನಾರಾಯಣಸ್ವಾಮಿಯವರೇ, ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಮಾತನಾಡುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪಿ.ಎ.ಸಿ ಸಮಿತಿಯಲ್ಲಿ ನಾನು ಒಬ್ಬ ಸದಸ್ಯನಾಗಿ ಕೆಲಸ ಮಾಡುತ್ತಿದ್ದೇನೆ. ಮಾನ್ಯ ಹೆಚ್.ಕೆ.ಪಾಟೀಲ್‌ರವರ ನೇತೃತ್ವದಲ್ಲಿ ಇವೆಲ್ಲಾ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕ್ಲಬ್‌ಗಳ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು, ಈಗಾಗಲೇ ಅದರ ಬಗ್ಗೆ ಚರ್ಚೆ ಮಾಡಿದ್ದೇವೆ. ಪಿ.ಎ.ಸಿ., ಸಮಿತಿಯು ಬೆಂಗಳೂರು ಟರ್ಫ್ ಕ್ಲಬ್ ಅನ್ನು ಕ್ಲೋಸ್ ಮಾಡಬೇಕೆಂದು ನೋಟಿಸ್ ಕೂಡ ಜಾರಿ ಮಾಡಿತ್ತು. ಆ ಟರ್ಫ್ ಕ್ಲಬ್‌ನವರ ಲೀಸ್ ಅವಧಿ ಕೂಡ ಮುಗಿದಿದೆ. ಮುಖ್ಯವಾಗಿ ಎಲ್ಲಾ ಕ್ಲಬ್‌ಗಳು ಯಾವಾಗ ಅವರ 30 ವರ್ಷಗಳ ಲೀಸ್ ಅವಧಿ ಮುಕ್ತಾಯವಾಗುತ್ತಿದ್ದಂತೆ ಕೋರ್ಟ್‌ಗೆ ಹೋಗಿ ಪ್ರಕರಣ ದಾಖಲಿಸಿಬಿಡುತ್ತಾರೆ. ಆಗ ಅದನ್ನು ಕ್ಲೋಸ್ ಮಾಡಿಸುವುದಕ್ಕೆ ಆಗುವುದಿಲ್ಲ. ಹೈಕೋರ್ಟ್ ಕೂಡ ಬೆಂಗಳೂರು ಟರ್ಫ್ ಕ್ಲಬ್‌ನ ಪ್ರಕರಣದಲ್ಲಿ ಸರ್ಕಾರದ ಪರವಾಗಿ ತೀರ್ಪು ನೀಡಿದೆ. ಅದಾದ ನಂತರ, ಅವರು ಆ ತೀರ್ಪಿನ ವಿರುದ್ಧ ಮತ್ತೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದರು. ಪ್ರಕರಣ ಸುಪ್ರೀಂಕೋರ್ಟ್‌ಗೆ ಹೋದ ನಂತರ, ಸರ್ಕಾರದ ಪರವಾಗಿ ಕಾನೂನು ಇಲಾಖೆಯ ಅಡ್ವೊಕೇಟ್ ಜನರಲ್‌ರವರು, "The club may be continued until disposal of the case". ಅಡ್ವೊಕೇಟ್ ಜನರಲ್‌ರವರು ಅಫಿಡವಿಟ್ ಸಲ್ಲಿಸಿದರು. ಅವರು ವಾದ ಮಾಡುವಾಗ ಆ ಪ್ರಕರಣ ಮುಕ್ತಾಯವಾಗುವವರೆಗೆ ಆ ಕ್ಲಬ್ ಮುಂದುವರೆಯಲಿ ಎಂದು ಮಾಡಿದರು. ಹೌದಲ್ಲವೇ, ಡಾ॥ವೈ.ಎ.ನಾರಾಯಣಸ್ವಾಮಿಯವರೇ?

**ಡಾ॥ ವೈ.ಎ.ನಾರಾಯಣಸ್ವಾಮಿ:–** ಹೌದು. ಗೌರವಾನ್ವಿತ ಸುಪ್ರೀಂ ಕೋರ್ಟ್‌ಗೆ ಅಡ್ವೊಕೇಟ್ ಜನರಲ್‌ರವರು ಅಫಿಡವಿಟ್ ಸಲ್ಲಿಸಿದರು.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಅಂದರೆ, ಸರ್ಕಾರದ ಪರವಾಗಿ ವಕಾಲತ್ತು ವಹಿಸತಕ್ಕಂಥವರೇ ಅಫಿಡವಿಟ್ ಸಲ್ಲಿಸಿದ್ದಾರೆ. ಈ ರೀತಿ ಆಗಿದ್ದು, ಆ ಪ್ರಕರಣವು ಸದ್ಯಕ್ಕೆ ಇತ್ಯರ್ಥವಾಗುವುದಿಲ್ಲ. ಕ್ಲಬ್‌ನವರು ಮಜಾ ಮಾಡಿಕೊಂಡು ತಿರುಗಾಡುತ್ತಿದ್ದಾರೆ. ಬಹುಶಃ ಎಲ್ಲಾ ಕ್ಲಬ್‌ಗಳು ಇದೇ ರೀತಿ ಇವೆ ಎನಿಸುತ್ತಿದೆ. 1956 ರಿಂದ 99 ವರ್ಷಗಳಿಗೆ ಕೇವಲ 30 ರೂಪಾಯಿಗಳಿಗೆ ಲೀಸ್‌ಗೆ ಕೊಟ್ಟಿದ್ದಾರೆ. ಇಂತಹ ಕ್ಲಬ್‌ಗಳು ಸಾಕಷ್ಟಿವೆ. ಇಷ್ಟು ವರ್ಷಗಳ ನಂತರ ಲೀಸ್‌ಗೆ ಕೊಟ್ಟಿರತಕ್ಕಂಥದ್ದನ್ನು ದರ ಬದಲಾವಣೆ ಮಾಡಲು ಏನಾದರು ಕಾನೂನು ರೂಪಿಸಬೇಕಲ್ಲವೇ? ನಾವು ಬೆಂಗಳೂರಿನಲ್ಲಿ ಒಂದು ಮನೆಯನ್ನು ಬಾಡಿಗೆ ತೆಗೆದುಕೊಂಡಾಗ ಹನ್ನೊಂದು ತಿಂಗಳ ಬಾಡಿಗೆಯನ್ನು ತೆಗೆದುಕೊಳ್ಳುತ್ತಾರೆ. ಒಂದುವೇಳೆ, ಆ ಬಾಡಿಗೆದಾರ ಮಾಲೀಕನ ಅನುಮತಿ ಮೇರೆಗೆ ಇನ್ನೊಂದು ವರ್ಷದ ಅವಧಿಗೆ ಮುಂದುವರೆಯಲು ಇಚ್ಛಿಸಿದರೆ ಪ್ರತಿ ವರ್ಷ ಶೇ.10ರಷ್ಟು ಹೆಚ್ಚಿಗೆ ಬಾಡಿಗೆ ಕೊಟ್ಟು ಆ ಮನೆಯಲ್ಲಿಯೇ ಮುಂದುವರೆಯುತ್ತೇನೆ ಎಂದು ಪತ್ರದ ಮುಖೇನ ಬರೆಸಿಕೊಂಡಿರುತ್ತಾರೆ. ಸರ್ಕಾರ ಆ ಕ್ಲಬ್‌ಗಳಿಗೆ ಇಲ್ಲಿಯವರೆಗೂ ಲೀಸ್‌ಗೆ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಜಮೀನಿನ ರೇಟ್ ಕೇಳಿದರೆ ಭಯವಾಗುತ್ತದೆ. ನಾವು ಯಾವುದಾದರು ಜಾಗವನ್ನು ಖರೀದಿಸಲು ಹೋದರೆ, ಬಿ.ಡಿ.ಎ., ನಿವೇಶನವೇ ಇಷ್ಟು ರೇಟ್ ಇದೆಯೆಂದು ಕಚೇರಿಯಲ್ಲಿ ಹೇಳುತ್ತಾರೆ. ಈ ರೀತಿ ಇರುವಾಗ, ಸರ್ಕಾರ ಇಂತಹ ಕ್ಲಬ್‌ಗಳಿಗೆ ರೇಟ್ ಹೆಚ್ಚಿಗೆ ಮಾಡಬೇಕಲ್ಲವೇ? ಲೀಸ್‌ಗೆ ಕೊಡುವಾಗ guidance value ಎಷ್ಟಿದೆಯೆಂದು ನೋಡಿ ಕೊಡುವುದಕ್ಕೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗುವುದಿಲ್ಲವೇ? ಮುಖ್ಯವಾಗಿ ನಾಳಿನ ಪ್ರಶ್ನೋತ್ತರದಲ್ಲಿ ರಾಯಚೂರು ಕ್ಲಬ್ ವಿಷಯ ಇದೆ. ಮೊದಲನೇ ಪ್ರಶ್ನೆಯೇ ನನ್ನದು ಇದೆ, ಆಗ ಮಾತನಾಡುತ್ತೇನೆ. ನಾನು ಗೃಹ ಸಚಿವರಿಂದ ಉತ್ತರ ಕೇಳಿದ್ದೇನೆ. ಅದು ಗೃಹ ಸಚಿವರ ವ್ಯಾಪ್ತಿಗೆ ಬರುತ್ತದೊ ಅಥವಾ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್‌ರವರಿಗೆ ಬರುತ್ತದೋ ಗೊತ್ತಿಲ್ಲ. ಏಕೆಂದರೆ, ಆ ರಾಯಚೂರು ಕ್ಲಬ್‌ನಲ್ಲಿ ಲಕ್ಷಾಂತರ ರೂಪಾಯಿಗಳು ಲೂಟಿ ಆಗುತ್ತಿದೆ. ನಾಳೆ ಬೆಳಗ್ಗೆ ನನ್ನದು ಮೊದಲನೇ ಪ್ರಶ್ನೆ ಇದೆ, ಆಗ ಮಾತನಾಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮೊದಲ ಬಾರಿ ಶಾಸಕನಾದಾಗ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಶಾಸಕರ ಕ್ಲಬ್ ಮಾಡುತ್ತೇವೆಂದು ನಮ್ಮೆಲ್ಲಾ ಸದಸ್ಯರಿಂದ ಸದಸತ್ವ ಪಡೆದುಕೊಂಡರು. ಅದು ಏಕೆ ಇನ್ನೂ ಮಾಡಲಿಲ್ಲ. ನನ್ನ ಪ್ರಶ್ನೆ ಏನೆಂದರೆ, ಶನಿವಾರ ಮತ್ತು ಭಾನುವಾರ ಬಂದರೆ, ಶಾಸಕರ ಭವನದಲ್ಲಿ ಊಟಕ್ಕೂ ಕೂಡ ನಾವು ಪರದಾಡುವಂತಹ ಪರಿಸ್ಥಿತಿ ಇದೆ. ಆ ದಿನಗಳಂದು ಯಾವ ಹೋಟೆಲ್‌ಗಳು ಕೂಡ ಬಾಗಿಲು ತೆಗೆದಿರುವುದಿಲ್ಲ. ಶಾಸಕರ ಭವನದ ಹತ್ತಿರವೇ ಬೆಂಗಳೂರು ಗಾಲ್ಫ್ ಕ್ಲಬ್ ಇದೆ. ಮಾನ್ಯ ಸಚಿವರೇ, ಅದು ಸುಮಾರು 124 ಎಕರೆ ವಿಸ್ತೀರ್ಣವನ್ನು ಹೊಂದಿದೆಯೆಂದು ಹೇಳುತ್ತಿದ್ದೀರಿ. ಅದರಲ್ಲಿ 100 ಎಕರೆ ಅವರಿಗೆ ಕೊಟ್ಟು, ಉಳಿದ 24 ಎಕರೆಯನ್ನು ಶಾಸಕರ ಕ್ಲಬ್‌ಗೆ ತೆಗೆದುಕೊಳ್ಳಬಹುದು. ಆಯಿತು, ಈ ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ 60 ಎಕರೆ 15 ಗುಂಟೆ ಜಮೀನು ಇದೆ. ಅವರು ವರ್ಷಕ್ಕೆ ಬರೀ 10,000/- ರೂಪಾಯಿಗಳನ್ನು ಪಾವತಿಸುತ್ತಿದ್ದಾರೆ. ಅಂದರೆ ತಿಂಗಳಿಗೆ 850 ರೂಪಾಯಿಗಳನ್ನು ಪಾವತಿಸುತ್ತಿದ್ದಾರೆ. ಈಗ ಕೊಟ್ಟಿರತಕ್ಕಂಥದ್ದರಲ್ಲಿ ಅರ್ಧದಷ್ಟು ಜಾಗವನ್ನು ಶಾಸಕರ ಕ್ಲಬ್‌ಗೆ ಕೊಟ್ಟುಬಿಡಿ, ನಾವು ಯಾರಿಗೂ ನಮಸ್ಕಾರ ಹಾಕುವುದು ಬೇಡ.

**(ಸದನದಲ್ಲಿ ನಗು)**

ಏಕೆಂದರೆ, ಬೆಂಗಳೂರು ಗಾಲ್ಫ್ ಕ್ಲಬ್ ನಮ್ಮ ಶಾಸಕರ ಭವನದ ಪಕ್ಕದಲ್ಲೇ ಇದೆ. ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್‌ಗೆ ಸರ್ಕಾರ ಲೀಸ್‌ಗೆ ಕೊಟ್ಟಿದೆ. ಈ ರೀತಿ ಎಲ್ಲರಿಗೂ ಕ್ಲಬ್‌ಗೆ ಜಾಗ ಕೊಟ್ಟಿದೆ. ಶಾಸಕರುಗಳಾದ ನಾವು ನಮ್ಮ ಆರೋಗ್ಯ ನೋಡಿಕೊಳ್ಳಬೇಡವೇ? ನಾವೇನು ಷಟಲ್ ಕಾಕ್ ಆಡಬಾರದೇ, ನಾವೇನು ಅದರಲ್ಲಿ ವಾಕಿಂಗ್ ಮಾಡಬಾರದೇ? ನಾವೂ ಕೂಡ ಮನುಷ್ಯರಲ್ಲವೇ? ನಾವು ಬೆಳಗ್ಗೆ 11 ಗಂಟೆಯಿಂದ ರಾತ್ರಿ 7 ಗಂಟೆಯವರೆಗೂ ಈ ಸದನದಲ್ಲಿ ಕುಳಿತುಕೊಂಡಿರುತ್ತೇವೆ. ನಮ್ಮನ್ನು ಪ್ರೀತಿಸಬೇಕು, ನಾವು ನಮ್ಮ ದೇಹವನ್ನು ದಂಡಿಸಿಕೊಳ್ಳಬೇಕಲ್ಲವೇ? ನಮ್ಮಿಂದ ಸದಸ್ಯತ್ವ ಶುಲ್ಕವನ್ನು ಪಡೆದುಕೊಂಡು ಸುಮಾರು 12 ವರ್ಷವಾಯಿತು. ನಾವು ಯಾರಿಗೂ ನಮಸ್ಕಾರ ಹಾಕುವುದು ಬೇಡ. ಮಾನ್ಯ ಶಾಸಕರ ಕ್ಲಬ್‌ಗೆ ನಮ್ಮಿಂದ ಹಣವನ್ನು ತೆಗೆದುಕೊಂಡಿದ್ದಾರೆ. ಅದು ಸರ್ಕಾರದ ಜಮೀನು ಆಗಿದ್ದು, ಅವರಿಗೂ ಅರ್ಧ ಜಮೀನನ್ನು ಕೊಡಿ, ನಮ್ಮ ಶಾಸಕರ ಕ್ಲಬ್‌ಗೂ ಅರ್ಧ ಜಮೀನನ್ನು ಕೊಡಿ. ಏಕೆಂದರೆ, ಆ ಜಾಗ ನಮ್ಮ ಶಾಸಕರ ಭವನದ ಪಕ್ಕದಲ್ಲಿಯೇ ಇದ್ದು 60 ಎಕರೆ 15 ಗುಂಟೆ ವಿಸ್ತೀರ್ಣವನ್ನು ಹೊಂದಿದ್ದು, ಬಹಳ ವಿಶಾಲವಾಗಿದೆ. ನಾವು ಯಾರಿಗೂ ನಮಸ್ಕಾರ ಹಾಕುವುದು ಬೇಡ. ನಾವು ಯಾರ ಹತ್ತಿರವೂ ಗೋಗರಿಯುವುದು ಬೇಡ. ಶಾಸಕರ ಭವನ ಕ್ಲಬ್ ಇದ್ದರೆ, ನಮ್ಮ ಕುಟುಂಬಗಳು ಕೂಡ ಬಂದು ಹೋಗಬಹುದು. ನಾನು ಏಕೆ ಈ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾತನ್ನು ಹೇಳುತ್ತಿದ್ದೇನೆಂದರೆ, ಯಾರ್‍ಯಾರಿಗೋ ಒಂದು ಕ್ಲಬ್ ಇದೆ. ಆದರೆ ನಮಗೆ ಮಾತ್ರ ಕ್ಲಬ್ ಇಲ್ಲ. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೆ, ಕ್ಲಬ್‌ನಲ್ಲಿ ಬರೀ ಇಸ್ಪೀಟ್ ಆಡುವುದಲ್ಲಾ, ನಮಗೆ ಇಸ್ಪೀಟ್ ಕೂಡ ಆಡುವುದಕ್ಕೆ ಬರುವುದಿಲ್ಲ. ನೀವು ನಮ್ಮ ಹಣೆಬರಹವನ್ನು ಏಕೆ ಕಳೆಯುತ್ತೀರಿ? No. ಕ್ಲಬ್ ಎಂದರೆ, ಅದು ಎಲ್ಲಾ ದೃಷ್ಟಿಯಲ್ಲಿ ವಾಕಿಂಗ್ ಕೂಡ ಆಗಬೇಕು. ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಅನುಕೂಲಕರವಾಗಿರುತ್ತದೆ. ಕ್ಲಬ್ ನಿರ್ಮಾಣವಾದರೆ ಊಟ ಕೂಡ ದೊರೆಯುತ್ತದೆ. ನೀವು ಶಾಸಕರ ಭವನದಲ್ಲಿ ಶನಿವಾರ ಮತ್ತು ಭಾನುವಾರ ಊಟ ಕೊಡಿಸಿಬಿಡಿ. ಅಲ್ಲಿ ಊಟ ಕೂಡ ಸಿಗುವುದಿಲ್ಲ. ಬೆಂಗಳೂರು ಗಾಲ್ಫ್ ಕ್ಲಬ್ ಕೂಗಳತೆ ದೂರಲ್ಲಿದೆ. ಅದು ಸರ್ಕಾರಿ ಜಾಗ. ಅವರಿಗೂ ಕೊಡಿ. 60 ಎಕರೆ 15 ಗುಂಟೆ ಜಾಗವನ್ನು ತಿಂಗಳಿಗೆ ಬರೀ 850 ರೂಪಾಯಿಗಳಿಗೆ ಕೊಟ್ಟಿದ್ದೀರಲ್ಲಾ, ನಿಮಗೆ ಏನು ಧೈರ್ಯ ಹೇಳ್ರಪ್ಪಾ. ನಾವು ಯಾರಿಗೂ ನಮಸ್ಕಾರ ಹಾಕುವುದು ಬೇಡ. ಅರ್ಧ ಶಾಸಕರ ಕ್ಲಬ್‌ಗೆ ಜಾಗ ಕೊಡಿ. ಕ್ಲಬ್ ಪ್ರಾರಂಭ ಮಾಡಿ. ಅದಕ್ಕೆ ಒಂದು ಸದನ ಸಮಿತಿ ಕೂಡ ರಚನೆಯಾಗಿತ್ತು, ಅದು ಹಳೆಯ ಸಮಿತಿ ಏನಾಯಿತೊ ಗೊತ್ತಿಲ್ಲ. ಹಾಗಾಗಿ, ಶಾಸಕರ ಕ್ಲಬ್‌ಗೆ ಹೊಸದಾಗಿ ಒಂದು ಸದನ ಸಮಿತಿ ರಚನೆ ಮಾಡಿ. ಅವರನ್ನೆಲ್ಲಾ ನಿಯಂತ್ರಣಕ್ಕೆ ತಂದು, streameline ಗೆ ತೆಗೆದುಕೊಂಡು ಬನ್ನಿ. ಆದ್ದರಿಂದ ಮಾನ್ಯ ಸಭಾಪತಿಯವರೇ, ತಾವು ದಯಮಾಡಿ ಕೂಡಲೇ ಶಾಸಕರ ಕ್ಲಬ್ ಅನ್ನು ತಮ್ಮ ಜವಾಬ್ದಾರಿಯಲ್ಲಿ ಮಾಡಿಸಬೇಕು. ನಮಸ್ಕಾರ.

**ಸಭಾಪತಿಯವರು:–** ಡಾ||ವೈ.ಎ.ನಾರಾಯಣಸ್ವಾಮಿಯವರೇ, ತಾವು ಬೇಗ ಮಾತನಾಡಿ ಮುಗಿಸಿ.

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ಗಾಲ್ಫ್ ಕ್ಲಬ್ ಬಗ್ಗೆ ಪ್ರಸ್ತಾಪವಾಯಿತು. ನಾನು ಬೆಂಗಳೂರು ಗಾಲ್ಫ್ ಕ್ಲಬ್‌ಗೆ ಪಿ.ಎ.ಸಿ., ಯಿಂದ ಹೋಗಿದ್ದೆನು. ಅವರು 1995–2015ರ ವರೆಗೆ ಸುಮಾರು 20 ವರ್ಷಗಳ Statement of Accounts ನ್ನು ಕೊಡುತ್ತೇನೆಂದು ಹೇಳಿದ್ದರು, ಆದರೆ, ಕೊಡಲಿಲ್ಲ. ಅಧ್ಯಕ್ಷರಾದಿಯಾಗಿ ನಾವೆಲ್ಲರೂ ಅಲ್ಲಿಗೆ ಭೇಟಿ ಕೊಟ್ಟಿದ್ದೆವು. ಆ ಸಮಿತಿಯಲ್ಲಿ ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹಾಗೂ ಮಾನ್ಯ ಎಸ್.ಆರ್.ಪಾಟೀಲ್‌ರವರು ಕೂಡ ಇದ್ದರು. ಆ ಗಾಲ್ಫ್ ಕ್ಲಬ್‌ನವರು ಪಿಡಬ್ಲ್ಯೂಡಿಯವರ ಅನುಮತಿ ಪಡೆದುಕೊಳ್ಳದೆಯೇ ಕಟ್ಟಡವನ್ನು ಕಟ್ಟಿದ್ದಾರೆ. ಅವರು ಯಾವುದಕ್ಕೂ ಲಕ್ಷ್ಯ ಕೊಡುತ್ತಿಲ್ಲ. ಸರ್ಕಾರ ಅವರಿಗೆ ಪ್ಲಾನ್ ಅಪ್ರೂವಲ್ ಕೂಡ ಕೊಟ್ಟಿಲ್ಲ. ಇದು ಏನನ್ನು ತೋರಿಸುತ್ತದೆಂದರೆ, ಆ ಕಾಲಘಟ್ಟದಲ್ಲಿ ಬಂದವರು ಸರ್ಕಾರದ ಜೊತೆ ಶಾಮೀಲಾಗಿ ಅವರಿಗೆ ಇಷ್ಟ ಬಂದಂತೆ ಕೆಲಸ ಮಾಡಿಕೊಂಡು ಹೋಗತಕ್ಕಂಥ ಮಟ್ಟಕ್ಕೆ ಬಂದಿದ್ದಾರೆ. ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ. ಅವರು ನಮ್ಮ ಸರ್ಕಾರದ ಜೊತೆ ಕೂಡ ಕೈಜೋಡಿಸಿ ಮುಂದಕ್ಕೆ ಹೋಗುತ್ತಾರೆ. ಇದು ಭಾರಿ ದುರಂತ. ಅವರಿಗೆ ಕೊಟ್ಟಿರತಕ್ಕಂಥದ್ದು ಸರ್ಕಾರದ ಜಮೀನು. ಈ ರಾಜ್ಯದ ಕಾನೂನು ಆ ಕ್ಲಬ್‌ಗೂ ಕೂಡ ಅಪ್ಲೈ ಆಗಬೇಕು. ಇನ್ನು ಎರಡನೆಯದಾಗಿ, ಇತ್ತೀಚೆಗೆ ಟರ್ಫ್ ಕ್ಲಬ್ ಸರ್ಕಾರಕ್ಕೆ 100 ಕೋಟಿ ರೂಪಾಯಿಗಳು ಕಟ್ಟಬೇಕು. ಈ ರಾಜ್ಯದ ಅಡ್ವೊಕೇಟ್ ಜನರಲ್‌ರವರು ದೆಹಲಿಯಲ್ಲಿ ಈ ಪ್ರಕರಣದ ಸಂಬಂಧ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಫೈಲ್ ಮಾಡಿದ್ದಾರೆ. ಗೌರವಾನ್ವಿತ ಸುಪ್ರೀಂ ಕೋರ್ಟ್‌ನಲ್ಲಿ ಎಸ್.ಎಲ್.ಪಿ., ಇತ್ಯರ್ಥವಾಗುವತನಕ ನೀವು ಬಾಕಿ ವಸೂಲಿಗೆ ಮುಂದಾಗಬಾರದೆಂದು ಹೇಳಿದ್ದಾರೆ. ಅಂದರೆ, ಗೌರವಾನ್ವಿತ ಸುಪ್ರೀಂ ಕೋರ್ಟ್ ನಿರ್ದೇಶನವಿಲ್ಲದೇ, ಅವರೇನು ಬಾಕಿ ವಸೂಲಿ ಮಾಡಬೇಡಿ ಎಂದು ಹೇಳಲಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, Advocate General has given an undertaking.

**ಡಾ||ವೈ.ಎ.ನಾರಾಯಣಸ್ವಾಮಿ:– ಮಾನ್ಯ ಸಭಾಪತಿಯವರೇ,** yes, he has given an undertaking suo moto, without the direction of anybody. ಏನಿದು ನನಗಂತೂ ಅರ್ಥವಾಗುತ್ತಿಲ್ಲ. ಸರ್ಕಾರಕ್ಕೆ ದುಡ್ಡನ್ನು ಕೂಡ ಕಟ್ಟುತ್ತಿಲ್ಲ, ಅವರಿಗೆ ಬಾಡಿಗೆಯನ್ನು ಕೂಡ ಹೆಚ್ಚಿಗೆ ಮಾಡಬಾರದು. ಸರ್ಕಾರ, ಅವರು ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶಗಳನ್ನು ಕೊಡಬಾರದು. ಆಮೇಲೆ ಅವರು ಸರ್ಕಾರಕ್ಕಿಂತ ದೊಡ್ಡವರು. ಆ ಬೆಂಗಳೂರು ಟರ್ಫ್ ಕ್ಲಬ್‌ನವರು ಸಮಿತಿ ಕೇಳಿದಂತಹ ಮಾಹಿತಿಯನ್ನು ಕೊಡುವುದಿಲ್ಲ. ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು 'license renewal authority is the Finance Department' ಎಂದು ಹೇಳುತ್ತಿದ್ದರು. ಸಮಿತಿಯವರು ನೀವು ಸಾಯಂಕಾಲದ ಹೊತ್ತಿಗೆ ಹೇಳಬೇಕೆಂದು ಆದೇಶ ಕೊಟ್ಟು, ಆ ಕ್ಲಬ್ ರಿನ್ಯೂವಲ್ ಕೂಡ ಮಾಡಬಾರದೆಂದು ಹೇಳಲಾಗಿತ್ತು. ಅದನ್ನೆಲ್ಲಾ ಕೊಡುವುದಕ್ಕೆ ಅವರು ಎರಡು ವಾರ ಸಮಯ ತೆಗೆದುಕೊಂಡಿದ್ದರು, ಸಮಿತಿಗೆ ಉತ್ತರವನ್ನು ಕೊಡಲೇ ಇಲ್ಲ. ಅದಕ್ಕೋಸ್ಕರ ಇದು ಬಹಳ ಕರ್ಮಕಾಂಡವಾಗಿಬಿಟ್ಟಿದೆ. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರದಿಂದ ಈ ಕ್ಲಬ್‌ಗಳಲ್ಲಿ ಕ್ರೀಡಾ ಚಟುವಟಿಕೆಗಳನ್ನು ನಡೆಸುವುದಕ್ಕೆ ಯಾವುದೇ ಅಭ್ಯಂತರವಿಲ್ಲ. ಆದರೆ, ಇದನ್ನು ಆಧಾರವಾಗಿಟ್ಟುಕೊಂಡು ಅವರು ವ್ಯಾಪಾರ ಮಾಡಿಕೊಂಡು ಅವರು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ನಾನು ಮಾನ್ಯ ಸಹಕಾರ ಸಚಿವರಿಗೆ ಮನವಿ ಮಾಡುವುದೇನೆಂದರೆ, ವಿಧಾನ ಪರಿಷತ್ತಿನಿಂದಲೇ ಒಂದು ಸದನ ಸಮಿತಿಯನ್ನು ರಚನೆ ಮಾಡಿ. ನಾವು ಎಲ್ಲಾ ಕ್ಲಬ್‌ಗಳಿಗೂ ಭೇಟಿ ಕೊಟ್ಟು, ವಿಸ್ತೃತವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತೇವೆ. ಅದಕ್ಕಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಆಗ್ರಹ ಮಾಡುತ್ತಿದ್ದೇನೆ. ಸಭಾನಾಯಕರು ಕೂಡ ಇದರಲ್ಲಿ ಕೈಜೋಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ಶ್ರೀ ಹೆಚ್.ಎಂ.ರೇವಣ್ಣನವರೇ ತಾವು ಮಾತನಾಡಿ. ತಾವೇ ಪ್ರಶ್ನೆ ಕೇಳಿದ್ದೀರಿ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಸವಿಸ್ತಾರವಾಗಿ ಚರ್ಚೆಯಾಗಿರತಕ್ಕಂಥದ್ದು ನನಗೂ ಕೂಡ ಸಂತೋಷವಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಮುಂದು)

(333)11.3.2020/6.30/ಎಂ.ಎಂ–ಎಂ.ಡಿ

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ಈಗಾಗಲೇ ಬಹಳ ಸವಿಸ್ತಾರವಾಗಿ ನಮ್ಮ ಹಿರಿಯ ಸದಸ್ಯರುಗಳು ಹೇಳಿದ್ದಾರೆ. ಕೂಡಲೇ ನೀವು ನೋಟಿಸ್ ಕೊಡುವುದಕ್ಕೆ ಹೋಗಬೇಡಿ ಕೊಟ್ಟರೆ ಅದು ಕೂಡ ಸ್ಟೇ ಆಗುತ್ತದೆ ಇದು ಮೊದಲನೆಯದು. ಎರಡನೆಯದಾಗಿ ಮೊದಲು ನೀವು ಮಾನ್ಯ ವೈ.ಎ. ನಾರಾಯಣಸ್ವಾಮಿಯವರು, ಮಾನ್ಯ ಹೆಚ್.ಎಂ. ರೇವಣ್ಣನವರು, ಮಾನ್ಯ ಕೆ. ಗೋವಿಂದರಾಜುರವರು, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮತ್ತು ಮಾನ್ಯ ಕೆ.ಟಿ. ಶ್ರೀಕಂಠೇಗೌಡರು ಹೇಳಿದ ಹಾಗೆ ಮೊದಲು ಸದನ ಸಮಿತಿಯನ್ನು ಮಾಡಿ. Parallel ಆಗಿ ಒಂದು ತನಿಖಾ ತಂಡವನ್ನು ಕಳುಹಿಸಿ ಷರತ್ತುಗಳ ಉಲ್ಲಂಘನೆ ಬಹಳ ಆಗಿದೆ. ಭರವಸೆಗಳ ಸಮಿತಿಯಲ್ಲಿ ನಾವು ನೋಡಿದ್ದೇವೆ. ಏಕೆಂದರೆ, ಇಲ್ಲಿ ಏಷ್ಟೆಲ್ಲಾ ಉಲ್ಲಂಘನೆ ಮಾಡಿದ್ದಾರೆ ಎಂದರೆ ಒಂದು Societies Registration Act ಉಲ್ಲಂಘನೆಯಾಗಿದೆ, ಎರಡನೆಯದು Karnataka Excise Act ಉಲ್ಲಂಘನೆಯಾಗಿದೆ, ಮೂರನೆಯದು Karnataka Land Grant Rules, 1969 ಉಲ್ಲಂಘನೆಯಾಗಿದೆ, ನಾಲ್ಕನೆಯದು ತೆರಿಗೆಯನ್ನು ಕಟ್ಟಿಲ್ಲ, ಐದರಿಂದ ಆರುಸಾವಿರ ಕೋಟಿ ರಾಜ್ಯದ ಎಲ್ಲಾ ಕ್ಲಬ್‌ಗಳಿಂದ ತೆರಿಗೆ ಬಾಕಿ ಬರಬೇಕಾಗಿದೆ. ನಿಮ್ಮ ಇಲಾಖೆಗೆ ಇರತಕ್ಕಂತಹ ಹಣನೂ ಕಡಿಮೆ ಇದೆ ಎಂದು ನಾನು ಭಾವಿಸುತ್ತೇನೆ. ನೀವು ಕೂಡ enthusiastic ಆಗಿ ಮಂತ್ರಿಯಾಗಿ ಕೆಲಸ ಮಾಡಬೇಕೆಂದು ಹೋಗಿದ್ದೀರಿ, ನಮ್ಮ ಜೊತೆಯಲ್ಲಿದ್ದವರು ಎಂದು ಅದಕ್ಕಾಗಿ ಹೇಳುತ್ತಿದ್ದೇನೆ. ನನ್ನ ಸಲಹೆ ಇಷ್ಟೇ, ಸಾಕಷ್ಟು ಹಣ legally ಬರುತ್ತದೆ, ನೀವು ತನಿಖೆ ಮಾಡಿ ಅದರ ವರದಿಯನ್ನು ತೆಗೆದುಕೊಳ್ಳಿ. ಏಕಾಏಕಿ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ they are very power full ಎಂದು ಈಗಾಗಲೇ ಎಲ್ಲ ಸದಸ್ಯರುಗಳು ಹೇಳಿದ್ದಾರೆ. ಸುಪ್ರೀಂಕೋರ್ಟ್‌ನಲ್ಲಿ ಈ ವಿಚಾರ ಇರಬಹುದು ಕಾರಣವೇನೆಂದರೆ, ಬೆಳಿಗ್ಗೆ ಮಾನ್ಯ ಸದಸ್ಯರಾದ ಡಾ:ತೇಜಸ್ವಿನಿ ಗೌಡರವರು ಸಂವಿಧಾನದ ಬಗ್ಗೆ ಮಾತನಾಡುವಾಗ ಹೇಳಿದರು. Why the Courts are interfering with the orders passed by the Executive ಎಂದರೆ, Officers are failing to exercise their powers according to the Rules and Regulations enumerated under the law. ಅದಕ್ಕೋಸ್ಕರ ಇದು ಆಗುತ್ತಿದೆ, ತನಿಖೆಯನ್ನು ಮಾಡಿ, ಸದನ ಸಮಿತಿಯನ್ನು ಮಾಡಿ violation of conditions ಮೇಲೆ automatically licence ಅನ್ನು ರದ್ದು ಮಾಡಿದಿರಿ. ಮಾನ್ಯ ಕೆ. ಗೋವಿಂದರಾಜುರವರು ಹೇಳಿದಂತೆ lodging ಕಟ್ಟುತ್ತಾರೆ, ಏಕೆ ಅಲ್ಲಿ violation of conditions ಇದೆಯೇ?

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಯಮದಲ್ಲಿ ಕಟ್ಟಬೇಕೆಂದು ಇಲ್ಲ. Recreation Club ಅಂದರೆ, recreation ಗೆ ಮಾತ್ರ ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಈ ನಾಲ್ಕು ಷರತ್ತುಗಳ ಮೇಲೆ ಅವರು ಹೊರಗೆ ಬರುವುದಕ್ಕೆ ಸಾಧ್ಯವೇ ಇಲ್ಲ, ಅವರು ಎಂಥ powerful ಆಗಿದ್ದರು ಕೂಡ they will be caught under the law and they cannot come out with the clutches of law ಎಂದು ಸಲಹೆ ಕೊಡಬಯಸುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಪ್ರಾರಂಭ ಮಾಡಿದಾಗಲೇ ಹೇಳಿದೆ. ಇದರ ಕೈ ಬಹಳ ದೊಡ್ಡದಿದೆ, Octopus ತರಹ ಕಾಣುತ್ತಿದೆ ಇದರಲ್ಲಿ ಏನೇನು ಕರ್ಮಕಾಂಡಗಳಿವೆ ಎಂದು ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಏನು ಹೇಳಿದರು ಅಥವಾ ಪಕ್ಷಾತೀತವಾಗಿ ಎಲ್ಲರೂ ಮಾತನಾಡಿದಂತಹ ಸಮಯದಲ್ಲಿ ಬಹಳ ವಿಷಯಗಳನ್ನು ಹೊರ ಚೆಲ್ಲಿದ್ದಾರೆ. ನಾನಾದರೂ ಕೇಳಿಕೊಳ್ಳುವುದು ಇಷ್ಟೇ. ಮಾನ್ಯ ಸೋಮಶೇಖರ್‌ರವರು ಮತ್ತು ನಾನು ಒಟ್ಟಿಗೆ ಕೆಲಸ ಮಾಡಿದವರು ಹಾಗೂ ನನ್ನ ಆತ್ಮೀಯ ಮಿತ್ರರು. ಅವರು ಇದರ ಬಗ್ಗೆ ಬಹಳ ಜವಾಬ್ದಾರಿ ವಹಿಸುತ್ತಾರೆ ಎಂದು ಅಂದುಕೊಂಡಿದ್ದೇನೆ. ನನ್ನ ಒತ್ತಾಯವೇನೆಂದರೆ, ಬೆಂಗಳೂರಿನಲ್ಲಿರುವ ಮುಖ್ಯವಾಗಿ ಕ್ಲಬ್‌ಗಳು ಕೂಡ ಇದರಲ್ಲಿ ಸೇರಬೇಕು, ಬೆಂಗಳೂರು ಕ್ಲಬ್ ಈ ಪಟ್ಟಿಯಲ್ಲಿ ಬಿಟ್ಟು ಹೋಗಿದೆ. ಎಲ್ಲರ ಅನಿಸಿಕೆ ಪ್ರಕಾರ ಬೆಂಗಳೂರು ಕ್ಲಬ್; ಕ್ಲಬ್‌ಗಳ ಬಗ್ಗೆ ಮಾನ್ಯ ನಾರಾಯಣಸ್ವಾಮಿಯವರು ಸೇರಿದಂತೆ ಎಲ್ಲರೂ ಹೇಳಿದ ಹಾಗೆ ನನ್ನ ಒತ್ತಾಯ ಕೂಡ ಸದನ ಸಮಿತಿ ಮಾಡಬೇಕೆನ್ನುವುದಾಗಿದೆ. ಈ ಸದನ ಸಮಿತಿ ಮಾಡಿ, ಹಿಂದಿನ ಸದನ ಸಮಿತಿಯಲ್ಲಿ ಏನಾಗಿದೆ, ಬಿಟ್ಟಿದೆ ಅದು ಬೇಕಾಗಿಲ್ಲ, ಸಮಿತಿಯಲ್ಲಿ ಎಲ್ಲರನ್ನೂ ಒಳಗೊಂಡಂತೆ ಮಾಡಿ ನಿಗದಿಯನ್ನು fix ಮಾಡಿ. ಮಾನ್ಯ ಸದಸ್ಯರಾದ ಮಾನ್ಯ ಶರಣಪ್ಪ ಮಟ್ಟೂರುರವರು ಹೇಳಿದ್ದು ಜವಾಬ್ದಾರಿಯುತವಾಗಿದೆ. ಏಕೆಂದರೆ, ಅವರು legal person ಆಗಿದ್ದಾರೆ, ನಾನು 'ಲಾ' ಮಾಡಿಲ್ಲ, ಆದರೆ ಅವರು ಹೇಳಿದ್ದನ್ನು ಕೇಳಿದ್ದೇನೆ, ಅದು ಒಳ್ಳೆಯದಿದೆ. ನಾವು ಚಾಪೆ ಕೆಳಗೆ ಹೋದರೆ, ಅವರು ರಂಗೋಲಿ ಅಡಿ ಹೋಗುತ್ತಾರೆ. ಆದ್ದರಿಂದ ನಾವು ಸ್ವಲ್ಪ ಸೂಕ್ಷ್ಮತೆಯಿಂದ ಈ ಕೆಲಸವನ್ನು ಮಾಡುತ್ತೀರೆಂದು ನಂಬಿದ್ದೇನೆ. ಮುಖ್ಯವಾಗಿ ಬೆಂಗಳೂರು ಟರ್ಫ್ ಕ್ಲಬ್ ಅಲ್ಲದೇ ಬಹಳಷ್ಟು ಟರ್ಫ್ ಕ್ಲಬ್‌ಗಳ ಸ್ಥಿತಿ ಇದೇ ರೀತಿ ಇದೆ. ಅದನ್ನು ಕೂಡ ನೋಡಬೇಕು ಹಾಗೂ ಗಾಲ್ಫ್ ಕ್ಲಬ್, ಕ್ರಿಕೆಟ್ ಕ್ಲಬ್ ಹಾಗೂ ಬೆಂಗಳೂರು ಕ್ಲಬ್ ಇವೆಲ್ಲವೂ ಕೂಡ ಈ ಪಟ್ಟಿ ಏನಿದೆ ಅದರಲ್ಲಿ ಮಾನ್ಯ ರಮೇಶ್‌ರವರು ಹೇಳಿದ ಹಾಗೆ *Recreation, Sports and Aquatics Club* ಈ ಮೂರು ವಿಭಿನ್ನ ಕ್ಲಬ್‌ಗಳು ಬರುತ್ತವೆ ಇವು ಮುಖ್ಯವಾಗಿವೆ. ಇನ್ನೂ ರಿಕ್ರಿಯೇಷನ್ ಕ್ಲಬ್‌ಗಳಲ್ಲಿ ಅಷ್ಟು ಇದು ಬರುವುದಿಲ್ಲ. ಅದರ ಜೊತೆಗೆ ಮಾನ್ಯ ಕೆ.ಟಿ. ಶ್ರೀಕಂಠೇಗೌಡರು ಹೇಳಿದ ಹಾಗೆ ನಮ್ಮ ಸದಸ್ಯರ ಕ್ಲಬ್ ಕೂಡ ನಮಗೆ ಬೇಕಾಗಿದೆ ಅದಕ್ಕೆ ತಾವು ಸಹಕಾರ ಕೊಡುತ್ತೀರಿ ಎಂದು ಭಾವಿಸಿ ಇಷ್ಟು ಹೊತ್ತು ಚರ್ಚೆ ಆಗುವುದಕ್ಕೆ ಅವಕಾಶ ಕೊಟ್ಟ ಸಭಾಪತಿಯವರಿಗೆ ಹಾಗೂ ಈ ನಿಟ್ಟಿನಲ್ಲಿ ತಾವು ಒಳ್ಳೆಯ ಕೆಲಸ ಮಾಡುತ್ತೀರಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಹೋಗಿಲ್ಲ, ಏಕೆಂದರೆ, ಇದೆಲ್ಲಾ ಸದನದಲ್ಲಿ ಬಹಳ ಸಲ ಚರ್ಚೆಗಳಾಗಿವೆ, 7–8 ಸಲವಾದರೂ ಚರ್ಚೆಯಾಗಿದೆ. ನಾನು ಹೇಳುವುದೇನೆಂದರೆ, ಸರ್ಕಾರ ಇದ್ದುಕೊಂಡು ನಾವೇಕೆ ಅವರಿಗೆ ಇಷ್ಟೊಂದು ಭಿಕ್ಷೆ ಬೇಡಬೇಕು ಎಂದು ಕೇಳುತ್ತೇನೆ. ಇಷ್ಟೆಲ್ಲಾ ಕಾನೂನು ಕಾಯಿದೆಗಳಿವೆ, ಒಂದೆರಡು ಗುಂಟೆ ಸರ್ಕಾರಿ ಜಾಗದಲ್ಲಿ ಯಾವನಾದರೂ ಒಬ್ಬ ಇದ್ದರೆ ಅವನನ್ನು ಒದ್ದು ಹೊರಗೆ ಹಾಕುತ್ತಾರೆ. ಮಾನ್ಯ ಸಚಿವರಿಗೆ ಹೇಳುವುದೇನೆಂದರೆ, ನಿಮಗೆ ಬೆಂಗಳೂರಿನ ಬಗ್ಗೆ ಮಾಹಿತಿಗಳಿದೆ. ಟಿಕೆಟ್ ಬಗ್ಗೆ ಹೇಳಿದರು, ಒಂದು ದಿವಸವೂ ಅವರ ಮುಖ ನೋಡಿಲ್ಲ. ಕ್ರಿಕೆಟ್ ಪಂದ್ಯಾವಳಿಯ ಟಿಕೆಟನ್ನು ಯಾರಿಗೋ ಕೊಟ್ಟು ಕಳುಹಿಸುತ್ತಾರೆ. ಇಷ್ಟೆಲ್ಲಾ ಅಧಿಕಾರ ಇದ್ದು, ಸರ್ಕಾರ ಇದ್ದುಕೊಂಡು ಸರ್ಕಾರದ ಆಸ್ತಿ ಇದ್ದುಕೊಂಡು ಇವರು ಯಾರು? ಒಂದು ಸಲ ಯಾರೋ ಒಬ್ಬರು ಬೇಡವೆಂದರೂ ನನ್ನನ್ನು ಕ್ಲಬ್‌ಗೆ ಕರೆದುಕೊಂಡು ಹೋದರು, ನನ್ನನ್ನು ಒಳಗೆ ಬಿಡಲೇ ಇಲ್ಲ. ಆಗ ನಾನು ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟ ಮೇಲೆ ಪೊಲೀಸರು ಬಂದರು ಎಲ್ಲಾ ಗಲಾಟೆಯಾಯಿತು. ನಾನು ಕೇಳಲಿಲ್ಲ. ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ಸರ್ಕಾರದ ಆಸ್ತಿಯನ್ನು ಈ ರೀತಿ ಬೇಕಾದ ಹಾಗೆ ದುರ್ಬಳಕೆ ಮಾಡಿಕೊಂಡರೆ, ಅವರೇ ದೊಡ್ಡವರಾದರೆ, ನಾವೇಕೆ ಇರಬೇಕು? ಈ ವಿಷಯ 7–8 ಸಲ ಚರ್ಚೆಯಾಗಿದೆ, ಈಗ ಚರ್ಚೆಯಾಗುತ್ತಿದೆ, ಮತ್ತೆ ನಾಳೆ ಹೀಗೇ ಆಗುತ್ತದೆ. ನಮ್ಮ ಅಡ್ವೊಕೇಟ್ ಜನರಲ್ Affidavit ಅನ್ನು ಕೊಡುತ್ತಾರೆ ಎಂದರೆ, ನಮಗೆ ಮಾನ ಮರ್ಯಾದೆ ಬೇಡವೇ? ಸರ್ಕಾರಕ್ಕೆ ಇದರಿಂದ ನಾಚಿಕೆಯಾಗುವುದಿಲ್ಲವೇ? ನಿಮ್ಮದಲ್ಲ, ಎಲ್ಲಾ ಸರ್ಕಾರಗಳ ಬಗ್ಗೆ ನಮ್ಮದೂ ಸೇರಿದಂತೆ ಹೇಳುತ್ತಿದ್ದೇನೆ. ಇದಕ್ಕೊಂದು ಗೌರವ ಬೇಡವೆ? ದಯಮಾಡಿ ಇದಕ್ಕೆ ಏನಾದರೂ ಒಂದು ಕ್ರಮ ತೆಗೆದುಕೊಳ್ಳಿ, ಸದನದಲ್ಲಿ ಇದರ ಬಗ್ಗೆ ಚರ್ಚೆ ಮಾಡಬಾರದು. ಚರ್ಚೆ ಮಾಡಿದರೆ, ನಾಳೆ ಪತ್ರಿಕೆಯಲ್ಲಿ ಬರುತ್ತದೆ, ಅವರಿಗೆ ಹೋಗುತ್ತದೆ, ಇದು ಮಾಮೂಲಿ ಎಂದುಕೊಳ್ಳುತ್ತಾರೆ, ಇದರಿಂದ ನಮಗೇನು ಕಿಮ್ಮತ್ತಿದೆ? ಅದಕ್ಕಾಗಿ ನಾನು ಹೇಳುವುದೇನೆಂದರೆ, ಸರ್ಕಾರ ಬೇಕಾದ ಕ್ರಮ ತೆಗೆದುಕೊಳ್ಳಲಿ, ನಾವೆಲ್ಲರೂ ಒಟ್ಟಾಗಿರೋಣ, ನಾವು ನಿಮ್ಮ ಜೊತೆ ಇರುತ್ತೇವೆ. ತಾವು ಸಚಿವರಾಗಿ ಇಲ್ಲಿಗೆ ಬಂದಿದ್ದೀರಿ, ಇದಕ್ಕೇನಾದರೂ ಒಂದು ಸ್ಪಷ್ಟವಾದ ನಿರ್ಧಾರವನ್ನು ಮಾಡಿ; ಇದಕ್ಕೆ ಕಮಿಟಿ ಮಾಡಿದರೆ ನಾಳೆ ಅಲ್ಲಿಗೆ ಹೋಗಬೇಕು, ಕ್ಲಬ್‌ಗೆ ಹೋಗಬೇಕು, ಹೋದಾಗ ಏನೇನೋ ಬಾಟಲ್‌ಗಳನ್ನು ಇಡುತ್ತಾರೆ, ಜನರನ್ನು ತೋರಿಸುತ್ತಾರೆ ಇಂಥವೆಲ್ಲಾ ಆಗುತ್ತವೆ. ನಾವೇಕೆ ಅಲ್ಲಿಗೆ ಹೋಗಬೇಕು? ಆದ್ದರಿಂದ ಇವತ್ತು ಇದಕ್ಕೊಂದು ಅಂತಿಮ ತೀರ್ಮಾನವಾಗಬೇಕು, ಸರ್ಕಾರ ಸ್ಪಷ್ಟವಾದಂತಹ ನಿರ್ಧಾರ ತೆಗೆದುಕೊಂಡು, ಕಾನೂನು ಪ್ರಕಾರ ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಕಾನೂನು ಪ್ರಕಾರ ಕೆಲಸ ಮಾಡಬೇಕು. ವಿನಾಕಾರಣ ಚರ್ಚೆ ಮಾಡಿರುವ ಇದನ್ನು ಇಷ್ಟಕ್ಕೆ ಬಿಡಬಾರದು ಚರ್ಚೆ ಮಾಡಿದರೆ ಅದನ್ನು ಪ್ರತಿವರ್ಷವೂ ಮಾಡುತ್ತಾರೆ ಬಿಡಿ ಎನ್ನುತ್ತಾರೆ. ಅದು ಆಗಬಾರದು ಮತ್ತು ದಯಮಾಡಿ ಅವರ ಬಳಿ cricket tickets ಭಿಕ್ಷೆ ಕೇಳುವಂತಹ ಕೆಲಸವನ್ನು ಯಾವ ಶಾಸಕರೂ ಮಾಡಬಾರದು. ಇದು ನನ್ನ ಕೋರಿಕೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾರವರೇ, ಸಾಕು, ಎಲ್ಲರದ್ದೂ ಒಂದು round ಆಯಿತು.

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರ ಭಾವನೆಗಳನ್ನು ನಾನು ಗೌರವಿಸುತ್ತೇನೆ. ನಾನು ಮಂತ್ರಿಯಾದ ತಕ್ಷಣ ಒಂದೆರಡು ಕ್ಲಬ್‌ಗಳ ಬಗ್ಗೆ ನನಗೆ ಮಾಹಿತಿ ಬಂತು. ಅಂದರೆ ನನ್ನ ಬಳಿಗೆ ಇನ್ನೂ complaint ಬಂದಿಲ್ಲ. Complaint ಬರುವುದಕ್ಕಿಂತ ಮುಂಚೆಯೇ, ಸಹಕಾರ ಸಚಿವರೇ, ನಮ್ಮ ಕ್ಲಬ್ ಮೇಲೆ complaint ಬರುತ್ತಿದೆ, ತಾವು ಏನೂ ಕ್ರಮ ಮಾಡಬೇಡಿ ಎಂದು ಕೇಳುತ್ತಿದ್ದಾರೆ. ಆದರೆ ಅದ್ಯಾವುದಕ್ಕೂ yield ಆಗತಕ್ಕಂತಹದ್ದು ಇಲ್ಲ. ಸರ್ಕಾರ ಇವರೆಲ್ಲರ ವಿರುದ್ಧವಾಗಿದೆ, correct ಆಗಿ ಯಾವ ಕ್ಲಬ್‌ಗಳಿವೆ ಅದ್ಯಾವುದಕ್ಕೂ ನಾವು ತೊಂದರೆ ಕೊಡುವುದಿಲ್ಲ. ಈಗ 'ಹ್ಯಾರಿಸ್'ರವರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿದ್ದಾರೆ, ಅದರ ಬಗ್ಗೆ ಸ್ವಲ್ಪ ಗಮನ ಹರಿಸುತ್ತೇನೆ. ಮಾನ್ಯ ಸದಸ್ಯರಾದ ಕೆ.ಸಿ. ಕೊಂಡಯ್ಯನವರು ಹಿಂದೆ 2–3 ಕಮಿಟಿ ಇತ್ತು ಎಂದು ಹೇಳಿದರು, ಅದೆಲ್ಲಾ ವರದಿ ತೆಗೆದುಕೊಂಡು ನಮ್ಮ ಅಡ್ವೊಕೇಟ್‌ರವರು ಹೇಳಿದಂತೆ ಸದನ ಸಮಿತಿ ಮಾಡುವುದಕ್ಕೆ ನಮ್ಮ ಆಕ್ಷೇಪಣೆ ಏನು ಇಲ್ಲ. ಆದರೆ ಹ್ಯಾರಿಸ್‌ರವರ ನೇತೃತ್ವದ ಸದನ ಸಮಿತಿ ಮಾಡಿದ್ದರು, ಅದೇನೂ ಆಗಲಿಲ್ಲ ಎನ್ನುವಂತಹದ್ದು ಮತ್ತೆ ಆಗಬಾರದು. ಅದಕ್ಕೆ ಹ್ಯಾರಿಸ್‌ರವರ ನೇತೃತ್ವದ ಸದನ ಸಮಿತಿಯ ವರದಿಯನ್ನು ನಾಳೆ ತೆಗೆದುಕೊಂಡು ಬರುತ್ತೇನೆ, ಮಾನ್ಯ ಕೆ.ಸಿ. ಕೊಂಡಯ್ಯನವರು ಹೇಳಿದಂತಹ ಕಮಿಟಿಯ ವರದಿಯನ್ನೂ ತಮ್ಮ ಚೇಂಬರ್‌ಗೆ ತೆಗೆದುಕೊಂಡು ಬರುತ್ತೇನೆ. ಅವರ ಕಡೆಯೂ 4–5 ಜನ ಕುಳಿತುಕೊಳ್ಳಲಿ, ನಮ್ಮ ಕಡೆಯೂ 4–5 ಜನರು ಕುಳಿತುಕೊಳ್ಳಲಿ, ಬಂದೋಬಸ್ತಾಗಿ ಯಾರೂ ಅಲ್ಲಾಡಬಾರದು ಆ ರೀತಿಯ ಒಂದು ಸದನ ಸಮಿತಿಯನ್ನು ಯಾರು ಇದರ ಬಗ್ಗೆ ಚೆನ್ನಾಗಿ ತಿಳಿದುಕೊಂಡವರು ಇದ್ದಾರೆ ಅಂತಹವರನ್ನು ಸದನ ಸಮಿತಿಯ ಸದಸ್ಯರನ್ನಾಗಿ ಮಾಡಿ, ಏನೇನು ಅದಕ್ಕೆ ಒಳಪಡಿಸಬೇಕು, ಅವರನ್ನು ನಿಯಂತ್ರಿಸುವುದಕ್ಕೆ ಆ ರೀತಿ ತಾವು ಒಪ್ಪಿಗೆ ಕೊಟ್ಟರೆ, ಮಾನ್ಯ ಸದಸ್ಯರಾದ ಹೆಚ್.ಎಂ. ರೇವಣ್ಣನವರಿರಬಹುದು, ಮಾನ್ಯ ವಿರೋಧ ಪಕ್ಷದ ನಾಯಕರಿರಬಹುದು, ಅಡ್ವೊಕೇಟ್ ಜನರಲ್‌ರವರು, ನಮ್ಮ ಕಡೆ 3–4 ಜನ, ನಿಮ್ಮ ಕಡೆ 3–4 ಜನರು ನಿಮ್ಮ ಚೇಂಬರ್‌ನಲ್ಲಿ ಕುಳಿತುಕೊಳ್ಳಲಿ, ಸದನ ಸಮಿತಿಯನ್ನು ಯಾವ ರೀತಿ ಮಾಡಬೇಕು, ತನಿಖೆ ಮಾಡುವುದಕ್ಕೆ ಏನೇನನ್ನು ವ್ಯಾಪ್ತಿಯಲ್ಲಿ ಸೇರಿಸಬೇಕು, ಅವೆಲ್ಲವನ್ನೂ ಅಂತಿಮಗೊಳಿಸಿ announce ಮಾಡುತ್ತೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಚಿವರೇ, ಶಾಸಕರ ಕ್ಲಬ್ . . .

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೆ. ಗೋವಿಂದರಾಜ್:–** ಮಾನ್ಯ ಸಚಿವರೇ, ನೀವು ಸದನ ಸಮಿತಿಯನ್ನು ಮಾಡುತ್ತೇವೆ ಎಂದು ಹೇಳಿಬಿಡಿ ಇನ್ನು ಮಿಕ್ಕಿದ್ದೆಲ್ಲಾ ಆಮೇಲೆ ಅಲ್ಲಿಗೆ ಕರೆಸಿಕೊಳ್ಳಿ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಸದನ ಸಮಿತಿ ಮಾಡುವುದಕ್ಕೆ assurance ಬೇಕಲ್ಲವೇ ಸದನ ಸಮಿತಿ ಮಾಡುತ್ತೇವೆ ಎಂದು ನೀವು ಒಪ್ಪಿಗೆ ಕೊಟ್ಟರೆ ನಾವು ಬರುತ್ತೇವೆ.

**ಶ್ರೀ ಎಸ್.ಟಿ. ಸೋಮಶೇಖರ್:–** ಮಾನ್ಯ ಸಭಾಪತಿಯವರೇ, ಸದನ ಸಮಿತಿಯನ್ನು ಶೇ.100ರಷ್ಟು ಮಾಡುತ್ತೇವೆ. ಆದರೆ ನಾನು ಹೇಳುತ್ತಿರುವುದು, ಸದನ ಸಮಿತಿಗೆ ಯಾರು ಇರಬೇಕು, ಯಾರಿಗೆ ಸಾಮರ್ಥ್ಯ ಇದೆ, ಯಾರು yield ಆಗದೇ ಇರುವಂತಹವರನ್ನು ಸೇರಿಸಬೇಕು. ಏನೇನು ವಿಷಯಗಳನ್ನು ಸೇರಿಸಬೇಕು, ಯಾವುದನ್ನು ತನಿಖೆ ಮಾಡಬೇಕು, ಯಾವ terms and conditions ಇರಬೇಕು, ಅದೆಲ್ಲವನ್ನೂ ತಮ್ಮ ಚೇಂಬರ್‌ನಲ್ಲಿ ಆ ಕಡೆ 4–5 ಜನ, ಈ ಕಡೆ 4–5 ಜನ ಸೇರಿ, final ಮಾಡಿ, ನಾಳೆಯೇ ಬೇಕಾದರೆ ಅದೆಲ್ಲಾ ರೂಪುರೇಷೆಗಳನ್ನು ಇಲ್ಲಿ announce ಮಾಡುತ್ತೇನೆ, ಅದಕ್ಕೆ ತಾವು ಅವಕಾಶ ಕೊಡಬೇಕು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ನಮ್ಮ Legislatures Club ಗೆ ಜಾಗ ಕೊಟ್ಟಿಲ್ಲ, ಚಾಲೂ ಮಾಡಿಲ್ಲ, ನೋಂದಣಿಯಾಗಿದೆ.

(ಮುಂದು)

(334) 11–03–2020/ 06–40/ ಕೆಹೆಚ್–ಎಂಡಿ (ವಿಕೆ)

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಎರಡು ವರ್ಷಗಳ ಹಿಂದಿನ ಮಾಹಿತಿ; ಮಾನ್ಯ ರಮೇಶ್‌ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಮಾನ್ಯ ಸದಸ್ಯರು 3–4 ಜಾಗಗಳನ್ನು ಹುಡುಕಿದರು.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಶ್ರೀಕಂಠೇಗೌಡರವರೇ ಅದರ ಬಗ್ಗೆ ನನಗೆ ಗೊತ್ತಿಲ್ಲ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಸ್.ಟಿ.ಸೋಮಶೇಖರ್:–** ಮಾನ್ಯ ಶ್ರೀಕಂಠೇಗೌಡರವರೇ, 10 ವರ್ಷಗಳ ಬಗ್ಗೆ ನನಗೆ ಗೊತ್ತಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ದುಡ್ಡು ಕೊಟ್ಟು 10 ವರ್ಷಗಳಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ಸಿಓಡಿ ಜಾಗವನ್ನು ಕೊಡಬೇಕೆಂದು ತೀರ್ಮಾನವಾಯಿತು. ಅದು Historical place ಎಂದು ಸಿಓಡಿ ಜಾಗವನ್ನು ಪೊಲೀಸ್‌ನವರು ಕೊಡುವುದಿಲ್ಲ ಎಂದು ಹೇಳಿದರು. Balabrooie Guest House ಯಿಂದ ಪ್ರಾರಂಭವಾಯಿತು. ಇದರ ಬಗ್ಗೆ ಏನಾಯಿತು ಎನ್ನುವ ಬಗ್ಗೆ ಮಾಹಿತಿ ಇಲ್ಲ. ಇದರ ಬಗ್ಗೆ ನಾಳೆ ಬೆಳಗ್ಗೆ ಮಾಹಿತಿಯನ್ನು ತರಿಸಿಕೊಂಡು ತಮಗೆ ಸಂಪೂರ್ಣವಾದ ಮಾಹಿತಿಯನ್ನು ಕೊಡುತ್ತೇನೆ. ಶಾಸಕರ ಕ್ಲಬ್‌ನ್ನು ಮಾಡುವುದಕ್ಕೆ ನಮ್ಮ ಕಡೆಯಿಂದ ಯಾವುದೇ ತಕರಾರು ಇಲ್ಲ. ಶಾಸಕರ ಅವಶ್ಯಕತೆಗೆ ತಕ್ಕಂತೆ ವಿಧಾನಸೌಧದ ಸುತ್ತಮುತ್ತ ಒಂದು ಕಿ.ಮೀ ಒಳಗೆ ಜಾಗ ಬೇಕಾಗಿರುವಂತಹದ್ದು, ಬೇರೆ ಕಡೆ ಅಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಡೆಯಿಂದ ಜಾಗವನ್ನು ಕೊಡಿಸುವಂತಹದ್ದನ್ನು ಮಾಡಬಹುದು. ಆದರೆ, ವಿಧಾನಸೌಧದ ಸುತ್ತಮುತ್ತ ಆಗಿರುವುದರಿಂದ, ...

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅನುಗ್ರಹ ನಿವಾಸ **'ಕಾವೇರಿ'** ಪಕ್ಕದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಎರಡು ಎಕರೆ ಜಾಗ ಇದೆ. ಇದನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಚರ್ಚೆ ನಡೆದಿತ್ತು. ಅದರ ಬಗ್ಗೆ ತಾವು ಪರಿಶೀಲನೆ ಮಾಡಬೇಕು.

**ಶ್ರೀ ಎಸ್.ಟಿ.ಸೋಮಶೇಖರ್:-** ಮಾನ್ಯ ಸಭಾಪತಿಯವರೇ, ನಮಗೆ ಒಳ್ಳೆಯ ಉಪ ಮುಖ್ಯಮಂತ್ರಿಯವರು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಮಾನ್ಯ ಗೋವಿಂದ ಎಂ.ಕಾರಜೋಳರವರು ಇದ್ದಾರೆ. ಕೊಡುಗೈ ದಾನಿಗಳು ಎಂದು ಇಡೀ ಕರ್ನಾಟಕ್ಕೆ ಗೊತ್ತಿದೆ. ಇದರ ಬಗ್ಗೆ ಮಾನ್ಯ ಶಾಸಕರು ವಿರೋಧವನ್ನು ವ್ಯಕ್ತಪಡಿಸುವುದಿಲ್ಲ. ಇದರ ಬಗ್ಗೆ ಮಾನ್ಯ ಶಾಸಕರು ಕೂಡ ಬೆಳಕನ್ನು ಚೆಲ್ಲಬೇಕು. ಮಾನ್ಯ ಸಚಿವರು ಎರಡು ಎಕರೆ ಜಾಗವನ್ನು ಕೊಡುತ್ತೇನೆ ಎಂದು ತಕ್ಷಣ ಘೋಷಣೆ ಮಾಡಿದರೆ ಎಲ್ಲಾ ಮಾನ್ಯ ಶಾಸಕರಿಗೂ ಅನುಕೂಲವಾಗುತ್ತದೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉಪ ಮುಖ್ಯಮಂತ್ರಿಯವರು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಮಾನ್ಯ ಗೋವಿಂದ ಎಂ.ಕಾರಜೋಳರವರು ಸದನದಲ್ಲಿಯೇ ಇದ್ದಾರೆ. ಇದಕ್ಕೆ ಜಾಗ ಕೊಡುತ್ತೇನೆಂದು ಹೇಳಿದರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ, ಇದರ ಬಗ್ಗೆ ಪರಿಶೀಲನೆ ಮಾಡಿ ಹೇಳಿ. ಮಾನ್ಯ ಸಚಿವರೇ ಇದರ ಬಗ್ಗೆ ಏಕೆ ಯೋಚನೆ ಮಾಡುತ್ತೀರಿ?

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಯವರು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ನನಗೆ ಜಾಗದ ಬಗ್ಗೆ ಮಾಹಿತಿ ಇಲ್ಲದೇ, 'ಜಾಗವನ್ನು ಕೊಡುತ್ತೇನೆ' ಎಂದು ಹೇಗೆ ಹೇಳಲಿ? ಇದರ ಬಗ್ಗೆ ನಾನು ಸಹ ನೋಡಬೇಕಲ್ಲವೇ.

**ಸಭಾಪತಿಯವರು:–** ಮಾನ್ಯ ಸಚಿವರಾದ ಗೋವಿಂದ ಎಂ.ಕಾರಜೋಳರವರೇ, ಜಾಗ ಏನಾದರೂ ದೊರೆತರೆ ಕೊಡಬಹುದಲ್ಲವೇ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಧರ್ಮಸೇನರವರೇ, ಮಾನ್ಯ ತೇಜಸ್ವಿನಿಗೌಡರವರೇ, ದಯಮಾಡಿ ಕುಳಿತುಕೊಳ್ಳಿ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸಂವಿಧಾನದ ಬಗ್ಗೆ ಚರ್ಚೆ ಪ್ರಾರಂಭ ಮಾಡಿರುವುದರಿಂದ ಅದರ ಸ್ಫೂರ್ತಿಯಾಗಿ ದೆಹಲಿಯ ಮಾನ್ಯ ಸಂಸದರಿಗಾಗಿ ಇರುವ Constitution Club of India ಮಾದರಿಯಲ್ಲಿ ಬೆಂಗಳೂರಿನಲ್ಲಿ ಶಾಸಕರ ಕ್ಲಬ್ ಪ್ರಾರಂಭವಾಗಬೇಕು.

**ಪ್ರಶ್ನೆ ಸಂಖ್ಯೆ: 850**
**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ನ್ಯಾಯಮೂರ್ತಿ ಸದಾಶಿವ ಆಯೋಗ ಎನ್ನುವಂತಹದ್ದು ಒಂದು ಅಸ್ಪೃಶ್ಯ ಜನಾಂಗದವರ ಮೇಲೆ ಆಗಿರುವಂತಹ ಒಂದು ಆಯೋಗ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಮಿತಿಯನ್ನು ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲಿ ರಚನೆ ಮಾಡುತ್ತಾರೆ. ಮಾನ್ಯ ಸದಾನಂದಗೌಡರವರು ಮುಖ್ಯಮಂತ್ರಿಗಳಾದಂತಹ ಸಂದರ್ಭದಲ್ಲಿ ಇದರ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ಆದರೆ ಈ ವರದಿಯನ್ನು ಯಾರೂ ಕೂಡ ತೆಗೆದು ನೋಡುವುದಿಲ್ಲ. ಕಳೆದ 3–4 ವರ್ಷಗಳ ಹಿಂದೆ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಆಡಳಿತ ಪಕ್ಷದ ಎಲ್ಲಾ ಶಾಸಕರನ್ನು ಕರೆದು ಕೃಷ್ಣಾದಲ್ಲಿ ಒಂದು ಸಭೆಯನ್ನು ಮಾಡಿದರು. ಆದರೆ, ಇವತ್ತಿನವರೆಗೂ ಕೂಡ ಇದನ್ನು ಸ್ವೀಕಾರ ಮಾಡುತ್ತೇವೆ ಎಂದಾದರೂ ಹೇಳಬೇಕು. ಇಲ್ಲದೇ ಇದ್ದರೆ ತಿರಸ್ಕಾರ ಮಾಡುತ್ತೇವೆ ಎಂದಾದರೂ ಹೇಳಬೇಕು.

**ಸಭಾಪತಿಯವರು:–** ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ಒದಗಿಸಿದ್ದಾರೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇದಕ್ಕೆ ಪೂರಕವಾಗಿ ಉತ್ತರವನ್ನು ಹೇಳುತ್ತೇನೆ. ಸದಾಶಿವ ಆಯೋಗದಿಂದ ಈ ವರ್ಗದ ಜನರು ಬೀದಿಯಲ್ಲಿ ಬಿದ್ದಿದ್ದಾರೆ. ತಾವು ಇಷ್ಟೊತ್ತಿನವರೆಗೂ ಶಾಸಕರ ಕ್ಲಬ್‌ನ ಬಗ್ಗೆ ಮಾತನಾಡಿದ್ದೀರಾ ಅಲ್ಲವೇ, ಅದಕ್ಕಿಂತ ಇದು ಮುಖ್ಯವಾದ ವಿಚಾರವಾಗಿದೆ. ಹಾಗಾಗಿ, ಈ ಉತ್ತರದಲ್ಲಿ ಏನು ಹೇಳಿದ್ದಾರೆ ಎಂದರೆ, ಈ ವರದಿಯನ್ನು ಯಥಾವತ್ತಾಗಿ ಒಪ್ಪಬೇಕೇ ಅಥವಾ ಭಾಗಶಃವಾಗಿ ಒಪ್ಪಿಕೊಳ್ಳಬೇಕೇ; ಕೆಲವು ಮಾರ್ಪಾಡುಗಳೊಂದಿಗೆ ಒಪ್ಪಿಕೊಳ್ಳಬೇಕೇ ಎನ್ನುವ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಅವರು ಕೊಟ್ಟಿರುವ ವರದಿಯನ್ನು ಯಾವ ರೀತಿಯಲ್ಲಿ ಒಪ್ಪಿಕೊಳ್ಳಬೇಕೆಂಬ ಬಗ್ಗೆ ಅವರಿಗಾದರೂ ತಾವು ವಾಪಸ್ಸು ಕಳುಹಿಸಬೇಕಲ್ಲವೇ? ಹಿಂದಿನ ಸರ್ಕಾರ ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡಿತ್ತು. ಆದರೆ ಈಗಿರುವ ಸರ್ಕಾರ ಅದನ್ನು ಕೂಡ ಮಾಡಿರುವುದಿಲ್ಲ. ಇದಕ್ಕೆ ತಾವೇನಾದರೂ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲಿ ಏನಾಗಿದೆಯೆಂದರೆ, ಈ ಸದಾಶಿವ ಆಯೋಗವು ಯಾವುದೋ ಒಂದೇ ಒಂದು ವರ್ಗಕ್ಕೆ ಎಂದು ತಿಳಿದುಕೊಂಡಿದೆ. ಇದರ ಬಗ್ಗೆ ಬಹಳಷ್ಟು ತಪ್ಪು ಅಭಿಪ್ರಾಯವನ್ನು ಇಟ್ಟುಕೊಂಡಿದೆ. ಈ ಒಂದು ವರ್ಗ ಏನಿದೆ, ಈ 100 ಜಾತಿಗಳು ಅವರ ಮೇಲೆ ಅಪಾರವಾದ ನಂಬಿಕೆ ಮತ್ತು ಅಸಮಾಧಾನ, ಯಾವುದೇ ರೀತಿಯ ಒಂದು ನಂಬಿಕೆ ಇಲ್ಲದೆ ಇರುವಂತಹ ವ್ಯವಸ್ಥೆಯಾಗಿದೆ. ಮಾನ್ಯ ಘನ ಸರ್ಕಾರವು ಇದರ ಬಗ್ಗೆ ಎಲ್ಲವನ್ನೂ ಅರಿತುಕೊಂಡು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. **XXX** ಇದರ ಬಗ್ಗೆ ಯಾವುದಾದರೂ ಒಂದು ಕಠಿಣವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಸದಾಶಿವ ಆಯೋಗದ ವರದಿಯನ್ನು ಮಾನ್ಯ ಎಸ್.ಎಂ.ಕೃಷ್ಣ ರವರು ಮುಖ್ಯಮಂತ್ರಿಗಳಾಗಿದ್ದಾಗ ರಚನೆ ಮಾಡಲಾಗಿದೆ. ಯಾವುದೇ ಸರ್ಕಾರವಾಗಲಿ ಈ ಆಯೋಗದ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ terms of reference ಏನಿದೆ ಮತ್ತು terms of reference ಮೀರಿ ಆ ವರದಿಯಲ್ಲಿ ಏನಾದರೂ ಅಂಕಿಗಳು ಬಂದರೆ; ಏಕೆಂದರೆ, ನನ್ನ ಪ್ರಕಾರ ಈ ಸದಾಶಿವ ಆಯೋಗದ ವರದಿಯು ಅಸಂವಿಧಾನಿಕವಾಗಿದೆ ಮತ್ತು ಅವೈಜ್ಞಾನಿಕವಾಗಿದೆ. ಇದನ್ನು ತಿರಸಲ್ಕಾರ ಮಾಡಬೇಕೆಂದು ಬಹಳಷ್ಟು ಸಮಾಜಗಳು ಸರ್ಕಾರದ ಮೇಲೆ ಒತ್ತಡಗಳನ್ನು ತಂದಿವೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಧರ್ಮಸೇನರವರು ನಾನು ಮಾತನಾಡಿ ಮುಗಿಸಿದ ಮೇಲೆ ಮಾತನಾಡಬಹುದಲ್ಲವೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಇದರ ಬಗ್ಗೆ ತಾವೇ ಹೇಳಿದ್ದೀರಿ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ತೆಗೆದುಹಾಕಲಾಗಿದೆ**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಆರ್.ಧರ್ಮಸೇನರವರೇ, ನಾನು ಮಾತನಾಡಿದ ಮೇಲೆ ತಾವು ಮಾತನಾಡಿ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಇದು ನನ್ನ ಪ್ರಶ್ನೆ. ಅವರದಲ್ಲ; ಅವರು ಅನುಮತಿಯನ್ನು ಕೇಳಿ ಮಾತನಾಡಲಿ, ಅದಕ್ಕೆ ನನ್ನ ಅಭ್ಯಂತರ ಇಲ್ಲ. ಇದು ನನ್ನ ಪ್ರಶ್ನೆ. ತಾವು ನನ್ನ ಹೆಸರನ್ನು ಕರೆದಿದ್ದೀರಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಆರ್.ಧರ್ಮಸೇನರವರೇ, ತಾವು ಮಾತನಾಡಿ, ನಾನು ಬೇಡ ಎಂದು ಹೇಳುವುದಿಲ್ಲ. ತಾವು ಮಾತನಾಡುವ ಹಾಗಿದ್ದರೆ ಮಾತನಾಡಿ, ನಾನು ನಂತರ ಮಾತನಾಡುತ್ತೇನೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ತಾವು ಕೂಡ ಇದರ ಬಗ್ಗೆ ಹೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಆರ್.ಧರ್ಮಸೇನರವರೇ, ನೀವು ಮಾತನಾಡಿ, ನಾನು ಆಮೇಲೆ ಮಾತನಾಡುತ್ತೇನೆ. ಅವರು ಕರೆದಿದ್ದಕ್ಕೆ ನಾನು ಮಾತನಾಡಿದೆ.

**ಸಭಾಪತಿಯವರು:–** ಶ್ರೀ ಧರ್ಮಸೇನರವರ ನಂತರ ಮಾನ್ಯ ಪ್ರಕಾಶ್ ಕೆ. ರಾಥೋಡ್ ಅವರು ಮಾತನಾಡಲಿ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಈ ಒಂದು ವಿಚಾರದಲ್ಲಿ ಈಗಾಗಲೇ ಸರ್ಕಾರ 24:1 ಅನುಪಾತದಲ್ಲಿ ಎಲ್ಲವನ್ನೂ ಕೊಡುತ್ತೇನೆ ಎಂದು ಹೇಳಿದ್ದಾರೆ. ಆದರೆ ರಾಜಕೀಯವಾಗಿ ಇವರಿಗೆ ಸ್ಥಾನಮಾನಗಳು ಎಲ್ಲಿಯೂ ಸಿಗುತ್ತಿಲ್ಲ ಮತ್ತು ಆರ್ಥಿಕವಾಗಿ *Adi Jambava Development Corporation* ಎಂದು ಕೊಟ್ಟಿದ್ದಾರೆ. ಯಾವುದೇ ಸರ್ಕಾರಿ ಸವಲತ್ತುಗಳು ಜನಸಂಖ್ಯೆಗೆ ಅನುಗುಣವಾಗಿ ಸಿಗುತ್ತಿಲ್ಲ. ನಾವು ಬೇರೆಯವರಿಗೆ ಸವಲತ್ತುಗಳನ್ನು ಕೊಡಬಾರದೆಂದು ಹೇಳುತ್ತಿಲ್ಲ. ಇದನ್ನು ಜನಸಂಖ್ಯೆಗೆ ಅನುಗುಣವಾಗಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಸದಾಶಿವ ಆಯೋಗವನ್ನು ಹೊರತುಪಡಿಸಿಯಾದರೂ ಸರ್ಕಾರ ಕೂಡಲೇ ಈ ಆಯೋಗವನ್ನು ಯಾವಾಗ ರಚನೆ ಮಾಡುತ್ತದೆಯೋ, ಇದರಲ್ಲಿ ನಮ್ಮ ಅಭ್ಯಂತರ ಏನೂ ಇಲ್ಲ. ನಮಗಿರುವಂತಹದ್ದು ಈ ಸದಾಶಿವ ಆಯೋಗದ ವರದಿಯನ್ನು ನಂಬಿಕೊಂಡು ಬಹಳಷ್ಟು ಜನರು ಇದ್ದಾರೆ. ಈ ವರದಿಯನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ. ನಮ್ಮ ಮೇಲೆ ಗಮನಹರಿಸುತ್ತದೆ ಎಂಬ ಚಿಂತನೆಯಲ್ಲಿಯೂ ಒಂದು ವರ್ಗ ಇದೆ. ತಮಗೂ ಕೂಡ ಈಗಾಗಲೇ ಹೇಳಿದೆ. ಈ ಒಂದು ಆಯೋಗಕ್ಕೋಸ್ಕರ 101 ಜಾತಿಗಳಲ್ಲಿ ಈ ಒಂದು ವರ್ಗ ಒಂದು ಕಡೆ ಇದ್ದರೆ, 100 ಜಾತಿಗಳು ಒಂದು ಕಡೆ ಇದೆ. ಇದರ ಬಗ್ಗೆ ಏನಾದರೂ ಮಾಡಿ ಇತ್ಯರ್ಥಪಡಿಸಬೇಕಲ್ಲವೇ, ಸಚಿವ ಸಂಪುಟ ಉಪ ಸಮಿತಿಯಲ್ಲಿಯೂ ರಚನೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡದೇ ಇದ್ದರೆ, ಇನ್ನು ಎಲ್ಲಿಂದ ಇದನ್ನು ಮಾಡುವುದಕ್ಕೆ ಆಗುತ್ತದೆ? ಇದನ್ನು ಎಷ್ಟು ದಿವಸ ಇದೇ ರೀತಿ ಮುಂದಕ್ಕೆ ಹಾಕಲಾಗುತ್ತದೆ ಎಂಬುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಸರ್ಕಾರದ ಮುಂದೆ ಈ ಸದಾಶಿವ ಆಯೋಗದ ವರದಿ ಇದೆ. ಮಾನ್ಯ ಉಪ ಮುಖ್ಯಮಂತ್ರಿಗಳು ನಮ್ಮವರೇ ಆಗಿದ್ದಾರೆ. ಅವರು ಬಹಳ ಸೂಕ್ಷ್ಮವಾಗಿ ಇದರ ಬಗ್ಗೆ ಗಮನ ಕೊಡುತ್ತಾರೆ ಎಂದು ನಮಗೆ ಸಂಪೂರ್ಣವಾದ ವಿಶ್ವಾಸ ಇದೆ. ವಿಶೇಷವಾಗಿ ಈ ವರದಿಯಲ್ಲಿ ಏನಿದೆ ಎಂದರೆ, ಈಗಾಗಲೇ ಮಾನ್ಯ ಧರ್ಮಸೇನರವರು ಹೇಳಿದ ಹಾಗೆ ನನಗೆ ಒಂದು ಅನುಮಾನ ಇದೆ, ಅದೇನೆಂದರೆ, ಅದರಲ್ಲಿ ಕೆಲವು ಜಾತಿಗಳಿಗೆ ಇದರಿಂದ ಪರಿಶಿಷ್ಟ ಜಾತಿಗಳನ್ನು ಹೊರಗಡೆ ತೆಗೆಯುವಂತಹ ಏನಾದರೂ ಒಂದು ಅಭಿಪ್ರಾಯ ಬರಬಹುದು ಎಂದು ಇದೆ. ಅದಕ್ಕೆ ಈ ವಿಷಯ ಬಹಳ ಸೂಕ್ಷ್ಮವಾಗಿದೆ. ನಿಮಗೆ ಅವಕಾಶಗಳು ಸಿಗಬಾರದು ಎಂದು ನಾನು ಹೇಳುವುದಿಲ್ಲ. ನಾವೆಲ್ಲರೂ ಕೂಡ ಅಣ್ಣ–ತಮ್ಮಂದಿರೇ, 101 ಜಾತಿಗಳಲ್ಲಿ ಪರಿಶಿಷ್ಟ ಜಾತಿಯಲ್ಲಿರುವ ಜನರು ಮತ್ತು ನಾವೆಲ್ಲಾ ಒಂದೇ. ಪರಿಶಿಷ್ಟ ಜಾತಿಗಳಿಗೆ ಸಂವಿಧಾನದಲ್ಲಿ ಅವಕಾಶಗಳನ್ನು ಏನು ಕೊಟ್ಟಿದ್ದಾರೆ, ಇದನ್ನು ನಾವೆಲ್ಲಾ ಸೇರಿ ಹಂಚಿಕೊಳ್ಳಬೇಕು. ಆದರೆ, ಇದರಿಂದ ಯಾರಿಗೂ ಸಹ ತೊಂದರೆಯಾಗಬಾರದು ಎಂಬುದಷ್ಟೇ ನಮ್ಮ ಉದ್ದೇಶ. ವಿಶೇಷವಾಗಿ ಇದರಲ್ಲಿ ಏನಾಗಿದೆ ಎಂದರೆ, ನನಗೆ ಮಾನ್ಯ ಧರ್ಮಸೇನರವರು ಆತ್ಮೀಯರು. ಇದರಲ್ಲಿ ಅವಕಾಶಗಳು ಬರುತ್ತಿಲ್ಲ ಎಂಬ ಒಂದು ಭಾವನೆ ಅವರಿಗಿದೆ. ನಮಗೆ ಏನು ಭಾವನೆ ಇದೆ ಎಂದರೆ, ಈ ಸದಾಶಿವ ಆಯೋಗವನ್ನು ಏಕೆ ತಂದಿದ್ದಾರೆ? ಇದರಿಂದ ಪರಿಶಿಷ್ಟ ಜಾತಿಯನ್ನು ಹೊರಗಡೆ ತೆಗೆಯುವುದಕ್ಕೆ ಏನಾದರೂ ಹುನ್ನಾರ ಇದೆಯೇ ಎಂಬ ಬಗ್ಗೆ ನಮಗೆ ಸಂಶಯ ಇದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟನೆ ಕೊಡಬೇಕು. ಆದರೂ ಸಹ ಇದನ್ನು ನಾನು ಒಪ್ಪುತ್ತೇನೆ. ಸರ್ಕಾರ ಇದನ್ನು ಬಹಿರಂಗಪಡಿಸಲಿ. ಸರ್ಕಾರ ಇದರ ಮೇಲೆ ಒಂದು ನಿರ್ಣಯವನ್ನು ತೆಗೆದುಕೊಳ್ಳಲಿ. ಅದರ ಮೇಲೆ ಮತ್ತೆ ಚರ್ಚೆ ಮಾಡೋಣ. ಆದರೆ, ಇವತ್ತಿನ ದಿವಸ ನಾನು ಹೇಳುವುದೇನೆಂದರೆ, ಈ ಸದಾಶಿವ ಆಯೋಗದ ವರದಿ ಸರ್ಕಾರದ ಮುಂದೆ ಇದೆ. ಇದರ ಬಗ್ಗೆ ನನ್ನ ಮನವಿಯೇನೆಂದರೆ, ಸರ್ಕಾರ ಸದಾಶಿವ ಆಯೋಗದ ವರದಿಯನ್ನು ತಿರಸ್ಕಾರ ಮಾಡಬೇಕು. ಇದು ಅಸಂವಿಧಾನಿಕವಾಗಿದೆ, ಕಾನೂನುಬಾಹಿರವಾಗಿದೆ ಮತ್ತು ಇದರಲ್ಲಿ terms of reference ಅನ್ನು ಬಿಟ್ಟು ಸದಾಶಿವ ಆಯೋಗದ ವರದಿಯನ್ನು ಕೊಟ್ಟಿದ್ದಾರೆ. ಇದನ್ನು ಬಹಿರಂಗಪಡಿಸಿದ ಮೇಲೆ ಅದು ಸ್ಪಷ್ಟವಾಗುತ್ತದೆ, ಆ ಸಮಯದಲ್ಲಿ ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ ಇವತ್ತು ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ನಾನು ಹಿಂದಿನ ಸರ್ಕಾರದಲ್ಲಿಯೂ ಸಹ ಮನವಿ ಮಾಡಿದ್ದೇನೆ. ಈ ಸದಾಶಿವ ಆಯೋಗದ ವರದಿಯನ್ನು ತಿರಸ್ಕಾರ ಮಾಡಬೇಕು. ಇದನ್ನು ಜನಗಣತಿಯ ಆಧಾರದ ಮೇಲೆ ಸರ್ವೆ ಮಾಡಿದ್ದು, ಅದು ಸರಿಯಾಗಿಲ್ಲ. ನಾನು ವಿಶೇಷವಾಗಿ ಹೇಳುವುದೇನೆಂದರೆ, ಲಂಬಾಣಿ ಜನಾಂಗದವರು ಸಾಮಾನ್ಯವಾಗಿ ಪ್ರತಿದಿನ ಕೆಲಸಕ್ಕಾಗಿ ಹೊರಗಡೆ ಹೋಗಿರುತ್ತಾರೆ. ಅವರು ಹೊರಗಡೆ ಹೋದಾಗ ನಾವು ಜನಗಣತಿಯ ಬಗ್ಗೆ ಸರ್ವೆ ಮಾಡಿದರೆ ಅದು ಸರಿಯಾಗಿ ಬರುವುದಿಲ್ಲ. ಆ ಜನಾಂಗದವರು ನಾವು ಗುಳೆ ಹೋಗುತ್ತೇವೆ, ನಾವು ಕೆಲಸ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವುದಕ್ಕೆ ಹೊರಗಡೆ ಹೋಗುತ್ತೇವೆ. ಆ ಸಮಯದಲ್ಲಿ ನಮ್ಮ ಜನಗಣತಿಯ ಬಗ್ಗೆ ಸರ್ವೆ ಮಾಡಿದರೆ ಅವರು ಇದರಲ್ಲಿ ಸೇರಿರುವುದಿಲ್ಲ. ಅದಕ್ಕೆ ಇದರ ಬಗ್ಗೆ ನಮಗೆ ನಂಬಿಕೆ ಇಲ್ಲ. ಈ ಸದಾಶಿವ ಆಯೋಗವನ್ನು ತಿರಸ್ಕಾರ ಮಾಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಯವರು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ):–** ಮಾನ್ಯ ಸಭಾಪತಿಯವರೇ, ಸರ್ಕಾರ ದಿನಾಂಕ:08–03–2018ರಂದು ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ರಚನೆ ಮಾಡಿತ್ತು. ಆ ಉಪ ಸಮಿತಿಯ ವರದಿ ಬಂದ ನಂತರ ಇದರ ಬಗ್ಗೆ ನಾನು ಮಾತನಾಡುತ್ತೇನೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತೆ ಈ ಸರ್ಕಾರದಲ್ಲಿ ಇನ್ನು ಹೊಸ ಸಮಿತಿ ರಚನೆಯೇ ಆಗಿಲ್ಲ.

**ಸಭಾಪತಿಯವರು:–** ಮಾನ್ಯ ಆರ್.ಧರ್ಮಸೇನರವರೇ ಉತ್ತರದಲ್ಲಿ ಸರಿಯಾಗಿ ಇದೆ ನೋಡಿ.

(ಮುಂದು)

**(335) 11/03/2020/6:50/ಎಸ್‌ಪಿಆರ್/ಎಕೆ**

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಹೊಸ ಸಮಿತಿ ಏನು ಶಿಫಾರಸ್ಸು ಮಾಡುತ್ತದೆ ಎಂದರೆ, ಇನ್ನೂ ಸರ್ಕಾರ ಸಮಿತಿಯನ್ನು ರಚನೆ ಮಾಡಿದಂತೆ ಕಾಣುತ್ತಿಲ್ಲ.

**ಸಭಾಪತಿಯವರು:–** ಸರ್ಕಾರ ಉಪ ಸಮಿತಿಯನ್ನು ರಚನೆ ಮಾಡುವುದಾಗಿ ತಿಳಿಸಿದೆ.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ನೂರು ಜಾತಿಗಳ ಮೇಲೆ ನನಗೆ ಯಾವುದೇ ರೀತಿಯ ಅಸಮಾಧಾನ ಹಾಗೂ ಅಸಹಕಾರವಿಲ್ಲ. ಇವತ್ತಿನ ಚುಕ್ಕೆ ರಹಿತ ಪಶ್ನೆ ಸಂಖ್ಯೆ 223 ರಲ್ಲಿ ಸಮಾಜ ಕಲ್ಯಾಣ ಸಚಿವರಿಂದ ನಾನು ಉತ್ತರವನ್ನು ಪಡೆದುಕೊಂಡಿದ್ದೇನೆ. ಈ ಹಿಂದೆ 1950 ರಲ್ಲಿ ಸಂವಿಧಾನವು ಜಾರಿಗೆ ಬಂದಾಗ, ಕೇವಲ ಆರು ಜಾತಿಗಳಿದ್ದವು.

**ಸಭಾಪತಿಯವರು:–** ಆ ವಿಷಯ ಈಗ ಬೇಡ. It's over.

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಬಂದ ನಂತರ ಮೊದಲ ಸಂವಿಧಾನದಲ್ಲಿ ಜಾತಿಗಳನ್ನು ಗುರ್ತಿಸಿದ ಸಂದರ್ಭದಲ್ಲಿ, ಈಗ ಏನನ್ನು ತೆಗೆದುಕೊಳ್ಳಲಾಗಿದೆ, ಅಷ್ಟನ್ನೂ ಸೇರಿಸಿ ನಮಗೆ ಕೊಡಿ. ಹಾಲಿ ಇರುವ ಮೀಸಲಾತಿಯಲ್ಲಿಯೇ ಮೊದಲಿದ್ದ ಆರು ಜಾತಿಗಳ ಜೊತೆಗೆ ಹೆಚ್ಚುವರಿಯಾಗಿ 94 ಜಾತಿಗಳನ್ನು ಸೇರಿಸಿದರೆ, ಕಷ್ಟವಾಗುತ್ತದೆ. ಸರ್ಕಾರವು ಮೀಸಲಾತಿಯನ್ನು ಇನ್ನೂ ಹೆಚ್ಚಿಸಬೇಕು. ಹೊಸ ಜಾತಿಗೂ ಸಹ ಮೀಸಲಾತಿ ನೀಡಿ. ನಮ್ಮ ಜಾತಿಯ ಜನಸಂಖ್ಯೆಗನುಗುಣವಾಗಿ ನಮಗೆ ನೀಡಬೇಕಾದ್ದನ್ನು ನೀಡಿ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಪಟ್ಟಿಗೆ ಯಾವುದೇ ರೀತಿಯಾದ ತಿದ್ದುಪಡಿಯನ್ನು ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಇದು ಸಂಸತ್ತಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಇರುವ ಅಧಿಕಾರವಾಗಿದೆ. ಈ ವಿಷಯದಲ್ಲಿ ಮಾನ್ಯ ಸದಸ್ಯರಿಗೆ ಯಾವುದೇ ಸಂಶಯ ಬೇಡ. ನಾವು ಯಾವುದೇ ತಿದ್ದುಪಡಿಯನ್ನು ಮಾಡುವುದಿಲ್ಲ.

**ಪ್ರಶ್ನೆ ಸಂಖ್ಯೆ 611**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕಾಂತರಾಜ್(ಬಿಎಂಎಲ್):–** ಮಾನ್ಯ ಸಭಾಪತಿಯವರೇ, ನಾನು ಕ್ರಮ ಸಂಖ್ಯೆ (ಅ) ರಲ್ಲಿ ಕೇಳಿರುವ ಪ್ರಶ್ನೆಗೆ ಸರ್ಕಾರವು ಕೇವಲ 12767.00 ಲಕ್ಷ ರೂಪಾಯಿಗಳು ಎಂಬುದಾಗಿ ಲಿಖಿತ ಉತ್ತರವನ್ನು ನೀಡಿದೆ. ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ ಎನ್ನುವ ಮಾತಿನಂತೆ ಆಗುವುದು ಬೇಡ. ಮಾನ್ಯ ಸಭಾನಾಯಕರು ಹಾಗೂ ಮುಜರಾಯಿ ಇಲಾಖೆಯ ಸಚಿವರು ಮಾನ್ಯ ಮುಖ್ಯಮಂತ್ರಿಗಳಿಗೆ ಆಪ್ತರಾಗಿದ್ದು, ಅವರು ಮನಸ್ಸು ಮಾಡಿದರೆ, ಇಲಾಖೆಗೆ ಇನ್ನೂ ಹೆಚ್ಚಿನ ಅನುದಾನ ಪಡೆಯಬಹುದು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಮಾನ್ಯ ಮಂತ್ರಿಗಳು ಒಳ್ಳೆಯವರಾಗಿದ್ದು, ವರವನ್ನು ನೀಡುತ್ತಾರೆ. ನಾನು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಸರ್ಕಾರವು ಉತ್ತರಿಸಿದೆ. ಆದರೆ ನನಗಿರುವ ನೋವು ಏನೆಂದರೆ, ಇವತ್ತಿನ ದಿವಸ ಮುಜರಾಯಿ ಇಲಾಖೆಯವರು ಇಲಾಖೆಯ ವ್ಯಾಪ್ತಿಗೆ ಒಳಪಡದ ಇನ್ನಿತರೆ ದೇವಸ್ಥಾನಗಳಿಗೂ ಸಹ ಅನುದಾನ ನೀಡುತ್ತಿದ್ದಾರೆ. ಈ ಕಾರಣಕ್ಕಾಗಿ ನಾನು ಧನ್ಯವಾದಗಳನ್ನು ಹೇಳಲಿಚ್ಛಿಸುತ್ತೇನೆ. ನಮ್ಮ ಭಾಗದ ಪ್ರತಿ ಊರಿನಲ್ಲಿ ಇತಿಹಾಸವಿಲ್ಲದಿರುವ ಶತಮಾನಗಳಷ್ಟು ಹಳೆಯದಾದ ತುಂಬಾ ದೇವಸ್ಥಾನಗಳಿವೆ. ಆ ಪೈಕಿ ಗ್ರಾಮ ದೇವತೆ ಇರಬಹುದು ಅಥವಾ ಇನ್ನಿತರೆ ದೇವಸ್ಥಾನಗಳಿರಬಹುದು. ಒಂದು ಊರು ಅಥವಾ ತಾಲ್ಲೂಕಿನಲ್ಲಿರುವ ಅಂತಹ ದೇವಸ್ಥಾನಗಳ ಬಗ್ಗೆ ಇಲಾಖೆಯಲ್ಲಿ ದಾಖಲಾತಿ ಅಥವಾ ಇನ್ನಿತರೆ ಮಾಹಿತಿಗಳು ಲಭ್ಯವಿದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಇವತ್ತಿನ ಪೂರ್ವಾಹ್ನ ನಮ್ಮ ಸದಸ್ಯರುಗಳೆಲ್ಲರೂ ನಮ್ಮ ಸಂವಿಧಾನದ ಬಗ್ಗೆ ಮಾತನಾಡಿದ್ದಾರೆ ಆಗ ಡ್ರೆಸ್ ಕೋಡ್ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕೆಲವರು ತಮ್ಮ ತಂದೆ, ತಾತಂದಿರು ದೇವಸ್ಥಾನದ ಪೂಜೆ ಮಾಡಿಕೊಂಡು ಬರುತ್ತಿದ್ದರು, ಹೀಗಾಗಿ ದೇವಸ್ಥಾನವನ್ನು ಅವರ ವಂಶಸ್ಥರಿಗೆ ಮಾತ್ರವೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಬೇಕು ಎಂಬುದಾಗಿ ಹೇಳುತ್ತಾರೆ. ಇಂತಹ ಹಲವಾರು ಸಮಸ್ಯೆಗಳಿವೆ. ಆಗ ದೇವಸ್ಥಾನಕ್ಕೆ ಸಂಬಂಧಪಟ್ಟ ದಾಖಲೆಗಳು ಅವಶ್ಯವಾಗಿ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಸಚಿವರು ಬೆಳಕನ್ನು ಚೆಲ್ಲಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಸುಮಾರು 34,000ಕ್ಕೂ ಹೆಚ್ಚು ದೇವಸ್ಥಾನಗಳು ಒಳಪಡುತ್ತವೆ. ಅವುಗಳನ್ನು ಹೊರತು ಪಡಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೆಲವು ದೇವಸ್ಥಾನಗಳಿವೆ. ಸರ್ಕಾರದ ವ್ಯಾಪ್ತಿಯಲ್ಲಿ ಬರದಿರುವ ಖಾಸಗಿ ದೇವಸ್ಥಾನಗಳಿಗೂ ಸಹ ಅನುದಾನವನ್ನು ಮಂಜೂರು ಮಾಡಬೇಕೆಂದು ಹೇಳಿದ್ದಾರೆ. ಒಟ್ಟು ಅನುದಾನದ ಶೇಕಡಾ 50 ರಷ್ಟು ಹಣವನ್ನು ಮುಜರಾಯಿ ಇಲಾಖೆಗೆ ಒಳಪಡುವ ದೇವಸ್ಥಾನಗಳಿಗೆ ನೀಡಲಾಗುವುದು. ಆದ್ಯತೆಯ ಆಧಾರದ ಮೇಲೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಣ್ಣ ಗುಡಿ-ಗೋಪುರಗಳಿಗೆ ಕೊಡುವ ಅನುದಾನಗಳನ್ನು ಇನ್ನುಳಿದ ಶೇಕಡಾ 50 ರೊಳಗೆ ಕೊಡುವ ಯೋಚನೆಯನ್ನು ಮಾಡಲಾಗಿದೆ. ಅನಿವಾರ್ಯ ಸಂದರ್ಭಗಳಲ್ಲಿ ನಿಯಮಾವಳಿಗಳನ್ನು ಸಡಿಲಿಸಿ, ಅನುದಾನದ ಸದ್ಬಳಕೆ ಮಾಡುವ ನಿಟ್ಟಿನಲ್ಲಿ ಅನುದಾನ ಮಂಜೂರು ಮಾಡುವ ಯೋಚನೆಯು ಸರ್ಕಾರದಲ್ಲಿದೆ. ಕುತೂಹಲಕ್ಕಾಗಿ ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುವುದೇನೆಂದರೆ, ಯಾವುದೇ ಇಲಾಖೆಯಲ್ಲಿ ಯಾವುದೇ ಯೋಜನೆಗೆ ಉದಾಹರಣೆಗೆ ಸೇತುವೆ, ರಸ್ತೆ ಇವುಗಳ ನಿರ್ಮಾಣಕಾಗಿ ಹತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದರೆ, ಆ ಹತ್ತು ಲಕ್ಷ ರೂಪಾಯಿಗಳಲ್ಲಿಯೇ ಕಾಮಗಾರಿಯನ್ನು ಪೂರ್ಣಗೊಳಿಸುತ್ತಾರೆ. ಆದರೆ ನಮ್ಮ ಇಲಾಖೆಯ ಯಾವುದೇ ಯೋಜನೆಗೆ ಹತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದರೆ, ಭಕ್ತರು ಆ ಹಣಕ್ಕೆ ಹೆಚ್ಚುವರಿಯಾಗಿ ಮೂವತ್ತು ಲಕ್ಷ ರೂಪಾಯಿಗಳನ್ನು ಸೇರಿಸಿ, ಒಟ್ಟು ನಲವತ್ತು ಲಕ್ಷ ರೂಪಾಯಿಗಳಲ್ಲಿ ದೇವಸ್ಥಾನವನ್ನು ನಿರ್ಮಾಣ ಮಾಡುತ್ತಾರೆ. ಇಂತಹ ಸಂಗತಿಗಳನ್ನು ನಮ್ಮ ಇಲಾಖೆಯಲ್ಲಿ ನೋಡಬಹುದು. ಹೀಗಾಗಿ ಪ್ರತಿಯೊಂದು ವಿಚಾರದಲ್ಲಿಯೂ ಸಹ ಅತ್ಯಂತ ಅರ್ಥಗರ್ಭಿತವಾದ ಕೆಲಸಗಳನ್ನು ನಾವು ಮಾಡುತ್ತೇವೆ. ದೇವಸ್ಥಾನದ ಅರ್ಚಕರ ಹಿತರಕ್ಷಣೆಯನ್ನು ಕಾಪಾಡುವುದಕ್ಕಾಗಿ ಮತ್ತು 34,000 ದೇವಸ್ಥಾನಗಳ ಪೈಕಿ 24,500 ದೇವಸ್ಥಾನಗಳಿಗೆ ಪ್ರತಿ ವರ್ಷದಂತೆ ತಸ್ತಿಕನ್ನು ಕೊಡಲಾಗುತ್ತದೆ. ಇದರ ಮೂಲಕ ದೇವಸ್ಥಾನದ ದೀಪಗಳಿಗೆ ಹಾಕುವ ಎಣ್ಣೆ, ಬತ್ತಿ, ಅರ್ಚಕರ ಸಮಸ್ಯೆ ಇತ್ಯಾದಿಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಇವುಗಳೆಲ್ಲವನ್ನೂ ಮೀರಿ, ಮಾನ್ಯ ಸದಸ್ಯರು ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಮುಜರಾಯಿ ಇಲಾಖೆಗೆ ಹೆಚ್ಚಿನ ಅನುದಾನಗಳನ್ನು ಪಡೆಯಬೇಕೆಂದು ಹೇಳಿದ್ದಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಸ್ತಾಪವನ್ನು ಕೊಡುತ್ತಿದ್ದೇನೆ. ಅವರು ನಮಗೆ ಹೆಚ್ಚು ಅನುದಾನಗಳನ್ನು ಬಿಡುಗಡೆ ಮಾಡುತ್ತಾರೆಂಬ ವಿಶ್ವಾಸವಿದೆ. ಮೇಲ್ಮನೆಯ ಶಾಸಕರುಗಳು ಸೇರಿದಂತೆ, ಎಲ್ಲಾ ಶಾಸಕರುಗಳಿಗೆ ಅವರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಅವಶ್ಯಕವಾಗಿರುವ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅನುಕೂಲಗಳನ್ನು ಮಾಡುವ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡುತ್ತೇವೆ. ಈ ನಿಟ್ಟಿನಲ್ಲಿ ಈ ಸದನದ ಸದಸ್ಯರ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನಗಳನ್ನು ಆಗಿಂದಾಗ್ಗೆ ನಾವು ಕೇಳುತ್ತಿರುತ್ತೇವೆ.

**ಶ್ರೀ ಕಾಂತರಾಜ್(ಬಿಎಂಎಲ್):–** ಮಾನ್ಯ ಸಭಾಪತಿಯವರೇ, ಒಂದು ವಿಷಯದ ಬಗ್ಗೆ ಮಾಹಿತಿಯನ್ನು ನಾನು ಕೇಳಲಿಚ್ಛಿಸುತ್ತೇನೆ. ಈ ಸದನದ ಹಲವಾರು ಸದಸ್ಯರುಗಳು ಇಲ್ಲಿ ಹಲವಾರು ವರ್ಷಗಳಿಂದ ಇದ್ದಾರೆ. ಹೀಗಾಗೆ ಹಲವಾರು ಶಾಸಕರುಗಳನ್ನು ನೋಡಿದ್ದಾರೆ. ಹಾಲಿ ಕಂದಾಯ ಮಂತ್ರಿಗಳು ಸದನದಲ್ಲಿ ಉಪಸ್ಥಿತರಿಲ್ಲ. ರಾಜ್ಯದ ಕೆಲವೊಂದು ಗ್ರಾಮಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ದೇವಸ್ಥಾನಗಳಿರುತ್ತವೆ. ಅಂತಹ ದೇವಸ್ಥಾನಗಳ ನಕ್ಷೆಯನ್ನು ಕಂದಾಯ ಇಲಾಖೆಯಿಂದ ಪಡೆದುಕೊಳ್ಳಿ. ಏಕೆಂದರೆ, ನಗರ ಪ್ರದೇಶಗಳು ಹೆಚ್ಚಾದಂತೆಲ್ಲಾ ದೇವಸ್ಥಾನದ ಜಾಗಗಳನ್ನು ಒತ್ತುವರಿ ಮಾಡುತ್ತಾರೆ. ಇದಕ್ಕೆ ಬೇರೆ ಬೇರೆ ಜಾತಿ–ಜನಾಂಗದ ಜನರು ಗಲಾಟೆಗಳನ್ನು ಮಾಡುತ್ತಾರೆ. ಇಂತಹ ಪ್ರಸಂಗಗಳು ಜಾಸ್ತಿಯಾಗುತ್ತಿವೆ. ದೇವಸ್ಥಾನದ ಆಸ್ತಿ ಸರ್ಕಾರದ ಆಸ್ತಿಯಾಗಿರುವುದರಿಂದ ನಾವು ಅವುಗಳ ರಕ್ಷಣೆಯನ್ನು ಮಾಡಬೇಕು. ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದೇವಸ್ಥಾನ ಯಾವುದೇ ಇರಲಿ, ಅದಕ್ಕೆ ಸರ್ಕಾರದಿಂದ ಅನುದಾನ ದೊರೆಯುತ್ತಿದೆಯೇ ಅಥವಾ ಇಲ್ಲವೇ ಎಂದು ತಿಳಿದುಕೊಳ್ಳಬೇಕು ಹಾಗೂ ಎಲ್ಲಾ ದೇವಸ್ಥಾನಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಂಗ್ರಹಿಸಿಟ್ಟುಕೊಳ್ಳುವಂತಹ ಕೆಲಸಗಳನ್ನು ಮಾನ್ಯ ಮಂತ್ರಿಗಳು ಮಾಡಬೇಕು. ದೇವಸ್ಥಾನದ ಸುತ್ತಲೂ ಕೌಂಪೌಂಡ್ ಕಟ್ಟಿಸುವ; ಇಂತಹ ಯಾವುದಾದರೂ ದಾಖಲೆಗಳು ಸರ್ಕಾರದಲ್ಲಿರಬೇಕು. ಕೆಲವೊಂದು ದೇವಸ್ಥಾನಗಳು ಸರ್ಕಾರಿ ಜಾಗದಲ್ಲಿದ್ದು, ಅವುಗಳಿಗೆ ಯಾವುದೇ ದಾಖಲಾತಿಗಳಿರುವುದಿಲ್ಲ. ಕೆಲವೊಂದು ದೇವಸ್ಥಾನಗಳಿಗೆ ಯಾರೋ ಅಧ್ಯಕ್ಷ ಅಥವಾ ಉಪಾಧ್ಯಕ್ಷರಾಗಿರುತ್ತಾರೆ. ಹಾಗೂ ತಲೆತಲಾಂತರದಿಂದ ಅವರೇ ದೇವಸ್ಥಾನವನ್ನು ನಡೆಸಿಕೊಂಡು ಬರುತ್ತಿರುತ್ತಾರೆ. ಇಂತಹ ಕ್ರಮಗಳಿಗೆ ಸರ್ಕಾರ ಕಡಿವಾಣ ಹಾಕಬೇಕು. ಆದಾಯ ಹೆಚ್ಚಿರುವ ದೇವಸ್ಥಾನಗಳಿಗೆ ಪೂಜೆ–ಪುನಸ್ಕಾರಗಳನ್ನು ಮಾಡುತ್ತಾರೆ ಮತ್ತು ಕಡಿಮೆ ಅನುದಾನ ದೊರೆಯುವ ದೇವಸ್ಥಾನಗಳಿಗೆ ಪೂಜೆಯನ್ನು ಮಾಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವ ಅಂಶವು ಸತ್ಯವಾಗಿದೆ. ಮುಜರಾಯಿ ಇಲಾಖೆಯ ವ್ಯಾಪ್ತಿಗೊಳಪಡುವ 34,000 ದೇವಸ್ಥಾನಗಳಲ್ಲಿ ಸಾವಿರಾರು ಎಕರೆ ಪ್ರದೇಶಗಳನ್ನು ಅತಿಕ್ರಮಣ ಮಾಡಿದ್ದಾರೆ ಎಂಬ ದೂರುಗಳು ಬಂದಿವೆ. ಪ್ರಥಮ ಬಾರಿಗೆ ಅವುಗಳ ಸರ್ವೆಯನ್ನು ಮಾಡುವುದಕ್ಕೆ ಅವಶ್ಯವಿರುವ ಯೋಜನೆಗಳನ್ನು ಮಾಡಲಾಗುತ್ತಿದೆ. ನಮ್ಮ ಇಲಾಖೆಯ ಯಾವುದೇ ದೇವಸ್ಥಾನ ಇರಬಹುದು ಅವುಗಳ ಎಲ್ಲಾ ಆಸ್ತಿಗಳನ್ನು ಗಣಕೀಕರಣಗೊಳಿಸುತ್ತಿದ್ದೇವೆ. ಈ ನಿಟ್ಟಿನಲ್ಲಿ ರಾಜ್ಯದ ಅತ್ಯಂತ ದಕ್ಷ ಅಧಿಕಾರಿಗಳನ್ನು ನಿಯೋಜನೆ ಮಾಡಿದ್ದೇವೆ. ಇನ್ನು ಮುಂದಿನ ಮೂರು ತಿಂಗಳಿನಲ್ಲಿ ಸರ್ಕಾರದ ವ್ಯಾಪ್ತಿಗೊಳಪಡುವ ಎಲ್ಲಾ ದೇವಸ್ಥಾನಗಳ ಆಸ್ತಿ–ಪಾಸ್ತಿಗಳು ಗಣಕೀಕರಣಗೊಳ್ಳುತ್ತವೆ. ಆ ನಂತರದಲ್ಲಿ ದೇವಸ್ಥಾನದ ಜಾಗಗಳನ್ನು ಯಾರು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒತ್ತುವರಿ ಮಾಡಿದ್ದಾರೆ ಎಂಬುದರ ಬಗ್ಗೆ ಸರ್ವೆ ಮಾಡಿಸಲು ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಇದರ ಜೊತೆಗೆ ಸಾಮಾಜಿಕ ನ್ಯಾಯಕ್ಕೆ ಧಕ್ಕೆಯಾಗದಂತೆ ಹಾಗೂ ಅಸ್ಪೃಶ್ಯತೆ ನಡೆಯದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಶೇಕಡಾ 100 ರಷ್ಟು ನಮ್ಮ ದೇವಸ್ಥಾನಗಳಲ್ಲಿ ಅಸ್ಪೃಶ್ಯತೆಯನ್ನು ಆಚರಿಸುವುದಕ್ಕೆ ಅವಕಾಶವಿಲ್ಲ. ಇಂತಹ ಯಾವುದೇ ಪರಿಸ್ಥಿತಿ ಎದುರಾದರೆ, ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಎನ್.ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಪೂರಕವಾಗಿ, ನಮ್ಮ ರಾಜ್ಯದಲ್ಲಿನ ಕೆಲವು ದೇವಸ್ಥಾನಗಳಲ್ಲಿ ಉದಾಹರಣೆಗೆ ಮಲೈಮಹಾದೇಶ್ವರ, ಕೊಲ್ಲೂರು ಮೂಕಾಂಬಿಕೆ, ಚಾಮುಂಡೇಶ್ವರಿ, ನಂಜನಗೂಡು ನಂಜುಂಡೇಶ್ವರ ಹಾಗೂ ಇನ್ನಿತರೆ ದೇವಸ್ಥಾನಗಳಲ್ಲಿ ಕೋಟ್ಯಂತರ ರೂಪಾಯಿಗಳ ಆದಾಯವಿದೆ. ಅಂತಹ ಆದಾಯವನ್ನು ಬೇರೆ ದೇವಸ್ಥಾನಗಳ ಪುನರುಜ್ಜೀವನಕ್ಕಾಗಿ ಉಪಯೋಗಿಸಲು ಅವಕಾಶವಿದೆಯೇ? ಒಂದು ವೇಳೆ ಆ ರೀತಿಯ ಅವಕಾಶವಿದ್ದರೆ, ಆ ಹಣವನ್ನು ಬೇರೆ ಬೇರೆ ದೇವಸ್ಥಾನಗಳಿಗೆ ಒದಗಿಸುವುದು ಉಚಿತವೆನಿಸುತ್ತದೆ. ಇದರ ಜೊತೆಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ, ಇಲಾಖೆಯ ವ್ಯಾಪ್ತಿಗೆ ಒಳಪಡದಿರುವ ದೇವಸ್ಥಾನಗಳನ್ನು ಸರ್ವೆ ಮಾಡಿಸಿದರೆ ಅನುಕೂಲವಾಗುತ್ತದೆ. ಎಲ್ಲರಿಗೂ ಸಹ ದೇವಸ್ಥಾನವೆಂದರೆ, ಭಕ್ತಿಯ ಭಾವ ಬರುತ್ತದೆ. ಇವತ್ತಿನ ದಿವಸ ಎಲ್ಲಾ ಕಡೆಯ ದೇವಸ್ಥಾನಗಳಲ್ಲಿ ಇವತ್ತಿನ ದಿವಸ ಪೂಜೆ-ಪುನಸ್ಕಾರಗಳು ಜಾಸ್ತಿಯಾಗುತ್ತಿವೆ. ಇದರ ಮುಖಾಂತರ ನಮ್ಮ ಯುವ ಜನಾಂಗದಲ್ಲಿ ದೇವರ ಬಗ್ಗೆ ಕಡಿಮೆ ಆಸಕ್ತಿ ಇದ್ದರೂ ಸಹ ಅವರ ಹಿರಿಯರು ಸೂಚನೆಯಿಂದಾಗಿ ಯುವಕರು ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದಾರೆ. ಹೀಗಾಗಿ ಇಲಾಖೆಯ ವ್ಯಾಪ್ತಿಗೆ ಒಳಪಡದಿರುವ ದೇವಸ್ಥಾನಗಳನ್ನು ಸರ್ವೆ ಮಾಡಿಸಿ, ಅವುಗಳ ರಕ್ಷಣೆಯನ್ನು ಸಹ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇವೆ.

**ಶ್ರೀ ಕಾಂತರಾಜ್(ಬಿಎಂಪಿಎಲ್):-** ಮಾನ್ಯ ಸಭಾಪತಿಯವರೇ, ನಾನು ಒಂದು ಸಂಗತಿಯನ್ನು ಹೇಳಲಿಚ್ಛಿಸುತ್ತೇನೆ. ಯಾರೂ ಸಹ ಅನ್ಯಥಾ ಭಾವಿಸಬಾರದು. ಇವತ್ತಿನ ದಿವಸ ರಸ್ತೆ, ಶಾಲೆ ಇವುಗಳ ನಿರ್ಮಾಣಕ್ಕಿಂತ ದೇವಸ್ಥಾನಗಳ ನಿರ್ಮಾಣ ಸಂಖ್ಯೆ ಜಾಸ್ತಿಯಾಗುತ್ತಿದೆ. ಪ್ರಾರಂಭದಲ್ಲಿ ಸಣ್ಣ ದೇವಸ್ಥಾನವಿದ್ದು, ನಂತರದಲ್ಲಿ ದೇಣಿಗೆಯನ್ನು ಸಂಗ್ರಹಿಸಿ ದೊಡ್ಡದಾಗಿ ನಿರ್ಮಿಸುತ್ತಾರೆ. ಪ್ಲ್ಯಾನ್‌ನ್ನು ಅನುಮೋದಿಸದೇ, ಯಾವುದೇ ದೇವಸ್ಥಾನದ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬಾರದು. ಏಕೆಂದರೆ, ಅವುಗಳ ರಕ್ಷಣೆ ಇರುವುದಿಲ್ಲ. ದೇವಸ್ಥಾನದ ಜಾಗಗಳನ್ನು ಬೇರೆ ಕೆಲಸಗಳಿಗೆ ಉಪಯೋಗಿಸುತ್ತಾರೆ. ಯಾವುದೇ ದೇವಸ್ಥಾನವನ್ನು ಅಭಿವೃದ್ಧಿಪಡಿಸಬೇಕಾದರೆ, ಅದಕ್ಕೆ ಪ್ಲ್ಯಾನ್‌ನ ಅನುಮೋದನೆಯನ್ನು ಪಡೆಯಲೇಬೇಕು. ಮನೆಗಳನ್ನು ನಿರ್ಮಿಸಲು ನಕ್ಷೆಯನ್ನು ಯಾವ ರೀತಿ ಅನುಮೋದಿಸಲಾಗುತ್ತದೆಯೋ ಅದೇ ರೀತಿಯಾಗಿ ದೇವಸ್ಥಾನಗಳಿಗೂ ಸಹ ಅನುಮೋದನೆಯನ್ನು ನೀಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ತಿಳಿದಿರುವ ಮತ್ತೊಂದು ವಿಚಾರವೇನೆಂದರೆ, ಈ ಹಿಂದೆ ಹಳ್ಳಿಗಳಲ್ಲಿರುವ ದೇವಸ್ಥಾನಗಳ ಪೂಜಾರಿಗಳಿಗೆ ವೇತನವನ್ನು ನೀಡುತ್ತಿರಲಿಲ್ಲ. ಹೀಗಾಗಿ ಹಳ್ಳಿಯ ಜನರು ಅವರ ಜಮೀನಿನಲ್ಲಿ ಬೆಳೆದ ದವಸ–ಧಾನ್ಯಗಳನ್ನು ವರ್ಷಕ್ಕೊಂದು ಬಾರಿ ಕೊಡುವುದರ ಮುಖಾಂತರ ಪೂಜಾರಿಗಳನ್ನು ಪೂಜೆಗಾಗಿ ನಿಯೋಜಿಸುತ್ತಿದ್ದರು. ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ಜಮೀನು ಇರುತ್ತಿತ್ತು. ಆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಬೇರೆಯವರಿಗೆ ನೀಡಿ, ಅಥವಾ ಪೂಜಾರಿಯೇ ಆ ಜಮೀನಿನಲ್ಲಿ ಬೆಳೆಗಳನ್ನು ಬೆಳೆದು, ಆ ಜಮೀನಿಂದ ಬರುವ ಆದಾಯವನ್ನು ಪಡೆದುಕೊಂಡು ದೇವಸ್ಥಾನದ ಪೂಜೆಯನ್ನು ಮಾಡಿಕೊಂಡು ಹೋಗುತ್ತಿದ್ದರು. ಇಂತಹ ವ್ಯವಸ್ಥೆ ಬಹಳ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿತ್ತು. ಕ್ರಮೇಣವಾಗಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಇದ್ದ ಜಮೀನನ್ನು ದೇವಸ್ಥಾನದ ಪೂಜಾರಿಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದರು. ಕಾಲಾನಂತರದಲ್ಲಿ ಪೂಜಾರಿಯ ಮಕ್ಕಳು ದೇವಸ್ಥಾನದ ಪೂಜೆಯನ್ನು ಮಾಡುತ್ತಿರಲಿಲ್ಲ. ಆದರೆ ಜಮೀನು ಅವರ ವಶಕ್ಕೆ ಹೋಗಿದೆ. Adverse Possession ನಂತಹ ಸಂಗತಿಗಳಾಗಿವೆ. ಇಂತಹ ಅತಿಕ್ರಮಣಗೊಂಡ ದೇವಸ್ಥಾನದ ಜಮೀನುಗಳು ದೇವಸ್ಥಾನದ ಆಸ್ತಿಯಾಗಿರುವುದರಿಂದ, ಅವುಗಳನ್ನು ಹಿಂಪಡೆಯಲು ಸರ್ಕಾರವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

**(ಮುಂದು)**

(336)/11–3–2020/7–00/ಎಲ್ಎಂ/ಎಕೆ

**ಶ್ರೀ ಆರ್.ಧರ್ಮಸೇನ:–** ಮಾನ್ಯ ಸಭಾಪತಿಗಳೆ, ನಾನು ಕಳಕಳಿಯಿಂದ ಕೈಮುಗಿದು ಮುಜರಾಯಿ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕೆಳದ ತಿಂಗಳು ಹೆಗ್ಗಡದೇವನಕೋಟೆ, ಮೈಸೂರು ಮತ್ತು ಚಾಮರಾಜನಗರ ಮೂರು ಕಡೆಗಳಿಂದ ದೇವಸ್ಥಾನಗಳಿಂದ ಆಹ್ವಾನ ಪತ್ರಿಕೆ ಬಂದಿದ್ದವು. ಆಹ್ವಾನ ಪತ್ರಿಕೆಯನ್ನು ಕೊಡಲು ಬಂದವರಿಗೆ ಎಷ್ಟು ಖರ್ಚು ಮಾಡಿದ್ದೀರಾ ಎಂದು ಕೇಳಿದೆ. ಅದಕ್ಕೆ ಅವರು ಒಂದೊಂದು ದೇವಸ್ಥಾನಕ್ಕೆ 2 ಕೋಟಿ, 3 ಕೋಟಿ, 4 ಕೋಟಿ ರೂ.ಗಳಷ್ಟು ಖರ್ಚು ಮಾಡಿರುವುದನ್ನು ಹೇಳಿದರು. 2ಕೋಟಿ ರೂ.ಗಳನ್ನು ಖರ್ಚು ಮಾಡುವಲ್ಲಿ ಒಂದೂವರೆ ಕೋಟಿ ರೂ.ಗಳನ್ನು ಖರ್ಚು ಮಾಡಿ, ಉಳಿದ 50 ಲಕ್ಷ ರೂ.ಗಳಲ್ಲಿ ಒಂದು ಶಾಲೆಯನ್ನು ಕಟ್ಟಿದರೆ ನಮ್ಮ–ನಿಮ್ಮ ಎಲ್ಲರ ಮಕ್ಕಳು ಓದಲು ಬರುತ್ತಿದ್ದರು ಎಂದು ಹೇಳಿದೆ. ನಮಗೆ ಇರುವ ದೊಡ್ಡ ಸಮಸ್ಯೆ ಎಂದರೆ, ನಮ್ಮ ಊರಿನಲ್ಲಿಯೇ ಪ್ರತಿಯೊಂದು ಸಮುದಾಯದವರು ದೇವಸ್ಥಾನ ಕಟ್ಟಲು ನಮಗೆ ಹಣವನ್ನು ಕೇಳುತ್ತಾರೆ. ಯಾವ ಮುಜರಾಯಿ ಸಚಿವರು ನನಗೆ ಅನುದಾನ ನೀಡಿರಲಿಲ್ಲ, ಈಗಿನ ಮುಜರಾಯಿ ಸಚಿವರು ಎರಡು ದೇವಸ್ಥಾನಗಳಿಗಾಗಿ ನನಗೆ ಅನುದಾನವನ್ನು ಬಿಡುಗಡೆ ಮಾಡಿದರು. ಈ ಮೂಲಕ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮುಜರಾಯಿ ಇಲಾಖೆಯಿಂದ ಊರುಗಳಲ್ಲಿ ದೇವಸ್ಥಾನಗಳನ್ನು ನಿರ್ಮಾಣ ಮಾಡುವ ಸಮಯದಲ್ಲಿ ಶಾಲಾ ಕಟ್ಟಡಗಳನ್ನು ಅದಕ್ಕೆ ಸೇರಿಸಿ. ಇದರಿಂದ ಆ ಊರುಗಳ ಶಾಲೆಗಳು ಉದ್ಧಾರವಾಗುತ್ತವೆ, ಇದು ಸರ್ಕಾರಕ್ಕೆ ನನ್ನ ಕಳಕಳಿಯ ಮನವಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಆಸ್ತಿ ರಕ್ಷಣೆ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಎನ್.ಅಪ್ಪಾಜಿಗೌಡರವರು ಮಾತನಾಡಿದ್ದಾರೆ. ಈಗಾಗಲೇ ನಾನು ಸರ್ವೆ ಮಾಡುತ್ತಿರುವ ಬಗ್ಗೆ ಹೇಳಿದ್ದೆನೆ. 190 'ಎ' ದರ್ಜೆಯ ದೇವಸ್ಥಾನಗಳು ಇವೆ. 34,000 ದೇವಸ್ಥಾನಗಳಲ್ಲಿ ವಾರ್ಷಿಕ 25 ಲಕ್ಷ ರೂ.ಗಳಿಗಿಂತ ಹೆಚ್ಚಿನ ಆದಾಯವಿರುವ ಒಟ್ಟು 190 ದೇವಸ್ಥಾನಗಳು ನಮ್ಮ ರಾಜ್ಯದಲ್ಲಿವೆ. ಆ ಎಲ್ಲಾ 190 ದೇವಸ್ಥಾನಗಳಲ್ಲಿ ಇನ್ನು ಮುಂದೆ Assistant Commissioner ಸಮಕ್ಷಮದಲ್ಲಿ, ಸಿಸಿ ಕ್ಯಾಮೆರಾವನ್ನು ಅಳವಡಿಸಿ ಹಣವನ್ನು ಲೆಕ್ಕ ಮಾಡಬೇಕು ಎನ್ನುವ ಆದೇಶವನ್ನು ಕೊಡುತ್ತೇವೆ. ಏಕೆಂದರೆ ಸಣ್ಣ–ಸಣ್ಣ ಅಧಿಕಾರಿಗಳು ಬೇರೆ–ಬೇರೆ ರೀತಿಯ ತೊಂದರೆಗಳನ್ನು ಕೊಡುತ್ತಾರೆ ಎಂದು ಈ ರೀತಿ ಮಾಡಲಾಗುತ್ತದೆ. Assistant Commissioner Grade ಅಧಿಕಾರಿಗಳು ಖುದ್ದು ನಿಂತು ಹುಂಡಿ ಹಣವನ್ನು ಲೆಕ್ಕ ಮಾಡಬೇಕೆಂದು ತಿಳಿಸಿದ್ದೇವೆ. ಹೊಸ ವಿನ್ಯಾಸದ ಇ–ಹುಂಡಿಯನ್ನು ನಿರ್ಮಾಣ ಮಾಡಲು ಯೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ಕೆಲವು ತಾಂತ್ರಿಕ ದೋಷಗಳನ್ನು ಬಗೆಹರಿಸಿಕೊಳ್ಳಲು ರಾಜ್ಯ ಮತ್ತು ಕೇಂದ್ರದ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತಿದ್ದೇವೆ. ಇ–ಹುಂಡಿಯನ್ನು ಅಳವಡಿಸಿ ಅದರಲ್ಲಿ ನಾವು ಯಶಸ್ವಿಯಾದರೆ, ಈಗ ಬರುತ್ತಿರುವ ಆದಾಯಕ್ಕಿಂತ ದುಪ್ಪಟ್ಟು ಆದಾಯ ಬರುತ್ತದೆ ಎನ್ನುವ ಮಾಹಿತಿ ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಸಿಸಿ ಕ್ಯಾಮೆರಾ ಅಳವಡಿಸಿದರೆ ಆರತಿ ತಟ್ಟೆಯಲ್ಲಿ ಹಣವನ್ನು ಹಾಕುವುದಾದರೂ ಕಡಿಮೆಯಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಕೆಲವು ದೇವಸ್ಥಾನಗಳಲ್ಲಿ ಮಾತ್ರ ಅರ್ಚಕರು ತಟ್ಟೆಯಲ್ಲಿಯ ಹಣವನ್ನು ತಾವೇ ತೆಗೆದುಕೊಳ್ಳುತ್ತಿರಬಹುದು. ಆದರೆ ಎಲ್ಲ ಕಡೆ ಹಾಗೆ ಇಲ್ಲ.

**ಡಾ: ವೈ.ಎ.ನಾರಾಯಣಸ್ವಾಮಿ:–** ಇ–ಹುಂಡಿ ಎಂದರೆ ಏನು? ಅದು 'Paytm' use ಮಾಡುವುದೇ ಅಥವಾ ಹಣವನ್ನು ವರ್ಗಾವಣೆ ಮಾಡುವುದೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಹುಂಡಿಗಳ ಮಾದರಿಯಲ್ಲಿಯೇ ಇರುತ್ತದೆ. ಹಾಕಿರುವ ನಾಣ್ಯಗಳು, ನೋಟುಗಳು, ಚಿನ್ನ ಇವು ಲೆಕ್ಕದಲ್ಲಿ ದಾಖಲಾಗಿ ಅದನ್ನು ಬ್ಯಾಂಕುಗಳಿಗೆ ತರ್ಜುಮೆ ಮಾಡಲು ಅನುಕೂಲವಾಗುತ್ತದೆ ಎಂದು ಇ–ಹುಂಡಿ ಯೋಜನೆಯನ್ನು ತರಲು ಯೋಚನೆ ಮಾಡುತ್ತಿದ್ದೇವೆ. ಅದಕ್ಕೆ ಸಣ್ಣ–ಸಣ್ಣ ತಾಂತ್ರಿಕ ದೋಷಗಳು ಬಂದು ಈ ಯೋಜನೆಯನ್ನು ತರಲು ತಡವಾಗಿದೆ. ಇದರ ಬಗ್ಗೆ ಏನು ಹೆಚ್ಚಿನ ಯೋಚನೆಯನ್ನು ಮಾಡುವುದು ಬೇಡ. ಸ್ವಾಭಾವಿಕವಾಗಿ ಹುಂಡಿಗೆ ಯಾವ ರೀತಿ ಹಣವನ್ನು ಹಾಕುತ್ತೇವೆ, ಅದೇ ಮಾದರಿಯಲ್ಲಿ ಇರುತ್ತದೆ ಎನ್ನುವುದು ನಮ್ಮ ಭಾವನೆ. ನಮ್ಮಲಿ ಹರಕೆ ಕಟ್ಟಿಕೊಂಡು ಬೊಗಸೆ ಹಣವನ್ನು ಹಾಕುತ್ತಾರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೋಟುಗಳನ್ನು ಹಾಕುತ್ತಾರೆ. ಇವೆಲ್ಲವನ್ನು ತಂತ್ರಾಂಶಗಳ ಮುಖಾಂತರ ಲೆಕ್ಕ ಮಾಡಬೇಕೆಂದು ನಮ್ಮ ಇಲಾಖೆಯಿಂದ ಯೋಚನೆ ಮಾಡುತ್ತಿದ್ದೇವೆ. ನಮ್ಮ ಯೋಚನೆ ಯಶಸ್ವಿಯಾಗಬಹುದೆಂದು ನಮ್ಮ ಭಾವನೆ. ಇದರಿಂದ ನಮ್ಮ ಇಲಾಖೆಯ ಆದಾಯ ದುಪ್ಪಟ್ಟು ಆಗುತ್ತದೆ; ಶ್ರೀ ಎಸ್.ಎಲ್.ಭೋಜೇಗೌಡರು ದೇವಸ್ಥಾನಕ್ಕೆ ಬಿಟ್ಟ ಭೂಮಿ ಬಗ್ಗೆ ಹೇಳಿದ್ದಾರೆ. ಹಿಂದೆ ಅನೇಕ ಹಿರಿಯರು ದೇವಸ್ಥಾನಕ್ಕಾಗಿ ಬಿಟ್ಟಿರುವ ಭೂಮಿ declaration ಕೊಟ್ಟಿರುವುದು ಸೇರಿದಂತೆ ಬೇರೆ-ಬೇರೆ ಕಾರಣಕ್ಕೆ ಅವು ಪರಭಾರೆಯಾಗಿವೆ. ಆ ದೇವಸ್ಥಾನಗಳನ್ನು ನಡೆಸಲು ಬೇಕಾಗಿರುವ ತಸ್ತೀಕನ್ನು ಕೊಡಲು ಪಟ್ಟಿ ಮಾಡಲಾಗುತ್ತಿದೆ. ಅದಕ್ಕೆ ಬೇಕಾದ ಸಿದ್ದತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಶ್ರೀ ಆರ್.ಧರ್ಮಸೇನ್‌ರವರು ಗುಡಿ-ಗೋಪುರಗಳಿಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಕೇಳಿದ್ದಾರೆ. ಶಾಸಕರನಿಧಿಯಲ್ಲಿ ದೇವಸ್ಥಾನಗಳಿಗೆ ಹಣವನ್ನು ಕೊಡಬಹುದು ಎನ್ನುವ ಗೈಡ್‌ಲೈನ್ ಬಂದಿರುವುದರಿಂದ ಅನೇಕ ಜನರು ಬಂದು ನಿಮ್ಮ ಶಾಸಕರನಿಧಿಯಿಂದ ನಮ್ಮ ದೇವಸ್ಥಾನಗಳಿಗೆ ಹಣವನ್ನು ಕೊಡಿ ಎಂದು ಕೇಳುತ್ತಿದ್ದಾರೆ. ದೇವಸ್ಥಾನಗಳ ಧಾರ್ಮಿಕ ಪ್ರಕ್ರಿಯೆಗಳು ಯಾವ ರೀತಿ ನಡೆಯುತ್ತಿವೆ ಎಂದರೆ, ಶಾಸಕರು 2 ಲಕ್ಷ ರೂ.ಗಳನ್ನು ಕೊಟ್ಟರೆ ಜನರು ಮತ್ತೆ 10 ಲಕ್ಷ ರೂ.ಗಳನ್ನು ಹಾಕಿ ದೇವಸ್ಥಾನಗಳನ್ನು ನಿರ್ಮಿಸುವಂತಹ ಪರಿಸ್ಥಿತಿ ಇದೆ. ಎಲ್ಲಾ ಮಾನ್ಯ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತೇನೆ.

**ಶ್ರೀ ಆರ್.ಧರ್ಮಸೇನ:-** ಮೂರು ವರ್ಷದ ಅಕೌಂಟ್ ಕೇಳುತ್ತಾರೆ, ಆದರೆ ಅವರ ಹತ್ತಿರ ಅಕೌಂಟ್ ಇರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಯಾವುದೇ ಹಣವನ್ನು ಬಿಡುಗಡೆ ಮಾಡಬೇಕಾದರೂ ಆ ನಿಯಮವೇ ಹಾಗೆ ಇದೆ. ಅನೇಕ ದೇವಸ್ಥಾನಗಳಲ್ಲಿ ವಾರ್ಷಿಕ ಆದಾಯ ಹೆಚ್ಚು ಇದೆ. ಆ ಹಣ ಸಾಮಾಜಿಕವಾಗಿ ಸದ್ಬಳಿಕೆಯಾಗಬೇಕು ಎಂದು ಹೇಳಲಾಗುತ್ತಿದೆ. ಉದಾಹರಣೆಗೆ ಶ್ರೀ ಕುಕ್ಕೆಸುಬ್ರಹ್ಮಣ್ಯದಲ್ಲಿ 100 ಕೋಟಿ ರೂ.ಗಳ ಆದಾಯ ಇದೆ. ಶ್ರೀ ಕೊಲ್ಲೂರು ಮೂಕಾಂಬಿಕೆ ದೇವಸ್ಥಾನದಲ್ಲಿ, ಮಹದೇಶ್ವರ ಬೆಟ್ಟದಲ್ಲಿ ಹೀಗೆ ಬೇರೆ-ಬೇರೆ ದೇವಸ್ಥಾನಗಳಲ್ಲಿ ಆದಾಯ ಇರುವುದರಿಂದ ಈ ಹಣವನ್ನು ಸಮಾಜಮುಖಿ ಯೋಜನೆಗಳಿಗೆ ಬಳಸಿಕೊಳ್ಳಬಹುದಾ ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ಇದು ಪ್ರಶ್ನೋತ್ತರ ಸಮಯವಾಗಿರುವುದರಿಂದ ಹೆಚ್ಚಿಗೆ ಹೇಳಲು ಅವಕಾಶವಿಲ್ಲ. ಇದನ್ನು ಬೇರೆ ರೂಪದಲ್ಲಿ ತಂದರೆ ನಮ್ಮ ಇಲಾಖೆಯ ಒಟ್ಟು ಯೋಜನೆಗಳ ಬಗ್ಗೆ ಸದಸ್ಯರ ಗಮನಕ್ಕೆ ತರಲಾಗುತ್ತದೆ. ನಮ್ಮ ಧಾರ್ಮಿಕ ಇಲಾಖೆಯನ್ನು ಸಮಾಜದ ಮಧ್ಯೆ ಇಡಬೇಕು ಎನ್ನುವ ಯೋಚನೆ ಇದೆ. ಇದಕ್ಕೆ ತಮ್ಮ ಸಹಾಯ-ಸಹಕಾರವನ್ನು ಕೋರುತ್ತೇನೆ.

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಅವಧಿ ಮುಕ್ತಾಯವಾಯಿತು.

## ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ದಿನಾಂಕ:11/03/2020ರ ಸಮೂಹ-IIIರ ಒಟ್ಟು 180 ಪ್ರಶ್ನೆಗಳ ಪೈಕಿ 98 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಲಿಖಿತ ಉತ್ತರಗಳನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:–** ಮಂಡಿಸಲಾಯಿತು.

## 3. ಪ್ರಕಟಣೆ

**ಸಭಾಪತಿಯವರು:–** ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರ ಮಗಳ ಮದುವೆ ಕಾರ್ಯದ ನಿಮಿತ್ತ ದಿನಾಂಕ:10/03/2020 ರಿಂದ 17/03/2020ರ ವರೆಗಿನ ಉಪವೇಶನಗಳಲ್ಲಿ ಭಾಗವಹಿಸಲು ಸಾಧ್ಯವಾಗದಿರುವ ಕಾರಣ, ಹಾಜರಾತಿಯ ವಿನಾಯಿತಿಯನ್ನು ನೀಡಬೇಕೆಂದು ಕೋರಿರುತ್ತಾರೆ. ಸದರಿಯವರ ಗೈರು ಹಾಜರಿಗೆ ಸದನದ ಸಹಮತಿ ಇದೆ ಎಂದು ಭಾವಿಸುತ್ತೇನೆ.

## 4. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) "ಪದವಿ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ದೈಹಿಕ ಉಪನ್ಯಾಸಕರ ನೇಮಕಾತಿ ಬಗ್ಗೆ."**

-----

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಸುಮಾರು 200 ಕ್ಕೂ ಅಧಿಕ ಗ್ರಂಥಪಾಲಕರ ಹಾಗೂ ದೈಹಿಕ ಶಿಕ್ಷಕರ ಹುದ್ದೆಗಳು ಸರ್ಕಾರಿ, ಅನುದಾನಿತ ಪದವಿ ಕಾಲೇಜುಗಳಲ್ಲಿ ಹಾಗೂ ವಿಶ್ವವಿದ್ಯಾಲಯಗಳಲ್ಲಿ 2008ರ ನಂತರ ಗ್ರಂಥಪಾಲಕರ ಹುದ್ದೆಗಳ ನೇಮಕಾತಿ ಆಗದೇ ಇರುವುದರಿಂದ ಗ್ರಂಥಾಲಯ ಕಾರ್ಯಚಟುವಟಿಕೆಗಳು ಕುಂಠಿತವಾಗಿವೆ. ಡಿಜಿಟಲ್ ಗ್ರಂಥಾಲಯಗಳ ಯುಗದಲ್ಲಿ ಗ್ರಂಥಪಾಲಕರ ಹುದ್ದೆಗಳು ಖಾಲಿ ಇರುವುದು ಸೂಕ್ತವಲ್ಲ. ಅದೇ ರೀತಿ ದೈಹಿಕ ಉಪನ್ಯಾಸಕರನ್ನು ಕೂಡಾ ಕಡ್ಡಾಯವಾಗಿ ನೇಮಕಾತಿ ಮಾಡಿಕೊಳ್ಳಬೇಕಾಗಿತ್ತು. ಆದ್ದರಿಂದ ದೈಹಿಕ ಉಪನ್ಯಾಸಕರಿಲ್ಲದೇ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನವಿಲ್ಲದಂತಾಗಿದೆ. ಜಾಗತಿಕ ಮಟ್ಟದಲ್ಲಿ ಕ್ರೀಡೆಗಳಲ್ಲಿ ನಮ್ಮ ರಾಷ್ಟ್ರದ ಪ್ರತಿಭೆಗಳು ಭಾಗವಹಿಸಬೇಕಾದರೆ ಅವರ ಸುಪ್ತ ಪ್ರತಿಭೆಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ದೈಹಿಕ ಉಪನ್ಯಾಸಕರ ನೇಮಕಾತಿಗೆ ಕ್ರಮ ಕೈಗೊಳ್ಳಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕೇಳಿರುವ ಶೂನ್ಯವೇಳೆಯ ಪ್ರಸ್ತಾವನೆಗೆ ಉನ್ನತ ಶಿಕ್ಷಣ ಇಲಾಖೆ ಸಚಿವರು ಹಾಗೂ ಉಪಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಆ) ರೈತರ ಜಮೀನಿನಲ್ಲಿ ಸಸಿಗಳನ್ನು ಬೆಳೆಸುವ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಸಸಿಗಳನ್ನು ಬೆಳೆಸಿದ ರೈತರಿಗೆ ಪ್ರೋತ್ಸಾಹ ಧನ ನೀಡದಿರುವ ಬಗ್ಗೆ.**

------

**ಡಾ: ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ರೈತರ ಜಮೀನಿನಲ್ಲಿ ಸಸಿಗಳನ್ನು ಬೆಳೆಸುವ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಗೆ ಗ್ರಹಣ ಹಿಡಿದಿದ್ದು, ಸಸಿಗಳನ್ನು ಬೆಳೆಸಿದ ಸಾವಿರಾರು ರೈತರಿಗೆ ಸರಿಯಾಗಿ ಪ್ರೋತ್ಸಾಹ ಧನ ಸಿಕ್ಕಿಲ್ಲ ಎನ್ನುವುದು ಮಾಧ್ಯಮದಲ್ಲಿ ವರದಿಯಾಗಿದೆ. ರಾಜ್ಯದಲ್ಲಿ 3306 ರೈತರು, 8.51 ಲಕ್ಷ ಸಸಿಗಳನ್ನು ನೆಟ್ಟು ಬೆಳೆಸಿದ್ದರು. ಅವರಿಗೆ ಒಟ್ಟು ರೂ. 6.18 ಕೋಟಿ ಪ್ರೋತ್ಸಾಹ ಧನ ನೀಡಬೇಕಾಗಿದ್ದು, ಇಲ್ಲಿಯವರೆಗೆ ಈ ರೈತರಿಗೆ ಸರಿಯಾಗಿ ಪ್ರೋತ್ಸಾಹ ಧನ ದೊರೆತಿಲ್ಲ. 2019–20ನೇ ಸಾಲಿನಲ್ಲಿ ರೂ. 3.09 ಕೋಟಿ ಪ್ರೋತ್ಸಾಹ ಧನ ಹಂಚಿಕೆಯಾಗಿದೆ ಎಂದು ಪಿಸಿಸಿಎಫ್ (ಅಭಿವೃದ್ಧಿ) ಕಛೇರಿ ಮಾಹಿತಿ ನೀಡಿದೆ. ಈ ಪ್ರಕಾರ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ರೂ.19.93 ಲಕ್ಷ ನೀಡಲಾಗಿದ್ದು, ಬೆಂಗಳೂರು ಡಿಸಿಎಫ್ ಕಛೇರಿ ಮಾಹಿತಿ ಪ್ರಕಾರ ಈ ಜಿಲ್ಲೆಗೆ ಸಂಬಂಧಿಸಿದಂತೆ ನೀಡಬೇಕಾಗಿದ್ದ ಪ್ರೋತ್ಸಾಹ ಧನ ಲೆಕ್ಕಚಾರದಲ್ಲಿಯೂ ವ್ಯತ್ಯಾಸ ಕಂಡುಬಂದಿದ್ದು, ಈ ವ್ಯವಸ್ಥೆಯಿಂದ ಪ್ರೋತ್ಸಾಹ ಧನ ಕೈ ಸೇರದೇ ರೈತರು ಸಂಕಷ್ಟಕ್ಕೆ ಸಿಲುಕಿದಂತಾಗಿದೆ. ಆದ್ದರಿಂದ ಸರ್ಕಾರ ಈ ಕುರಿತು ಸರಿಯಾದ ಕ್ರಮ ಕೈಗೊಳ್ಳುವ ಮೂಲಕ ರೈತರಿಗೆ ಸಿಗಬೇಕಾದ ಪ್ರೋತ್ಸಾಹಧನವನ್ನು ಅವರಿಗೆ ದೊರೆಯುಂತೆ ಮಾಡಬೇಕು ಎಂದು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಡಾ: ವೈ.ಎ.ನಾರಾಯಣಸ್ವಾಮಿಯವರು ಕೇಳಿರುವ ಶೂನ್ಯವೇಳೆಯ ಪ್ರಸ್ತಾವನೆಗೆ ಅರಣ್ಯ ಮತ್ತು ಪರಿಸರ ಜೀವಶಾಸ್ತ್ರ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಇ) "ವಿಜಯಪುರ ಜಿಲ್ಲೆಯ ರಾಜೇಶ್ವರಿ ಗಾಯಕವಾಡರವರ ವಿಶ್ವ ಕಪ್ ಸಾಧನೆ ಬಗ್ಗೆ 25ಲಕ್ಷ ರೂಪಾಯಿ ಬಹುಮಾನ ಮತ್ತು ವಿಜಯಪುರ ಮಹಾನಗರಪಾಲಿಕೆಯಿಂದ ಸೂಕ್ತ ನಿವೇಶನವನ್ನು ನೀಡುವುದಾಗಿ ಘೋಷಣೆ ಮಾಡಿತ್ತು. ಘೋಷಣೆ ಮಾಡಿ ಮೂರು ವರ್ಷಗಳಾದರೂ ಇನ್ನು ಬಹುಮಾನವನ್ನು ನೀಡದಿರುವ ಬಗ್ಗೆ."**

------

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಗಳೆ, ವಿಜಯಪುರ ಜಿಲ್ಲೆಯ ರಾಜೇಶ್ವರಿ ಗಾಯಕವಾಡರವರ ವಿಶ್ವ ಕಪ್ ಸಾಧನೆ ಬಗ್ಗೆ ವಿಷಯವನ್ನು ಮಂಡಿಸಲು ಅನುಮತಿ ನೀಡಿರುವುದಕ್ಕಾಗಿ ಧನ್ಯವಾದಗಳು. ಶ್ರೀಮತಿ ರಾಜೇಶ್ವರಿ ಗಾಯಕವಾಡರವರು ಎಡಗೈ ಸ್ಪಿನ್ನರ್ ಆಗಿ ಕರ್ನಾಟಕ ಮತ್ತು ಭಾರತ ಕ್ರಿಕೆಟ್ ತಂಡವನ್ನು ಪ್ರತಿನಿದಿಸಿ ಆಟವಾಡಿದ್ದಾರೆ. ಶ್ರೀಮತಿ ಮಿಥಾಲಿ ರಾಜ್ ನೇತೃತ್ವದ ತಂಡದಲ್ಲಿ 3 ವರ್ಷಗಳ ಹಿಂದೆ ಆಡಿದ ವಿಶ್ವಕಪ್

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇಂದಿಗೂ ಸ್ಮರಣೀಯವಾಗಿದೆ. ಭಾರತೀಯ ವನಿತೆಯರು ಫೈನಲ್‌ನಲ್ಲಿ ಸೋತರೂ ಭರವಸೆಯ ಆಟಗಾರ್ತಿಯಾಗಿ ಬೆರಗು ಮೂಡಿಸಿದ್ದರು. ಶ್ರೀಮತಿ ರಾಜೇಶ್ವರಿ ಗಾಯಕವಾಡರವರು ಸದರಿ ಪಂದ್ಯದಲ್ಲಿ 5 ವಿಕೆಟ್ ಪಡೆದು ರಾಷ್ಟ್ರ ಮತ್ತು ರಾಜ್ಯದ ಗಮನ ಸೆಳೆದಿದ್ದರು. ಅವರು ತಮ್ಮ ಕ್ರಿಕೆಟ್ ಜೀವನದಲ್ಲಿ ಒಂದು ಟೆಸ್ಟ್ ಮ್ಯಾಚ್, 27 One Day International Match ಗಳನ್ನು ಮತ್ತು 22 T20 Match ಗಳನ್ನು ಆಡಿದ್ದಾರೆ. ಇವರು ಒಂದು ಟೆಸ್ಟ್ ಮ್ಯಾಚ್‌ನಲ್ಲಿ 5 ವಿಕೆಟ್ ಪಡೆದಿದ್ದಾರೆ. 27 One Day International Match ನಲ್ಲಿ 40 ವಿಕೆಟ್‌ಗಳನ್ನು ಪಡೆದಿದ್ದಾರೆ. 22 T20 Match ನಲ್ಲಿ 29 ವಿಕೆಟ್‌ಗಳನ್ನು ಪಡೆದಿದ್ದಾರೆ. ಇದರಿಂದ ಇವರು ನಮ್ಮ ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಕೀರ್ತಿಯನ್ನು ತಂದಿದ್ದಾರೆ. ವಿಶೇಷವಾಗಿ ವಿಶ್ವಕಪ್ ಆಡುವಾಗ ವೆಸ್ಟ್ ಇಂಡೀಸ್ ವಿರುದ್ಧ 5 ವಿಕೆಟ್‌ಗಳನ್ನು ಪಡೆದು ರಾಷ್ಟ್ರಮಟ್ಟದಲ್ಲಿ ರಾಜ್ಯದ ಗಮನವನ್ನು ಸೆಳೆದಿದ್ದರು. ಈ ಸಾಧನೆಯನ್ನು ಗುರುತಿಸಿ ಅಂದಿನ ಸರ್ಕಾರ ಅವರಿಗೆ 25 ಲಕ್ಷ ರೂ.ಗಳ ಬಹುಮಾನವನ್ನು, ವಿಜಯಪುರ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಸದರಿಯವರಿಗೆ ಸೂಕ್ತ ನಿವೇಶನ ನೀಡುವುದಾಗಿ ಘೋಷಣೆ ಮಾಡಿತ್ತು. ಆದರೆ ರಾಜ್ಯ ಸರ್ಕಾರದಿಂದ ಮತ್ತು ವಿಜಯಪುರ ಮಹಾನಗರಪಾಲಿಕೆಯಿಂದ ಈವರೆಗೆ ಯಾವುದೇ ಬಹುಮಾನ ಸಿಗದೆ ಕನಸಿನ ಗಂಟಾಗಿ ಉಳಿದಿದೆ. ಅಭದ್ರತೆ ಮತ್ತು ಆಂತಕದ ನಡುವೆ ಇತ್ತೀಚೆಗೆ ನನಗೆ ರೈಲ್ವೆ ಇಲಾಖೆಯಲ್ಲಿ ಕೆಲಸ ಸಿಕ್ಕಿದೆ. ನನ್ನ ಕುಟುಂಬವನ್ನು ನಾನೇ ಪೋಷಿಸಬೇಕಾಗಿದೆ ಎಂದು ಅವರು ಮಾಧ್ಯಮಗಳ ಮುಂದೆ ತಮ್ಮ ನೋವನ್ನು ತೋಡಿಕೊಂಡಿದ್ದಾರೆ.

**(ಮುಂದು)**

(337)/11-03-2020/07-10/ಬಿಎಸ್‌ಡಿ-ಆರ್‌ಎನ್
**ಪ್ರಕಾಶ್ ಕೆ. ರಾಥೋಡ್ (ಮುಂದು)**

ಇಷ್ಟೆಲ್ಲಾ ದೇಶಪ್ರೇಮ ಮೆರೆದು, ದೇಶಕ್ಕಾಗಿ ದಕ್ಷತೆಯಿಂದ ಆಡಿದ ಖ್ಯಾತ ಆಟಗಾರ್ತಿ ಹೀಗೆ ಹೀನಾಯವಾಗಿ ನಡೆಸಿಕೊಂಡ ಸರ್ಕಾರದ ಪ್ರವೃತ್ತಿಯಿಂದ ಮೈ ಉರಿದುಹೋಗುತ್ತದೆ. ಗೆದ್ದಿದ್ದರೆ ರೂ.10 ಲಕ್ಷ ನೀಡಬಹುದಿತ್ತು, ಆದರೆ ಸೋತಿದ್ದಕ್ಕೆ ರೂ.5 ಲಕ್ಷ ಮಾತ್ರ ಸಿಗಬಹುದಿತ್ತು ಎಂದು ಅವರು ಸರ್ಕಾರಿ ವಲಯದಿಂದ ಕೇಳುವ ಮಾತುಗಳು. ಈವರೆಗೆ ಯಾರೂ ಇವರಿಗೆ ರೂ.25 ಲಕ್ಷಗಳು ಹಾಗೂ ನಿವೇಶನ ಕೊಡುವಂತೆ ಬೇಡಿಕೆ ಕೊಟ್ಟಿದ್ದರೂ ಇಲ್ಲಿಯವರೆಗೂ ಸರ್ಕಾರ ಘೋಷಿಸಿದ್ದ ಯಾವುದೇ ಹಣ ಅವರಿಗೆ ಬಂದಿರುವುದಿಲ್ಲ. ಈ ತಾರತಮ್ಯ ಆಡಿಸುವ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಡಬೇಕು. ವಿಶ್ವಕಪ್‌ನಲ್ಲಿ ಆಡಿದ ಈ ಖ್ಯಾತ ಎಡಗೈ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡರವರು ರಾಷ್ಟ್ರ ಮತ್ತು ರಾಜ್ಯಕ್ಕೆ ಗೌರವ ತಂದಿದ್ದಾರೆ. ಇಂಥಹವರು ಇಂದಿಗೂ ಬಾಡಿಕೆ ಮನೆಯಲ್ಲಿ ಕುಟುಂಬಸ್ಥರೊಂದಿಗೆ ಅಲೆಮಾರಿ ಬದುಕು ಸಾಗಿಸುತ್ತಿದ್ದಾರೆ. ಇವರಿಗೆ ಸರ್ಕಾರ ಮತ್ತು ವಿಜಯಪುರ ಮಹಾನಗರ ಪಾಲಿಕೆ ಅಂದು ಘೋಷಣೆ ಮಾಡಿದಂತೆ ನಡೆದುಕೊಳ್ಳಲು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೋರಿ, ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ರಾಜೇಶ್ವರಿ ಗಾಯಕವಾಡರ ನಿವೇಶನ ಮತ್ತು ಅನುದಾನದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಸಮರ್ಪಕ ಉತ್ತರ ಕೊಡಿಸಲಾಗುವುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಉತ್ತರ ಬೇಡ, ಚೆಕ್ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆ ಉತ್ತರದಲ್ಲಿ ಸಮಸ್ಯೆಗೆ ಪರಿಹಾರ ಇರುತ್ತದೆ. ಮಾನ್ಯ ಹೊರಟ್ಟಿಯವರು ಹಿರಿಯ ಸದಸ್ಯರಾಗಿದ್ದು, ಅವರು ಈ ಕಡೆ ಇದ್ದಾಗ ಉತ್ತರ ಕೊಡುತ್ತೇನೆ ಎಂದು ಹೇಳಿದಾಗ ನಾನು ಬರೀ ಉತ್ತರವಲ್ಲದೇ ಸಮಸ್ಯೆ ಪರಿಹಾರವಾಗುತ್ತದೆಯೇ ಎಂದು ಕೇಳುತ್ತಿದ್ದೆನು. ಮಾನ್ಯ ಎಸ್.ಆರ್. ಪಾಟೀಲರು ಉತ್ತರ ಹೇಳುವಾಗ ಕೇಳಿದ್ದೆನು. ನಮ್ಮ ಉತ್ತರದಲ್ಲಿಯೂ ಸಮಸ್ಯೆ ಪರಿಹಾರವಾಗುತ್ತದೆ ಎಂಬ ವಿಶ್ವಾಸ ಇದೆ.

**ಶ್ರೀ ಎಸ್.ಆರ್. ಪಾಟೀಲ್:–** ನಾನು ಉತ್ತರ ಕೊಡಿಸದೇ ಪರಿಹಾರವನ್ನು ಕೊಡಿಸುತ್ತಿದ್ದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಉತ್ತರವನ್ನು ಕೊಡಿಸುವಾಗ ಪರಿಹಾರ ಇರುತ್ತದೆಂದು ಅವರು ನನಗೆ ಹೇಳಿದ್ದರು. ಈಗ ನೆನಪು ಮಾಡುತ್ತಾ, ಉತ್ತರ ಕೊಡುವಾಗ ಸಮಸ್ಯೆ ಪರಿಹಾರ ಆಗುತ್ತದೆ.

**5.ನಿಯಮ 330ಎ ವಿಶೇಷ ಪ್ರಸ್ತಾವಗಳ ಅಡಿಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಹೇಳಿಕೆ.**

**(ಅ) "ಉಕ್ಕಿ ಹರಿದ ನೆರೆಗೆ ಬದುಕು ಕಳೆದುಕೊಂಡ ನೆರೆ ಸಂತ್ರಸ್ತರಿಗೆ ದಾನಿಗಳು ಕೊಟ್ಟಿದ್ದನ್ನು ತಲುಪಿಸುವಲ್ಲಿ ಧಾರವಾಡ ಜಿಲ್ಲಾಡಳಿತ ವಿಫಲವಾಗಿರುವ ಬಗ್ಗೆ."**

– – – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 19/02/2020ರಂದು ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಆ) ಕಲ್ಬುರ್ಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ.**

– – – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 20–02–2020ರಂದು ಮಾನ್ಯ ಸದಸ್ಯರಾದ ಶ್ರೀ ತಿಮ್ಮಣ್ಣ ಕಮಕನೂರು ಅವರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**6.ಹಕ್ಕುಚ್ಯುತಿ ಪ್ರಸ್ತಾವ**

**ಅ) ಭರವಸೆಗಳ ಸಮಿತಿಯು ಕಾಕ್ಸ್ ಟೌನ್‌ನಲ್ಲಿರುವ ಇಂಡಿಯನ್ ಜಿಮ್ಖಾನ ಕ್ಲಬ್‌ನ ಸ್ಥಳ ಪರಿಶೀಲನೆಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಗೈರು ಹಾಜರಾದ ಶ್ರೀ ಮಂಜುನಾಥ್, ಅಪರ ನಿರ್ದೇಶಕರು, ಟೌನ್ ಪ್ಲಾನಿಂಗ್, ಬಿ.ಬಿ.ಎಂ.ಪಿ. ಬೆಂಗಳೂರು, ಇವರ ವಿರುದ್ಧದ ಹಕ್ಕುಚ್ಯುತಿ ಪ್ರಸ್ತಾವದ ಬಗ್ಗೆ.**

––––––

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯು ದಿನಾಂಕ 01/12/2019 ರಂದು ಭರವಸೆ ಸಂಖ್ಯೆ 4188/2013 ಮತ್ತು 5624/2017 "ಕಾಕ್ಸ್ ಟೌನ್‌ನಲ್ಲಿರುವ ಆಟದ ಮೈದಾನವನ್ನು ಇಂಡಿಯನ್ ಜಿಮ್ಖಾನಾ (Jimkhana) ಕ್ಲಬ್‌ನವರಿಗೆ ಸರ್ಕಾರದಿಂದ ಗುತ್ತಿಗೆ ಆಧಾರದ ಮೇಲೆ ನೀಡಲಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ನಡೆಸಿದ ಸ್ಥಳ ಪರಿಶೀಲನಾ ಸಭೆಗೆ ಹಾಗೂ ಇದೇ ವಿಚಾರದಲ್ಲಿ ದಿನಾಂಕ 31–01–2020 ರಂದು ನಡೆದ ಸಭೆಗೆ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಸಂಬಂಧಪಟ್ಟ ವಲಯದ ಜಂಟಿ ನಿರ್ದೇಶಕರು, ಬಿಬಿಎಂಪಿ ಕಂದಾಯ ಇಲಾಖೆ, ಬಿಬಿಎಂಪಿ ಟೌನ್ ಪ್ಲಾನಿಂಗ್ ಇಂಜಿನಿಯರ್ಸ್, ಕಾನೂನು ಸಲಹೆಗಾರರು ಮತ್ತು ಇತರೆ ಅಧಿಕಾರಿಗಳೊಂದಿಗೆ ಹಾಜರಾಗಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರಿಗೆ ಪತ್ರಗಳನ್ನು ಬರೆಯಲಾಗಿದ್ದರೂ ಸಹ ಶ್ರೀ ಮಂಜುನಾಥ್, ಅಪರ ನಿರ್ದೇಶಕರು, ಟೌನ್ ಪ್ಲಾನಿಂಗ್ ಇವರು ಮೇಲ್ಕಂಡ ಎರಡೂ ಸಭೆಗಳಿಗೆ ಹಾಜರಾಗದೇ ಇರುವುದು ಹಾಗೂ ಗೈರು ಹಾಜರಿಗೆ ಪೂರ್ವಭಾವಿಯಾಗಿ ಮೇಲಧಿಕಾರಿಗಳ ಅನುಮತಿ ಪಡೆಯದೇ ಇರುವುದನ್ನು

ಸಮಿತಿಯು ಗಂಭೀರವಾಗಿ ಪರಿಗಣಿಸಿದ್ದು, ಇದು ಸದರಿ ಅಧಿಕಾರಿಯು ಸಮಿತಿಗೆ ತೋರಿರುವ ಅಗೌರವವೆಂದು ಪರಿಗಣಿಸಿ, ಇದರಿಂದ ಸದನದ ಹಕ್ಕುಚ್ಯುತಿಯಾಗಿದೆಯೆಂದು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

ಆದುದರಿಂದ, ಸದರಿ ಅಧಿಕಾರಿಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಈ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲು ಶಿಫಾರಸ್ಸು ಮಾಡಬೇಕಾಗಿ ಕೋರುತ್ತೇನೆ.

**ಸಭಾಪತಿಯವರು:–** ಇದನ್ನು ಪರಿಶೀಲನೆಗಾಗಿ ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗಿದೆ.

**ಆ) ದಿನಾಂಕ 22–02–2020ರಿಂದ ದಿನಾಂಕ 25–02–2020ರವರೆಗೆ ಧಾರವಾಡ ಜಿಲ್ಲಾ ಕೇಂದ್ರದಲ್ಲಿ ಜರುಗಿದ "ಕರ್ನಾಟಕ ಕುಸ್ತಿ ಹಬ್ಬ" ಕಾರ್ಯಕ್ರಮದ ಸಂಘಟನಾ ಸಮಿತಿ ರಚಿಸಲಾಗಿದ್ದು, ಇದರ ಸಭೆಗೆ ಜಿಲ್ಲಾ ಆಡಳಿತ ಮತ್ತು ಸಂಬಂಧಪಟ್ಟ ಇಲಾಖೆ ಒಂದು ಬಾರಿಯೂ ಆಹ್ವಾನ ನೀಡದಿರುವ ಬಗ್ಗೆ ಕರ್ತವ್ಯಲೋಪವೆಸಗಿದ ಅಧಿಕಾರಿ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾವದ ಬಗ್ಗೆ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಸದಸ್ಯನಾದ ನನಗೆ ನನ್ನ ಹಕ್ಕುಚ್ಯುತಿಗೆ ಧಕ್ಕೆಯಾಗಿರುವ ಬಗ್ಗೆ ಸದರಿ ಕೆಳಗಿನ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಲು ಈ ಮೂಲಕ ವಿನಂತಿಸುತ್ತೇನೆ.

ದಿನಾಂಕ 22/02/2020 ರಿಂದ 25/02/2020ರವರೆಗೆ ಧಾರವಾಡ ಜಿಲ್ಲಾ ಕೇಂದ್ರದಲ್ಲಿ ಜರುಗಲಿರುವ "ಕರ್ನಾಟಕ ಕುಸ್ತಿ ಹಬ್ಬ" ಕಾರ್ಯಕ್ರಮದ ಸಂಘಟನೆಗೆ ಸಮಿತಿಯನ್ನು ರಚಿಸಲಾಗಿದ್ದು, ಇದರಲ್ಲಿ ಕೇಂದ್ರ ಸಚಿವರು, ರಾಜ್ಯ ಸರ್ಕಾರದ ಸಚಿವರು. ವಿಧಾನಸಭೆ, ವಿಧಾನ ಪರಿಷತ್ತು ಚುನಾಯಿತ ಸದಸ್ಯರನ್ನು ಹಾಗೂ ಪ್ರಮುಖ ಗಣ್ಯರನ್ನು ಒಳಗೊಂಡಂತೆ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಸದರಿ ಸಮಿತಿಗಳ ಪಟ್ಟಿಯನ್ನು ಸದರಿ ನೋಟೀಸಿನಲ್ಲಿ ಲಗತ್ತಿಸಿದೆ.

ಆದರೆ ತದನಂತರ ಜಿಲ್ಲಾ ಆಡಳಿತ ಮತ್ತು ಸಂಬಂಧಪಟ್ಟ ಇಲಾಖೆ ನಮ್ಮನ್ನು ಒಂದು ಬಾರಿಯೂ ಸಭೆಗೆ ಕರೆಯಲಿಲ್ಲ. ಇದು ಸರಕಾರಿ ಕೆಲಸ ಮತ್ತು ಸರಕಾರದಿಂದ ಸುಮಾರು ಎರಡು ಕೋಟಿ ಹಣ ಬಿಡುಗಡೆ ಮಾಡಲಾಗಿದೆ. ಆದರೆ ಇದು ಕೇವಲ ಒಂದು ಪಕ್ಷಕ್ಕೆ ಸೀಮಿತವಾಗಿ ಸಭೆಗಳು ನಡೆದಿರುವುದನ್ನು ಪತ್ರಿಕೆಗಳಲ್ಲಿ ಓದಿ ನೋಡಿದ್ದೇನೆ. ಸೌಜನ್ಯಕ್ಕಾದರೂ ನಮ್ಮನ್ನು ಸಭೆಗೆ ಕರೆಯದೆ ಇರುವುದು ನನ್ನ ಹಕ್ಕುಚ್ಯುತಿಯಾಗಿರುವುದು ಸ್ಪಷ್ಟವಾಗಿದೆ. ಈ ಸಂಬಂಧ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕರ್ತವ್ಯ ಲೋಪವೆಸಗಿರುವ ಅಧಿಕಾರಿಯ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಸಭಾಪತಿಯವರಲ್ಲಿ ವಿನಂತಿಸುತ್ತೇನೆ ಮತ್ತು ಎಲ್ಲಾ ಪತ್ರಿಕೆಯಲ್ಲಿ ಬಂದ ವರದಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಮಾನ್ಯ ಸಭಾಪತಿಯವರೇ, ಈ ಸದನದ ಸದಸ್ಯರಿಗೆ ಪ್ರತಿಯೊಂದರಲ್ಲಿಯೂ ಈ ರೀತಿ ಆಗುತ್ತಿದ್ದು, ನಮ್ಮನ್ನು ಎರಡನೆಯ ದರ್ಜೆಯವರನ್ನಾಗಿ ನಾಗರಿಕರು ಎಂಬಂತೆ ನೋಡುತ್ತಾರೆ. ಸರ್ಕಾರವು ಕುಸ್ತಿ ಹಬ್ಬದ ಸಂಘಟನೆಗೆ ಒಂದು ಸಮಿತಿಯನ್ನು ರಚಿಸಿದ್ದು, ಶ್ರೀ ಪ್ರಹ್ಲಾದ್ ಜೋಷಿ ರವರು ಅಧ್ಯಕ್ಷರು, ಜಿಲ್ಲಾಧಿಕಾರಿಗಳು ಸಹ ಅಧ್ಯಕ್ಷರು, ಶ್ರೀ ಬಸವರಾಜ ಹೊರಟ್ಟಿ, ಮಾನ್ಯ ಶಾಸಕರು, ಸದಸ್ಯರು, ಶ್ರೀ ಶ್ರೀನಿವಾಸ ಮಾನೆ, ಶಾಸಕರು, ಶ್ರೀ ಅಬ್ಬಯ್ಯ ಪ್ರಸಾದ್, ಶಾಸಕರು, ಶ್ರೀ ಅರವಿಂದ ಬೆಲ್ಲದ್, ಶಾಸಕರು, ಈ ರೀತಿ ಎಲ್ಲಾ ಶಾಸಕರನ್ನು ಹಾಕಿದ್ದರು. ನನ್ನನ್ನು ಹಾಗೂ ಶ್ರೀ ಅಬ್ಬಯ್ಯ ಪ್ರಸಾದ್ ರವರನ್ನು ಯಾವುದಕ್ಕೂ ಕರೆಯಲಿಲ್ಲ. ಕೆಲವು ಬಿಜೆಪಿ ಶಾಸಕರನ್ನು ಮಾತ್ರ ಕರೆದು, ಅವರ ಸ್ವಂತ ಕಾರ್ಯಕ್ರಮ ಮಾಡಿದಂತೆ ಮಾಡಿದರು. ನಮ್ಮ ಜಿಲ್ಲೆಯಲ್ಲಿ ಏನಾಗಿದೆ ಎಂದು ನನಗೆ ಅರ್ಥವಾಗುವುದಿಲ್ಲ. ಕಳೆದ ಆರೆಂಟು ತಿಂಗಳುಗಳಿಂದ ನೋಡುತ್ತಿದ್ದೇನೆ, ಸರ್ಕಾರ ಎಂದರೆ ಎಲ್ಲರಿಗೂ ಇರುವಂತಹದ್ದು ಆಗಿದೆ. ಸರ್ಕಾರದಿಂದ ರೂ.2 ಕೋಟಿ ಹಣ ಕೊಟ್ಟರೆ, ಅವರೇ ಹಣ ತಂದಂತೆ ಮಾಡಿದ್ದಾರೆ. ಪತ್ರಿಕೆಗಳಲ್ಲಿ ನೋಡಬೇಕು. ಯಾವುದಕ್ಕೂ ಕರೆಯಲಿಲ್ಲ. ಈ ರೀತಿ ಮಾಡಿದರೆ ಹೇಗೆ? ನಾನು ಬಹಳ ಪ್ರಯತ್ನ ಮಾಡಿದೆ. ಇದಲ್ಲದೇ ಅಧಿಕಾರಿಗಳಿಗೆ ನಮ್ಮ ಸರ್ಕಾರ, ನಾವು ಹಣ ತಂದಿದ್ದೇವೆ, ಯಾರಾನ್ನಾದರೂ ಕರೆಯುವ ವಿಷಯ ನಿಮಗೇಕೆ ಬೇಕು? ಎಂದು ಧಮಕಿ ಹಾಕುವುದು, ಈ ರೀತಿ ಮಾಡಿ ವಿಧಾನ ಪರಿಷತ್ತಿನ ಸದಸ್ಯರೆಂದರೆ ಲೆಕ್ಕಕ್ಕೆ ಇಲ್ಲವೇ? ನಾನು ಇಷ್ಟು ಹಿರಿಯ ಸದಸ್ಯನಾಗಿದ್ದರೂ ಲೆಕ್ಕಕ್ಕೆ ಇಲ್ಲ. ಸೌಜನ್ಯಕ್ಕಾದರೂ ಕೇಂದ್ರ ಸಚಿವರಾಗಲೀ, ಜಿಲ್ಲಾ ಉಸ್ತುವಾರಿ ಸಚಿವರಾಗಲೀ, ನನ್ನನ್ನು ಆಹ್ವಾನಿಸಲಿಲ್ಲ. ಇದೊಂದೆ ವಿಷಯ ಅಲ್ಲ, ಹುಬ್ಬಳ್ಳಿ-ಧಾರವಾಡಗಳಲ್ಲಿ ಮಾಡುವ ಕಾರ್ಯಕ್ರಮಗಳಿಗೆ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಈ ವಿಚಾರ ಇಲ್ಲಿಗೆ ತರಲು ನನಗೆ ಬಹಳ ನೋವಾಗಿದೆ. ಎಷ್ಟೋ ಸಾರಿ ಹೋಗಲಿ ಬಿಡು ಎಂದಿದ್ದೆನು. ನಾನು ತಕರಾರು ತೆಗೆಯುವುದಿಲ್ಲ. ಈ ರೀತಿ ಅವರೆ ಜನರಿಗೆ ಏನು ಸಂದೇಶ ಹೋಗುತ್ತದೆ, ಬಿಜೆಪಿ ಪಕ್ಷದವರೇ ಕಾರ್ಯಕ್ರಮ ಮಾಡಿರಬಹುದು, ಸರ್ಕಾರದ ಕಾರ್ಯಕ್ರಮ ಎಂದು ಎಲ್ಲಿಯೂ ಆಗಿಲ್ಲ. ತಾವು ಎಲ್ಲವನ್ನು ತೆಗೆಸಿ ನೋಡಿ. ಆದ್ದರಿಂದ ಸರ್ಕಾರದಲ್ಲಿರುವವರು ಜನರಿಗೆ ತಪ್ಪು ಕಲ್ಪನೆ ಕೊಡಬಾರದು. ನನಗೆ ಆದ ಅವಮಾನವನ್ನು ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಹಿನ್ನೆಲೆಯಲ್ಲಿ ಇದನ್ನು ಬಹಳ ನೋವಿನಿಂದ ತಂದಿದ್ದು, ದಯಮಾಡಿ ಹಕ್ಕುಬಾಧ್ಯತಾ ಸಮಿತಿಗೆ ವಹಿಸಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮೇಲ್ಮನೆ ಸದಸ್ಯರೆಂದರೆ ಏನರ್ಥ? ಹಿಂದೆ ಇದೇ ಸದನದಲ್ಲಿ ವಾಗ್ದಂಡನೆ ಆಯಿತು. ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳನ್ನು ಕಟಕಟೆಗೆ ಕರೆಸಿ, ವಾಗ್ದಂಡನೆ ಮಾಡಿ ಕ್ಷಮೆ ಕೇಳುವಂತೆ ಆಯಿತು. Protocol ಪ್ರಕಾರ ಗೌರವಾನ್ವಿತ ರಾಜ್ಯಪಾಲರ ನಂತರ ತಮ್ಮ ಸ್ಥಾನ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರುತ್ತದೆ. ತಮ್ಮ ನಂತರ Speaker ಸ್ಥಾನ ಬರುತ್ತದೆ. ನಂತರ ಮುಖ್ಯಮಂತ್ರಿಗಳು ಹಾಗೂ ಮೇಲ್ಮನೆ ಶಾಸಕರು ಮತ್ತು ಕೆಳಮನೆ ಶಾಸಕರು ಬರುತ್ತಾರೆ. ಇದಕ್ಕೆ ಒಂದು protocol ಇದೆ. ಇದು ಕೇವಲ ಧಾರವಾಡ ಜಿಲ್ಲೆಗೆ ಸೀಮಿತವಲ್ಲ. ಮಾನ್ಯ ಹೊರಟ್ಟಿಯವರು ಸದನಕ್ಕೆ ಮಾತ್ರ ಹಿರಿಯ ಸದಸ್ಯರಲ್ಲ, ಬಹುಶಃ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಮೇಲ್ಮನೆಯ ಅತ್ಯಂತ senior-most legislator ಯಾರೆಂದರೆ ಮಾನ್ಯ ಹೊರಟ್ಟಿಯವರು ಎಂದು ಹೇಳುತ್ತಾರೆ. ಎಲ್ಲಾ ರಾಜ್ಯಗಳಲ್ಲಿ ಕೇಳಲಿ. ಇಂತಹವರನ್ನೇ ಇಂತಹ ಪರಿಸ್ಥಿತಿಗೆ ದೂಡಿದರೆ, what about other upper House Members? ವಿಧಾನಸಭಾ ಸದಸ್ಯರಿಗೆ ಶಾಸಕರು ಎಂದು ಹೇಳುತ್ತಾರೆ. ವಿಧಾನ ಪರಿಷತ್ತಿನ ಸದಸ್ಯರಿಗೆ ವಿಧಾನ ಪರಿಷತ್ತಿನ ಸದಸ್ಯರು ಎಂದು ಹೇಳುತ್ತಾರೆ. ಇದೇ ರೀತಿ ಒಬ್ಬ ಜಿಲ್ಲಾಧಿಕಾರಿ ಮೇಲ್ಮನೆ ಸದಸ್ಯರನ್ನು ಶಾಸಕರು ಅಲ್ಲ, ಒಐಂ ಮಾತ್ರ ಶಾಸಕ ಎಂದು ಹೇಳಿದ್ದಕ್ಕೆ ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಯಿತು. ನಂತರ ಜಿಲ್ಲಾಧಿಕಾರಿಯನ್ನು ಇಬ್ಬರು Marshall ಗಳು ರೆಟ್ಟೆಗೆ ಕೈಹಾಕಿ ಹಿಡಿದುಕೊಂಡು ಬಂದು ನಿಲ್ಲಿಸಿ, ಕ್ಷಮೆ ಕೇಳಿದ ಘಟನೆ ತಮಗೂ ಗೊತ್ತಿದೆ. Protocol violate ಮಾಡುವುದು it is quite common. ಚಿಂತಕರ ಚಾವಡಿಯ ಮೇಲ್ಮನೆ ಸದಸ್ಯರಿಗೆ protocol violate ಅವ್ಯವಹತವಾಗಿ ನಡೆಯುತ್ತಿದೆ. ಅದಕ್ಕಾಗಿ ತಮ್ಮ office ನಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಒಂದು ರೀತಿ ಸುತ್ತೋಲೆ ಹೊರಡಿಸಬೇಕು.

(ಮುಂದು)

(338)/11.03.2020/7.20/ಹೆಚ್‌ವಿ-ಆರ್‌ಎನ್

**ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದದ್ದು):**

ಸನ್ಮಾನ್ಯ ಸಭಾಪತಿಯವರೇ, ಯಾವುದೇ ಕಾರ್ಯಕ್ರಮಗಳಾದರೂ ನಮಗೆ ಆಹ್ವಾನ ಪತ್ರಿಕೆಯನ್ನು ನೀಡುವುದಿಲ್ಲ. ಅಧಿಕಾರಿಗಳು ವಿಧಾನಸಭೆಯ ಶಾಸಕರನ್ನು ಖುದ್ದು ಭೇಟಿ ಮಾಡಿ ಆಮಂತ್ರಣ ಪತ್ರಿಕೆಯನ್ನು ಕೊಟ್ಟು, ಇಂತಹ ದಿನಾಂಕದಂದು ಇಂತಹ ಕಾರ್ಯಕ್ರಮವಿದೆ ತಾವು ಬರಬೇಕು' ಎಂದು ಕರೆದು ಬರುತ್ತಾರೆ. ಆದರೆ, ಮೇಲ್ಮನೆಯ ಶಾಸಕರಿಗೆ ಆ ರೀತಿಯ ಯಾವುದೇ ಆಮಂತ್ರಣವನ್ನು ನೀಡುವುದಿಲ್ಲ. ಮೇಲ್ಮನೆಯ ಶಾಸಕರೆಂದರೆ, 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ತಾವು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಯಾರು ಶಿಷ್ಟಾಚಾರವನ್ನು ಉಲ್ಲಂಘನೆ ಮಾಡುತ್ತರೆ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇದರ ಬಗ್ಗೆ ತಾವು ಮುತುವರ್ಜಿ ವಹಿಸಬೇಕಾಗಿದೆ.

**ಶ್ರೀ ಕೆ.ಸಿ.ಕೊಂಡಯ್ಯ:-** ಸನ್ಮಾನ್ಯ ಸಭಾಪತಿಯವರೇ, ನಾವು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಗೊಂಡು ಬಂದಿದ್ದೇವೆ. ನಮ್ಮ ಕಾರ್ಯವ್ಯಾಪ್ತಿಗೆ 11 ತಾಲ್ಲೂಕುಗಳು ಮತ್ತು 230 ಪಂಚಾಯಿತಿಗಳು ಬರುತ್ತವೆ. ಎಲ್ಲಾ ಮೀಟಿಂಗ್‌ಗಳಿಗೆ ನಮ್ಮನ್ನು ಹಾಕುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಸುಮಾರು 15 ಅಥವಾ 20 ಬೋರ್‌ವೆಲ್‌ಗಳನ್ನು ಒಂದು ವಿಧಾನಸಭಾ ಕ್ಷೇತ್ರಕ್ಕೆ ಕೊಡುತ್ತಾರೆ. ನಮ್ಮ ಬಳಿ ಫಲಾನುಭವಿಗಳು ಬಂಧಾಗ ನಾವು ಒಂದು ಪತ್ರವನ್ನು ಕೊಡುತ್ತೇವೆ. ಸಂಬಂಧಪಟ್ಟ ಎಂ.ಎಲ್.ಎ. ಅವರು ಅದನ್ನು ಮೀಟಿಂಗ್‌ನಲ್ಲಿ ಇಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಪ್ರತಿಯೊಂದು ಕಮಿಟಿಗೂ ನಮ್ಮನ್ನು ಸಹ ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆ ಈ ಸದನದಲ್ಲಿ ಎಷ್ಟೋ ಬಾರಿ ಚರ್ಚೆಗಳಾಗಿವೆ. ನಮ್ಮ ಬಳಿ ಬರುವಂತಹ ಫಲಾನುಭವಿಗಳಿಗೆ ಪತ್ರವನ್ನು ಕೊಡುತ್ತೇವೆ. ಆದರೆ ಅಧಿಕಾರಿಗಳು, 'ವಿಧಾನ ಪರಿಷತ್ತಿನ ಸದಸ್ಯರ ಪತ್ರ ನಡೆಯುವುದಿಲ್ಲ, ಎಂ.ಎಲ್.ಎ. ಹತ್ತಿರ ನಿಮ್ಮ ಸಾಹೇಬರು ಹೋಗಿ ಮಾತನಾಡಿ ಪತ್ರವನ್ನು ಬರೆಯಿಸಿಕೊಂಡು ಬರಲಿ' ಎಂದು ಹೇಳುತ್ತಾರೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ಒಂದು ಸುತ್ತೋಲೆಯನ್ನು ಹೊರಡಿಸಬೇಕಾಗುತ್ತದೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಸಹ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದವರಾಗಿದ್ದಾರೆ. ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿ ಬಂದಿರುವ ನಾವು 25 ಜನ ಸದಸ್ಯರು ಪ್ರತಿ ಅಧಿವೇಶನದಲ್ಲಿಯೂ ಈ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡುತ್ತಿರುತ್ತೇವೆ. ಯಾವುದೇ ಕಮಿಟಿ ಇರಲಿ ಅದಕ್ಕೆ ವಿಧಾನ ಪರಿಷತ್ತಿನ ಸದಸ್ಯರು ಸಹ ಅಧ್ಯಕ್ಷರಾಗಿರಬೇಕೆಂದು ಸರ್ಕಾರ ಒಂದು ಸುತ್ತೋಲೆಯನ್ನು ಹೊರಡಿಸಬೇಕಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಈ ಮನೆಯ ಅತ್ಯಂತ ಹಿರಿಯ ಸದಸ್ಯರಾಗಿದ್ದಾರೆ ಮತ್ತು ಸಚಿವರಾಗಿ ಕಾರ್ಯನಿರ್ವಹಿಸಿರುವ ಅನುಭವವನ್ನು ಹೊಂದಿದ್ದಾರೆ. ಅಂತಹವರು ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಮಂಡನೆ ಮಾಡಿದ್ದಾರೆಂದರೆ, ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಈ ಘಟನೆ ಅವರ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಬೀರಿದೆ ಎನ್ನುವುದರ ಬಗ್ಗೆಯೂ ನಾವುಗಳು ಆಲೋಚನೆ ಮಾಡಬೇಕಾಗಿದೆ. ಈ ಪ್ರಸ್ತಾವನೆಯನ್ನು ಸದನದ ಮುಂದೆ ಮಂಡಿಸುವುದಕ್ಕೂ ಮೊದಲು ಅವರು ಎಷ್ಟು ಬಾರಿ ಯೋಚನೆ ಮಾಡಿದ್ದಾರೋ ಗೊತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳು ಜಿಲ್ಲಾ ಪ್ರವಾಸ ಹೋದರೆ, ಅದನ್ನು ನಮಗೆ ತಿಳಿಸುವುದಿಲ್ಲ, ಪ್ರವಾಸದ ಕಾರ್ಯಕ್ರಮ ಪಟ್ಟಿಯನ್ನು ಸಹ ನಮಗೆ ಕಳುಹಿಸಿಕೊಡುವುದಿಲ್ಲ. ಜಿಲ್ಲೆಯಲ್ಲಿ ಆಫೀಸ್ ಇರುತ್ತದೆ, ಬೆಂಗಳೂರಿನಲ್ಲಿ ಆಫೀಸ್ ಇರುತ್ತದೆ, ಅಲ್ಲಿ ಸಿಬ್ಬಂದಿಗಳಿರುತ್ತಾರೆ, ದೂರವಾಣಿ ಸೌಲಭ್ಯವನ್ನು ಒದಗಿಸಿಕೊಡಲಾಗಿರುತ್ತದೆ. ಇಷ್ಟೆಲ್ಲ ಸವಲತ್ತುಗಳಿದ್ದರೂ ಸಹ ಮಂತ್ರಿಗಳು ನಮ್ಮ ಜಿಲ್ಲೆಗೆ ಪ್ರವಾಸ ಬರುವಂತಹ ವಿಚಾರವನ್ನು ಅಧಿಕಾರಿಗಳು ನಮಗೆ ತಿಳಿಸುವುದೇ ಇಲ್ಲ. ಕೆಲವೊಂದು ಬಾರಿ ಮಂತ್ರಿಗಳು ಅಲ್ಲಿಗೆ ಬಂದು ಕುಳಿತಿರುವ ಸಂದರ್ಭದಲ್ಲಿ ನಮಗೆ ತಿಳಿಸಿರುವ ಉದಾಹರಣೆಗಳು ಇವೆ. ಈ ವಿಚಾರವನ್ನು ಸಹ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಬಸವರಾಜ ಹೊರಟ್ಟಿಯವರು ಸಭಾಪತಿಗಳಾಗಿದ್ದ ಸಂದರ್ಭದಲ್ಲಿ, 'ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಶಾಸಕರೆಂದು ಪರಿಗಣಿಸಬೇಕು ಮತ್ತು ಆಹ್ವಾನ ಪತ್ರಿಕೆಗಳಲ್ಲಿ ವಿಧಾನ ಪರಿಷತ್ತಿನ ಸದಸ್ಯರ ಹೆಸರನ್ನು ಮುದ್ರಿಸುವ ಸಂದರ್ಭದಲ್ಲಿ ಶಿಷ್ಟಾಚಾರವನ್ನು ಅನುಸರಿಸತಕ್ಕದ್ದು, ಒಂದು ವೇಳೆ ಶಿಷ್ಟಾಚಾರದ ಉಲ್ಲಂಘನೆಯಾದರೆ ಶಿಕ್ಷೆಗೆ ಒಳಪಡಿಸಲಾಗುವುದು' ಎನ್ನುವ ಸುತ್ತೋಲೆಯನ್ನು ಹೊರಡಿಸಿ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಲಾಯಿತು. ಆದರೂ ಸಹ ಈ ರೀತಿಯ ಪ್ರಕರಣಗಳು ಪುನರಾವರ್ತನೆಯಾಗುತ್ತಿವೆ.

ಸನ್ಮಾನ್ಯ ಸಭಾಪತಿಯವರೇ, ಶಾಸಕರ ಅನುದಾನದಿಂದ ಯಾವುದಾದರೊಂದು ಕಾಮಗಾರಿ ಕೈಗೊಂಡಿದ್ದರೆ, ಶಾಸಕರ ಫೋಟೋಗಳನ್ನು ಹಾಕಿಸಿಕೊಳ್ಳುತ್ತಾರೆ. ಸರ್ಕಾರದ ಹಣದಿಂದ ಕಾಮಗಾರಿಯನ್ನು ಕೈಗೊಂಡು ಶಾಸಕರು ತಮ್ಮ ಫೋಟೋ ಹಾಕಿಸಿಕೊಳ್ಳುವುದು ಎಷ್ಟರಮಟ್ಟಿಗೆ ಸರಿ? ಬೇಕಾದರೆ, 'ಶಾಸಕರ ನಿಧಿ' ಎಂದು ನಮೂದು ಮಾಡಿ, ಯಾವ ಇಸವಿಯಲ್ಲಿ ಕೈಗೊಳ್ಳಲಾಯಿತು ಎನ್ನುವುದನ್ನು ನಮೂದು ಮಾಡಲಿ. ಆದರೆ, ಶಾಸಕರ ಫೋಟೋ ಹಾಕುವುದೇಕೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ನಾನು ಶಾಸಕನಾಗುವುದಕ್ಕೂ ಮೊದಲೇ ಈ ಪದ್ಧತಿಯನ್ನು ವಿರೋಧ ಮಾಡಿದ್ದೆ. ನಾನು ಹೈಕೋರ್ಟ್‌ನ ಮುಂದೆ ಈ ವಿಚಾರವನ್ನು ತೆಗೆದುಕೊಂಡು ಹೋದಾಗ, ಹೈಕೋರ್ಟ್ ನೀಡಿದ ತೀರ್ಪಿನ ಹಿನ್ನಲೆಯಲ್ಲಿ ಸ್ವಲ್ಪ ದಿನಗಳ ಕಾಲ ಆ ರೀತಿ ಫೋಟೋಗಳನ್ನು ಹಾಕಿಸಿಕೊಳ್ಳುವುದು ನಿಂತಿತ್ತು.

**ಶ್ರೀ ಪ್ರಕಾಶ್ ಕೆ.ರಾಥೋಡ್(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರಿಂದ ನಾವು ಮಾರ್ಗದರ್ಶನ ಪಡೆದುಕೊಳ್ಳುತ್ತೇವೆ. ಅವರಿಗೇ ಇಷ್ಟೊಂದು ನೋವಾಗಿದೆ. ನಾನು ವಿಧಾನ ಪರಿಷತ್ತಿನ ಸದಸ್ಯನಾದ ಮೇಲೆ ಎಷ್ಟೊಂದು ಕಾರ್ಯಕ್ರಮಗಳು ನಡೆದಿವೆ, ಆ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳಲ್ಲಿ ನಮ್ಮ ಹೆಸರನ್ನೇ ಮುದ್ರಿಸುವುದಿಲ್ಲ. ಜಿಲ್ಲಾಧಿಕಾರಿಗಳು ಯಾವುದೇ ಕಾರ್ಯಕ್ರಮವಿದ್ದರೂ ನಮ್ಮನ್ನು ಕರೆಯುವುದಿಲ್ಲ. ನಾನೇ ಈ ಬಗ್ಗೆ ಹಕ್ಕುಚ್ಯುತಿ ಮಂಡನೆ ಮಾಡಬೇಕೆಂದಿದ್ದೆ. ಈಗ ಮಾನ್ಯ ಹೊರಟ್ಟಿಯವರು ಹಕ್ಕುಚ್ಯುತಿ ಪ್ರಸ್ತಾಪವನ್ನು ಮಂಡನೆ ಮಾಡಿದ್ದಾರೆ. ನಾನು ಸಹ ಕೆಲವೊಂದು ಪ್ರಕರಣಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಬಿಜಾಪುರದ ಜಿಲ್ಲಾಧಿಕಾರಿಗಳಿಗೆ ತಾವು ಎಚ್ಚರಿಕೆ ಕೊಡಬೇಕಾಗಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾಗಿರುವ ವಿಚಾರವಾಗಿದೆ. ಹಿಂದಿನ ಸರ್ಕಾರದಲ್ಲಿಯೂ ಇದನ್ನೇ ಅನುಭವಿಸಿದ್ದೆವು, ಈಗಿನ ಸರ್ಕಾರದಲ್ಲಿಯೂ ಇದನ್ನೇ ಅನುಭವಿಸುತ್ತಿದ್ದೇವೆ, ಮುಂದೆ ಬರುವಂತಹ ಸರ್ಕಾರಗಳಲ್ಲಿಯೂ ಇದೇ ಪರಿಸ್ಥಿತಿಯನ್ನು ನಾವು ಅನುಭವಿಸಬೇಕಾಗುತ್ತದೆ. ಅಧಿಕಾರಿಗಳ ಮನೋಭಾವ ಬದಲಾಗಿಲ್ಲ. ಶಿಷ್ಟಾಚಾರಕ್ಕೆ ಸಂಬಂಧಪಟ್ಟಂತೆ ನೂರಾರು

ಸುತ್ತೋಲೆಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿದ್ದಾರೆ. ಅದನ್ನು ಕೆಳಗಿನ ಅಧಿಕಾರಿಗಳು ಮಾನ್ಯ ಮಾಡುವುದಿಲ್ಲವೆಂದರೆ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸುತ್ತೋಲೆಗೆ ಮೂರು ಕಾಸಿನ ಕಿಮ್ಮತ್ತಿಲ್ಲ. ಆಯಾಯ ಇಲಾಖೆಯ ಕಾರ್ಯದರ್ಶಿಗಳು ಶಿಷ್ಟಾಚಾರ ಪಾಲನೆಯ ಬಗ್ಗೆ ಸುತ್ತೋಲೆಗಳನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ, ಕೆಳಗಿನ ಅಧಿಕಾರಿಗಳು ಅದನ್ನು ಪಾಲನೆ ಮಾಡದಿದ್ದರೆ, ಸರ್ಕಾರದ ಕಾರ್ಯದರ್ಶಿಗಳಿಗೆ ಏನು ಮಾರ್ಯಾದೆ ಇದೆ? ಇವರ ಗೌರವವನ್ನು ಕಳೆಯುವಂತಹ ಕೆಲಸವನ್ನು ಅಧಿಕಾರಿಗಳು ಮಾಡಿದರೆ, ನಾವು ಮುಜುಗರವನ್ನು ಅನುಭವಿಸಬೇಕಾಗುತ್ತದೆ. ವಿಧಾನ ಪರಿಷತ್ತಿನ ಸದಸ್ಯರನ್ನು ಶಾಸಕರೆಂದು ಕರೆಯಬೇಕೆಂದು ಸಭಾಪತಿಗಳಾಗಿದ್ದಾಗ, ಮಾನ್ಯ ಹೊರಟ್ಟಿಯವರು ಸುತ್ತೋಲೆಯನ್ನು ಹೊರಡಿಸಿದ್ದರು. ಯಾವ ಪಕ್ಷದ ಸರ್ಕಾರ ಅಧಿಕಾರದಲ್ಲಿತ್ತು ಎನ್ನುವುದು ಮುಖ್ಯವಲ್ಲ, ಅಧಿಕಾರಿಗಳ ಮನೋಭಾವ ಬದಲಾಗಬೇಕಾಗಿದೆ. ಎಲ್ಲ ಅಧಿಕಾರಿಗಳು ಮಂತ್ರಿಗಳ ಹಿಂದೆ ಮಾತ್ರವಲ್ಲ ವಿಧಾನಸಭಾ ಸದಸ್ಯರ ಹಿಂದೆ ಚೇಲಗಳಾಗಿ ತಿರುಗುತ್ತಾರೆಯೇ ಹೊರತು, ವಿಧಾನ ಪರಿಷತ್ತಿನ ಸದಸ್ಯರಿಗೆ ಗೌರವವನ್ನು ತೋರಿಸುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಾನು ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷನಾಗಿದ್ದೇನೆ. ನಮ್ಮ ಸಮಿತಿ ರಾಜ್ಯದಲ್ಲಿರುವ ಕೆಲವು ಜಿಲ್ಲೆಗಳಿಗೆ ಪ್ರವಾಸ ಹೋದರೆ, ಅಲ್ಲಿನ ಅಧಿಕಾರಿಗಳಿಗೆ ಸರ್ಕಾರ ಹೊರಡಿಸಿರುವಂತಹ ಸುತ್ತೋಲೆಗಳ ಬಗ್ಗೆ ಮಾಹಿತಿ ಇಲ್ಲ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಉಪ ಸಭಾಪತಿಗಳಾದ ಮಾನ್ಯ ಧರ್ಮೇಗೌಡರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಮಾಡಿದರೆ, ಅಲ್ಲಿರುವಂತಹ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಶಿಷ್ಟಾಚಾರವೇ ಗೊತ್ತಿಲ್ಲ. ಅವರು ಸುತ್ತೋಲೆಗಳನ್ನು ಓದುವುದೇ ಇಲ್ಲ. ಅಲ್ಲಿ ಮಾನ್ಯ ಉಪ ಸಭಾಪತಿಗಳಿಗೆ ಅಗೌರವ ತೋರಿಸಿದರೆ, ನಾನು ಸಭೆಯನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆಯೇ?

ಸನ್ಮಾನ್ಯ ಸಭಾಪತಿಯವರೇ, ನನಗೆ ನೆನಪಿರುವ ಮಟ್ಟಿಗೆ ಮಾನ್ಯ ಹೊರಟ್ಟಿಯವರು ಸಭಾಪತಿಗಳಾಗಿದ್ದಾಗ, ಆಹ್ವಾನ ಪತ್ರಿಕೆಯಲ್ಲಿ ಅವರ ಹೆಸರನ್ನು ಕೆಳಗೆ ಮುದ್ರಿಸಲಾಗಿತ್ತು. ಶಿಷ್ಟಾಚಾರದ ಪ್ರಕಾರ ಅವರ ಸ್ಥಾನ ಘನತೆವೆತ್ತ ರಾಜ್ಯಪಾಲರ ನಂತರ ಬರುತ್ತದೆ. ಅಧಿಕಾರಿಗಳು ವಿಧಾನ ಸಭೆಯ ಸದಸ್ಯರು ಮಾತ್ರ ಶಾಸಕರೆಂದು ತಿಳಿದುಕೊಂಡಿದ್ದರೆ, ಅದಕ್ಕೆ ಶಿಕ್ಷೆ ಆಗಲೇಬೇಕಾಗಿದೆ. ಶಿಷ್ಟಾಚಾರದ ಪಾಲನೆಯ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ನೀಡಲಾಗಿದೆ. ಇಷ್ಟೊಂದು ಪ್ರಕರಣಗಳಲ್ಲಿ ಶಿಷ್ಟಾಚಾರದ ಉಲ್ಲಂಘನೆಯಾಗುತ್ತಿರುವ ಸಂದರ್ಭದಲ್ಲಿ ನಮ್ಮ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮತ್ತು ಕಂದಾಯ ಕಾರ್ಯದರ್ಶಿಗಳು ಏನು ಮಾಡುತ್ತಿದ್ದಾರೆನ್ನುವುದು ನನ್ನ ಪ್ರಶ್ನೆಯಾಗಿದೆ. ಈ ವಿಷಯವನ್ನು ತಾವು ಬಹಳ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇಂತಹ ಹತ್ತಾರು ಪ್ರಕರಣಗಳಿವೆ, ಈ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಒಂದು ದಿನಾಂಕವನ್ನು ನಿಗದಿಗೊಳಿಸಿದರೆ, ಈ ಸದನದಲ್ಲಿರುವ 75 ಜನ ಶಾಸಕರು ತಮ್ಮ ನೋವನ್ನು ಹಂಚಿಕೊಳ್ಳುವವರಿದ್ದಾರೆ. ಇದು ಒಬ್ಬಿಬ್ಬರ ಪ್ರಶ್ನೆಯಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದ್ದರಿಂದ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಸ್ಥಳೀಯ ಎಂ.ಎಲ್.ಎ. ಗಳಿಂದ ನಮಗೆ ಆಗುವಂತಹ ಮುಜುಗರ ಮತ್ತು ಅವಮಾನಗಳಿಗೆ ಕೊನೆಯಿಲ್ಲದಂತಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಪದವೀಧರರ ಕ್ಷೇತ್ರದಿಂದ ಆಯ್ಕೆಗೊಂಡು ಬಂದಿದ್ದೇನೆ. ಯಾವ ತಪ್ಪಿಗೋಸ್ಕರ ನಾನು 30 ಜನ ವಿಧಾನಸಭಾ ಶಾಸಕರಿಂದ ಮುಜುಗರ ಮತ್ತು ಅವಮಾನಗಳನ್ನು ಅನುಭವಿಸಬೇಕು? ನಾವು ಸಹ ಜನಗಳಿಂದ ಆಯ್ಕೆಗೊಂಡು ಬಂದಿದ್ದೇವೆ. ಈ ರೀತಿ ತಾರತಮ್ಯ ಮಾಡುವಂತಹ ಅಧಿಕಾರಿಗಳನ್ನು ಈ ಸದನದೊಳಗೆ ಕರೆದು ಶಿಕ್ಷೆ ವಿಧಿಸಬೇಕಾಗುತ್ತದೆ. ಈಗ ಚಿಕ್ಕಮಗಳೂರು ಜಿಲ್ಲೆಯ ಅಧಿಕಾರಿಯನ್ನು ಸದನದೊಳಗೆ ಕರೆದು ವಾಗ್ದಂಡನೆ ವಿಧಿಸಿದ ಪ್ರಕರಣ ಮರೆತು ಹೋಗಿದೆ. ತಪ್ಪು ಮಾಡಿರುವಂತಹ ಅಧಿಕಾರಿಗಳನ್ನು ಕರೆದು ಈ ಸದನದ ಕಟಕಟೆಯೊಳಗೆ ನಿಲ್ಲಿಸಿ, ಶಿಕ್ಷೆ ವಿಧಿಸಿದರೆ ಮಾತ್ರ ಸರಿಯಾದ ಸಂದೇಶ ಹೋಗುತ್ತದೆ. ಇಲ್ಲದಿದ್ದರೆ ನಮಗೆ ಈ ಮುಜುಗರ ತಪ್ಪಿದ್ದಲ್ಲ. ಮಾನ್ಯ ಹೊರಟ್ಟಿಯಂತಹವರಿಗೆ ಅವಮಾನವಾಗಿದೆ ಎಂದರೆ, ಬಾಕಿ ಸದಸ್ಯರ ಕಥೆ ಏನಾಗಬಹುದು?

ಸನ್ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ನಮ್ಮ ಸಮಿತಿ ಪ್ರವಾಸ ಕೈಗೊಂಡು ಎಲ್ಲೆಲ್ಲಿ ಶಿಷ್ಟಾಚಾರದ ಪಾಲನೆಯಾಗುತ್ತಿದೆ, ಉಲ್ಲಂಘನೆಯಾಗುತ್ತಿದೆ ಎನ್ನುವುದರ ಬಗ್ಗೆ ಅಧಿಕಾರಿಗಳ ಸಭೆ ನಡೆಸಿದ್ದೆವು. ಉದ್ದೇಶಪೂರ್ವಕವಾಗಿ ವಿಧಾನ ಪರಿಷತ್ತಿನ ಶಾಸಕರನ್ನು ಅವಮಾನ ಮಾಡುವ ಅಧಿಕಾರಿಗಳ ಮನೋಭಾವದ ವಿರುದ್ಧ ನಾವು ಸ್ವಾಭಿಮಾನದಿಂದ ಎದ್ದು ನಿಲ್ಲುವಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ತಾವು ಹಕ್ಕುಬಾಧ್ಯತಾ ಸಮಿತಿಗೆ ಯಾವಾಗ ಈ ಪ್ರಕರಣಗಳನ್ನು ರೆಫರ್ ಮಾಡುತ್ತೀರೋ ಮಾಡಿ, ಅಲ್ಲಿ ನಾವೆಲ್ಲರೂ ಕುಳಿತು ತೀರ್ಮಾನ ಮಾಡುತ್ತೇವೆ. ಒಂದಿಷ್ಟು ಅಧಿಕಾರಿಗಳನ್ನು ಕರೆದು ಶಿಕ್ಷೆಗೆ ಒಳಪಡಿಸಬೇಕಾಗುತ್ತದೆ. ಆ ಅಧಿಕಾರಿಗಳು ಬಂದು ಮನವಿ ಮಾಡಿಕೊಂಡರೆ, 'ಆಯಿತು ಹೋಗಲಿ ಬಿಡಿ' ಎಂದು ಹೇಳುವಂತಹ ಕೆಲಸ ಆಗಬಾರದು. ಬಹಳ ಜನ ಶಾಸಕರು ದೂರು ಕೊಡುತ್ತಾರೆ. ಅಧಿಕಾರಿಗಳು ಹೋಗಿ ಅವರ ಕೈಕಾಲು ಹಿಡಿದ ಕೂಡಲೇ ಮರುದಿನವೇ ದೂರನ್ನು ವಾಪಸ್ಸು ತೆಗೆದುಕೊಂಡುಬಿಡುತ್ತಾರೆ. ಏಕೆಂದರೆ, ಅವನು ಸ್ಥಳೀಯ ಕಾರ್ಯಕರ್ತನೋ ಅಥವಾ ನನ್ನ ಸಂಬಂಧಿಕನೆಂದು ಹೇಳಿಕೊಂಡು ಬಂದಿರುತ್ತಾನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಸಹ ಒಂದೆರಡು ಹಕ್ಕುಚ್ಯುತಿ ದೂರುಗಳನ್ನು ವಾಪಸ್ಸು ಪಡೆದುಕೊಂಡಿದ್ದೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಆಯನೂರು ಮಂಜುನಾಥ್:-** ಸನ್ಮಾನ್ಯ ಸಭಾಪತಿಯವರೇ, ಅವರದು ಬೇರೆ ಪ್ರಸಂಗ, ಸಂಬಂಧಪಟ್ಟ ಅಧಿಕಾರಿ ಕ್ಷಮೆ ಕೇಳಿ ಬರವಣಿಗೆಯಲ್ಲಿ ಪತ್ರ ಕೊಟ್ಟ ಮೇಲೆ ಸಮಿತಿಯು ಅದನ್ನು ಪರಿಗಣಿಸಿ ಮಾನ್ಯ ಹೊರಟ್ಟಿಯವರು ನೀಡಿದ ದೂರನ್ನು ಮುಕ್ತಾಯಗೊಳಿಸಿತು.

ಸನ್ಮಾನ್ಯ ಸಭಾಪತಿಯವರೇ, ಈ ಸದನದ 75 ಜನ ಶಾಸಕರ ಪರವಾಗಿ ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಇದೊಂದು ಬಹಳ ಗಂಭೀರವಾದ ಪ್ರಕರಣವೆಂದು ಪರಿಗಣಿಸಬೇಕು. ಈ ವರ್ಷದೊಳಗೆ ಒಬ್ಬರು ಅಥವಾ ಇಬ್ಬರು ಅಧಿಕಾರಿಗಳಿಗೆ ಈ ಸದನದ ನಿಯಮಾವಳಿಗಳ ಪ್ರಕಾರ ಶಿಕ್ಷೆಗೆ ಒಳಪಡಿಸಲೇಬೇಕೆಂದು ಆಗ್ರಹ ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಇವತ್ತು ಬೆಳಗ್ಗೆ ನನ್ನ ಜಿಲ್ಲೆಯ ಹುನಗುಂದ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಸದಸ್ಯರೊಬ್ಬರು ನನಗೆ ಫೋನ್ ಮಾಡಿದ್ದರು. 'ಏನಪ್ಪ ಕೆಲಸ?' ಎಂದು ನಾನು ಕೇಳಿದೆ. 'ಹುನಗುಂದ ತಾಲ್ಲೂಕಿನ ಮುರಡಗಿ ಗ್ರಾಮ ಪಂಚಾಯಿತಿಯ ಹೊಸ ಕಟ್ಟಡ ಉದ್ಘಾಟನಾ ಸಮಾರಂಭವಿದೆ. ತಾವು ಮೇಲ್ಮನೆಗೆ ನಾಲ್ಕು ಬಾರಿ ಆಯ್ಕೆಗೊಂಡು ಸದಸ್ಯರಾಗಿದ್ದೀರಿ, ಜೊತೆಗೆ ವಿರೋಧ ಪಕ್ಷದ ನಾಯಕರಾಗಿದ್ದೀರಿ, ನಿಮ್ಮ ಹೆಸರನ್ನು ಹಾಕದೇ, ಆಹ್ವಾನ ಪತ್ರಿಕೆಯನ್ನು ಮುದ್ರಿಸಿದ್ದಾರೆ' ಎಂದು ಹೇಳಿದ. ಆಗ ನಾನು 'ನೀನು ಹೋಗಿ ಅಲ್ಲಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ದೂರನ್ನು ಕೊಟ್ಟು, ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡು. ಆಮೇಲೆ ನಾನು ಅವರೊಂದಿಗೆ ಚರ್ಚೆ ಮಾಡುತ್ತೇನೆ' ಎಂದು ಹೇಳಿದೆ.

(ಮುಂದುವರಿದಿದೆ)

**(339) 11.3.2020 7.30 ಪಿಕೆ:ವಿಕೆ**
**ಶ್ರೀ ಎಸ್.ಆರ್.ಪಾಟೀಲ್(ಮುಂದುವರಿದಿದೆ)**

ಇದು ಇವತ್ತೇ ಆದ ಘಟನೆಯಾಗಿದೆ. ಕಾರ್ಡನ್ನು ಯಾರು ಪ್ರಿಂಟ್ ಮಾಡಿಸಿದರು ಎಂದು ಕೇಳಿದಾಗ, ಬಿಲ್ ಕಲೆಕ್ಟರ್, ಪಿಡಿಓ ಪ್ರಿಂಟ್ ಮಾಡಿಸಿದ್ದಾರೆ ಎಂದು ಹೇಳಿದರು. How recklessly these people are working in RDPR Department. ಇಂಥವರ ಮೇಲೆ ಸಿಇಓಗಳ ನಿಗಾ ಇರಬೇಕು, ಜಿಲ್ಲಾಧಿಕಾರಿಗಳ ನಿಗಾ ಇರಬೇಕು. ಗ್ರಾಮ ಪಂಚಾಯಿತಿಯ ಕಟ್ಟಡದ ಉದ್ಘಾಟನೆಯ ಕಾರ್ಯಕ್ರಮದಲ್ಲಿ, ಮೇಲ್ಮನೆಯ ಸದಸ್ಯನಾದ ನನಗೆ, ಅದರಲ್ಲೂ ಮೇಲ್ಮನೆಯ ಪ್ರತಿಪಕ್ಷದ ನಾಯಕನಾದ ನನ್ನ ಹೆಸರನ್ನು ಮೇಲೋ ಕೆಳಗೋ ಹಾಕುವುದಿರಲಿ, ಹೆಸರೇ ಪ್ರಿಂಟ್ ಮಾಡಿರಲಿಲ್ಲ. ಈ ರೀತಿ ವರ್ತಿಸಿದರೆ ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. You are our custodian. ಅಲ್ಲದೇ ಅಧಿವೇಶನ ನಡೆಯುತ್ತಿರುವಂತಹ ಸಂದರ್ಭದಲ್ಲಿ ಆದ ಘಟನೆ ಇದಾಗಿದೆ. ಯಾರೇ ಒಬ್ಬ ಶಾಸಕ ಒಂದು ವೇಳೆ ಕ್ರಿಮಿನಲ್ ಕೇಸ್‌ನಲ್ಲಿ involve ಆದರೂ ಆತನ ಮೇಲೆ ಕ್ರಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೈಗೊಳ್ಳಬೇಕಾದರೆ ತಮ್ಮ ಅನುಮತಿಯನ್ನು ಕೇಳಬೇಕಾಗುತ್ತದೆ, ನಂತರ ಕೇಸ್ ದಾಖಲು ಮಾಡಬೇಕಾಗುತ್ತದೆ ಎನ್ನುವ ಕಾನೂನು ಇದೆ. ಅಧಿವೇಶನ ನಡೆಯುವಾಗ ಇಂತಹ ಘಟನೆಗಳು ನಡೆಯುತ್ತವೆ ಎಂದರೆ ಇದು ಎಲ್ಲಿ ಹೋಗಿ ಮುಟ್ಟುತ್ತದೆ? ಅನ್ನ ಬೆಂದಿದೆಯೋ ಇಲ್ಲವೋ ಎಂದು ತಿಳಿಯಲು ಒಂದು ಅಗಳು ಹಿಸುಕಿ ನೋಡಿದರೆ ಗೊತ್ತಾಗುತ್ತದೆ. ಇವತ್ತು ನಮ್ಮ ಜಿಲ್ಲೆಯ ಹುನಗುಂದ ತಾಲ್ಲೂಕಿನ ಮುರುಡಿ ಗ್ರಾಮ ಪಂಚಾಯಿತಿಯ ಕಟ್ಟಡ ಉದ್ಘಾಟನೆಯ ಕಾರ್ಯಕ್ರಮದಲ್ಲಿ ನನ್ನ ಹೆಸರನ್ನೇ ಬಿಟ್ಟಿರುವಂತಹ ಪ್ರಕರಣ ನಡೆದಿದೆ. ಇದು ಎಲ್ಲಿಗೆ ಹೋಗಿ ತಲುಪುತ್ತದೆ? Kindly, I request you to take interest and attention in this matter.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನೊಂದು statement ಕೊಟ್ಟೆ. ಯಾರೋ ಒಬ್ಬರು, ನೀವು ಕುಸ್ತಿ ಪಂದ್ಯಾವಳಿ ಕಾರ್ಯಕ್ರಮಕ್ಕೆ ಹೋಗುವುದಿಲ್ಲವೇ ಎಂದು ಕೇಳಿದಾಗ ನಾನು, ನನ್ನನ್ನು ಕರೆದಿಲ್ಲ ಹೇಗೆ ಹೋಗಲಿ ಎಂದು ಹೇಳಿದೆ. ಇದು ಒಂದು ದಿನ ಪತ್ರಿಕೆಯಲ್ಲಿ ಬಂತು. ನಂತರ ಡಿಸಿಯವರು ದೂರವಾಣಿ ಮಾಡಿ, ಕುಸ್ತಿ ಪಂದ್ಯ ನೋಡಲು ಬನ್ನಿ ಎಂದು ಕರೆದಾಗ, ನಾನು privilege move ಮಾಡಿದ್ದೇನೆ. ಇಷ್ಟು ದಿವಸದ ತನಕ ಯಾವುದಕ್ಕೂ ಏಕೆ ಕರೆಯಲಿಲ್ಲ ಎಂದು ಕೇಳಿದೆ. ಅದಕ್ಕೆ ಅವರು, ಸಂಬಂಧಪಟ್ಟ ಕಮಿಟಿಗೆ ಎಂಎಲ್ಎ ಅವರು ಅಧ್ಯಕ್ಷರಾಗಿ ಅವರೇ ಎಲ್ಲವನ್ನು ತೀರ್ಮಾನ ಮಾಡಿದರು, ನನಗೆ scope ಕೊಡಲಿಲ್ಲ ಎಂದು ಹೇಳಿದರು. ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿಯವರಾದರೂ ಹೇಳಬೇಕಾಗಿತ್ತು ಅಥವಾ ನೀವಾದರೂ ಹೇಳಬೇಕಾಗಿತ್ತು ಎಂದು ಹೇಳಿದೆ. ಆಗ ಅವರು, ಎಂಎಲ್ಎ ರವರು ನಮ್ಮ ಮಾತನ್ನು ಕೇಳಲಿಲ್ಲ. ಎಂಎಲ್ಎರವರು, ನಾನು ಎರಡು ಕೋಟಿ ರೂಪಾಯಿಗಳನ್ನು ತಂದಿದ್ದೇನೆ, ನಾನೇ ಮಾಡುತ್ತೇನೆ, ನಾನು ಹೇಳಿದ ಹಾಗೆ ನೀವು ಕೇಳಿ ಎಂದು ಹೇಳಿದರು ಎಂಬ ಮಾತನ್ನು ನನ್ನ ಹತ್ತಿರ ಹೇಳಿದರು. ನಾನು, ನನಗೆ ಗೊತ್ತಿಲ್ಲ; ನನಗೆ ಅವಮಾನವಾಗಿದೆ, ನನ್ನ ಹಕ್ಕುಚ್ಯುತಿಯಾಗಿದೆ ಎಂಬುದಾಗಿ ಹೇಳಿದೆ. ಕುಸ್ತಿ ನಡೆದ ದಿವಸ ಅಲ್ಲಿನ ಅಧ್ಯಕ್ಷ ಎನಿಸಿಕೊಂಡ ವ್ಯಕ್ತಿ, ದಯವಿಟ್ಟು ಕಾರ್ಯಕ್ರಮಕ್ಕೆ ಬನ್ನಿ ಕೈಮುಗಿದು ಕೇಳಿಕೊಳ್ಳುತ್ತೇನೆ, ಅಲ್ಲಿಗೆ ಬಂದು ನಿಮ್ಮನ್ನು ಕರೆಯುತ್ತೇನೆ ಎಂಬ ಮಾತನ್ನು ಹೇಳಿದ. ನೀನು ಬರಬೇಡಪ್ಪ ಎಂದು ಹೇಳಿದೆ. ಮಾನ್ಯ ಸಭಾಪತಿಯವರೇ, ನಾನು ಸಭಾಪತಿಯಾಗಿದ್ದಾಗ ಕೋರ್ಟ್ ಉದ್ಘಾಟನೆಯ ಕಾರ್ಯಕ್ರಮ ಇತ್ತು. ಆಹ್ವಾನ ಪತ್ರಿಕೆಯಲ್ಲಿ ನನ್ನ ಹೆಸರನ್ನು ಕೆಳಭಾಗದಲ್ಲಿ ಹಾಕಿದ್ದರು. ಆದರೆ, ಅವರಿಗೆ ಯಾರು ಹೇಳಿದರೋ ಗೊತ್ತಿಲ್ಲ; ನನ್ನ ಹೆಸರನ್ನು ಮೇಲೆ ಹಾಕಿಸಿ ಕಾರ್ಡನ್ನು reprint ಮಾಡಿದರು. ಮಾನ್ಯ ಸಭಾಪತಿಯವರೇ, ಇಂತಹ ಅವಮಾನಗಳು ಸಾಕಷ್ಟು ಸಲ ಆಗುತ್ತವೆ, ಇಂಥದ್ದನ್ನು ನೋಡಿ ನಮಗೂ ಸಾಕಾಗಿ ಹೋಗಿದೆ. ಅಧಿಕಾರಿಗಳು ಮಾಡುವ ಇಂತಹ ಕೆಲಸದ ಬಗ್ಗೆ ಕೇಳಿದಾಗ, ಇದು ನಮ್ಮ ಗಮನಕ್ಕೆ ಬಂದಿಲ್ಲ ಎಂದು ಡಿಸಿಗಳು ಹೇಳುತ್ತಾರೆ. ಸಿಇಓ ಮತ್ತು ಡಿಸಿಗಳು ಶಿಷ್ಟಾಚಾರದ ಬಗ್ಗೆ ತಮ್ಮ ಕೆಳಗಿನ ಅಧಿಕಾರಿಗಳಿಗೆ ತಿಳಿಸಬೇಕು; ಅದು ಅವರ ಜವಾಬ್ದಾರಿ ಆಗಿರುತ್ತದೆ. ಮಾನ್ಯ ಪಾಟೀಲ್‌ರವರು ಹೇಳಿದ್ದು ನೂರಕ್ಕೆ ನೂರು ಸತ್ಯ. ಹೊರಗಿನವರು ಎಂಎಲ್ಎ ಗಳನ್ನು ಶಾಸಕರು ಎಂದು ಹೇಳುತ್ತಾರೆ, ನಮ್ಮನ್ನು ವಿಧಾನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಪರಿಷತ್ತಿನ ಸದಸ್ಯರು ಎಂದು ಹೇಳುತ್ತಾರೆ. ಒಟ್ಟಿನಲ್ಲಿ ನಮ್ಮ ಗೌರವವನ್ನು ಕಡಿಮೆ ಮಾಡುವ ಕೆಲಸ ಆಗುತ್ತದೆ, ಇದು ಆಗಬಾರದು. ಮಾನ್ಯ ಸಭಾಪತಿಯವರೇ, ಇದನ್ನು ನಾನು ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರ ಪರವಾಗಿ ತಂದಿದ್ದೇನೆಯೇ ಹೊರತು ವೈಯಕ್ತಿಕವಾಗಿ ತಂದಿರುವಂಥದ್ದಲ್ಲ. ಮಾನ್ಯ ಸಭಾಪತಿಯವರೇ, ಇಂಥದ್ದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** **<u>ಸದರಿ ಹಕ್ಕುಚ್ಯುತಿಯ ಈ ಪ್ರಕರಣವನ್ನು ವಿಧಾನ ಪರಿಷತ್ತಿನ ಹಕ್ಕು-ಬಾಧ್ಯತಾ ಸಮಿತಿಗೆ ವಹಿಸಲಾಗಿದೆ.</u>** ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 33 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ 12ನೇ ಮಾರ್ಚ್ ಮಾಹೆ 2020ರ ಗುರುವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~<>~~~~~

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”
~~~~~